ಶನಿವಾರ, ಡಿಸೆಂಬರ್ 11, 2021 | ₹ 6.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ಪ್ರೀತಿಯ ಅಪ್ಪುಗೆ

ಗೋವಾದ ಮೊರ್ಪಿರ್ಲಾ ಹಳ್ಳಿಗೆ ಶುಕ್ರವಾರ ಭೇಟಿ ನೀಡಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಜನಪದ ನೃತ್ಯ ಕಲಾವಿದೆ ಎಮಿಲಿಯಾ ಫರ್ನಾಂಡಿಸ್ ಅವರನ್ನು ಪ್ರೀತಿಯಿಂದ ಅಪ್ಪಿ ಹಿಡಿದರು

ಕೆಂಪು ದೀಪ ಕಾಣಿಸುವುದಕ್ಕಷ್ಟೇ ಕಾಯಿರಿ,
ಬೈಕ್ ಇನ್ಶೂರೆನ್ಸ್‌ಗೆ ಕಾಯಬೇಡಿ!

PhonePe ಯಲ್ಲಿ ಇನ್ಸ್ಟಂಟ್ ಬೈಕ್ ಇನ್ಶ್ಯುರೆನ್ಸ್

ಪ್ರೀಮಿಯಂ ಮೇಲೆ 75% ವರೆಗೆ ರಿಯಾಯಿತಿ*

ತಪಾಸಣೆ ಇಲ್ಲ~

ಇನ್ಸ್ಟಂಟ್ ಪಾಲಿಸಿ#

ಚಿಂತೆ ಇಲ್ಲದೇ ಇನ್ಶ್ಯುರೆನ್ಸ್ ಖರೀದಿ ಮಾಡಿ PhonePe

PhonePe ಇನ್ಶ್ಯುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (IRDAI ನೋಂ. 766) ಡೈರೆಕ್ಟ್ ಬ್ರೋಕರ್ – ಲೈಫ್ ಮತ್ತು ಜನರಲ್ – ಆಗಸ್ಟ್ 10, 2024ರ ವರೆಗೆ ಮಾನ್ಯ. CIN - U66000KA2020FTC132814. ನೋಂದಾಯಿತ ಕಚೇರಿ – ಕಚೇರಿ-2, ಮಹಡಿ 4,5,6,7, ವಿಂಗ್ A, ಬ್ಲಾಕ್ A, ಸಲಾರ್ಪುರಿಯಾ ಸಾಫ್ಟ್ ಜೋನ್, ಸರ್ವೀಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ – 560103. ಮಾರಾಟವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಸಂಬಂಧಿಸಿದ ವಿಮೆದಾರರ ಮಾರಾಟ ಕೈಪಿಡಿಯನ್ನು ದಯವಿಟ್ಟು ಗಮನವಿಟ್ಟು ಓದಿ. PhonePe ಟ್ರೇಡ್ ಲೋಗೋದ ಮಾಲೀಕತ್ವವನ್ನು PhonePe ಪ್ರೈವೇಟ್ ಲಿಮಿಟೆಡ್ ಹೊಂದಿದೆ ಮತ್ತು ಬಳಕೆದಾರರ ಲೈಸೆನ್ಸ್ ಕರಾರು ಅಡಿಯಲ್ಲಿ PhonePe ಇನ್ಶ್ಯುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಳಸಿದೆ. ಜಾಹೀರಾತು ಕೋಡ್: PM/197

*ಸ್ವಂತ ಹಾನಿ ಕವರ್ ಮತ್ತು ಆಯ್ದ ಮೇಕ್ – ಮಾಡೆಲ್ ಗಳ ಮೇಲೆ ಹಿಂದಿನ ಟ್ಯಾರಿಫ್ ದರಗಳಿಗೆ ಉಲ್ಲೇಖಿಸಿದ ರಿಯಾಯಿತಿಯು ಇರುತ್ತದೆ ಮತ್ತು ಎಲ್ಲ ಮಾದರಿಗಳು ಈ ರಿಯಾಯಿತಿಯನ್ನು ಹೊಂದಿರುವುದಿಲ್ಲ.
#ಅವಧಿ ಮೀರಿದ ವಿಮೆ ಪಾಲಿಸಿಯ ನವೀಕರಣವಿದ್ದಲ್ಲಿ, 72 ಗಂಟೆಗಳ ನಂತರ ಕವರ್ ಆರಂಭವಾಗುತ್ತದೆ. ~ಮಾನ್ಯವಾದ ಪಾಲಿಸಿ ಇದ್ದಾಗ ನವೀಕರಣದ ಸಮಯದಲ್ಲಿ ಪರಿಶೀಲನೆ ಇರುವುದಿಲ್ಲ.

ಬಿಪಿನ್ ರಾವತ್ ದಂಪತಿಯ ಅಂತಿಮ ಸಂಸ್ಕಾರದ ವಿಧಿವಿಧಾನಗಳನ್ನು ಅವರ ಪುತ್ರಿಯರು ನೆರವೇರಿಸಿದರು (ಎಡ ಚಿತ್ರ), ಮೆರವಣಿಗೆ ವೇಳೆ ರಾವತ್ ಅವರಿಗೆ ಗೌರವ ಸಲ್ಲಿಸಿದ ಮಹಿಳೆಯರು ಮತ್ತು ಮಕ್ಕಳು –ಪಿಟಿಐ ಚಿತ್ರಗಳು

ತಮ್ಮ ತಂದೆಯ ಶವದ ಎದುರು ದುಃಖಿತರಾಗಿ ಕುಳಿತಿದ್ದ ಆಶ್ನಾ ಲಿದ್ದರ್ –ಪಿಟಿಐ ಚಿತ್ರ

ಗಣ್ಯರಿಂದ ಅಂತಿಮ ನಮನ • ಘೋಷಣೆಗಳೊಂದಿಗೆ ಬೀಳ್ಕೊಟ್ಟ ಜನತೆ • ಪುತ್ರಿಯರಿಂದ ಅಗ್ನಿಸ್ಪರ್ಶ

ಸೇನಾ ಗೌರವದೊಂದಿಗೆ ರಾವತ್ ಅಂತ್ಯಸಂಸ್ಕಾರ

ನವದೆಹಲಿ (ಪಿಟಿಐ): 'ಚಂದ್ರ ತಾರೆ ಇರುವವರೆಗೂ ರಾವತ್ ಜೀ ಅಮರ', 'ವಂದೇ ಮಾತರಂ', 'ಭಾರತ್ ಮಾತಾಕೀ ಜೈ'. ದೆಹಲಿಯ ಕಾಮರಾಜ್ ಮಾರ್ಗದಿಂದ ಕಂಟೋನ್ಮೆಂಟ್‌ನಲ್ಲಿನ ಬ್ರಾರ್ ಸ್ಕ್ವೇರ್ ಚಿತಾಗಾರದವರೆಗೆ ನಡೆದ, ಸೇನಾಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಮತ್ತು ಅವರ ಪತ್ನಿ ಮಧುಲಿಕಾ ರಾವತ್ ಅವರ ಅಂತಿಮ ಯಾತ್ರೆಯ ಉದ್ದಕ್ಕೂ ಕೇಳಿಬಂದ ಘೋಷಣೆಗಳಿವು.

ಬ್ರಾರ್ ಸ್ಕ್ವೇರ್‌ನಲ್ಲಿ ಒಂದೆಡೆ ಅಂತಿಮ ಸಂಸ್ಕಾರದ ವಿಧಿವಿಧಾನಗಳು ನಡೆಯುತ್ತಿದ್ದರೆ, ಹೊರಗಡೆ ಸೇರಿದ್ದ ಸಾರ್ವಜನಿಕರು ಘೋಷಣೆ ಕೂಗುತ್ತಿದ್ದರು. ಕೊನೆಗೆ ಸಕಲ ಸೇನಾ ಗೌರವಗಳೊಂದಿಗೆ ರಾವತ್ ಅವರಿಗೆ ನೀಡಲಾದ '17 ಗನ್ ಸೆಲ್ಯೂಟ್'ನ ನಂತರ ರಾವತ್ ದಂಪತಿಯ ಚಿತೆಗಳಿಗೆ ಅವರ ಪುತ್ರಿಯರು ಅಗ್ನಿಸ್ಪರ್ಶ ಮಾಡಿದರು. ಆದರೆ ಹೊರಗಡೆ ಕೇಳುತ್ತಿದ್ದ ಘೋಷಣೆಗಳು ಮಾತ್ರ ನಿಲ್ಲಲಿಲ್ಲ.

ಕಾಮರಾಜ್ ಮಾರ್ಗದಲ್ಲಿ ಇರುವ ರಾವತ್ ಅವರ ಅಧಿಕೃತ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ದಂಪತಿಯ ಶವಗಳನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಸಾವಿರಾರು ಜನರು, ರಾಜಕಾರಣಿಗಳು ರಾವತ್ ದಂಪತಿಗೆ ಅಂತಿಮ ನಮನ ಸಲ್ಲಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ರಾವತ್ ದಂಪತಿಗೆ ಅಂತಿಮ ನಮನ ಸಲ್ಲಿಸಿದರು. ಮಧ್ಯಾಹ್ನ 12.30ರ ನಂತರ ಸೇನಾಪಡೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಅಂತಿಮ ನಮನ ಸಲ್ಲಿಸಿದರು. ಅಷ್ಟೂ ಹೊತ್ತು ರಾವತ್ ಅವರ ಪುತ್ರಿಯರಾದ ತಾರಿಣಿ ಮತ್ತು ಕೃತಿಕಾ ಅವರು ಮೌನದಿಂದ ಈ ದೃಶ್ಯಗಳಿಗೆ ಸಾಕ್ಷಿಯಾದರು.

ಮಧ್ಯಾಹ್ನ 2.20ರ ನಂತರ ರಾವತ್ ಅವರ ನಿವಾಸದಿಂದ ಬ್ರಾರ್ ಸ್ಕ್ವೇರ್‌ನತ್ತ ಮೆರವಣಿಗೆ ಆರಂಭವಾಯಿತು. ಹೂವಿನಿಂದ ಅಲಂಕರಿಸಲಾಗಿದ್ದ ಸೇನಾ ಟ್ರಕ್‌ಗಳ ಟ್ರೇಲರ್‌ನಲ್ಲಿ, ರಾವತ್ ದಂಪತಿಯ ತ್ರಿವರ್ಣ ಧ್ವಜ ಹೊದಿಸಿದ್ದ ಶವಪೆಟ್ಟಿಗೆಗಳನ್ನು ಇರಿಸಲಾಗಿತ್ತು. ಬೆಂಗಾವಲು ವಾಹನಗಳೊಂದಿಗೆ ಹೊರಟ ಸೇನಾ ಟ್ರಕ್‌ನ ಜತೆಗೆ ಸಾರ್ವಜನಿಕರೂ ಕಾಲ್ನಡಿಗೆಯಲ್ಲಿ ಮೆರವಣಿಗೆ ಹೊರಟರು. ಹಲವೆಡೆ ಸೇನಾಟ್ರಕ್ ಮೇಲೆ ಹೂವಿನ ದಳಗಳನ್ನು ಸುರಿಸಲಾಯಿತು. 10 ಕಿ.ಮೀ.ನಷ್ಟು ದೂರ ಕ್ರಮಿಸಿದ ಮೆರವಣಿಗೆಯು ಬ್ರಾರ್ ಸ್ಕ್ವೇರ್ ಸಮೀಪಿಸುವ ಹೊತ್ತಿಗೆ, ಸಾವಿರಾರು ಜನರು ಮೆರವಣಿಗೆಯನ್ನು ಕೂಡಿಕೊಂಡಿದ್ದರು.

ಬ್ರಾರ್ ಸ್ಕ್ವೇರ್‌ನಲ್ಲಿ ಸೇನಾ ಗೌರವ ಸಲ್ಲಿಕೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸೇನಾಪಡೆಗಳ 800 ಸಿಬ್ಬಂದಿಯು ಹಾಜರಿರುವ ಮೂಲಕ ಸಕಲ ಸೇನಾ ಗೌರವ ಸಲ್ಲಿಸಲಾಯಿತು. '17 ಗನ್ ಸೆಲ್ಯೂಟ್'ನ ಭಾಗವಾಗಿ ಫಿರಂಗಿಗಳಿಂದ ಗುಂಡು ಹಾರಿಸಿ ಗೌರವ ಸಲ್ಲಿಸಲಾಯಿತು. ನಂತರ ರಾವತ್ ಅವರ ಪುತ್ರಿಯರು ಚಿತೆಗಳಿಗೆ ಅಗ್ನಿಸ್ಪರ್ಶ ಮಾಡಿದರು.

ಇಡೀ ಪ್ರಕ್ರಿಯೆಯನ್ನು ಸುದ್ದಿವಾಹಿನಿಗಳು ನೇರಪ್ರಸಾರ ಮಾಡಿದವು. ಕೋಟ್ಯಂತರ ಜನರು ಟಿ.ವಿ.ಗಳ ಮೂಲಕ ಅಂತಿಮ ಸಂಸ್ಕಾರಕ್ಕೆ ಸಾಕ್ಷಿಯಾದರು.

ಹರಿದ್ವಾರದಲ್ಲಿ ಅಸ್ಥಿ ವಿಸರ್ಜನೆ

ಬಿಪಿನ್ ರಾವತ್ ದಂಪತಿಯ ಅಸ್ಥಿಯನ್ನು ಶನಿವಾರ ಹರಿದ್ವಾರಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ ಎಂದು ಅವರ ಕುಟುಂಬದ ಸದಸ್ಯರು ಹೇಳಿದ್ದಾರೆ.

'ಇಂದು ಅಂತ್ಯಕ್ರಿಯೆ ನಡೆದಿದೆ. ಚಿತಾಗಾರದಿಂದ ಅಸ್ಥಿಯನ್ನು ಪಡೆದುಕೊಳ್ಳುತ್ತೇವೆ. ಶನಿವಾರ ಅಸ್ಥಿಯನ್ನು ಹರಿದ್ವಾರಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ' ಎಂದು ರಾವತ್ ಅವರ ಹಿರಿಯ ಪುತ್ರಿ ತಾರಿಣಿ ಮಾಹಿತಿ ನೀಡಿದ್ದಾರೆ.

ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್‌ಗೆ ವಿದಾಯ

ನವದೆಹಲಿ (ಪಿಟಿಐ): ಹೆಲಿಕಾಪ್ಟರ್ ಅಪಘಾತದಲ್ಲಿ ಮೃತರಾಗಿದ್ದ ಬ್ರಿಗೇಡಿಯರ್‌ಲಖ್ವಿಂದರ್‌ಸಿಂಗ್‌ಲಿದ್ದರ್ ಅವರ ಅಂತ್ಯಸಂಸ್ಕಾರವನ್ನು ಶುಕ್ರವಾರ ಬೆಳಿಗ್ಗೆ ಇಲ್ಲಿನ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಬ್ರಾರ್ ಸ್ಕ್ವೇರ್ ಚಿತಾಗಾರದಲ್ಲಿ ಸಕಲ ಸೇನಾ ಗೌರವದೊಂದಿಗೆ ನೆರವೇರಿಸಲಾಯಿತು.

ಅದಕ್ಕೂ ಮುನ್ನ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಲಿದ್ದರ್ ಅವರಿಗೆ ಅಂತಿಮ ನಮನ ಸಲ್ಲಿಸಿದರು. ವಾಯುಪಡೆಯ ಹಲವು ಅಧಿಕಾರಿಗಳು ಅಂತ್ಯಸಂಸ್ಕಾರದ ವೇಳೆ ಹಾಜರಿದ್ದರು.

ಲಿದ್ದರ್ ಅವರ ಪತ್ನಿ ಗೀತಿಕಾ ಲಿದ್ದರ್ ಮತ್ತು ಪುತ್ರಿ ಆಶ್ನಾ ಲಿದ್ದರ್ ಅವರು ಅಂತ್ಯಸಂಸ್ಕಾರವನ್ನು ನೆರವೇರಿಸಿದರು. ಅಂತಿಮ ಸಂಸ್ಕಾರಕ್ಕೂ ಮುನ್ನ ಇಬ್ಬರೂ, ಲಿದ್ದರ್ ಅವರಿದ್ದ ಶವಪೆಟ್ಟಿಗೆಯನ್ನು ಚುಂಬಿಸಿ ಕಣ್ಣೀರಿಟ್ಟರು. ಲಿದ್ದರ್ ಅವರ ಸಮವಸ್ತ್ರ, ಚಿತ್ರ ಮತ್ತು ಪದಕಗಳನ್ನು ಗೀತಿಕಾ ಅವರಿಗೆ ಹಸ್ತಾಂತರಿಸಿದಾಗ ಅವರು ಕಣ್ಣೀರಿಟ್ಟರು. ಈ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದವು.

'ನಗುತ್ತಾ ಬೀಳ್ಕೊಡಬೇಕು'

'ನನ್ನ ಪತಿ ಸ್ನೇಹಮಯಿ ವ್ಯಕ್ತಿ ಮತ್ತು ಅವರು ಸದಾ ಎಲ್ಲರಿಗೂ ಪ್ರೀತಿ ಹಂಚುತ್ತಿದ್ದರು. ಹೀಗಾಗಿಯೇ ನನಗಾಗಿರುವ ಈ ನಷ್ಟದ ವೇಳೆ ಸಾಕಷ್ಟು ಜನ ದುಃಖಿತರಾಗಿದ್ದಾರೆ. ಅವರನ್ನು ನಗುತ್ತಾ ಬೀಳ್ಕೊಡಬೇಕು' ಎಂದು ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಪತ್ನಿ ಗೀತಿಕಾ ಲಿದ್ದರ್, ಅಂತಿಮ ಸಂಸ್ಕಾರಕ್ಕೂ ಮುನ್ನ ಹೇಳಿದರು.

'ಅವರಿಲ್ಲದೆ ಕಳೆಯಬೇಕಿರುವ ಈ ಬದುಕು ದೀರ್ಘವಾದುದು. ದೇವರು ಇದನ್ನೇ ಬಯಸಿದ್ದಾದರೆ, ನಾವು ಆ ಬದುಕನ್ನೇ ಬದುಕುತ್ತೇವೆ. ಆದರೆ, ಅವರು ಈ ರೀತಿ ನಮ್ಮಲ್ಲಿಗೆ ವಾಪಸಾಗಬೇಕು ಎಂದು ನಾವು ಎಂದೂ ಬಯಸಿರಲಿಲ್ಲ. ಲಿದ್ದರ್ ಒಳ್ಳೆಯ ತಂದೆಯಾಗಿದ್ದರು. ನನ್ನ ಮಗಳಿಗೆ ಅವಳ ತಂದೆಯ ಅನುಪಸ್ಥಿತಿ ಬಹಳ ಕಾಡಲಿದೆ. ಇದು ನಮಗಾದ ದೊಡ್ಡ ನಷ್ಟ' ಎಂದು ಗೀತಿಕಾ ದುಃಖ ತೋಡಿಕೊಂಡಿದ್ದಾರೆ.

'ನನ್ನ ಅಪ್ಪ ಹೆಚ್ಚು ನರಳಲಿಲ್ಲ ಎಂಬುದೇ ಸಮಾಧಾನ. 17 ವರ್ಷದಿಂದ ಅವರೊಂದಿಗೆ ಇದ್ದ ನೆನಪುಗಳನ್ನು ನಾನು ಸದಾ ಜೀವಂತವಿರಿಸಿಕೊಳ್ಳುತ್ತೇನೆ. ಅವರು ನನ್ನನ್ನು ಮಾತ್ರವಲ್ಲ, ಬದಲಿಗೆ ಎಲ್ಲರನ್ನೂ ಉತ್ತೇಜಿಸುತ್ತಿದ್ದರು. ಅವರು ನನ್ನನ್ನು ಸದಾ ಸಲಹುತ್ತಿದ್ದರು. ಈಗ ಅವರಿಲ್ಲದಿರುವ ಬದುಕು ಭಯವಾಗುತ್ತಿದೆ' ಎಂದು ಲಿದ್ದರ್ ಅವರ ಪುತ್ರಿ ಆಶ್ನಾ ಲಿದ್ದರ್ ಹೇಳಿದ್ದಾರೆ.

'ಹೆಲಿಕಾಪ್ಟರ್ ಪತನದ ತಪ್ಪು ಮಾಹಿತಿ ಹರಡದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು/ಚೆನ್ನೈ: ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್, ಅವರ ಪತ್ನಿ ಮತ್ತು ಸೇನೆಯ 11 ಮಂದಿ ಮೃತಪಟ್ಟ ಹೆಲಿಕಾಪ್ಟರ್ ಪತನ ಕುರಿತ ತಪ್ಪುಮಾಹಿತಿ ಹಂಚಿಕೊಳ್ಳುವುದನ್ನು ತಪ್ಪಿಸಿ ಎಂದು ವಾಯುಪಡೆಯು ಕರೆ ನೀಡಿದೆ.

'ಅಪಘಾತಕ್ಕೆ ಈಡಾದ ರಷ್ಯಾ ನಿರ್ಮಿತ ಎಂಐ–17ವಿ5 ಹೆಲಿಕಾಪ್ಟರ್, ತನ್ನ ವರ್ಗದಲ್ಲೇ ಹೆಚ್ಚು ಸುರಕ್ಷಿತ. ಹೀಗಿದ್ದೂ ಅದು ಪತನವಾದದ್ದು ಹೇಗೆ' ಎಂಬ ಪ್ರಶ್ನೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಟ್ವಿಟರ್‌ನಲ್ಲಿ ಈ ಪ್ರಶ್ನೆಗಳನ್ನು ಇರಿಸಿಕೊಂಡು ವಾಯುಪಡೆಯ ಟ್ವಿಟರ್ ಹ್ಯಾಂಡಲ್ ಅನ್ನು ಟ್ಯಾಗ್ ಮಾಡಿ ಹಲವರು ಟ್ವೀಟ್ ಮಾಡುತ್ತಿದ್ದಾರೆ. 'ಇದು ನಿಜಕ್ಕೂ ಅಪಘಾತವೇ ಅಥವಾ ಕೊಲೆಯೇ' ಎಂದು ಹಲವರು ವಾಯುಪಡೆಯನ್ನು ಪ್ರಶ್ನಿಸಿದ್ದಾರೆ. ಅಪಘಾತ ಹೇಗಾಗಿರಬಹುದು ಎಂದು ಹಲವರು ತಮ್ಮದೇ ವಿವರಣೆ ನೀಡಿ, ಟ್ವೀಟ್ ಮಾಡುತ್ತಿದ್ದಾರೆ.

'ಈ ಹೆಲಿಕಾಪ್ಟರ್ ಅತ್ಯಾಧುನಿಕವಾದುದು. ಇಂತಹ ಅಪಘಾತಗಳು ನಡೆಯುತ್ತವೆಯಾದರೂ, ಜನರಲ್ ರಾವತ್ ಅವರಿದ್ದ ಹೆಲಿಕಾಪ್ಟರ್ ಅಪಘಾತಕ್ಕೆ ಈಡಾದದ್ದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಪ್ರಧಾನಿ ಮತ್ತು ರಕ್ಷಣಾ ಸಚಿವರು ಈ ಅನುಮಾನಗಳನ್ನು ಹೋಗಲಾಡಿಸಬೇಕು' ಎಂದು ಶಿವಸೇನಾ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಗುರುವಾರ ಹೇಳಿದ್ದರು.

ಇಂತಹ ಟ್ವೀಟ್‌ಗಳು ಮತ್ತು ಫೇಸ್‌ಬುಕ್ ಪೋಸ್ಟ್‌ಗಳ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲಿ ವಾಯುಪಡೆ ತನ್ನ ಅಧಿಕೃತ ಟ್ವಿಟರ್ ಖಾತೆಯಿಂದ ಈ ಮನವಿ ಮಾಡಿಕೊಂಡಿದೆ.

'ಡಿಸೆಂಬರ್ 8ರಂದು ನಡೆದ ಅಪಘಾತದ ಬಗ್ಗೆ ಸೇನೆಯ ಮೂರೂ ಪಡೆಗಳನ್ನು ಒಳಗೊಂಡಂತೆ ಆಂತರಿಕ ತನಿಖಾ ತಂಡವನ್ನು ವಾಯುಪಡೆ ರಚಿಸಿದೆ. ತನಿಖೆಯನ್ನು ತ್ವರಿತವಾಗಿ ಮುಗಿಸಲಾಗುವುದು ಮತ್ತು ಸತ್ಯವನ್ನು ಬಹಿರಂಗಪಡಿಸಲಾಗುವುದು. ಅಲ್ಲಿಯವರೆಗೆ ಮೃತರ ಘನತೆಯನ್ನು ಕಾಪಾಡಿಕೊಳ್ಳಬೇಕಿದೆ. ಹೀಗಾಗಿ ತಪ್ಪು ಮಾಹಿತಿ ಹಂಚಿಕೊಳ್ಳುವುದನ್ನು ತಪ್ಪಿಸಿ' ಎಂದು ವಾಯುಪಡೆಯು ಟ್ವೀಟ್ ಮಾಡಿದೆ.

ವದಂತಿ ಹರಡುವವರಿಗೆ ಎಚ್ಚರಿಕೆ: ಹೆಲಿಕಾಪ್ಟರ್ ಪತನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ವದಂತಿಗಳನ್ನು ಹರಡುತ್ತಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಮಿಳುನಾಡು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಸಾಕ್ಷ್ಯ ಪತ್ತೆಗೆ ಕಾರ್ಯಾಚರಣೆ: ಎಂಐ–17ವಿ5 ಹೆಲಿಕಾಪ್ಟರ್ ಪತನವಾಗಿದ್ದ ಸ್ಥಳದಲ್ಲಿ ಮತ್ತಷ್ಟು ಸಾಕ್ಷ್ಯಗಳನ್ನು ಪತ್ತೆಮಾಡಲು ವಾಯುಪಡೆಯು ಶುಕ್ರವಾರವೂ ಶೋಧಕಾರ್ಯ ಮುಂದುವರಿಸಿದೆ. ಹೆಲಿಕಾಪ್ಟರ್ ಪತನವಾದ ಕಾಟ್ಟೇರಿ ಎಸ್ಟೇಟ್ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಡ್ರೋನ್‌ಗಳನ್ನು ಬಳಸಿಕೊಂಡು ಶುಕ್ರವಾರವೂ ಸಾಕ್ಷ್ಯಗಳಿಗಾಗಿ ಹುಡುಕಾಟ ನಡೆಸಲಾಗಿದೆ.

ಪ್ರತಿಕೂಲ ಹವಾಮಾನ ಕಾರಣವಾಗಿರಬಹುದು: ಪ್ರತ್ಯಕ್ಷದರ್ಶಿ

ಕೊಯಮತ್ತೂರು (ಪಿಟಿಐ): 'ಜನರಲ್ ಬಿಪಿನ್ ರಾವತ್ ಅವರಿದ್ದ ವಾಯುಪಡೆಯ ಹೆಲಿಕಾಪ್ಟರ್ ಪ್ರತಿಕೂಲ ಹವಾಮಾನದ ಕಾರಣ ಪತನವಾಗಿರಬಹುದು' ಎಂದು ಹೆಲಿಕಾಪ್ಟರ್ ಹಾರಾಟದ ಕೊನೆಯ ಕ್ಷಣಗಳನ್ನು ವಿಡಿಯೊದಲ್ಲಿ ಸೆರೆಹಿಡಿದಿದ್ದ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಛಾಯಾಗ್ರಾಹಕರಾಗಿರುವ ವೈ ಜೊ (52) ಅವರು, ಬುಧವಾರ ರಾವತ್ ಅವರಿದ್ದ ಹೆಲಿಕಾಪ್ಟರ್‌ನ ಹಾರಾಟದ ಕೊನೆಯ ಕ್ಷಣಗಳ ದೃಶ್ಯಗಳನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದರು. ದಟ್ಟಮಂಜಿನಲ್ಲಿ ಹೆಲಿಕಾಪ್ಟರ್ ಮರೆಯಾಗುವ ಮತ್ತು ಕೆಲವೇ ಕ್ಷಣಗಳಲ್ಲಿ ಭಾರಿ ಸದ್ದು ಕೇಳುವ ದೃಶ್ಯಗಳು ಆ ವಿಡಿಯೊದಲ್ಲಿ ಇದ್ದವು. ಆ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸುದ್ದಿಸಂಸ್ಥೆಗಳು ಸಹ ಆ ವಿಡಿಯೊವನ್ನು ಬಳಸಿಕೊಂಡು ಸುದ್ದಿ ಪ್ರಸಾರ ಮಾಡಿವೆ. ಆದರೆ ವಿಡಿಯೊವಿನ ಅಧಿಕೃತತೆಯ ಬಗ್ಗೆ ವಾಯುಪಡೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವೈ ಜೋ ಅವರು ತಮ್ಮ ಸ್ನೇಹಿತ ನಜರ್ ಮತ್ತು ಅವರ ಕುಟುಂಬದ ಜತೆ ಛಾಯಾಚಿತ್ರ ತೆಗೆಯಲು ಎಂದು ಕೂನೂರಿನ ಕಾಟ್ಟೇರಿ ಎಸ್ಟೇಟ್‌ಗೆ ಬಂದಿದ್ದರು. ಎಸ್ಟೇಟ್ ಮಧ್ಯದಲ್ಲಿ ಹಾದುಹೋಗುವ ರೈಲು ಹಳಿಯ ಮೇಲೆ ಛಾಯಾಚಿತ್ರ ತೆಗೆಯಲಾಗುತ್ತಿತ್ತು ಮತ್ತು ವಿಡಿಯೊ ಮಾಡಲಾಗುತ್ತಿತ್ತು. ಆಗ ಹೆಲಿಕಾಪ್ಟರ್ ಅತ್ಯಂತ ಸಮೀಪದಲ್ಲಿಯೇ ಹಾರಾಡುತ್ತಿರುವ ಸದ್ದು ಕೇಳಿದ್ದರಿಂದ, ಮೊಬೈಲ್‌ನಲ್ಲಿ ಹಾರಾಟದ ದೃಶ್ಯವನ್ನು ಸೆರೆಹಿಡಿಯಲಾಯಿತು ಎಂದು ಅವರು ಮಾಹಿತಿ ನೀಡಿದ್ದಾರೆ.

'ಇದೊಂದು ಮಹತ್ವದ ವಿಡಿಯೊ ಆಗಲಿದೆ ಎಂದು ನಾವು ಊಹಿಸಿರಲಿಲ್ಲ' ಎಂದು ಜೊ ಮತ್ತು ನಜರ್ ಅವರು ಹೇಳಿದ್ದಾರೆ.

'ಹೆಲಿಕಾಪ್ಟರ್ ಪತನವಾದ ನಂತರ ಆ ಸ್ಥಳದತ್ತ ಹೋದೆವು. ಆದರೆ ಪೊಲೀಸರು ಆಗಲೇ ಬಂದಿದ್ದರು. ಹೆಲಿಕಾಪ್ಟರ್ ಸಮೀಪ ಹೋಗಲು ನಮ್ಮನ್ನು ಬಿಡಲಿಲ್ಲ. ಅದೇ ದಿನ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಯನ್ನು ಸಂಪರ್ಕಿಸಲು ಯತ್ನಿಸಿದೆವು. ಅದು ಸಾಧ್ಯವಾಗಲಿಲ್ಲ. ವಿಡಿಯೊವನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸುವಂತೆ ಪೊಲೀಸರು ಹೇಳಿದರು. ನಾವು ಹಾಗೆ ಮಾಡಿದೆವು' ಎಂದು ವೈ ಜೊ ಅವರು ಹೇಳಿದ್ದಾರೆ.

ಗ್ರಾಮಸ್ಥರಿಗೆ ಸನ್ಮಾನ

ಹೆಲಿಕಾಪ್ಟರ್ ಪತನವಾದಾಗ ಗಾಯಾಳುಗಳ ರಕ್ಷಣೆಗೆ ಮುಂದಾದ ಗ್ರಾಮಸ್ಥರನ್ನು ತಮಿಳುನಾಡು ಪೊಲೀಸರು ಸನ್ಮಾನಿಸಿದ್ದಾರೆ.

'ಹೆಲಿಕಾಪ್ಟರ್ ಪತನವಾದ ನಂತರ ಮೊದಲು ಅಲ್ಲಿಗೆ ತಲುಪಿದ್ದು ಗ್ರಾಮಸ್ಥರು. 12.25ಕ್ಕೆಲ್ಲ ಗ್ರಾಮಸ್ಥರು ಆ ಸ್ಥಳವನ್ನು ತಲುಪಿದ್ದರು. ರಕ್ಷಣಾ ಕಾರ್ಯಾಚರಣೆಯಲ್ಲಿ ಅವರು ಪೊಲೀಸರಿಗೆ ಜತೆಯಾದರು. ಹೊದಿಕೆಗಳನ್ನು ಹಾಕಿ ಮತ್ತು ನೀರು ಹಾಯಿಸಿ ಬೆಂಕಿ ನಂದಿಸುವಲ್ಲಿ ಗ್ರಾಮಸ್ಥರು ನೆರವಾದರು. ಹೆಲಿಕಾಪ್ಟರ್‌ನ ಅವಶೇಷಗಳ ಮಧ್ಯೆಯಿಂದ ಮೂವರು ಗಾಯಾಳುಗಳನ್ನು ಹೊರಕ್ಕೆ ತಂದರು. ಆ ಮೂವರೂ ಗ್ರಾಮಸ್ಥರೊಂದಿಗೆ ಮಾತನಾಡಿದ್ದಾರೆ' ಎಂದು ಪೊಲೀಸ್ ಮಹಾನಿರ್ದೇಶಕ ಶೈಲೇಂದ್ರ ಬಾಬು ಅವರು ಹೇಳಿದ್ದಾರೆ.

ಗ್ರಾಮಸ್ಥರಿಗೆ ಹೊದಿಕೆಗಳು ಮತ್ತಿತರ ಉಡುಗೊರೆಗಳನ್ನು ಪೊಲೀಸರು ನೀಡಿದ್ದಾರೆ.

ವಿಕೃತ ಪೋಸ್ಟ್ ಮಾಡಿದವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹಾವೇರಿ: 'ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್ ಅವರ ಸಾವನ್ನು ಸಂಭ್ರಮಿಸಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದವರ ವಿಳಾಸ ಪತ್ತೆ ಹಚ್ಚಿ, ಅಂಥವರ ವಿರುದ್ಧ ಪ್ರಕರಣ ದಾಖಲಿಸಲು ಸೂಚಿಸಿದ್ದೇನೆ. ವಿಕೃತ ಮನಸ್ಸುಗಳಿಗೆ ಶಿಕ್ಷೆ ವಿಧಿಸಲೇಬೇಕಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಪರಿಷತ್ ಚುನಾವಣೆಗೆ ಶಿಗ್ಗಾವಿ ತಾಲ್ಲೂಕು ಪಂಚಾಯಿತಿ ಕಚೇರಿ ಮತಗಟ್ಟೆಯಲ್ಲಿ ಶುಕ್ರವಾರ ಮತದಾನ ಮಾಡಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರನ್ನು ನೋಡಲು ಏರ್‌ಫೋರ್ಸ್ ಕಮಾಂಡ್ ಆಸ್ಪತ್ರೆಗೆ ಹೋಗಿದ್ದೆ. ಪರಿಣತ ವೈದ್ಯರ ತಂಡದಿಂದ ಅತ್ಯುತ್ತಮ ಚಿಕಿತ್ಸೆ ಸಿಗುತ್ತಿದೆ. ಆದಷ್ಟು ಬೇಗ ಅವರು ಗುಣಮುಖರಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ದೇಶದಲ್ಲಿ ಒಟ್ಟು 26 ಓಮೈಕ್ರಾನ್ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್‌ನ ಒಟ್ಟು 26 ಪ್ರಕರಣಗಳು ದೇಶದಲ್ಲಿ ಈವರೆಗೆ ದೃಢಪಟ್ಟಿವೆ. ಎಲ್ಲಾ ಪ್ರಕರಣಗಳಲ್ಲೂ ರೋಗ ಲಕ್ಷಣ ಸೌಮ್ಯವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ಆರೋಗ್ಯ ವ್ಯವಸ್ಥೆ ಮೇಲೆ ಓಮೈಕ್ರಾನ್ ಸೋಂಕು ಈವರೆಗೂ ವೈದ್ಯಕೀಯವಾಗಿ ಹೊರೆ ಉಂಟುಮಾಡುತ್ತಿಲ್ಲ. ಆದರೆ ಈ ಕುರಿತು ಅಗತ್ಯ ಎಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಹೇಳಿದೆ.

ಕೋವಿಡ್–19 ಸಾಂಕ್ರಾಮಿಕ ಕುರಿತು ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಲಾಯಿತು. ಮಹಾರಾಷ್ಟ್ರದಲ್ಲಿ 11, ರಾಜಸ್ಥಾನದಲ್ಲಿ ಒಂಬತ್ತು, ಗುಜರಾತ್‌ನಲ್ಲಿ ಮೂರು, ಕರ್ನಾಟಕದಲ್ಲಿ ಎರಡು ಮತ್ತು ದೆಹಲಿಯಲ್ಲಿ ಒಂದು ಓಮೈಕ್ರಾನ್ ಪ್ರಕರಣ ದೃಢವಾಗಿದೆ.



ಮಕ್ಕಳಿಗೆ ಕೋವಿಡ್–19 ವಿರುದ್ಧ ಲಸಿಕೆ ನೀಡುವಂತೆ, ಲಸಿಕೆ ನೀಡಿಕೆಯ ರಾಷ್ಟ್ರೀಯ ಸಲಹಾ ಸಮಿತಿಯು (ಎನ್‌ಟಿಎಜಿಐ) ಸೂಚನೆ ನೀಡಿಲ್ಲ. ದೇಶದಲ್ಲಿ ಶೇ 86.2ರಷ್ಟು ವಯಸ್ಕರಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ. ಶೇ 53.5ರಷ್ಟು ವಯಸ್ಕರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ. ಕಳೆದ 43 ದಿನಗಳಿಂದ ಕೊರೊನಾ ವೈರಾಣು ಸೋಂಕಿತರ ಸಂಖ್ಯೆ 15,000ಕ್ಕಿಂತ ಕೆಳಕ್ಕೆ ಇಳಿದಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸಂರಚನೆ ವಿಶ್ಲೇಷಣೆ ಯಂತ್ರ: ವೈರಾಣುವಿನ ಸಂರಚನೆ ವಿಶ್ಲೇಷಣೆಯ (ಜಿನೋಮ್ ಸೀಕ್ವೆನ್ಸಿಂಗ್) ಐದು ಯಂತ್ರಗಳನ್ನು ಮಧ್ಯಪ್ರದೇಶಕ್ಕೆ ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ ಎಂದು ಮಧ್ಯಪ್ರದೇಶ ಸಚಿವ ವಿಶ್ವಾಸ್ ಸಾರಂಗ್ ಹೇಳಿದ್ದಾರೆ.

ಭೋಪಾಲ್, ಇಂದೋರ್, ಜಬಲ್‌ಪುರ್, ರೇವಾ ಮತ್ತು ಗ್ವಾಲಿಯರ್ ನಗರಗಳಲ್ಲಿ ಈ ಉಪಕರಣಗಳನ್ನು ಅಳವಡಿಸಲಾಗುವುದು. ಮಧ್ಯಪ್ರದೇಶದಲ್ಲಿ ಈವರೆಗೆ ಓಮೈಕ್ರಾನ್ ಪ್ರಕರಣ ಪತ್ತೆಯಾಗಿಲ್ಲ.

ಡೆಲ್ಟಾ 'ಎವೈ.4.2' ತಳಿಯ 18 ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ರೂಪಾಂತರ ತಳಿ ಡೆಲ್ಟಾ ಎವೈ.4.2 ತಳಿಯ 18 ಪ್ರಕರಣಗಳು ದೇಶದಲ್ಲಿ ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಲೋಕಸಭೆಗೆ ಶುಕ್ರವಾರ ತಿಳಿಸಿದರು.

2021ರ ಡಿ.3ರ ವರೆಗೆ ದೇಶದಲ್ಲಿ ಡೆಲ್ಟಾ ಎವೈ.4.2 ರೂಪಾಂತರ ತಳಿಯ 18 ಪ್ರಕರಣಗಳು ಪತ್ತೆಯಾಗಿವೆ. 10 ಪ್ರಕರಣಗಳು ಗುಜರಾತ್‌ನಲ್ಲಿ ಪತ್ತೆಯಾಗಿವೆ. ತಮಿಳುನಾಡಿನಲ್ಲಿ ನಾಲ್ಕು, ಅಸ್ಸಾಂನಲ್ಲಿ ಎರಡು, ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲಿ ತಲಾ ಒಂದು ಪ್ರಕರಣ ಪತ್ತೆಯಾಗಿದೆ ಎಂದಿದ್ದಾರೆ.

ಕೋವಿಡ್–19ರ ಮೂರನೇ ಅಲೆಯ ಸಾಧ್ಯತೆ ಇರುವುದರಿಂದ ಎವೈ.4.2ರ 18 ಪ್ರಕರಣಗಳು ದೇಶದಲ್ಲಿ ಪತ್ತೆಯಾಗಿರುವ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ ಎಂದು ಕೇಳಿದ್ದ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ. ಡೆಲ್ಟಾ ಎವೈ.4.2 ಸೋಂಕು ಬ್ರಿಟನ್‌ನಲ್ಲಿ ವೇಗವಾಗಿ ಹರಡುತ್ತಿದೆ.

ಮಹಾರಾಷ್ಟ್ರ: ಐವರು ಸೋಂಕು ಮುಕ್ತ

ಪುಣೆ (ಪಿಟಿಐ): ಓಮೈಕ್ರಾನ್ ಸೋಂಕಿಗೆ ಒಳಗಾಗಿದ್ದ ಪುಣೆ ಜಿಲ್ಲೆಯ ಏಳು ಜನರಲ್ಲಿ ಐವರು ಕೊರೊನಾ ಸೋಂಕು ಮುಕ್ತರಾಗಿದ್ದಾರೆ ಎಂದು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ.

ಕೋವಿಡ್–19 ಪರಿಸ್ಥಿತಿಯ ಕುರಿತ ವಾರದ ಸಭೆಯಲ್ಲಿ ಪವಾರ್ ಸುದ್ದಿಗಾರರಿಗೆ ಈ ಕುರಿತು ಹೇಳಿದರು. ಏಳು ಜನ ಸೋಂಕಿತರ ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎಂದರು.

ವಿದೇಶಗಳಿಂದ ಪುಣೆಗೆ ಆಗಮಿಸಿರುವ 4,500 ಪ್ರಯಾಣಿಕರ ಪಟ್ಟಿಯನ್ನು ರಾಜ್ಯ ಸರ್ಕಾರ ಪಡೆದಿದೆ. ಈ ಪ್ರಯಾಣಿಕರನ್ನು ಪತ್ತೆ ಮಾಡುವ ಕೆಲಸವೂ ನಡೆಯುತ್ತಿದೆ ಎಂದರು.

ಜಿಂಬಾಬ್ವೆಯಿಂದ ಆಗಮಿಸಿದವರಲ್ಲಿ ಸೋಂಕು

ಜಾಮ್‌ನಗರ್ (ಪಿಟಿಐ): ಓಮೈಕ್ರಾನ್ ಸೋಂಕಿಗೆ ಒಳಗಾಗಿದ್ದ, ಜಿಂಬಾಬ್ವೆಯಿಂದ ಗುಜರಾತ್‌ಗೆ ಆಗಮಿಸಿದ್ದ 72 ವರ್ಷ ವಯಸ್ಸಿನ ವ್ಯಕ್ತಿಯ ಪತ್ನಿ ಮತ್ತು ಸಂಬಂಧಿಗೆ ಓಮೈಕ್ರಾನ್ ಸೋಂಕು ತಗುಲಿರುವುದು ದೃಢವಾಗಿದೆ. ಈ ಮೂಲಕ ಗುಜರಾತ್‌ನಲ್ಲಿ ಒಟ್ಟು ಮೂರು ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ.

ಜಾಮ್‌ನಗರ್ ಗುರು ಗೋವಿಂದ್ ಸಿಂಗ್ ಸರ್ಕಾರಿ ಆಸ್ಪತ್ರೆಯ ಓಮೈಕ್ರಾನ್ ಸೋಂಕಿತರ ಪ್ರತ್ಯೇಕ ವಾರ್ಡ್‌ನಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಜಾಮ್‌ನಗರ್ ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಮಾಸ್ಕ್ ಬಳಕೆ ಇಳಿಕೆ: ಕೇಂದ್ರ ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೂನ್ ಮತ್ತು ಡಿಸೆಂಬರ್ ನಡುವಣ ಅವಧಿಯಲ್ಲಿ ಜನರಲ್ಲಿ ಮಾಸ್ಕ್ ಧರಿಸುವ ಪ್ರವೃತ್ತಿ ಕಡಿಮೆ ಆಗಿರುವುದರ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯವು ಶುಕ್ರವಾರ ಕಳವಳ ವ್ಯಕ್ತಪಡಿಸಿದೆ. ಕೊರೊನಾ ವೈರಾಣು ರೂಪಾಂತರದ ಹೊಸ ತಳಿಯು ಕಾಣಿಸಿಕೊಂಡ ಸಂದರ್ಭದಲ್ಲಿ, ಮಾಸ್ಕ್ ಬಳಕೆ ಮತ್ತು ಲಸಿಕೆ ಹಾಕಿಸಿಕೊಳ್ಳುವಿಕೆಯ ಮಹತ್ವವನ್ನು ಸಚಿವಾಲಯವು ಮತ್ತೊಮ್ಮೆ ಸಾರಿದೆ.

ಜೂನ್‌ನಲ್ಲಿ ಶೇ 80ಕ್ಕೂ ಹೆಚ್ಚು ಜನರು ಮಾಸ್ಕ್ ಧರಿಸಿದ್ದರು. ಆದರೆ, ನವೆಂಬರ್ ಹೊತ್ತಿಗೆ ಶೇ 60ಕ್ಕಿಂತಲೂ ಕಡಿಮೆ ಜನರು ಮಾತ್ರ ಮಾಸ್ಕ್ ಬಳಸಿದ್ದರು ಎಂದು ವಾಷಿಂಗ್ಟನ್‌ನ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಮೆಟ್ರಿಕ್ಸ್ ಎಂಡ್ ಇವ್ಯಾಲುಯೇಷನ್ ಇತ್ತೀಚೆಗೆ ನಡೆಸಿದ ಅಧ್ಯಯನವನ್ನು ಉಲ್ಲೇಖಿಸಿ ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ಹೇಳಿದ್ದಾರೆ. ಮಾಸ್ಕ್ ಧರಿಸುವ ಪ್ರವೃತ್ತಿಯು ಜುಲೈನಲ್ಲಿ ಕುಸಿಯಲು ಆರಂಭವಾಯಿತು. ಹೊಸ ರೂಪಾಂತರ ತಳಿ ಕಾಣಿಸಿಕೊಂಡರೂ ಮಾಸ್ಕ್ ಬಳಕೆ ಹೆಚ್ಚಲಿಲ್ಲ.

'ನಾವು ಅಪಾಯದ ವಲಯವನ್ನು ಪ್ರವೇಶಿಸಿದ್ದೇವೆ. ಮಾಸ್ಕ್ ಧರಿಸುವಿಕೆಯು ಸ್ವೀಕಾರಾರ್ಹವೇ ಅಲ್ಲದ ಕೆಳ ಮಟ್ಟಕ್ಕೆ ಕುಸಿದಿದೆ. ಎರಡನೇ ಅಲೆ ತೀವ್ರಗೊಳ್ಳುವುದಕ್ಕಿಂತ ಹಿಂದೆ ಇದ್ದ ಸ್ಥಿತಿಗೆ ತಲುಪಿದ್ದೇವೆ' ಎಂದು ಪಾಲ್ ಹೇಳಿದ್ದಾರೆ. ಕೋವಿಡ್–19ಕ್ಕೆ ಸಂಬಂಧಿಸಿ ಸರ್ಕಾರದ ಪ್ರಧಾನ ಸಲಹೆಗಾರರಲ್ಲಿ ಪಾಲ್ ಅವರೂ ಒಬ್ಬರು.

ಬಾಂಗ್ಲಾದೇಶದ ಗ್ರಾಮೀಣ ಪ್ರದೇಶದಲ್ಲಿ ಮಾಸ್ಕ್ ಬಳಕೆಯ ಕುರಿತ ಅಧ್ಯಯನವನ್ನು ಇತ್ತೀಚೆಗೆ ನಡೆಸಲಾಗಿತ್ತು. ಅಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜನರು ಮಾಸ್ಕ್ ಧರಿಸುವುದನ್ನು ಹೆಚ್ಚಿಸಿದ್ದರಿಂದ ಕೋವಿಡ್ ಹರಡುವಿಕೆ ಕಡಿಮೆಯಾಗಿದೆ ಎಂಬುದು ಅಧ್ಯಯನದಿಂದ ತಿಳಿದು ಬಂದಿತ್ತು.

ಬಾಂಗ್ಲಾದೇಶದ 600 ಗ್ರಾಮಗಳ 3.4 ಲಕ್ಷ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. 2020ರ ನವೆಂಬರ್‌ನಿಂದ 2021ರ ಏಪ್ರಿಲ್ ಅವಧಿಯಲ್ಲಿ ಸಮೀಕ್ಷೆ ನಡೆದಿತ್ತು.

ಭಾರತದದಲ್ಲಿ ಮಾಸ್ಕ್ ಬಳಕೆ ಕಡಿಮೆ ಆದದ್ದರ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಕೂಡ 2020ರ ಡಿಸೆಂಬರ್‌ನಲ್ಲಿ ಕಳವಳ ವ್ಯಕ್ತಪಡಿಸಿತ್ತು. ಲಸಿಕೆ ಹಾಕಿಸುವಿಕೆ ಹೆಚ್ಚಾಗಿದ್ದರೂ ಅಂತರ ಕಾಯ್ದುಕೊಳ್ಳುವಿಕೆ ಮತ್ತು ಮಾಸ್ಕ್ ಬಳಕೆ ಕಡಿಮೆ ಆಗಿದೆ ಎಂದು ಹೇಳಿತ್ತು.

ಓಮೈಕ್ರಾನ್ ವಿರುದ್ಧ ಲಸಿಕೆ: ಐಸಿಎಂಆರ್ ಅಧ್ಯಯನ

ಓಮೈಕ್ರಾನ್ ತಳಿಯ ವಿರುದ್ಧ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಗಳು ಪರಿಣಾಮಕಾರಿಯೇ ಎಂಬ ಬಗ್ಗೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಅಧ್ಯಯನ ನಡೆಸುತ್ತಿದೆ. 'ರಾಷ್ಟ್ರೀಯ ವೈರಾಣು ಸಂಸ್ಥೆಯು ಪ್ರಯೋಗಾಲಯದಲ್ಲಿ ಓಮೈಕ್ರಾನ್ ವೈರಾಣು ತಳಿಯನ್ನು ಸೃಷ್ಟಿಸಲು ಯತ್ನಿಸುತ್ತಿದೆ. ವೈರಾಣು ಸೃಷ್ಟಿಯಾದರೆ, ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಪರಿಣಾಮಕಾರಿಯೇ ಎಂಬುದನ್ನು ಕಂಡುಕೊಳ್ಳಬಹುದು' ಎಂದು ಐಸಿಎಂಆರ್ ಮಹಾ ನಿರ್ದೇಶಕ ಬಲರಾಂ ಭಾರ್ಗವ ಹೇಳಿದ್ದಾರೆ.

ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಿಕೆ ಮತ್ತು ಮಕ್ಕಳಿಗೆ ಕೋವಿಡ್ ಲಸಿಕೆ ಹಾಕಿಸುವಿಕೆಯ ಬಗ್ಗೆ ಯಾವುದೇ ನಿರ್ಧಾರ ಇನ್ನೂ ಆಗಿಲ್ಲ ಎಂದು ಪಾಲ್ ಮತ್ತು ಭಾರ್ಗವ ತಿಳಿಸಿದ್ದಾರೆ.

ಓಮೈಕ್ರಾನ್: 10 ದಿನ ಆಸ್ಪತ್ರೆ, 7 ದಿನ ಮನೆ ಆರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ದೃಢಪಟ್ಟವರು 10 ದಿನ ಆಸ್ಪತ್ರೆ ಹಾಗೂ 7 ದಿನ ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಪಡಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಗೋಚರಿಸಿದ ಪ್ರಕರಣಗಳಲ್ಲಿ ವ್ಯಕ್ತಿ ಆಸ್ಪತ್ರೆಯಿಂದ ಮನೆಗೆ ತೆರಳುವ ಮೂರು ದಿನಗಳ ಅವಧಿಯಲ್ಲಿ ಜ್ವರ ಸೇರಿದಂತೆ ಯಾವುದೇ ಲಕ್ಷಣಗಳು ಗೋಚರಿಸಬಾರದು. ರಕ್ತದಲ್ಲಿನ ಆಮ್ಲಜನಕ ಪ್ರಮಾಣವು ಶೇ 95ಕ್ಕಿಂತ ಅಧಿಕ ಇರಬೇಕು. 24 ಗಂಟೆಗಳ ಅವಧಿಯಲ್ಲಿ ಎರಡು ಬಾರಿ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಬೇಕು. ಒಂದು ವೇಳೆ ಪರೀಕ್ಷೆಯಲ್ಲಿ ಸೋಂಕು ಕಾಣಿಸಿಕೊಂಡರೇ, 48 ಗಂಟೆಗಳ ಬಳಿಕ ಮತ್ತೊಮ್ಮೆ ಪರೀಕ್ಷೆ ಮಾಡಬೇಕು' ಎಂದು ತಿಳಿಸಲಾಗಿದೆ.

'ಆಸ್ಪತ್ರೆಯಿಂದ ಮನೆಗೆ ಕಳುಹಿಸುವ ವೇಳೆ ಸೂಕ್ತ ಮಾರ್ಗದರ್ಶನ ಮಾಡಬೇಕು. ಚೇತರಿಸಿಕೊಂಡ ವ್ಯಕ್ತಿಯು 7 ದಿನಗಳು ಮನೆ ಆರೈಕೆಗೆ ಒಳಗಾಗಬೇಕು. ಅವರು ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗಿರುವ ಬಗ್ಗೆ ಜಿಲ್ಲಾ ಕಣ್ಗಾವಲು ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. 6ನೇ ದಿನ ಕೋವಿಡ್ ಪರೀಕ್ಷೆಗೆ ಒಳಗಾಗಬೇಕು' ಎಂದು ಸೂಚಿಸಲಾಗಿದೆ.

'ಓಮೈಕ್ರಾನ್‌ನಿಂದ ಚೇತರಿಸಿಕೊಂಡ ಬಳಿಕ ಆರೋಗ್ಯದ ಬಗ್ಗೆ ಗಮನಕೊಡಬೇಕು. ಜ್ವರ, ಕೆಮ್ಮು, ಎದೆನೋವು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಮನೆ ಆರೈಕೆಗೆ ವ್ಯವಸ್ಥೆ ಇರದಿದ್ದಲ್ಲಿ ಸಾಂಸ್ಥಿಕ ಕ್ವಾರೈಂಟನ್‌ಗೆ ಒಳಗಾಗಬೇಕು' ಎಂದು ಹೇಳಲಾಗಿದೆ.

'ಸೋಂಕಿನಿಂದ ತೀವ್ರ ಸ್ವರೂಪದಲ್ಲಿ ಅಸ್ವಸ್ಥರಾದವರಿಗೆ ಚೇತರಿಸಿಕೊಳ್ಳುವವರೆಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

10 ವಿದ್ಯಾರ್ಥಿನಿಯರಿಗೆ ಕೋವಿಡ್

ಮಂಗಳೂರು: ನಗರದ ಅರೆ ವೈದ್ಯಕೀಯ ವಿದ್ಯಾರ್ಥಿನಿಯರ ಹಾಸ್ಟೆಲ್ ಒಂದರಲ್ಲಿ 10 ವಿದ್ಯಾರ್ಥಿನಿಯರಿಗೆ ಕೋವಿಡ್ –19 ದೃಢಪಟ್ಟಿದೆ. ಮೂವರು ವಿದ್ಯಾರ್ಥಿನಿಯರಲ್ಲಿ ಮಾತ್ರ ಕೋವಿಡ್ ಲಕ್ಷಣಗಳು ಕಾಣಿಸಿಕೊಂಡಿವೆ. ಎಲ್ಲರೂ ಕೇರಳದಿಂದ ಬಂದಿರುವ ವಿದ್ಯಾರ್ಥಿನಿಯರಾಗಿದ್ದಾರೆ.

'ಹಾಸ್ಟೆಲ್ ಅನ್ನು ಕಂಟೈನ್‌ಮೆಂಟ್ ವಲಯವೆಂದು ಘೋಷಿಸಲಾಗಿದೆ. ಇಲ್ಲಿ ಉಳಿದಿರುವ 374 ವಿದ್ಯಾರ್ಥಿನಿಯರ ಗಂಟಲು ದ್ರವ ಮಾದರಿಯನ್ನು ಪರೀಕ್ಷೆ ಕಳುಹಿಸಲಾಗಿದೆ. ಜಿನೋಮ್ ಸಿಕ್ವೆನ್ಸಿಂಗ್ ಪರೀಕ್ಷೆಗೂ ಕಳುಹಿಸಲಾಗುವುದು' ಎಂದು ಕೋವಿಡ್ ನೋಡೆಲ್ ಅಧಿಕಾರಿ ಡಾ. ಅಶೋಕ್ ತಿಳಿಸಿದ್ದಾರೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆಯಡಿ ಅಧ್ಯಯನ

ನಿಮ್ಹಾನ್ಸ್: ಜನರ ಮಾನಸಿಕ ಸಮಸ್ಯೆ ಬಗ್ಗೆ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪ್ರದೇಶಗಳ ಜನರ ಕೋವಿಡೋತ್ತರ ಮಾನಸಿಕ ಸ್ಥಿತಿಯ ಬಗ್ಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಮುಂದಿನ ವರ್ಷ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆಯಡಿ ಅಧ್ಯಯನ ಕೈಗೊಳ್ಳಲಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾಮೂರ್ತಿ, 'ಕೇಂದ್ರ ಆರೋಗ್ಯ ಸಚಿವಾಲಯದ ಸಹಯೋಗದಲ್ಲಿ ಮುಂದಿನ ವರ್ಷ ಫೆಬ್ರುವರಿಯಲ್ಲಿ ಈ ಸಮೀಕ್ಷೆ ನಡೆಸಲಾಗುವುದು. ಎರಡನೇ ಹಂತದ ಈ ಸಮೀಕ್ಷೆಗೆ ಮಹಾನಗರಗಳು ಹಾಗೂ ಎರಡನೇ ಹಂತದ ನಗರಗಳು ಒಳಪಡಲಿವೆ' ಎಂದು ತಿಳಿಸಿದರು.



ಡಾ. ಪ್ರತಿಮಾ ಮೂರ್ತಿ

'ನವದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ, ಹೈದರಾಬಾದ್, ಕೋಲ್ಕತ್ತ ಮತ್ತು ಎರಡನೇ ಹಂತದ ನಗರಗಳಾದ ಹುಬ್ಬಳ್ಳಿ-ಧಾರವಾಡ ಹಾಗೂ ಮೈಸೂರಿನಲ್ಲಿ ತಲಾ 3,600 ಜನರನ್ನು ಸಮೀಕ್ಷೆಗೆ ಒಳಡಿಸಲಾಗುವುದು. ಅವರು ಎದುರಿಸುತ್ತಿರುವ ಮಾನಸಿಕ ಸಮಸ್ಯೆಗಳನ್ನು ಗುರುತಿಸಲಾಗುವುದು. ಮಾನಸಿಕ ಸಮಸ್ಯೆಗಳ ಚಿಕಿತ್ಸೆಗೆ ಇರುವ ವ್ಯವಸ್ಥೆಗಳ ಬಗ್ಗೆಯೂ ಈ ಸಮೀಕ್ಷೆಯಡಿ ಅಧ್ಯಯನ ನಡೆಸಲಾಗುತ್ತದೆ. ಕೆಲಸದ ಒತ್ತಡ, ಸಾಮಾಜಿಕ ಮಾಧ್ಯಮಗಳ ಬಳಕೆ, ಮೊಬೈಲ್ ಗೇಮ್‌ಗಳ ಪ್ರಭಾವ ಸೇರಿದಂತೆ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುವ ವಿವಿಧ ಸಂಗತಿಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತದೆ' ಎಂದು ಹೇಳಿದರು.

'ಕೋವಿಡ್ ಕಾಯಿಲೆ ಕಾಣಿಸಿಕೊಂಡ ಬಳಿಕ ನಗರ ಪ್ರದೇಶದ ಹೆಚ್ಚಿನವರಲ್ಲಿ ಮಾನಸಿಕ ಸಮಸ್ಯೆಗಳು ಕಾಣಿಸಿಕೊಂಡಿವೆ. ಇತ್ತೀಚಿನ ವರ್ಷಗಳಲ್ಲಿ ಮಕ್ಕಳನ್ನೂ ಕೆಲವೊಂದು ಮಾನಸಿಕ ಸಮಸ್ಯೆಗಳು ಕಾಡಲಾರಂಭಿಸಿವೆ. ಈ ಬಗ್ಗೆಯೂ ಸಮೀಕ್ಷೆಯಡಿ ಅಧ್ಯಯನ ನಡೆಸಲಾಗುವುದು. ಹೆಚ್ಚುತ್ತಿರುವ ಮಾನಸಿಕ ಸಮಸ್ಯೆಗೆ ಈಗಲೇ ಪರಿಹಾರ ಕಂಡುಕೊಳ್ಳಬೇಕಿದೆ' ಎಂದು ತಿಳಿಸಿದರು.

ಶನಿವಾರ, ಡಿಸೆಂಬರ್ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 342 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹದಿವಯಸ್ಸಿನಲ್ಲಿ ಹೆಣ್ಣುಮಕ್ಕಳಲ್ಲಾಗುವ ಮಾನಸಿಕ ತಲ್ಲಣಗಳು ಹಾಗೂ ಖಿನ್ನತೆಯನ್ನು ಪೋಷಕರು ಪ್ರೀತಿ, ಸ್ನೇಹ ಹಾಗೂ ವಿಶ್ವಾಸದಿಂದ ಗೆಲ್ಲಬೇಕಿದೆ

ಶಿಕ್ಷಕನ ಮೇಲೆ ಕಸದ ಬುಟ್ಟಿ ಹಾಕಿದ ವಿದ್ಯಾರ್ಥಿಗಳು 4

ಚರ್ಚೆ ಮತಾಂತರ ನಿಷೇಧ ಕಾಯ್ದೆಯ ಅಗತ್ಯ ಇದೆಯೇ? 7

‘ಮೇಲ್ಮನೆ ಪ್ರತಿನಿಧಿಸಲು ಹಣವಿದ್ದರೆ ಟಿಕೆಟ್’ 4

ಸೆನ್ಸೆಕ್ಸ್	ನಿಫ್ಟಿ	₹/$
58,786	17,511	75.78

ಆಸ್ತಿ ನಗದೀಕರಣಕ್ಕೆ ಮುಂದಾದ ರಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ವಲಯದ ಆಸ್ತಿಗಳನ್ನು ನಿರ್ವಹಣೆಗಾಗಿ ಖಾಸಗಿಯವರಿಗೆ ನೀಡುವ ಮೂಲಕ ಹಣ ಸಂಪಾದಿಸಲು ಕೇಂದ್ರ ಸರ್ಕಾರ ಜಾರಿಗೆ ತಂದ ಯೋಜನೆಯನ್ನು ಕರ್ನಾಟಕದಲ್ಲೂ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ಮುಂದಾಗಿದೆ.

‘ಆಸ್ತಿಗಳ ನಗದೀಕರಣ ಮತ್ತು ಬಂಡವಾಳ ಹಿಂತೆಗೆತ’ ಯೋಜನೆ ಜಾರಿಗೊಳಿಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಬಂದರು, ವಿಮಾನ ನಿಲ್ದಾಣ, ರಸ್ತೆ ಸೇರಿದಂತೆ ಸಾರ್ವಜನಿಕ ಆಸ್ತಿಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿದೆ.

ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಅವರು ಈ ಸಂಬಂಧ ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಗುರುವಾರ (ಡಿ.9) ನೆನಪೋಲೆ ಬರೆದಿದ್ದಾರೆ.

3B ಪುಟ ನೋಡಿ

ಒಳ ಪುಟ
ವಿದ್ಯುತ್ ದರ ಏರಿಕೆ: ಎಸ್ಕಾಂಗಳ ಪ್ರಸ್ತಾವ 3B

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸರ್ಕಾರದ ಹೊಸ ಆದೇಶ: ಶೇ 30ರಷ್ಟು ನೌಕರರಿಗೆ ಪದೋನ್ನತಿ ಅವಕಾಶ

ಮುಂಬಡ್ತಿಗೆ ತೆರೆದ ಬಾಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರಿಗೆ ಬಡ್ತಿ ನೀಡುವಲ್ಲಿ ಇದ್ದ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಿರುವ ಸರ್ಕಾರ, ಪದೋನ್ನತಿಯ ಅವಕಾಶದ ಬಾಗಿಲನ್ನೇ ತೆರೆದಿದೆ.

ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ಖಾಲಿ ಸ್ಥಾನ ಆಧಾರಿತ ವರ್ಗೀಕರಣದ ಬದಲು ಮಂಜೂರಾದ ಒಟ್ಟು ಹುದ್ದೆ ಆಧಾರಿತ ವರ್ಗೀಕರಣ ವಿಧಾನ ಅನುಸರಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಶುಕ್ರವಾರ ಆದೇಶ ಹೊರಡಿಸಿದೆ. ಹೊಸ ಆದೇಶದಿಂದಾಗಿ ಪ್ರತಿ ಇಲಾಖೆಯಲ್ಲಿನ ಶೇ 25ರಿಂದ 30ರಷ್ಟು ನೌಕರರಿಗೆ ಮುಂಬಡ್ತಿ ಅವಕಾಶಗಳು ಸಿಗಲಿವೆ ಎಂದು ಡಿಪಿಎಆರ್ ಮೂಲಗಳು ಹೇಳಿವೆ.

ಈಗಿರುವ ನಿಯಮದ ಅನುಸಾರ ಯಾವುದೇ ಶ್ರೇಣಿಯ (ಕೇಡರ್) ನೌಕರರು ಮುಂಬಡ್ತಿ ಪಡೆದರೆ, ಬಡ್ತಿ ಪಡೆದ ನೌಕರರು ಹೊಂದಿರುವ ಹುದ್ದೆ ಖಾಲಿಯಾಗುತ್ತವೆ. ಆ ಎಲ್ಲ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡುವಂತಿರಲಿಲ್ಲ. ಖಾಲಿಯಾದ ಹುದ್ದೆಗಳ ಪೈಕಿ ಶೇ 50ರಷ್ಟು ನೇರನೇಮಕಾತಿ ಹಾಗೂ ಶೇ 50ರಷ್ಟು ಮುಂಬಡ್ತಿಯಿಂದ ಭರ್ತಿ ಮಾಡಲು ಅವಕಾಶ ಇತ್ತು. ಇದರಿಂದಾಗಿ ಕೆಳಹಂತದ ನೌಕರರು ಬಡ್ತಿ ಪಡೆಯಲು ಅನೇಕ ವರ್ಷ ಕಾಯಬೇಕಿತ್ತು. ಅನೇಕ ವರ್ಷ ನೇರ ನೇಮಕಾತಿ ನಡೆಯದೇ ಇದ್ದರೆ ಆ ಹುದ್ದೆಗಳು ಖಾಲಿ ಉಳಿದು, ಅಸಮತೋಲನ ಆಗುತ್ತಿತ್ತು. ಇನ್ನು ಮುಂದೆ ಅದು ತಪ್ಪಲಿದೆ.

ಉದಾಹರಣೆಗೆ, ಒಂದು ಇಲಾಖೆಯಲ್ಲಿ 100 ಸೂಪರಿಂಟೆಂಡೆಂಟ್ ಹುದ್ದೆ ಖಾಲಿ ಇದ್ದರೆ 50:50 ಅನುಪಾತದಲ್ಲಿ ಭರ್ತಿ ಮಾಡಲಾಗುತ್ತದೆ. ಈ ಅವಕಾಶದಡಿ 50 ಮಂದಿ ಪ್ರಥಮ ದರ್ಜೆ ಸಹಾಯಕ ಹುದ್ದೆಯಿಂದ ಬಡ್ತಿ ಪಡೆಯುತ್ತಿದ್ದರು. ಬಡ್ತಿ ಪಡೆದ ಪ್ರಥಮ ದರ್ಜೆ ಸಹಾಯಕರಿಂದ ಖಾಲಿಯಾಗುವ ಐವತ್ತೂ ಹುದ್ದೆಗಳಿಗೆ ದ್ವಿತೀಯ ದರ್ಜೆ ಸಹಾಯಕರು ಅರ್ಹತೆ ಪಡೆಯುತ್ತಿರಲಿಲ್ಲ.

8ನೇ ಪುಟ ನೋಡಿ

ಪ್ರತಿವರ್ಷ ಮಾ.31ರೊಳಗೆ ಅಂತಿಮ ಪಟ್ಟಿ

ಇನ್ನು ಮುಂದೆ ಸರ್ಕಾರಿ ನೌಕರರ ಸೇವಾ ಹಿರಿತನದ ಪಟ್ಟಿಗಳನ್ನು ಸಿದ್ಧಪಡಿಸುವಾಗ ಪ್ರತಿ ವರ್ಷ ಡಿಸೆಂಬರ್ 31ರ ಮೊದಲು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕು. ಆಕ್ಷೇಪಣೆಗಳನ್ನು ಆಹ್ವಾನಿಸಿ, ನಿಯಮದಂತೆ ಪರಿಶೀಲಿಸಿ ಮಾರ್ಚ್ 31ರೊಳಗೆ ಅಂತಿಮ ಪಟ್ಟಿ ಪ್ರಕಟಿಸಬೇಕು ಎಂದೂ ಆದೇಶ ಹೇಳಿದೆ.

ಆದರೆ, ನೇರ ನೇಮಕಾತಿ ಮುಖಾಂತರ ನೌಕರರು ಮುಂಬಡ್ತಿ, ನಿವೃತ್ತಿ, ರಾಜೀನಾಮೆ ನೀಡಿದಾಗ ಆ ಹುದ್ದೆ ಖಾಲಿಯಾದಲ್ಲಿ ಅದನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಬೇಕು. ಅದೇ ರೀತಿ, ಮುಂಬಡ್ತಿ ಮುಖಾಂತರ ನೇಮಕಾತಿ ಹೊಂದಿದ ನೌಕರರಿಂದ ತೆರವಾಗುವ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಬಡ್ತಿ ಮಾಡತಕ್ಕದ್ದು. ಪರಿಶಿಷ್ಟ ಜಾತಿ/ ಪಂಗಡ/ ಇತರೆ ಹಿಂದುಳಿದ ಜಾತಿಗೆ ಸೇರಿದ ಬ್ಯಾಕ್ ಲಾಗ್ ಹುದ್ದೆಗಳಿಗೆ ಹಿಂದೆ ಇರುವ ನಿಯಮದಂತೆಯೇ ಭರ್ತಿ ಮಾಡತಕ್ಕದ್ದು ಎಂದೂ ಸೂಚಿಸಿದೆ.

> **ಈ ಆದೇಶದಿಂದ ನೇರ ನೇಮಕಾತಿ, ಮುಂಬಡ್ತಿ ಹುದ್ದೆಗಳ ವರ್ಗೀಕರಣದಲ್ಲಿದ್ದ ಅಸಮತೋಲನ ನಿವಾರಣೆಯಾಗಲಿದೆ. ನೌಕರರ ಬೇಡಿಕೆಗೆ ಸಿ.ಎಂ ಸ್ಪಂದಿಸಿದ್ದಾರೆ**
> **ಎಸ್. ಷಡಾಕ್ಷರಿ**
> ಅಧ್ಯಕ್ಷ, ಸರ್ಕಾರಿ ನೌಕರರ ಸಂಘ

ಸಿಡಿಎಸ್ ರಾವತ್‌ಗೆ ದುಃಖತಪ್ತ ವಿದಾಯ

ನವದೆಹಲಿ (ಪಿಟಿಐ): ತಮಿಳುನಾಡಿನ ಕೂನೂರಿನಲ್ಲಿ ವಾಯುಪಡೆ ಹೆಲಿಕಾಪ್ಟರ್ ಪತನದಲ್ಲಿ ಮೃತರಾಗಿದ್ದ ಸೇನಾಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಮತ್ತು ಅವರ ಪತ್ನಿ ಮಧುಲಿಕಾ ರಾವತ್ ಅವರ ಅಂತಿಮ ಸಂಸ್ಕಾರವನ್ನು ಇಲ್ಲಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ಇರುವ ಬ್ರಾರ್ ಸ್ಕ್ವೇರ್ ಚಿತಾಗಾರದಲ್ಲಿ ಸಕಲ ಸೇನಾ ಗೌರವಗಳೊಂದಿಗೆ ಶುಕ್ರವಾರ ಸಂಜೆ ನಡೆಸಲಾಯಿತು.

ರಾವತ್ ಅವರ ಪುತ್ರಿಯರಾದ ತಾರಿಣಿ ಮತ್ತು ಕೃತಿಕಾ ಅವರು ತಂದೆ-ತಾಯಿಯ ಚಿತೆಗೆ ಅಗ್ನಿಸ್ಪರ್ಶ ಮಾಡುವ ಮೂಲಕ ಅಂತಿಮ ಸಂಸ್ಕಾರ ನೆರವೇರಿಸಿದರು.

ಇದೇ ದುರಂತದಲ್ಲಿ ಮೃತಪಟ್ಟಿದ್ದ ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಅಂತಿಮ ಸಂಸ್ಕಾರವನ್ನು ಶುಕ್ರವಾರ ಬೆಳಿಗ್ಗೆ ಇದೇ ಚಿತಾಗಾರದಲ್ಲಿ ನೆರವೇರಿಸಲಾಯಿತು. ಅಪಘಾತದಲ್ಲಿ ಮೃತಪಟ್ಟ ಇನ್ನೂ 10 ಮಂದಿಯ ಗುರುತು ಇನ್ನಷ್ಟೇ ಪತ್ತೆಯಾಗಬೇಕಿದೆ. ಗುರುತು ಪತ್ತೆಯಾದ ನಂತರ ಅವರ ಅಂತಿಮ ಸಂಸ್ಕಾರ ನಡೆಯಲಿದೆ.

ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರ ಅಂತಿಮ ಯಾತ್ರೆಯು ನವದೆಹಲಿಯಲ್ಲಿ ಶುಕ್ರವಾರ ನಡೆಯಿತು. ಸಾವಿರಾರು ಜನರು ರಾಷ್ಟ್ರಧ್ವಜ ಹಿಡಿದು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಒಕ್ಕಲಿಗರ ಸಂಘದ ಚುನಾವಣೆ: ಮೇಲ್ಮನವಿ ವಜಾ

ಬೆಂಗಳೂರು: 'ನಿಗದಿತ ವೇಳಾಪಟ್ಟಿ ಅನುಸಾರ ಇದೇ 12ರಂದು ರಾಜ್ಯ ಒಕ್ಕಲಿಗರ ಸಂಘಕ್ಕೆ ಚುನಾವಣೆ ನಡೆಸಬೇಕು' ಎಂಬ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಕೃಷ್ಣೇಗೌಡ ಎಂಬುವರು ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ, 'ಸಂಘದ ಸದಸ್ಯರ ಪಟ್ಟಿಯನ್ನು ಪರಿಷ್ಕರಿಸಲಾಗಿಲ್ಲ' ಎಂಬ ಅರ್ಜಿದಾರರ ಆಕ್ಷೇಪಣೆಯನ್ನು ತಳ್ಳಿ ಹಾಕಿತು.'ಚುನಾವಣಾ ಫಲಿತಾಂಶವು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಏಕಸದಸ್ಯ ನ್ಯಾಯಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿರುವಾಗ ಈ ವಿಷಯದಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಕಂಡು ಬರುತ್ತಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿ ಆದೇಶಿಸಿತು.

ಕೋರ್ಟ್ ಮೆಟ್ಟಿಲೇರಿದ ವಾಂಖೆಡೆ

ಮುಂಬೈ (ಪಿಟಿಐ): ಪ್ರಮುಖ ಸಾಮಾಜಿಕ ಮಾಧ್ಯಮಗಳು ತಮ್ಮ ಹಾಗೂ ತಮ್ಮ ಪತ್ನಿ ವಿರುದ್ಧ ದುರುದ್ದೇಶಪೂರಿತ ಮತ್ತು ಮಾನಹಾನಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಪ್ರಕಟಿಸದಂತೆ ನಿರ್ಬಂಧಿಸಲು ನಿರ್ದೇಶಿಸುವಂತೆ ಮಾದಕ ನಿಗ್ರಹ ದಳದ (ಎನ್‌ಸಿಬಿ) ವಲಯ ನಿರ್ದೇಶಕ ಸಮೀರ್ ವಾಂಖೆಡೆ ಮುಂಬೈ ನ್ಯಾಯಾಲಯವೊಂದರ ಮೊರೆ ಹೋಗಿದ್ದಾರೆ.

ಜನಸಂಪರ್ಕ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ಪೊಲೀಸರ ವತಿಯಿಂದ ನಗರದ ಹಲವೆಡೆ ಶನಿವಾರ (ಡಿ. 11) 'ಜನ ಸಂಪರ್ಕ ಸಭೆ' ಆಯೋಜಿಸಲಾಗಿದೆ. ಬಳ್ಳಾರಿ ರಸ್ತೆಯಲ್ಲಿರುವ 'ಕರ್ನಾಟಕ ಪಶು ವೈದ್ಯಕೀಯ ಪರಿಷತ್' ಸಭಾಭವನದಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಭೆ ನಡೆಯಲಿದೆ.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಡಿಸಿಪಿ ಎಸ್. ಸವಿತಾ ಸಭೆಯಲ್ಲಿ ಹಾಜರಿರಲಿದ್ದಾರೆ.

ವಿ.ವಿ.ಪುರ ಸಂಚಾರ ಠಾಣೆ ಹಾಗೂ ವೈಟ್‌ಫೀಲ್ಡ್ ಸಂಚಾರ ಠಾಣೆಗಳಲ್ಲಿ ಪ್ರತ್ಯೇಕವಾಗಿ ಸಭೆಗಳು ಜರುಗಲಿವೆ. ಡಿಸಿಪಿ ಕುಲದೀಪ್ ಕುಮಾರ್ ಜೈನ್ ಹಾಗೂ ಕೆ.ಎಂ. ಶಾಂತರಾಜು ಸಾರ್ವಜನಿಕರ ಸಮಸ್ಯೆ ಆಲಿಸಲಿದ್ದಾರೆ.

'ಸಂಚಾರ ಸಂಬಂಧಿತ ಸಮಸ್ಯೆಗಳು ಹಾಗೂ ಸಂಚಾರ ಪೊಲೀಸರ ಕುರಿತ ಯಾವುದೇ ದೂರುಗಳಿದ್ದರೆ, ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಬಹುದು. ಅದಕ್ಕೆ ಅಧಿಕಾರಿಗಳು ಉತ್ತರಿಸಲಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವಾರ್ಷಿಕ ಮಹಾಸಭೆ ನಾಳೆ

ಬೆಂಗಳೂರು: ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ನೌಕರರ ಪತ್ತಿನ ಸಹಕಾರ ಸಂಘವು ತನ್ನ 49ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಇದೇ ಭಾನುವಾರ (ಡಿ.12) ಬೆಳಿಗ್ಗೆ 10.30ಕ್ಕೆ ಎಂ.ಜಿ. ರಸ್ತೆಯಲ್ಲಿರುವ ಟಿಪಿಎಂಎಲ್ ಕಚೇರಿಯಲ್ಲಿ ಹಮ್ಮಿಕೊಂಡಿದೆ.

2020-21ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಮತ್ತು ಅನುಮೋದನೆ ಸೇರಿದಂತೆ ಸಂಘದ ವಿವಿಧ ಚಟುವಟಿಕೆಗಳು ನಡೆಯಲಿವೆ.ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಂಘದ ಸದಸ್ಯರ ಮಕ್ಕಳನ್ನು ಗೌರವಿಸಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎಚ್.ಎ. ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ("ಎನ್‌ಸಿಎಲ್‌ಟಿ") ಇವರು ಇನ್ಸಾಲ್ವನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್, 2016ರ ("ಐಬಿಸಿ") ನಿಯಮಗಳ ಅಡಿಯಲ್ಲಿ ಹೊರಡಿಸಿದ ದಿನಾಂಕ ಆಗಸ್ಟ್ 30, 2019ರ ಆದೇಶದ ಮೇರೆಗೆ ಬಯೋಡೈವರ್ಸಿಟಿ ಕನ್ಸರ್ವೇಶನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ("ಬಿಸಿಐಎಲ್") ಲಿಕ್ವಿಡೇಶನ್ ಅಡಿಯಲ್ಲಿರುತ್ತದೆ. ಸದರಿ ಬಿಸಿಐಎಲ್'ನ ಲಿಕ್ವಿಡೇಟರ್‌ರವರು, ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಸ್ವತ್ತುಗಳಿಗೆ (**"ಸದರಿ ಸ್ವತ್ತುಗಳು"**) ಸಂಬಂಧಿತ ಹಕ್ಕು, ಬಾಧ್ಯತೆ ಮತ್ತು ಹಿತಾಸಕ್ತಿ ಕುರಿತಂತೆ ಸೂಕ್ತ ಪರಿಶೀಲನೆ ಕೈಗೊಳ್ಳಲು ಈ ಕೆಳಗೆ ಸಹಿ ಹಾಕಿರುವ ನಮ್ಮನ್ನು ನಿಯೋಜಿಸಿರುತ್ತಾರೆ. ಆದ್ದರಿಂದ ಸಾಮಾನ್ಯ ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದು ಏನೆಂದರೆ, ಯಾವುದೇ ವ್ಯಕ್ತಿಗಾಗಲಿ, ಸಂಘ, ಸಂಸ್ಥೆ, ಕಚೇರಿಗಾಗಲಿ (ಕಾರ್ಪೊರೇಟ್ ಅಥವಾ ಇನ್ನಿತರ) ಸದರಿ ಸ್ವತ್ತುಗಳಿಗೆ ಅಥವಾ ಸ್ವತ್ತುಗಳ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಬಾಧ್ಯತೆ ಮತ್ತು/ಅಥವಾ ಹಿತಾಸಕ್ತಿ, ಡಿಮಾಂಡ್ ಮತ್ತು/ಅಥವಾ ಯಾವುದೇ ಸ್ವರೂಪದ ಯಾವುದೇ ಋಣಭಾರ, ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಅಥವಾ ಮಾಲೀಕರ ಬಗ್ಗೆ ಅಥವಾ ಪೂರ್ವ ಉತ್ತರಾಧಿಕಾರಿಗಳ ಬಗ್ಗೆಯಾಗಲಿ ಕೇವಲ ಹಕ್ಕು ಮಾತ್ರಕ್ಕೆ ಸೀಮಿತವಲ್ಲದೆ ಮಾರಾಟ, ಉಡುಗೊರೆ, ಭೋಗ್ಯ, ಉಪ ಭೋಗ್ಯ, ಡೀಡ್ ವರ್ಗಾವಣೆ, ಪಿತ್ರಾರ್ಜಿತ, ಒಪ್ಪಂದಗಳು, ಮೆಮೊರ್‍ಯಾಂಡಂ ಆಫ್ ಅಂಡರ್‌ಸ್ಟಾಂಡಿಂಗ್, ಬಾಕಿ ಉಳಿದಿರುವ ಲಿಟಿಗೇಶನ್, ವಿನಿಮಯ, ಅಡಮಾನ, ಹೈಪೊಥಿಕೇಶನ್, ಚಾರ್ಜ್, ಲೀನ್, ಟ್ರಸ್ಟ್, ಸೆಕ್ಯೂರಿಟಿ, ಸ್ವಾಧೀನ, ಈಸ್‌ಮೆಂಟ್, ಅಟ್ಯಾಚ್‌ಮೆಂಟ್, ಅಕ್ವಿಸಿಶನ್ ಅಥವಾ ಇನ್ನಿತರ ಎಂತಹುದಾದರೂ ಕ್ಲೇಮ್‌ಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಮ್ಮ ಕ್ಲೇಮ್, ಹಕ್ಕು, ಬಾಧ್ಯತೆ ಮತ್ತು ಹಿತಾಸಕ್ತಿಗಳನ್ನು ಸಾಬೀತುಪಡಿಸಬಲ್ಲ ಪೂರಕ ದಾಖಲಾತಿ ಪುರಾವೆಗಳೊಂದಿಗೆ, ಲಿಖಿತ ರೂಪದಲ್ಲಿ ಈ ಕೆಳಗಿನ ಸಹಿದಾರರಿಗೆ ಮಾಹಿತಿ ನೀಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಲಿಕ್ವಿಡೇಟರ್‌ರವರು ನಮ್ಮ ಅಭಿಪ್ರಾಯ ಮತ್ತು/ಅಥವಾ ಶಿಫಾರಸ್ಸಿನ ಮೇರೆಗೆ, ಅವರ ಬಳಿ ಲಭ್ಯವಿರುವ ದಾಖಲಾತಿ ಪುರಾವೆಗಳು/ಮಾಹಿತಿ/ದಾಖಲೆಗಳ ಮೇರೆಗೆ ಹಾಗೂ ಅವರ ಅತ್ಯುತ್ತಮ ತಿಳಿವಳಿಕೆ ಮತ್ತು ವಿಶ್ವಾಸಕ್ಕೆ ಅನುಗುಣವಾಗಿ ತಮಗೆ ಸೂಕ್ತ ಎನಿಸುವ ಕ್ರಮ ಕೈಗೊಳ್ಳುತ್ತಾರೆ; ನಂತರದಲ್ಲಿ ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಬಾಧ್ಯತೆ ಮತ್ತು ಹಿತಾಸಕ್ತಿಗಳು ಎದುರಾದಲ್ಲಿ, ಅಂತಹವುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ - ಸದರಿ ಸ್ವತ್ತುಗಳ ವಿವರ

ರಾಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ವಿಳಾಸದಲ್ಲಿನ ಪರಿವರ್ತಿತ ಜಮೀನಿನಲ್ಲಿರುವ **"ಜೆಡ್ ರೈನ್‌ಸೀಡ್"** ಬಡಾವಣೆಯಲ್ಲಿ ರೂಪಿಸಲಾಗಿರುವ 127 ವಸತಿಯೋಗ್ಯ ನಿವೇಶನಗಳು ಮತ್ತು ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾಗಿರುವ ಜಮೀನುಗಳು ಸೇರಿದಂತಹ ಸ್ವತ್ತುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ:

ಕ್ರ.ಸಂ.	ಸರ್ವೆ ನಂ.	ವಿಸ್ತೀರ್ಣ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	213	28 ಗುಂಟೆ	ಸ.ನಂ.214, ಮತ್ತು ಸಂ.ನಂ. 215	ಸರ್ವೆ ನಂ.208	ಸರ್ವೆ ನಂ.217	ಸರ್ವೆ ನಂ.214
2	214/1(ಹಳೆ ಸ.ನಂ.214)	2 ಎಕರೆ 24 ಗುಂಟೆ	ರಸ್ತೆ ಮತ್ತು ಸಂ.ನಂ. 215	ಸ.ನಂ.208, ಮತ್ತು ಸಂ.ನಂ. 213	ಸ.ನಂ.213, ಮತ್ತು ಸಂ.ನಂ. 215	ಸರ್ವೆ ನಂ.214/2
3	214/3(ಹಳೆ ಸ.ನಂ.214)	2 ಎಕರೆ 18 ಗುಂಟೆ	ಸರ್ವೆ ನಂ.214/2	ಸ.ನಂ.214/4, ಮತ್ತು ಸಂ.ನಂ. 207	ಸರ್ವೆ ನಂ.208	ರಸ್ತೆ
4	214/4(ಹಳೆ ಸ.ನಂ.214)	4 ಗುಂಟೆ	ಸರ್ವೆ ನಂ.214/3	ಸರ್ವೆ ನಂ.207	ಸರ್ವೆ ನಂ.208	ಸರ್ವೆ ನಂ.214/3
5	214/2(ಹಳೆ ಸ.ನಂ.214)	4 ಎಕರೆ 6 ಗುಂಟೆ	ರಸ್ತೆ	ಸರ್ವೆ ನಂ.214/3	ಸರ್ವೆ ನಂ.214/1	ಸ.ನಂ.249, ಸಂ.ನಂ. 251 ಮತ್ತು ರಸ್ತೆ

ಮೇಲ್ಕಾಣಿಸಿದ ಎಲ್ಲಾ ಜಮೀನುಗಳು ಮೈಸೂರು ಉತ್ತರ ಉಪ ನೋಂದಣಿ ವ್ಯಾಪ್ತಿಗೆ ಒಳಪಡುತ್ತವೆ.

ಹಂಸಾ ಜಿ

ಹಂಸಾ ಜಿ ಮತ್ತು ಮಧುಕರ್ ಎಸ್ ವಕೀಲರು

ನೆಲಮಹಡಿ, ಅನು ಆರ್ಕೇಡ್, ಹೊರ ವರ್ತುಲ ರಸ್ತೆ, ಹೊಯ್ಸಳ ಸರ್ಕಲ್ ಹತ್ತಿರ, ಕೆಂಗೇರಿ ಉಪನಗರ, ಬೆಂಗಳೂರು - 560060. ಇ-ಮೇಲ್: hmsgangaiah@gmail.com

ಮಗನನ್ನು ಕಾಣಲು ತಾಯಿಯ ತಹತಹಿಕೆ

ಹೈಕೋರ್ಟ್ ಆದೇಶವಿದ್ದರೂ ಈಡೇರದ ತಾಯಿ ಹಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಟುಂಬಿಕ ಕಲಹದ ಕಾರಣ ತಂದೆಯ ಬಳಿಯೇ ಉಳಿದಿರುವ ನನ್ನ 13 ವರ್ಷದ ಮಗನನ್ನು ನೋಡದೆ ಎರಡೂವರೆ ವರ್ಷಗಳೇ ಉರುಳಿ ಹೋಗಿವೆ. ಆದ್ದರಿಂದ, ಅವನ ಭೇಟಿಗೆ ಅವಕಾಶ ಕಲ್ಪಿಸಿಕೊಡಿ' ಎಂದು ಹೈಕೋರ್ಟ್ ಮೆಟ್ಟಿಲೇರಿರುವ ತಾಯಿಯ ಹಂಬಲ ಶುಕ್ರವಾರವೂ ಈಡೇರಲಿಲ್ಲ.

ಈ ಸಂಬಂಧ ಬೆಂಗಳೂರಿನ ಸಾಫ್ಟ್‌ವೇರ್ ಉದ್ಯೋಗಿ ಮಹಿಳೆಯ ಮೊರೆಗೆ ಗುರುವಾರವಷ್ಟೇ (ಡಿ.09) ಸ್ಪಂದಿಸಿದ್ದ ಹೈಕೋರ್ಟ್, 'ಮಗನನ್ನು ಕೋರ್ಟ್‌ಗೆ ಶುಕ್ರವಾರ ಖುದ್ದು ಹಾಜರುಪಡಿಸಿ' ಎಂದು ಪ್ರತಿವಾದಿ ತಂದೆಯ ಪರ ವಕೀಲರಿಗೆ ನಿರ್ದೇಶಿಸಿತ್ತು. ಶುಕ್ರವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿತು. ತಂದೆಯ ಪರ ಹಾಜರಾಗಿದ್ದ ವಕೀಲರು, 'ತಂದೆ, ಮಗ ಇಬ್ಬರೂ ಗೋವಾದಲ್ಲಿದ್ದಾರೆ' ಎಂದು ತಿಳಿಸಿದರು.

ಇದಕ್ಕೆ ನ್ಯಾಯಪೀಠ, 'ಗೋವಾದಲ್ಲಿ ಎಲ್ಲಿದ್ದಾರೆ' ಎಂದು ಪ್ರಶ್ನಿಸಿತು. ವಕೀಲರು, 'ಎಲ್ಲಿದ್ದಾರೆ ಎಂಬುದು ಗೊತ್ತಿಲ್ಲ, ಒಂದಷ್ಟು ದಿನ ಸಮಯಾವಕಾಶ ನೀಡಿದರೆ ಅವರು ಕೋರ್ಟ್‌ಗೆ ಬರುತ್ತಾರೆ' ಎಂದು ತಿಳಿಸಿದರು.

ಈ ಹೇಳಿಕೆ ನಿಜವೊ ಸುಳ್ಳೋ ಎಂಬುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಪೀಠ, ಪ್ರತಿವಾದಿ ಪತಿಯ ಮೊಬೈಲ್ ಫೋನ್ ನಂಬರ್ ಅನ್ನು ವಕೀಲರಿಂದ ಪಡೆದುಕೊಂಡಿತು. 'ಬಾಂಬೆ ಹೈಕೋರ್ಟ್‌ನಲ್ಲಿರುವ ಗೋವಾ ಹೈಕೋರ್ಟ್ ಪೀಠದ ರಿಜಿಸ್ಟ್ರಾರ್ ಜನರಲ್ ಅವರಿಗೆ ಪ್ರತಿವಾದಿಯ ಮೊಬೈಲ್ ಫೋನ್ ನಂಬರ್ ನೀಡಿ, ತಂದೆ ಮತ್ತು ಮಗ ಗೋವಾದಲ್ಲಿ ಇದ್ದಾರೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಂಡು ವರದಿ ನೀಡಿ' ಎಂದು ರಾಜ್ಯ ಹೈಕೋರ್ಟ್ ಜನರಲ್ ಅವರಿಗೆ ಸೂಚಿಸಿತು.

ಮಧ್ಯಾಹ್ನದ ವೇಳೆಗೆ ವರದಿ ನೀಡಿದ ಗೋವಾ ಪೀಠದ ರಿಜಿಸ್ಟ್ರಾರ್ ಜನರಲ್, 'ತಂದೆ ಮಗ ಇಬ್ಬರೂ ಗೋವಾದಲ್ಲಿಯೇ ಇದ್ದಾರೆ ಎಂಬುದನ್ನು ಗೋವಾದ ಡಿಜಿಪಿ ಖಚಿತಪಡಿಸಿದ್ದಾರೆ' ಎಂಬ ವರದಿ ನೀಡಿತು. ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಲಾಗಿದೆ.

ಮಗನ ಭೇಟಿಗೆ ಅವಕಾಶ ಕೋರಿರುವ ಅರ್ಜಿದಾರ ತಾಯಿಗೆ 35 ವರ್ಷ. ಪತಿಗೆ 43 ವರ್ಷ. ಸುಶಿಕ್ಷಿತರಾಗಿರುವ ಇಬ್ಬರೂ ಸದ್ಯ ಬೆಂಗಳೂರಿನ ನಿವಾಸಿಗಳು. ಕೌಟುಂಬಿಕ ಕಲಹದ ಕಾರಣ ಪ್ರತ್ಯೇಕವಾಗಿ ಬೆಂಗಳೂರಿನಲ್ಲಿಯೇ ಬದುಕುತ್ತಿದ್ದಾರೆ. ಇವರಿಬ್ಬರ ದಾಂಪತ್ಯ ಕಲಹದಲ್ಲಿ ತಂದೆಯು ಮಗನನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ. ಕೋರ್ಟ್ ನಿರ್ದೇಶನಗಳಿದ್ದರೂ ಮಗನನ್ನು ಭೇಟಿ ಮಾಡಲು ಅವನ ತಾಯಿಗೆ ಅವಕಾಶ ಕೊಟ್ಟಿಲ್ಲ. ಈ ಸಂಬಂಧ ತಾಯಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಗುರುವಾರ ವಿಚಾರಣೆ ವೇಳೆ ಪ್ರತಿವಾದಿ ಪರ ವಕೀಲರು, 'ಹುಡುಗನಿಗೆ ಪರೀಕ್ಷೆ ಇದೆ. ಕೋರ್ಟ್‌ಗೆ ಶುಕ್ರವಾರ ಬರಲು ಸಾಧ್ಯವಾಗುವುದಿಲ್ಲ. ಮೂರ್ನಾಲ್ಕು ದಿನ ಸಮಯಾವಕಾಶ ಬೇಕು' ಎಂದು ಕೋರಿದ್ದರು. ಆದರೆ, ಈ ಹೇಳಿಕೆಯನ್ನು ನಿರಾಕರಿಸಿದ್ದ ನ್ಯಾಯಪೀಠ, 'ನಿಮ್ಮ ಕಕ್ಷಿದಾರರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಿ, ಬಂಧಿಸಿ ಕರೆತರಲು ಆದೇಶಿಸಬೇಕಾಗುತ್ತದೆ' ಎಂದು ಎಚ್ಚರಿಸಿತ್ತು.

₹ 33 ಕೋಟಿ ಬಾಕಿ: ಸದ್ಯ ₹ 2 ಕೋಟಿ ಪಾವತಿಗೆ ನಿರ್ದೇಶನ

ಮಂತ್ರಿ ಮಾಲ್ ಬೀಗ ತೆರವಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಪಾವತಿಸದ ಕಾರಣ ಮಲ್ಲೇಶ್ವರದಲ್ಲಿರುವ ಮಂತ್ರಿ ಮಾಲ್‌ಗೆ ಹಾಕಲಾಗಿರುವ ಬೀಗ ತೆರವುಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ಆದೇಶಿಸಿದೆ.

'ಬೀಗ ತೆರವುಗೊಳಿಸುವಂತೆ ನಿರ್ದೇಶಿಸಬೇಕು' ಎಂದು ಕೋರಿ ಮಂತ್ರಿ ಮಾಲ್ ಆಡಳಿತ ಮಂಡಳಿಯ ಮೆಸರ್ಸ್ ಅಭಿಷೇಕ್ ಪ್ರೊಪ್‌ಬಿಲ್ಡ್ ಪ್ರೈವೇಟ್ ಲಿಮಿಟೆಡ್ ಕಂಪನಿ ಹಾಗೂ ಮೆಸರ್ಸ್ ಹಮಾರಾ ಶೆಲ್ಟರ್ಸ್ ಪ್ರವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಸಂಜೆ ಕಲಾಪದ ಅವಧಿ ಮೀರಿದ ನಂತರದಲ್ಲಿ ವಿಚಾರಣೆ ನಡೆಸಿತು.

'ಶುಕ್ರವಾರ ಮಧ್ಯರಾತ್ರಿ 12 ಗಂಟೆ ಒಳಗೆ ಆರ್‌ಟಿಜಿಎಸ್ ಮೂಲಕ ₹ 2 ಕೋಟಿಯನ್ನು ಬಿಬಿಎಂಪಿ ಖಾತೆಗೆ ಪಾವತಿಸಬೇಕು. ಶನಿವಾರ ಮತ್ತು ಭಾನುವಾರ ರಜೆ ಇರುವ ಕಾರಣ ಭದ್ರತೆಗಾಗಿ ₹ 4 ಕೋಟಿ ಚೆಕ್ ಕೊಟ್ಟು, ಸೋಮವಾರ ಮಧ್ಯಾಹ್ನ 12 ಗಂಟೆ ಒಳಗೆ ₹ 2 ಕೋಟಿ ಪಾವತಿಸಿ ₹ 4 ಕೋಟಿ ಚೆಕ್ ವಾಪಸು ಪಡೆಯಬಹುದು' ಎಂದು ನ್ಯಾಯಪೀಠ ಮಧ್ಯಂತರ ಆದೇಶ ನೀಡಿದೆ.

ಹೈಕೋರ್ಟ್ ಸುದ್ದಿ

ಅಂತೆಯೇ, 'ಅರ್ಜಿದಾರರು ಎಷ್ಟು ವರ್ಷಗಳಿಂದ, ಎಷ್ಟು ಬಾಕಿ ಹಣ ಉಳಿಸಿಕೊಂಡಿದ್ದಾರೆ ಮತ್ತು ಈ ಬಾಕಿ ಹಣ ಪಾವತಿಗಾಗಿ ಬಿಬಿಎಂಪಿ ಅವರಿಗೆ ಮಂತ್ರಿಮಾಲ್ ಆಡಳಿತ ಮಂಡಳಿಗೆ ತಿಳಿಸಿರುವ ಕುರಿತ ಸಮರ್ಪಕ ದಾಖಲೆಗಳನ್ನು ನ್ಯಾಯಪೀಠಕ್ಕೆ ಒದಗಿಸಬೇಕು. ಒಂದು ವೇಳೆ ಈ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದರೆ ಮಧ್ಯಂತರ ಆದೇಶವನ್ನು ರದ್ದುಗೊಳಿಸಲಾಗುವುದು' ಎಂದು ನ್ಯಾಯಪೀಠ ಮಂತ್ರಿಮಾಲ್ ಆಡಳಿತ ಮಂಡಳಿಗೆ ಎಚ್ಚರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಎಸ್.ಶ್ಯಾಮಸುಂದರ್, 'ಬಿಬಿಎಂಪಿ ಬೀಗ ಹಾಕುವ ಬಗ್ಗೆ ನಮಗೆ ಮುಂಚಿತವಾಗಿಯೇ ನೋಟಿಸ್ ನೀಡಿಲ್ಲ. ಕೋವಿಡ್ ಕಾರಣದಿಂದ ಸಕಾಲದಲ್ಲಿ ತೆರಿಗೆ ಪಾವತಿಸಲು ಸಾಧ್ಯವಾಗಿಲ್ಲ. ಮಾಲ್‌ಗೆ ಬೀಗ ಹಾಕಿರುವುದರಿಂದ ನೌಕರರು ಸಂಬಳವಿಲ್ಲದೆ ಪರದಾಡುವಂತಾಗಿದೆ. ಒಳಗಿರುವ ಒಂದೂವರೆ ಕೋಟಿ ಮೌಲ್ಯದ ವಸ್ತುಗಳು ಎರಡು ದಿನಗಳಲ್ಲೇ ನಾಶವಾಗುವ ಆತಂಕವಿದೆ. ಸದ್ಯ ಒಂದು ಕೋಟಿ ರೂಪಾಯಿ ಪಾವತಿಸುತ್ತೇವೆ. ಉಳಿದ ತೆರಿಗೆಯನ್ನು ಹಂತಹಂತವಾಗಿ ಚುಕ್ತಾ ಮಾಡುತ್ತೇವೆ. ಆದ್ದರಿಂದ, ಇವತ್ತೇ ಬೀಗ ತೆರೆಯುವಂತೆ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿದರು. ಇದಕ್ಕೆ ಪ್ರತಿಯಾಗಿ ಬಿಬಿಎಂಪಿ ಪರ ವಕೀಲ ಬಿ.ಎಸ್. ಕಾರ್ತಿಕೇಯನ್, 'ಅರ್ಜಿದಾರರು ಕೋವಿಡ್ ನೆಪ ಹೇಳುತ್ತಿರುವುದು ಸರಿಯಲ್ಲ. ನಾಲ್ಕು ವರ್ಷಗಳಿಂದ ಮಂತ್ರಿ ಮಾಲ್ ₹ 33 ಕೋಟಿಗೂ ಅಧಿಕ ತೆರಿಗೆ ಬಾಕಿ ಉಳಿಸಿಕೊಂಡಿದೆ. ಬಾಕಿ ಹಣವನ್ನು ಇದೇ 5ರಂದು ಸಂಪೂರ್ಣ ಚುಕ್ತಾ ಮಾಡುವುದಾಗಿ ಈ ವರ್ಷದ ಆರಂಭದಲ್ಲಿ ಮುಚ್ಚಳಿಕೆ ಬರೆದುಕೊಟ್ಟಿತ್ತು. ಆದರೆ, ಆಡಳಿತ ಮಂಡಳಿ ಹೇಳಿದ ಮಾತಿನಂತೆ ನಡೆದುಕೊಳ್ಳುತ್ತಿಲ್ಲ' ಎಂದು ಬಲವಾಗಿ ಆಕ್ಷೇಪಿಸಿದರು.

ವಕೀಲರ ನೇಮಕ ಬ್ಯಾಂಕ್ ವಿವೇಚನೆಗೆ ಬಿಟ್ಟದ್ದು: ಹೈಕೋರ್ಟ್

ಬೆಂಗಳೂರು: 'ಬ್ಯಾಂಕಿನ ಪ್ಯಾನಲ್ ವಕೀಲರನ್ನು ನೇಮಕ ಮಾಡಿಕೊಳ್ಳುವುದು ಬ್ಯಾಂಕ್‌ನ ವಿವೇಚನೆಗೆ ಬಿಟ್ಟ ವಿಚಾರ. ಇಂತಹ ವಿಷಯಗಳಲ್ಲಿ ಕೋರ್ಟ್ ರಿಟ್ ಅರ್ಜಿಗಳನ್ನು ಪರಿಗಣಿಸಿ ಆದೇಶ ನೀಡಲು ಆಗದು' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ತಮ್ಮನ್ನು ಬ್ಯಾಂಕ್ ಪ್ಯಾನಲ್‌ನಿಂದ ತೆಗೆದು ಹಾಕಿದ್ದನ್ನು ಪ್ರಶ್ನಿಸಿ ವಕೀಲ ತಿಮ್ಮಣ್ಣ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಇಂತಹ ವಿಷಯಗಳಲ್ಲಿ ರಿಟ್ ಕೋರ್ಟ್ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ. ಇದೊಂದು ಕಕ್ಷಿದಾರ ಮತ್ತು ವಕೀಲರ ನಡುವಿನ ಸಂಬಂಧದಂತೆ. ಹೀಗಾಗಿ ಈ ವಿಚಾರಗಳಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸಲು ಆಗದು' ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿದೆ.

'ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನನಗೆ ಯಾವುದೇ ಮುನ್ಸೂಚನೆ ನೀಡದೆ ನನ್ನನ್ನು ಪ್ಯಾನಲ್‌ನಿಂದ ಕೈಬಿಟ್ಟಿದ್ದು, ಈ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ರಂಗ ಚಾವಡಿ ಕಾರ್ಯಕ್ರಮದಲ್ಲಿ ನಟ ಮಂಡ್ಯ ರಮೇಶ್

'ದೇಶಕ್ಕೆ ತುರ್ತಾಗಿ ಗಾಂಧೀಜಿ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧೀಜಿ ಎನ್ನುವ ವ್ಯಕ್ತಿತ್ವ ಅದ್ಭುತ ರೂಪಕ. ಈ ದೇಶಕ್ಕೆ ತುರ್ತಾಗಿ ಗಾಂಧೀಜಿ ಬೇಕಾಗಿದೆ. ಇಂದಿಗೂ ನನಗೂ ಮಹಾತ್ಮ ಗಾಂಧೀಜಿಯೇ ಮಾದರಿ' ಎಂದು ರಂಗಕರ್ಮಿ, ನಟ ಮಂಡ್ಯ ರಮೇಶ್ ಹೇಳಿದರು.

ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿದ್ದ ರಂಗ ಚಾವಡಿ ಕಾರ್ಯಕ್ರಮದಲ್ಲಿ ತಮ್ಮ ಜೀವನದ ಅನುಭವಗಳನ್ನು ಆತ್ಮೀಯವಾಗಿ ಅನಾವರಣಗೊಳಿಸಿದರು.

'ಗಾಂಧೀಜಿ ಸಹ ಬದಲಾಗಿದ್ದು ಸತ್ಯ ಹರಿಶ್ಚಂದ್ರ ನಾಟಕ ನೋಡಿದ ಮೇಲೆಯೇ. ನಾಟಕ ಪ್ರಬಲವಾದ ಮಾಧ್ಯಮ. ಆದರೆ, ನಾಟಕ, ಸಂಗೀತದಿಂದ ದಿಢೀರ್ ಬದಲಾವಣೆಗಳಾಗುವುದಿಲ್ಲ. ಅದು ಎದೆಗೆ ಬಿದ್ದ ಅಕ್ಷರದಂತೆ. ನಿಧಾನವಾಗಿ ಬದಲಾವಣೆಗಳಾಗುತ್ತವೆ' ಎಂದು ಹೇಳಿದರು.

ಮಂಡ್ಯ ರಮೇಶ್

'ಎರಡನೇ ತರಗತಿಲ್ಲಿದ್ದಾಗ ಗಾಂಧೀಜಿ ಪಾತ್ರ ಮಾಡಿದ್ದೆ. ಅಂದು ಆರಂಭವಾದ ನನ್ನ ಬಣ್ಣದ ಪಾತ್ರ ಇಂದಿಗೂ ಮುಂದುವರಿದಿದೆ. ಅಂದಿನಿಂದ ಇಂದಿನವರೆಗೂ ಚಪ್ಪಾಳೆಗಳು ಕೇಳಿಸುತ್ತಿವೆ' ಎಂದು ಅವರು ಹೇಳಿದರು.

'ನನ್ನ ತಂದೆ ಕ್ಲರ್ಕ್ ಆಗಿದ್ದರು. ಪದೇ ಪದೇ ವರ್ಗಾವಣೆಯಾಗುತ್ತಿತ್ತು. ಮಂಡ್ಯದ ಜನರಲ್ ಆಸ್ಪತ್ರೆಯ ವಾರ್ಡ್ ನಂಬರ್ ಆರರಲ್ಲಿ ನಾನು ಜನಿಸಿದೆ. ನಮ್ಮ ತಾಯಿ ತವರು ಮನೆ ನಾಗಮಂಗಲ. ಬೆಳ್ಳೂರಿನಲ್ಲಿ ಸರಿಯಾಗಿ ಓದುವುದಿಲ್ಲ ಎಂದು ಭಾವಿಸಿಕೊಂಡು ಮಂಡ್ಯದಲ್ಲಿ ಕಾನ್ವೆಂಟ್ ಶಾಲೆಗೆ ನಮ್ಮ ತಂದೆ-ತಾಯಿ ಸೇರಿಸಿದರು. ನಾನು ಉದ್ಧಾರವಾಗಲಿ ಎನ್ನುವುದು ಅವರ ಬಯಕೆಯಾಗಿತ್ತು' ಎಂದು ವಿವರಿಸಿದರು.

'ಎರಡನೇ ತರಗತಿಯಲ್ಲಿದ್ದಾಗ ಆಗಸ್ಟ್ 15ರಂದು ಗಾಂಧೀಜಿ ಪಾತ್ರ ಮಾಡಿದ್ದೆ. ತಲೆ ಬೋಳಿಸಿದ್ದರು. ಜಾತ್ರೆಯಲ್ಲಿ ದೊರೆತಿದ್ದ ಕನ್ನಡಕ ಹಾಕಿದ್ದರು. ಲಾರಿಯಲ್ಲಿ ನಮ್ಮನ್ನು ಮಂಡ್ಯದ ಕ್ರೀಡಾಂಗಣಕ್ಕೆ ಕರೆದೊಯ್ದಿದ್ದರು. ಅಂದಿನಿಂದ ನನ್ನ ಬಣ್ಣದ ಪಾತ್ರ ಆರಂಭವಾಯಿತು' ಎಂದು ನೆನಪಿಸಿಕೊಂಡರು.

'ಕರ್ನಾಟಕದ ಜನತೆಯಿಂದ ದೊರೆತಿರುವ ಪ್ರೀತಿ ಬಹುದೊಡ್ಡದು. ಆದರೆ, ಕೆಲವು ಸಂದರ್ಭಗಳಲ್ಲಿ ಅವಮಾನವಾದರೂ ಚಪ್ಪಾಳೆಗಳಿಂದ ಸಂತೋಷ ದೊರೆತಿದೆ. ನನಗೆ ತೊಂದರೆ ಕೊಟ್ಟವರು ಸಹ ನಾಟಕದವರು. ಅದಕ್ಕೆ ಹೆಚ್ಚಿಗೆ ಗಮನಹರಿಸಲಿಲ್ಲ' ಎಂದು ಹೇಳಿದರು.



ಕ್ರ.ಸಂ	ಭಾವಚಿತ್ರ	ಅಭ್ಯರ್ಥಿ ಹೆಸರು	ಚಿನ್ಹೆ
5		ಹೆಚ್. ವಿ. ಅಶ್ವತ್ಥ ಮಾಜಿ ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ ಕಾರ್ಯಾಧ್ಯಕ್ಷರು, ಮೊ : 9880088718	
9		ಎಂ.ಎ.ಆನಂದ ಬಿ.ಎಸ್ಸಿ.ಎಲ್.ಎಲ್.ಬಿ ಮಾಜಿ ಕಾರ್ಯಾಧ್ಯಕ್ಷರು ಮತ್ತು ಖಜಾಂಚಿಗಳು, ರಾಜ್ಯ ಒಕ್ಕಲಿಗರ ಸಂಘ ಮೊಬೈಲ್ : 8296571899, 8296574899	
15		ಡಿ.ಸಿ.ಕೆ. ಕಾಳೇಗೌಡ ಬಿ.ಎಸ್ಸಿ.ಎಲ್.ಎಲ್.ಬಿ ಮಾಜಿ ಖಜಾಂಚಿಗಳು, ರಾಜ್ಯ ಒಕ್ಕಲಿಗರ ಸಂಘ ಮೊಬೈಲ್ : 9845120135	
19		ಕೆ. ಕೃಷ್ಣಮೂರ್ತಿ ಪೂಜಾರಿಪಾಳ್ಯ ಮಾಜಿ ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ ಎಂ.ಎ (ಎಲ್.ಎಲ್.ಬಿ), ಜೆ.ಡಿ.ಸಿ. ಮೊಬೈಲ್ : 9945516393	
21		ಎಚ್.ಆರ್.ಕೋದಂಡರಾಮ (ಪಾಪು) ಮಾಲೀಕರು, ಅಮೃತ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಮೊಬೈಲ್ : 9743109999, 8747809999	
26		ಆರ್.ಎಸ್.ಗೌಡ ಎಂ.ಟೆಕ್, ಪಿ.ಹೆಚ್.ಡಿ, ಎಂ.ಬಿ.ಎ, ಎಂ.ಸಿ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಮೊಬೈಲ್ : 8880001122, 7090111444	
39		ದಿವ್ಯ ಕೆ. ಮೂರ್ತಿ ನಿರ್ದೇಶಕರು, ಟ್ರೈಕ್ಸಮಿಕ್ ಸಲ್ಯುಷನ್ ಪ್ರೈ.ಲಿ., ವ್ಯವಸ್ಥಾಪಕರು, ಮೊಬೈಲ್ : 9880003333, 9980004444	

ಕ್ರ.ಸಂ	ಭಾವಚಿತ್ರ	ಅಭ್ಯರ್ಥಿ ಹೆಸರು	ಚಿನ್ಹೆ
47		ಪ್ರೊಫೆಸರ್ ಎಂ. ನಾಗರಾಜ್ ಎಂ.ಎ. ಮಾಜಿ ಪ್ರಧಾನ ಕಾರ್ಯದರ್ಶಿ, ರಾಜ್ಯ ಒಕ್ಕಲಿಗರ ಸಂಘ, ಮೊಬೈಲ್ : 9845514585	
49		ಕೆ.ಟಿ. ನಾಗರಾಜ ಬಿ.ಇ, ಎಫ್ಐಇ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಇಂಜಿನಿಯರ್‌ಗಳ ಒಕ್ಕೂಟ ಮೊಬೈಲ್ : 9845222224	
59		ಎಂ.ಎನ್. ಪಿಳ್ಳಪ್ಪ ಒಕ್ಕಲಿಗರ ಸಂಘ, ಬೆಂಗಳೂರು ಉತ್ತರ ತಾಲ್ಲೂಕು ಮೊಬೈಲ್ : 9945431926	
63		ಜಿ.ಎಸ್.ಪುಟ್ಟೇಗೌಡ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ದಕ್ಷಿಣ ತಾಲ್ಲೂಕು ಒಕ್ಕಲಿಗರ ಸಂಘ (ರಿ.) ಮೊಬೈಲ್ : 9035038989, 9845608969	
77		ಹೆಚ್.ಡಿ. ಬೆಟ್ಟೇಗೌಡ ಬಿ.ಎ ಅಧ್ಯಕ್ಷರು, ಜಯಮ್ಮ ದಾಸೇಗೌಡ ಚಾರಿಟಬಲ್ ಟ್ರಸ್ಟ್(ರಿ) ಸದಸ್ಯರು, ರಾಜ್ಯ ಒಕ್ಕಲಿಗರ ವೇದಿಕೆ ಮೊಬೈಲ್ : 9845354812	
89		ಬಿ.ಮುನೇಗೌಡ ಮಾಜಿ ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ, ಮೊಬೈಲ್ : 9845042192, 9845091180	
129		ಸಿದ್ದೇಗೌಡ ಎಂ.ಎ ಮಾಜಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಬೆಂಗಳೂರು ವಿಶ್ವವಿದ್ಯಾನಿಲಯ. ಮೊಬೈಲ್ : 9741510512	

ವಿಶೇಷ ಸೂಚನೆ :
* ರಾಜ್ಯ ಒಕ್ಕಲಿಗರ ಸಂಘದ ಸದಸ್ಯತ್ವದ ಗುರುತಿನ ಚೀಟಿಯನ್ನು ಮತದಾನದ ದಿವಸ ಮತವನ್ನು ಚಲಾಯಿಸಲು ತಪ್ಪದೇ ತರಬೇಕು.
* ಸಂಘದ ಸದಸ್ಯತ್ವದ ಗುರುತಿನ ಚೀಟಿ ಕಳೆದುಹೋಗಿದ್ದಲ್ಲಿ ಕೂಡಲೇ ರಾಜ್ಯ ಒಕ್ಕಲಿಗರ ಸಂಘದ ಕಛೇರಿಯಲ್ಲಿ ಪಡೆಯುವುದು.
* ಬೇರೆ ಯಾವ ಗುರುತಿನ ಚೀಟಿಗಳು ಮತದಾನ ಮಾಡಲು ಮಾನ್ಯತೆ ಇರುವುದಿಲ್ಲ.
* ಮತದಾನದ ಎಲ್ಲಾ 15 ಮತಗಳನ್ನೂ ತಪ್ಪದೇ ಚಲಾಯಿಸಿ

‘ಹೊಸ ವರ್ಷಾಚರಣೆ; ಸರ್ಕಾರದ ಆದೇಶದಂತೆ ಕ್ರಮ’

ಬೆಂಗಳೂರು: 2022ರ ಹೊಸ ವರ್ಷವನ್ನು ಸ್ವಾಗತಿಸಲು ನಗರದ ಹಲವೆಡೆ ಸಿದ್ಧತೆಗಳು ನಡೆಯುತ್ತಿದ್ದು, ಕೋವಿಡ್ ಕಾರಣದಿಂದ ಬಿಗಿ ಭದ್ರತೆ ಕೈಗೊಳ್ಳಲು ಪೊಲೀಸರು ಸಜ್ಜಾಗಿದ್ದಾರೆ.

ಓಮೈಕ್ರಾನ್ ತಳಿಯ ಸೋಂಕು ಹರಡದಂತೆ ನಗರದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಹಲವು ನಿಯಮಗಳನ್ನು ರಾಜ್ಯ ಸರ್ಕಾರ ಈಗಾಗಲೇ ಜಾರಿಗೊಳಿಸಿದೆ. ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸುವ ಹಾಗೂ ಪ್ರಕರಣ ದಾಖಲಿಸುವ ಪ್ರಕ್ರಿಯೆಯೂ ನಡೆಯುತ್ತಿದೆ.

ವರ್ಷಾಚರಣೆ ಬಗ್ಗೆ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಪೊಲೀಸ್ ಕಮಿಷನರ್ ಕಮಲ್ ಪಂತ್, ‘ಪ್ರತಿ ವರ್ಷದಂತೆ ಈ ವರ್ಷವೂ ನಗರದ ಎಲ್ಲ ಕಡೆ ಬಿಗಿ ಭದ್ರತೆ ಇರಲಿದೆ. ಈ ಬಗ್ಗೆ ಡಿಸಿಪಿಗಳ ಸಭೆ ನಡೆಸಲಾಗುವುದು. ವರ್ಷಾಚರಣೆ ಬಗ್ಗೆ ಸರ್ಕಾರ ಹೊರಡಿಸುವ ಆದೇಶಗಳನ್ನು ಪಾಲಿಸಲಾಗುವುದು’ ಎಂದರು.

‘ಕ್ರಿಸ್‌ಮಸ್ ಹಬ್ಬವೂ ಹತ್ತಿರದಲ್ಲಿದ್ದು, ಸರ್ಕಾರದ ನಿಯಮಗಳನ್ವಯ ಆಚರಣೆಗೆ ಅವಕಾಶ ನೀಡಲಾಗುವುದು’ ಎಂದೂ ಹೇಳಿದರು.

ಮಾಧ್ಯಮ ಅಕಾಡೆಮಿಗೆ ಸದಸ್ಯರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಗೆ ಮೂವರು ನೂತನ ಸದಸ್ಯರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಬೆಂಗಳೂರು ವರದಿಗಾರರ ಕೂಟದ ವತಿಯಿಂದ ಇವರನ್ನು ನೇಮಿಸಲಾಗಿದೆ.

‘ಉದಯವಾಣಿ ಪತ್ರಿಕೆಯ ಉಪ ಮುಖ್ಯ ವರದಿಗಾರ ಎಸ್. ಲಕ್ಷ್ಮೀನಾರಾಯಣ, ಪಬ್ಲಿಕ್ ಟಿ.ವಿ. ಸುದ್ದಿ ವಾಹಿನಿಯ ರಾಜಕೀಯ ವಿಭಾಗದ ಮುಖ್ಯಸ್ಥ ಬದ್ರುದ್ದೀನ್ ಕೆ. ಮಾಣಿ ಹಾಗೂ ಮೈಸೂರು ಮಿತ್ರ ಪತ್ರಿಕೆಯ ವಿಶೇಷ ವರದಿಗಾರ ಕೆ.ಎಂ.ಶಿವರಾಜು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಕಾಡೆಮಿ ಸದಸ್ಯರಾಗಿ ನೇಮಿಸಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

BEFORE THE KARNATAKA ADMINISTRATIVE TRIBUNAL AT BENGALURU

APPLICATION No. 688 OF 2021

BETWEEN: SMT. KHAZI NAFEESA
(PARTY IN PERSON) **...APPLICANT**
AND:
STATE OF KARNATAKA and others
...RESPONDENTS

DRAFT OF NOTICE TO THE RESPONDENT NO. 7 AND RESPONDENT NO. 10 TO BE PUBLISHED BY WAY OF PAPER PUBLICATION

Smt. Rajeshwari Kasturi D/o Sarma Kasturi V.J., No. 69, Saraswathinagar, Vijayanagar, Bengaluru-560040. **...Respondent No. 7**

Smt. Sheela Thomas, D/o Thomas Gabriel, No. 659, 3rd Cross, 3rd Main, 1st Block, Ramakrishnanagar, Mysuru-570022. **...Respondent No. 10**

Whereas the applicant has filed an application before the Hon'ble Karnataka Administrative Tribunal, Bengaluru, wherein the applicant has challenged the Notification No. PSC/3979 E(1)/2020-2021 dated 30-01-2021 in so far as the selection of the applicant and the selection of Respondent Nos 3 to 10 have been challenged, And Whereas the notices sent to Respondent No.7 and Respondent No. 10, by registered post to the last known residential address of these respondents, have been returned with the remarks of "Addressee not found" by the postal department, Respondent No. 7 and Respondent No. 10 are hence with summoned to appear in person or through an Advocate, before the Hon'ble Karnataka Administrative Tribunal **on 04-01-2022 at 11.00 am,** failing which the case will be decided exparte against Respondent No. 7 and Respondent No. 10.

By order of the Court
Applicant Party in person
ADDRESS FOR SERVICE:
SMT. KHAZI NAFEESA
wife of Abdul Mutalib, aged 52 years, VPR Enclave, Flat No.202, 12th Cross, Hennur Main Road, Kacharakanahalli, Bengaluru-560084.

12 ರಿಂದ ‘ಜ್ಞಾನ ಯಜ್ಞ’

ಬೆಂಗಳೂರು: ನಗರದ ಕಬೀರ್ ಟ್ರಸ್ಟ್, ‘100 ದಿನಗಳ ಜ್ಞಾನ ಯಜ್ಞ’ ಕಾರ್ಯಕ್ರಮದ ಅಡಿಯಲ್ಲಿ 2021-22 ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ 36ನೇ ವರ್ಷದ ಉಪನ್ಯಾಸ ತರಗತಿಗಳನ್ನು ಹಮ್ಮಿಕೊಂಡಿದೆ.

‘ಇದೇ 12ಕ್ಕೆ ಆರಂಭವಾಗಲಿರುವ ತರಗತಿಗಳು ಜೆ.ಸಿ.ನಗರದ ದೂರದರ್ಶನ ಕೇಂದ್ರದ ಹಿಂಭಾಗದಲ್ಲಿರುವ ಕಬೀರ್ ಆಶ್ರಮದಲ್ಲಿ ಪ್ರತಿದಿನ ಬೆಳಿಗ್ಗೆ 6ಕ್ಕೆ ನಡೆಯಲಿವೆ. ಡಿ.ವಿ.ನಾಗೇಶ್, ಕೈಲಾಶ್ ನೇಖರಾಜ್, ಗೋವಿಂದರಾಜ್, ಜಯಸಿಂಹ, ಲೋಕೇಶಪ್ಪ, ಗುರುಪ್ರಸಾದ್ ಹಾಗೂ ಎಸ್.ಕೆ.ವರದರಾಜನ್ ಉಪನ್ಯಾಸ ನೀಡಲಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

‘ಕಬೀರ್ ಆಶ್ರಮದ ಮಹಡಿ ಮೇಲಿರುವ ಐ-ಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ಸ್ ಕಚೇರಿಯಲ್ಲಿ ಪ್ರತಿದಿನ ಬೆಳಿಗ್ಗೆ 8ರಿಂದ ರಾತ್ರಿ 8 ಗಂಟೆಯವರೆಗೆ ಅರ್ಜಿಗಳನ್ನು ವಿತರಿಸಲಾಗುತ್ತದೆ’ ಎಂದೂ ಹೇಳಿದೆ.

ಹೆಚ್ಚಿನ ಮಾಹಿತಿಗೆ: 9845193425 ಅಥವಾ 9845011000.

ಹಾಳಾಗಿರುವ ರಸ್ತೆ , ರಾಜಕಾಲುವೆ ಸರಿಪಡಿಸಲು ₹1,171 ಕೋಟಿ ನೀಡುವಂತೆ ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವ

ಮಳೆಹಾನಿ ಕಾಮಗಾರಿಗೆ 4ಜಿ ವಿನಾಯಿತಿ ಕೊಡಿ

ಪ್ರಜಾವಾಣಿ ವಿಶೇಷ

ಶೆಟ್ಟಿಹಳ್ಳಿಯ ಡಿಫೆನ್ಸ್ ಕಾಲೋನಿಯಲ್ಲಿ ಹಾಳಾಗಿರುವ ರಸ್ತೆ

ಬೆಂಗಳೂರು: ನಗರದಲ್ಲಿ ಹಾಳಾಗಿರುವ ರಸ್ತೆ ಮತ್ತು ರಾಜಕಾಲುವೆಗಳನ್ನು ಸರಿಪಡಿಸಲು ವಿಪತ್ತು ಪರಿಹಾರ ನಿಧಿಯಡಿ ₹1,171 ಕೋಟಿ ಮೊತ್ತ ಕೇಳಿರುವ ಬಿಬಿಎಂಪಿ, ಟೆಂಡರ್ ಪ್ರಕ್ರಿಯೆ ನಡೆಸದೆ ಕಾಮಗಾರಿಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರದ ಒಪ್ಪಿಗೆ ಕೋರಿದೆ.

ನಗರದಲ್ಲಿ 1,344 ಕಿಲೋ ಮೀಟರ್ ಉದ್ದದ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳಿವೆ. 2019-20, 2020-21ರ ನವನಗರೋತ್ಥಾನ ಯೋಜನೆ ಅಡಿಯಲ್ಲಿ ಸುಮಾರು 300 ಕಿ.ಮೀ ರಸ್ತೆ ಅಭಿವೃದ್ಧಿ ಪಡಿಸಲು ಅನುಮೋದನೆ ದೊರೆತಿದೆ. 192 ಕಿ.ಮೀ ರಸ್ತೆಯನ್ನು ಸಂಚಾರ ದಟ್ಟಣೆಯ ಕಾರಿಡಾರ್ ಯೋಜನೆಗೆ, 180 ಕಿ.ಮೀಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ, 30 ಕಿ.ಮೀನಲ್ಲಿ ಸ್ಮಾರ್ಟ್‌ಸಿಟಿ ಯೋಜನೆ ಕೈಗೊಳ್ಳಲಾಗಿದೆ.

‘ಉಳಿದ 642 ಕಿ.ಮೀ ರಸ್ತೆಯಲ್ಲಿ, 62 ಕಿ.ಮೀ ಹೊಣೆಗಾರಿಕೆ ಅವಧಿಯಲ್ಲಿರುವ (ಡಿಎಲ್‌ಪಿ) ರಸ್ತೆಗಳಿವೆ. ಬಾಕಿ 580 ಕಿ.ಮೀ ರಸ್ತೆಗಳಿಗೆ 3 ವರ್ಷಗಳಿಂದ ಡಾಂಬರ್ ಹಾಕಿಲ್ಲ. ಅತಿಯಾದ ಮಳೆಯಿಂದ ಈಗ ಸಾಕಷ್ಟು ಹಾನಿಯಾಗಿದೆ. ರಸ್ತೆಗಳ ದುರಸ್ತಿಗೆ ₹ 100 ಕೋಟಿ ವೆಚ್ಚ ಆಗಲಿದೆ ಎಂದು ಅಂದಾಜಿಸಲಾಗಿದೆ’ ಎಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬಿಬಿಎಂಪಿ ತಿಳಿಸಿದೆ.

‘ನಾಲ್ಕು ಪ್ರಮುಖ ರಾಜಕಾಲುವೆಗಳಲ್ಲಿ ತಡೆಗೋಡೆಗಳು ಶಿಥಿಲಗೊಂಡಿವೆ. ಬಡಾವಣೆಗಳಿಗೆ ಮಳೆ ನೀರು ನುಗ್ಗಿ ಹಾನಿಯಾಗಿದೆ. ತಡೆಗೋಡೆಗಳ ಮರು ನಿರ್ಮಾಣದ ಅವಶ್ಯಕತೆ ಇದೆ. ಅದಕ್ಕಾಗಿ 120 ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ₹411.33 ಕೋಟಿ ವೆಚ್ಚವಾಗುವ ಅಂದಾಜಿದೆ. 8 ಕಸ ಸಂಸ್ಕರಣಾ ಘಟಕಗಳಿಗೆ ಕಸ ಸಾಗಿಸುವ 600 ಕಾಂಪ್ಯಾಕ್ಟರ್‌ಗಳು ಸಂಚರಿಸುವ ಕೂಡು ರಸ್ತೆಗಳೂ ಹಾಳಾಗಿವೆ. ಅವುಗಳ ದುರಸ್ತಿಗೆ ₹50 ಕೋಟಿ ಅಗತ್ಯವಿದೆ. 8 ವಲಯಗಳ ವ್ಯಾಪ್ತಿಯಲ್ಲಿ 11 ಸಾವಿರ ರಸ್ತೆಗಳಿದ್ದು, ಮಳೆಯಿಂದ ಬಹುತೇಕ ಹಾಳಾಗಿವೆ. ಇವುಗಳ ದುರಸ್ತಿಗೆ ₹600 ಕೋಟಿ ಬೇಕಿದೆ’ ಎಂದು ಬಿಬಿಎಂಪಿ ವಿವರಿಸಿದೆ.

ನಿಯಂತ್ರಣಾ ಕೊಠಡಿಗೆ ಅಗತ್ಯ ಉಪಕರಣ ಖರೀದಿ ಮತ್ತು ರಕ್ಷಣಾ ಸಿಬ್ಬಂದಿಗೆ ಸೇವಾ ಭತ್ಯೆಗೆ ₹10 ಕೋಟಿ ಅನುದಾನ ಅಗತ್ಯವಿದೆ.. ಈ ಎಲ್ಲ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಿಂದ ವಿನಾಯಿತಿ ನೀಡಬೇಕು ಎಂದು ಕೋರಿದೆ.

‘ನಗರಾಭಿವೃದ್ಧಿ ಇಲಾಖೆ ಸಹಮತ’

ಬಿಬಿಎಂಪಿಯ ಈ ಪ್ರಸ್ತಾವನೆಗೆ ನಗರಾಭಿವೃದ್ಧಿ ಇಲಾಖೆ ಸಹಮತ ವ್ಯಕ್ತಪಡಿಸಿದ್ದು, ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಿದೆ.

ಸದ್ಯ ಹಣಕಾಸು ಇಲಾಖೆಯಲ್ಲಿ ಪರಿಶೀಲನೆಯ ಹಂತದಲ್ಲಿ ಪ್ರಸ್ತಾವನೆ ಇದೆ. ಈ ನಡುವೆ 4ಜಿ ವಿನಾಯಿತಿ ಕೋರಿರುವುದನ್ನು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸಮರ್ಥಿಸಿಕೊಂಡಿದ್ದಾರೆ.

‘ಎಲ್ಲವೂ ಪ್ರವಾಹ ತಡೆಗಟ್ಟುವ ಸಲುವಾಗಿ ತುರ್ತಾಗಿ ಕೈಗೊಳ್ಳಬೇಕಿರುವ ಕಾಮಗಾರಿಗಳು. ಪರಿಣಿತಿ ಹೊಂದಿರುವ ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗುವುದು’ ಎಂದು ಹೇಳಿದರು.

ಕೋರಿರುವ ಅನುದಾನ

₹100 ಕೋಟಿ ರಸ್ತೆ ಮೂಲಭೂತ ಸೌಕರ್ಯ	₹600 ಕೋಟಿ ವಲಯಗಳಲ್ಲಿನ ದುರಸ್ತಿ ಕಾಮಗಾರಿ
₹411.33 ಕೋಟಿ ರಾಜಕಾಲುವೆ ದುರಸ್ತಿ	₹10 ಕೋಟಿ ನಿಯಂತ್ರಣ ಕೊಠಡಿಗಳಿಗೆ ಯಂತ್ರೋಪಕರಣಗಳ ಖರೀದಿ
₹50 ಕೋಟಿ ಘನತ್ಯಾಜ್ಯ ನಿರ್ವಹಣೆ ರಸ್ತೆ ದುರಸ್ತಿ	₹1,171.33 ಕೋಟಿ ಒಟ್ಟು ಮೊತ್ತ

ಹಣ ಲೂಟಿಗಾಗಿ 4ಜಿ ವಿನಾಯಿತಿ

‘ಕೆಟಿಪಿಪಿ ಕಾಯ್ದೆಯಲ್ಲಿನ ಲೋಪಗಳನ್ನು ಬಳಸಿಕೊಂಡು 4ಜಿ ವಿನಾಯಿತಿ ಪಡೆದುಕೊಳ್ಳಲಾಗುತ್ತದೆ. ಸಾರ್ವಜನಿಕರ ಹಣ ಲೂಟಿ ಮಾಡುವ ಉದ್ದೇಶದಿಂದಲೇ ಈ ವಿನಾಯಿತಿ ಕೋರಲಾಗುತ್ತದೆ’ ಎಂದು ಜನಾಧಿಕಾರ ಸಂಘರ್ಷ ಪರಿಷತ್ತಿನ ಆದರ್ಶ ಅಯ್ಯರ್ ಹೇಳಿದರು.

‘ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವರ್ಗಾಯಿಸಿ ತುಂಡು ಗುತ್ತಿಗೆಗಳನ್ನು ನೀಡಿ ಸಾರ್ವಜನಿಕರ ಹಣ ಲೂಟಿ ಮಾಡಲಾಗುತ್ತದೆ. ಶಿಕ್ಷೆಯ ಭಯ ಇಲ್ಲದಿರುವುದರಿಂದಲೇ ಈ ರೀತಿಯ ಪ್ರಯತ್ನಕ್ಕೆ ಅಧಿಕಾರಿಗಳು ಕೈ ಹಾಕುತ್ತಾರೆ’ ಎಂದರು.

ಹೆಲಿಕಾಪ್ಟರ್ ಅವಶೇಷ ಹುಡುಕಿ ಕೊಟ್ಟರೂ ಸಿಗದ ಜಮೀನು

ಪ್ರಜಾವಾಣಿ ವಾರ್ತೆ

ಹಾಸನ: ಸಕಲೇಶಪುರ ತಾಲ್ಲೂಕಿನ ಪಶ್ಚಿಮಘಟ್ಟ ವ್ಯಾಪ್ತಿಯ ಅರಮನೆ ಗುಡ್ಡ ಹಾಗೂ ಮೂರ್ಕಣ್ ಬೆಟ್ಟದಲ್ಲಿ 1991ರ ಜುಲೈನಲ್ಲಿ ಪತನವಾಗಿದ್ದ ನೌಕದಳದ ಹೆಲಿಕಾಪ್ಟರ್ ಅವಶೇಷಗಳನ್ನು ಹುಡುಕಿಕೊಟ್ಟಿದ್ದ ವನಗೂರಿನ ಎಚ್.ಆರ್. ಪುಟ್ಟಸ್ವಾಮಿ ಗೌಡರಿಗೆ ಬಹುಮಾನವಾಗಿ ಕೇಂದ್ರ ಸರ್ಕಾರ ನೀಡಬೇಕಿದ್ದ ಸರ್ಕಾರಿ ಉದ್ಯೋಗವಾಗಲೀ ಅಥವಾ ನಾಲ್ಕು ಎಕರೆ ಜಮೀನಾಗಲಿ ಮೂರು ದಶಕ ಕಳೆದರೂ ದೊರೆತಿಲ್ಲ. ಅವರ ಮನವಿಗಳು ಮೂಲೆಗುಂಪಾಗಿವೆ.

‘ಮಂಗಳೂರಿನಿಂದ ಪಯಣ ಆರಂಭಿಸಿ ಪತನಗೊಂಡಿದ್ದ ಹೆಲಿಕಾಪ್ಟರ್‌ನಲ್ಲಿದ್ದ ಕರ್ನಲ್ ಸೇರಿ ನಾಲ್ವರು ಮೃತಪಟ್ಟಿದ್ದರು. ನಂತರ, ವಾಯುಪಡೆ ಹಾಗೂ ನೌಕಾಪಡೆಯ ಹೆಲಿಕಾಪ್ಟರ್‌ಗಳಲ್ಲಿ 45 ಯೋಧರು ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಹೆಲಿಕಾಪ್ಟರ್ ಹಾಗೂ ಬ್ಲ್ಯಾಕ್ ಬಾಕ್ಸ್ ಹುಡುಕಿಕೊಟ್ಟವರಿಗೆ ಬಹುಮಾನ ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದ ಬಳಿಕ ಪಶ್ಚಿಮಘಟ್ಟದಂಚಿನ ಗ್ರಾಮಗಳ ಜನರು ದಟ್ಟ ಕಾಡಿನಲ್ಲಿ ಅಲೆದಾಡಿದರೂ ಸುಳಿವು ಸಿಕ್ಕಿರಲಿಲ್ಲ. ಆಗ ನನಗೆ 33 ವರ್ಷ. ನಾನೂ ಸತತ ಹುಡುಕಾಡಿ 1992ರಲ್ಲಿ ಹೆಲಿಕಾಪ್ಟರ್ ಅವಶೇಷಗಳನ್ನು ಪತ್ತೆ ಹಚ್ಚಿದ್ದೆ’ ಎಂದು ಅವರು ’ಪ್ರಜಾವಾಣಿ’ಗೆ ತಿಳಿಸಿದರು. ಈಗ ಅವರಿಗೆ 62 ವರ್ಷ.

> **ಜಮೀನು, ನೌಕರರಿಗಾಗಿ ಕಚೇರಿಗೆ ಅಲೆದಾಡಿದರೂ ಭರವಸೆ ಈಡೇರಿಸಲಿಲ್ಲ. ಸಾಯುವುದರೊಳಗೆ ಕೃಷಿಭೂಮಿ ನೀಡಿದರೆ ಅನುಕೂಲವಾಗುತ್ತದೆ.**
> **ಪುಟ್ಟಸ್ವಾಮಿಗೌಡ**

ಸಕಲೇಶಪುರದ ಅಂದಿನ ಉಪವಿಭಾಗಾಧಿಕಾರಿ ಅತುಲ್ ಕುಮಾರ್ ತಿವಾರಿ ಅವರಿಗೆ ₹10 ಸಾವಿರ ಬಹುಮಾನವನ್ನು ನೀಡಿದ್ದರು. ಸರ್ಕಾರದಿಂದ ನಾಲ್ಕು ಎಕರೆ ಕೃಷಿ ಭೂಮಿ ಅಥವಾ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಜಿಲ್ಲಾಡಳಿತವೂ ಭರವಸೆ ನೀಡಿತ್ತು.

‘ಜೀವವನ್ನು ಪಣಕ್ಕಿಟ್ಟು ಹೆಲಿಕಾಪ್ಟರ್ ಅವಶೇಷ ಪತ್ತೆ ಮಾಡಿದ್ದೆ. ಸಿಕ್ಕಿದ ಸೇನೆಯ ಕಡತಗಳನ್ನು ಅಧಿಕಾರಿಗಳಿಗೆ ತಲುಪಿಸಿದ್ದೆ. ಅಂದು ಸನ್ಮಾನ ಮಾಡಿದ್ದು ಬಿಟ್ಟರೇ ಕೃಷಿ ಜಮೀನಾಗಲಿ, ಸರ್ಕಾರಿ ಉದ್ಯೋಗವಾಗಲೀ ಸಿಕ್ಕಿಲ್ಲ. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದೇನೆ’ ಎಂದು ಅವರು ‘ಪ್ರಜಾವಾಣಿ’ ಬಳಿ ಅಳಲು ತೋಡಿಕೊಂಡರು. ಸದ್ಯ, ಆಲೂರು ತಾಲ್ಲೂಕಿನ ಸಿಂಗಾಪುರ ಗ್ರಾಮದ ಶೆಡ್‌ನಲ್ಲಿ ಪತ್ನಿ ಮತ್ತು ಮಕ್ಕಳೊಂದಿಗೆ ವಾಸವಿರುವ ಅವರು ಕಾಫಿ ತೋಟದಲ್ಲಿ ಕೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ಮಗ ಅಂಧ. ಪತ್ನಿ ಅಪಘಾತದಲ್ಲಿ ಗಾಯಗೊಂಡು ಮನೆಯಲ್ಲಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಬಲವರ್ಧನೆ

ತಜ್ಞರ ಸಮಿತಿಗೆ ಒತ್ತಾಯ

ಬೆಂಗಳೂರು: ಹಂಪಿ ಕನ್ನಡ ವಿಶ್ವವಿದ್ಯಾಲಯ ಬಲಪಡಿಸಲು ಸರ್ಕಾರ ತಜ್ಞರ ಸಮಿತಿ ರಚಿಸಬೇಕು ಎಂದು ‘ಕನ್ನಡ ವಿಶ್ವವಿದ್ಯಾಲಯ ಉಳಿವಿಗಾಗಿ ಕ್ರಿಯಾ ಸಮಿತಿ’ ಒತ್ತಾಯಿಸಿದೆ.

ನಗರದಲ್ಲಿ ಶುಕ್ರವಾರ ಕ್ರಿಯಾ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ಚಿಂತಕರು ಮತ್ತು ಸಾಹಿತಿಗಳು, ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಮತ್ತು ಶೈಕ್ಷಣಿಕ ಗುಣಮಟ್ಟ ಕುಸಿತದ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ವಿಶ್ವವಿದ್ಯಾಲಯದ ಘನತೆಯನ್ನು ಉಳಿಸುವ ಕಾರ್ಯಕ್ಕೆ ಸರ್ಕಾರ ಮುಂದಾಗಬೇಕಾಗಿದೆ. ವಿಶ್ವವಿದ್ಯಾಲಯದ ಆಶಯಕ್ಕೆ ಯಾವುದೇ ರೀತಿ ಧಕ್ಕೆಯಾಗದಂತೆ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ, ವಿಶ್ವವಿದ್ಯಾಲಯದ ಬಗ್ಗೆ ಹಲವಾರು ಆರೋಪಗಳು ಮಾಧ್ಯಮಗಳಲ್ಲಿ ನಿರಂತರವಾಗಿ ಪ್ರಕಟವಾಗುತ್ತಿದ್ದರೂ ಸರ್ಕಾರ ಮೌನವಹಿಸಿದೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

> **ಕನ್ನಡ ವಿ.ವಿ.ಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ವಿಶ್ವವಿದ್ಯಾಲಯ ದಾರಿ ತಪ್ಪುತ್ತಿದೆ. ಸರ್ಕಾರವೇ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿದೆ**
> **ಡಾ. ಬಂಜಗೆರೆ ಜಯಪ್ರಕಾಶ್,** ಸಾಹಿತಿ

ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಎದುರಿಸುತ್ತಿರುವ ಫೆಲೋಶಿಪ್ ಸಮಸ್ಯೆ, ಪಿಂಚಣಿ ಮತ್ತು ನೌಕರರ ಬಾಕಿ ಸಂಬಳವನ್ನು ತಕ್ಷಣವೇ ನೀಡಬೇಕು ಹಾಗೂ ವಿಶ್ವವಿದ್ಯಾಲಯದಲ್ಲಿ ಕಾನೂನುಬಾಹಿರ ಚಟುವಟಿಕೆಗಳು ನಡೆಯದಂತೆ ಆಡಳಿತದಲ್ಲಿ ಬಿಗಿ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಜಾನಪದ ಮತ್ತು ಕನ್ನಡ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚು ಅನುದಾನ ಬಿಡುಗಡೆಗೊಳಿಸಬೇಕು ಹಾಗೂ ಈ ಕೂಡಲೇ ವಿಶೇಷ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಈ ಎಲ್ಲ ನಿರ್ಣಯಗಳನ್ನು ಈಡೇರಿಸುವಂತೆ ಒತ್ತಾಯಿಸಿ ಡಿ.16ರಂದು ಬೆಂಗಳೂರಿನಲ್ಲಿ ಸಾಹಿತಿಗಳು, ವಿವಿಧ ಸಂಘಟನೆಗಳ ಕಾರ್ಯಕರ್ತರು, ಪ್ರಾಧ್ಯಾಪಕರು ಮತ್ತು ಬೋಧಕೇತರ ಸಂಘಗಳ ಪದಾಧಿಕಾರಿಗಳು ಹೋರಾಟ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ನಿವೃತ್ತ ಪ್ರಾಧ್ಯಾಪಕ ಡಾ. ಚಂದ್ರ ಪೂಜಾರಿ, ಚಿಂತಕರಾದ ಡಾ. ಬಂಜಗೆರೆ ಜಯಪ್ರಕಾಶ್, ಪ್ರೊ. ಎಸ್. ಜಿ. ಸಿದ್ದರಾಮಯ್ಯ, ಬಿ.ಟಿ. ಲಲಿತಾ ನಾಯಕ್, ಡಾ. ವಸುಂಧರಾ ಭೂಪತಿ, ಡಾ. ರುದ್ರಪ್ಪ ಹನಗವಾಡಿ, ಡಾ.ಕೆ. ಷರೀಫಾ, ಎಸ್‌ಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಅಮರೇಶ್, ದಲಿತ ಹಕ್ಕುಗಳ ಹೋರಾಟ ಸಮಿತಿಯ ಅಧ್ಯಕ್ಷ ಗೋಪಾಲ ಕೃಷ್ಣ ಭಾಗವಹಿಸಿದ್ದರು.

ಜೆ.ಸಿ.ರಸ್ತೆಯಲ್ಲಿ ಶುಕ್ರವಾರ ವಾಹನ ದಟ್ಟಣೆ ಉಂಟಾಗಿತ್ತು (ಎಡಚಿತ್ರ), ದ್ವಿಚಕ್ರ ವಾಹನ ಚಾಲಕರೊಬ್ಬರು ಪಾದಚಾರಿ ಮಾರ್ಗದಲ್ಲಿ ಸಾಗಿದರು– ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ್ ಟಿ.

ಜೆ.ಸಿ.ರಸ್ತೆ: ತಪ್ಪದ ಸವಾರರ ಗೋಳು: ದಟ್ಟಣೆಯಲ್ಲಿ ಸಿಲುಕಿ ಹೈರಾಣಾಗುವ ನಾಗರಿಕರು

ಮೂರು 'ಸಿಗ್ನಲ್' ದಾಟುವ ಸವಾಲು

● ಜಿ.ಶಿವಕುಮಾರ

ಬೆಂಗಳೂರು: ಹಸಿರು ದೀಪ ಹೊತ್ತಿದೊಡನೆ ಕಡುಗಪ್ಪು ಹೊಗೆ ಉಗುಳುತ್ತಾ ಅಣತಿ ದೂರ ಸಾಗಿ ಗಕ್ಕನೆ ನಿಲ್ಲುವ ವಾಹನಗಳು. ಬೇಗನೆ ಕಚೇರಿ ತಲುಪುವ ಧಾವಂತದಲ್ಲಿ ಪಾದಚಾರಿ ಮಾರ್ಗದ ಮೇಲೇ ಹಾದು ಹೋಗುವ ದ್ವಿಚಕ್ರ ವಾಹನ ಸವಾರರು. ರಸ್ತೆಯ ಇಕ್ಕೆಲಗಳಲ್ಲೇ ಸಾಲುಗಟ್ಟಿ ನಿಂತಿರುವ ಗೂಡ್ಸ್ ವಾಹನಗಳು...

ಬೆಂಗಳೂರು ದಕ್ಷಿಣದಿಂದ ನಗರದ ಪ್ರಮುಖ ಸ್ಥಳಗಳಿಗೆ ಸಂಪರ್ಕ ಬೆಸೆಯುವ ಜೆ.ಸಿ.ರಸ್ತೆಯ ಚಿತ್ರಣವಿದು.

ರವೀಂದ್ರ ಕಲಾಕ್ಷೇತ್ರ, ಕಾರ್ಪೊರೇಷನ್ ವೃತ್ತ, ಕನ್ನಡ ಭವನ, ಪುರಭವನ, ಬಿಬಿಎಂಪಿ ಕೇಂದ್ರ ಕಚೇರಿ, ಕೆ.ಆರ್.ಮಾರುಕಟ್ಟೆ ಹಾಗೂ ಶಾಂತಿನಗರಕ್ಕೆ ಹೋಗುವ ಬಹುಪಾಲು ಮಂದಿ ಜೆ.ಸಿ.ರಸ್ತೆಯನ್ನೇ ಅವಲಂಬಿಸುತ್ತಾರೆ. ಹೀಗಾಗಿ ಈ ಮಾರ್ಗದಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸಲಿದ್ದು, ಬೆಳಿಗ್ಗೆ ಹಾಗೂ ಸಂಜೆಯ ಹೊತ್ತಿನಲ್ಲಿ ದಟ್ಟಣೆ ಉಂಟಾಗುತ್ತಿದೆ. ಇದರಿಂದ ಶಾಲೆ, ಕಾಲೇಜು, ಕಚೇರಿಗಳಿಗೆ ಸರಿಯಾದ ಸಮಯಕ್ಕೆ ತಲುಪಲಾಗದೆ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು ಪರಿತಪಿಸುವಂತಾಗಿದೆ.

ಮಿನರ್ವ ವೃತ್ತದಿಂದ ಶುರುವಾಗುವ ಈ ರಸ್ತೆಯ ಇಕ್ಕೆಲಗಳಲ್ಲಿ ವಿವಿಧ ಬ್ಯಾಂಕ್‌ಗಳ ಶಾಖಾ ಕಚೇರಿಗಳು, ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಿವೆ. ಪ್ರಮುಖ ವಿದ್ಯಾಸಂಸ್ಥೆ ಹಾಗೂ ಧಾರ್ಮಿಕ ಕೇಂದ್ರಗಳೂ ಈ ಮಾರ್ಗಕ್ಕೆ ಹೊಂದಿಕೊಂಡಂತೆಯೇ ಇವೆ.

ಮಿನರ್ವ ವೃತ್ತ, ವಿ.ವಿ.ಪುರಂ ಹಾಗೂ ಕಿಮ್ಸ್ ಆಸ್ಪತ್ರೆ ಕಡೆಯಿಂದ ಪುರಭವನಕ್ಕೆ ಬರುವವರು ಈ ಹಾದಿಯಲ್ಲಿ ಮೂರು 'ಸಿಗ್ನಲ್'ಗಳನ್ನು ದಾಟಬೇಕು. ರಸ್ತೆಯೇನೋ ವಿಸ್ತಾರವಾಗಿದೆ. ಹೀಗಿದ್ದರೂ ದಟ್ಟಣೆ ಸಮಸ್ಯೆ ತಪ್ಪಿಲ್ಲ. ಪಾದಚಾರಿಗಳು ರಸ್ತೆ ದಾಟುವುದೂ ಸವಾಲಾಗಿದೆ.

'ಬೆಳಿಗ್ಗೆ ಹಾಗೂ ಸಂಜೆ ಈ ರಸ್ತೆಯಲ್ಲಿ ನಿತ್ಯವೂ ದಟ್ಟಣೆ ಉಂಟಾಗುತ್ತದೆ. ಜೆ.ಸಿ.ರಸ್ತೆ ಜಂಕ್ಷನ್‌ನಿಂದ ಹಿಡಿದು ರವೀಂದ್ರ ಕಲಾಕ್ಷೇತ್ರದವರೆಗೂ ರಸ್ತೆಯ ಎಡಬದಿಯಲ್ಲಿ ಟಯರ್, ಸೀಟ್ ಸೇರಿದಂತೆ ವಾಹನಗಳ ಬಿಡಿಭಾಗ ಹಾಗೂ ಗೃಹ ಉಪಯೋಗಿ ವಸ್ತುಗಳ ಮಾರಾಟ ಮಳಿಗೆಗಳಿವೆ. ಖರೀದಿಗಾಗಿ ನಗರದ ವಿವಿಧ ಭಾಗಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಜನ ಇಲ್ಲಿಗೆ ಬರುತ್ತಾರೆ. ಅವರು ತಮ್ಮ ವಾಹನಗಳನ್ನು ರಸ್ತೆ ಬದಿಯಲ್ಲೇ ನಿಲುಗಡೆ ಮಾಡಿರುತ್ತಾರೆ. ಅದರಿಂದ ದಟ್ಟಣೆ ಹೆಚ್ಚುತ್ತಿದೆ' ಎಂದು ವಿ.ವಿ.ಪುರ ನಿವಾಸಿ ಕಿರಣ್ ದೂರಿದರು.

'ಬೇಗನೆ ಕಚೇರಿ ತಲುಪುವ ಧಾವಂತದಲ್ಲಿ ಕೆಲವರು ವೇಗವಾಗಿ ವಾಹನ ಚಲಾಯಿಸುತ್ತಾರೆ. ಟಯರ್ ಅಂಗಡಿಗಳಿಗೆ ಹೋಗುವವರು ನಡುರಸ್ತೆಯಿಂದ ಏಕಾಏಕಿ ಎಡಕ್ಕೆ ತಿರುವು ಪಡೆಯಲು ಮುಂದಾಗುತ್ತಾರೆ. ಈ ವೇಳೆ ಹಿಂಬದಿಯ ವಾಹನ ಡಿಕ್ಕಿಯಾಗಿ ಹಲವರು ತಲೆ ಹಾಗೂ ಕೈಕಾಲಿಗೆ ಗಾಯ ಮಾಡಿಕೊಂಡ ಉದಾಹರಣೆಗಳು ಇವೆ' ಎಂದೂ ತಿಳಿಸಿದರು.

ಪ್ರಯಾಣ ಪ್ರಯಾಸ

'ಅಗತ್ಯವಿದ್ದರಷ್ಟೆ ವಾಹನ ರಸ್ತೆಗಿಳಿಸಲಿ'



'20 ವರ್ಷಗಳ ಹಿಂದೆ ಜೆ.ಸಿ.ರಸ್ತೆಯು ದ್ವಿಪಥ ಮಾರ್ಗವಾಗಿತ್ತು. ದಟ್ಟಣೆ ಸಮಸ್ಯೆ ತಪ್ಪಿಸುವ ಸಲುವಾಗಿ ಅದನ್ನು ಏಕಮುಖ ಸಂಚಾರಕ್ಕಷ್ಟೇ ಮೀಸಲಿಡಲಾಯಿತು. ಈಗ ನಗರದಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದೆ. ಹೀಗಾಗಿ ರಸ್ತೆ ವಿಸ್ತಾರವಾಗಿದ್ದರೂ ದಟ್ಟಣೆ ಉಂಟಾಗುತ್ತಿದೆ. ನಾಗರಿಕರು ತೀರಾ ಅಗತ್ಯವಿದ್ದರಷ್ಟೇ ವಾಹನಗಳನ್ನು ರಸ್ತೆಗೆ ಇಳಿಸಬೇಕು. ಹಾಗಾದಾಗ ಮಾತ್ರ ದಟ್ಟಣೆ ಸಮಸ್ಯೆಗೆ ಪರಿಹಾರ ಸಾಧ್ಯ' ಎಂದು ನಗರ ಯೋಜನಾ ತಜ್ಞ ವಿ.ರವಿಚಂದರ್ ಹೇಳಿದರು.

'ಮಿನರ್ವ ವೃತ್ತದಿಂದ ಕಾರ್ಪೊರೇಷನ್ ವೃತ್ತದವರೆಗೂ ಮೇಲ್ಸೇತುವೆ ನಿರ್ಮಿಸಲು ಸಾಧ್ಯವೇ ಇಲ್ಲ. ಅದು ನಗರದ ಸೌಂದರ್ಯಕ್ಕೂ ಮಾರಕ. ಈ ರಸ್ತೆಯಲ್ಲಿ ಸುರಂಗ ಮಾರ್ಗ ಕೊರೆಸಿ ಮೆಟ್ರೊ ಸಂಚರಿಸುವಂತೆ ಮಾಡಬಹುದು. ಆಗ ಜನರು ಅಗತ್ಯ ಕೆಲಸಗಳಿಗಾಗಿ ಮೆಟ್ರೊ ಅವಲಂಬಿಸುತ್ತಾರೆ. ಅದರಿಂದ ವಾಹನ ಬಳಕೆಯೂ ತಗ್ಗಲಿದೆ. ಸಂಚಾರ ದಟ್ಟಣೆಯ ಸಮಸ್ಯೆಗೂ ಮುಕ್ತಿ ಸಿಗಲಿದೆ' ಎಂದು ಅಭಿಪ್ರಾಯಪಟ್ಟರು.

'ಮೆಜೆಸ್ಟಿಕ್ ತಲುಪುವುದೂ ಸವಾಲು'



'ದಟ್ಟಣೆ ಸಮಸ್ಯೆಯಿಂದಾಗಿ ಮೆಜೆಸ್ಟಿಕ್ ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಹೋಗುವವರು ಸಂಕಷ್ಟ ಎದುರಿಸುವಂತಾಗಿದೆ' ಎಂದು ಹನುಮಂತನಗರದ ಸಿದ್ದಾರ್ಥ್ ಹೇಳಿದರು.

'ಬೆಳಿಗ್ಗೆ ಹಾಗೂ ಸಂಜೆಯ ವೇಳೆ ಜೆ.ಸಿ.ರಸ್ತೆ ಜಂಕ್ಷನ್‌ನಿಂದ ಟೌನ್‌ಹಾಲ್‌ಗೆ ತಲುಪಲು ಕನಿಷ್ಠ ಅರ್ಧಗಂಟೆಯಾದರೂ ಬೇಕು. ಈ ಸಮಯದಲ್ಲಿ ಆಂಬುಲೆನ್ಸ್‌ಗಳು ದಟ್ಟಣೆಯಲ್ಲಿ ಸಿಲುಕಿಕೊಂಡರೆ ರೋಗಿಗಳು ಪರಿತಪಿಸಬೇಕಾಗುತ್ತದೆ. ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಅನೇಕ ಮಂದಿ ಪಾದಚಾರಿ ಮಾರ್ಗದ ಮೇಲೆ ಬೈಕ್ ಹಾಗೂ ಸ್ಕೂಟರ್‌ಗಳನ್ನು ಚಲಾಯಿಸಿಕೊಂಡು ಹೋಗುತ್ತಾರೆ. ಇದರಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ' ಎಂದರು.

ವಿದ್ಯುತ್ ದರ ಏರಿಕೆ: ಎಸ್ಕಾಂಗಳ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ವಿದ್ಯುತ್ ದರ ಪರಿಷ್ಕರಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಪ್ರಸ್ತಾವ ಸಲ್ಲಿಸಿವೆ.

ಕೆಇಆರ್‌ಸಿ ಒಪ್ಪಿಗೆ ಸೂಚಿಸಿದರೆ ಹೊಸ ವರ್ಷದಲ್ಲಿ ವಿದ್ಯುತ್ ದರ ಹೆಚ್ಚಳವಾಗಲಿದೆ. ರಾಜ್ಯದಲ್ಲಿ ವಿದ್ಯುತ್ ದರ ಪರಿಷ್ಕರಿಸಿ ಒಂದು ವರ್ಷವಾಗಿರುವುದರಿಂದ ಹೊಸದಾಗಿ ಈ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರ್ಥಿಕವಾಗಿ ನಷ್ಟವಾಗುತ್ತಿರುವುದರಿಂದ ಪ್ರತಿ ಯೂನಿಟ್‌ಗೆ ₹1.58 ಹೆಚ್ಚಿಸುವಂತೆ ಬೆಸ್ಕಾಂ ಕೋರಿಕೆ ಸಲ್ಲಿಸಿದೆ. ಎಲ್ಲ ಎಸ್ಕಾಂಗಳ ಪ್ರಸ್ತಾವಗಳನ್ನು ಕೆಇಆರ್‌ಸಿ ಪರಿಶೀಲಿಸಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ದರ ಪರಿಷ್ಕರಿಸಬಹುದು ಎಂದು ತಿಳಿಸಿವೆ.

ಕಳೆದ ವರ್ಷ ಬೆಸ್ಕಾಂ ₹1.35 ಹೆಚ್ಚಿಸುವಂತೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಕೆಇಆರ್‌ಸಿ 30 ಪೈಸೆ ಮಾತ್ರ ಹೆಚ್ಚಿಸಿತ್ತು.

'ಸಂಸ್ಥೆಯ ಒಟ್ಟು ವೆಚ್ಚ ಮತ್ತು ಆದಾಯ ಪರಿಶೀಲಿಸಿ ಪ್ರಸ್ತಾವ ಸಿದ್ಧಪಡಿಸಲಾಗಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಕೈಗಾರಿಕೆಗಳು ಮುಚ್ಚಿದ್ದವು. ಇದರಿಂದ ಕಂಪನಿಗೆ ಆದಾಯವು ಕಡಿಮೆಯಾಗಿದೆ. ಈ ರೀತಿಯ ಎಲ್ಲ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆನ್‌ಲೈನ್ ತರಗತಿಯಲ್ಲಿ ಅಶ್ಲೀಲ ವಿಡಿಯೊ

ಅಪರಾಧ ಸುದ್ದಿ

ಬೆಂಗಳೂರು: ಖಾಸಗಿ ಶಾಲೆಯೊಂದರ ಆನ್‌ಲೈನ್ ತರಗತಿಗಳಲ್ಲಿ ಕಿಡಿಗೇಡಿಗಳು ಅಶ್ಲೀಲ ವಿಡಿಯೊ ಹಾಗೂ ಸಂದೇಶಗಳನ್ನು ಹರಿಬಿಡುತ್ತಿದ್ದು, ಈ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಯಲಹಂಕ ಬಳಿ ಇರುವ ಹಿರಿಯ ಪ್ರಾಥಮಿಕ ಶಾಲೆಯೊಂದರ ಮುಖ್ಯಸ್ಥರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಮೂಲಗಳು ಹೇಳಿವೆ.

'ಕೋವಿಡ್ ಹಿನ್ನೆಲೆಯಲ್ಲಿ ಶಾಲೆ ಮಕ್ಕಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುತ್ತಿದೆ. ಇದಕ್ಕಾಗಿ ಗೂಗಲ್ ಮೀಟ್ ಆ್ಯಪ್ ಬಳಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಹೆಸರಿನ ಯೂಸರ್ ನೇಮ್ ಮೂಲಕ ತರಗತಿಗಳಿಗೆ ಹಾಜರಾಗುತ್ತಿದ್ದಾರೆ.'

'ಶಿಕ್ಷಕರು ತರಗತಿಗಳಿಗೆ ಹಾಜರಾಗಿ ಪಾಠ ಮಾಡುತ್ತಿದ್ದಾರೆ. ಇಂಥ ಆನ್‌ಲೈನ್ ತರಗತಿಗಳಿಗೆ ಕೆಲವರು ಅನಧಿಕೃತವಾಗಿ ಪ್ರವೇಶ ಪಡೆಯುತ್ತಿದ್ದು, ಅಂಥವರೇ ಅಶ್ಲೀಲ ವಿಡಿಯೊ ಹಾಗೂ ಅಶ್ಲೀಲ ಸಂದೇಶಗಳನ್ನು ಕಳುಹಿಸುತ್ತಿರುವುದು ಗೊತ್ತಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಎವರ್ ಗ್ರೀನ್, ಡಾರ್ಕ್ ಲುಮಿನಸ್ ಹಾಗೂ ಪ್ಲೋಕರ್ ಬಾಯ್ಸ್ ಹೆಸರಿನಲ್ಲಿ ಕೆಲ ಕಿಡಿಗೇಡಿಗಳು ತರಗತಿಗಳಿಗೆ ಪ್ರವೇಶ ಪಡೆದಿದ್ದ ಮಾಹಿತಿ ಲಭ್ಯವಾಗಿದೆ. ಆದರೆ, ಅವರು ಯಾವ ಇ–ಮೇಲ್ ಬಳಸಿದ್ದರು ಎಂಬುದು ಗೊತ್ತಾಗಿಲ್ಲ. ಈ ಬಗ್ಗೆ ಮಾಹಿತಿ ಕೋರಿ ಗೂಗಲ್ ಕಂಪನಿ ಪ್ರತಿನಿಧಿಗಳಿಗೆ ಇ– ಮೇಲ್ ಕಳುಹಿಸಲಾಗಿದೆ. ಅದಕ್ಕೆ ಪ್ರತಿಕ್ರಿಯೆ ಬರಬೇಕಿದೆ' ಎಂದೂ ಮೂಲಗಳು ಹೇಳಿವೆ.

ವಿಡಿಯೊ ಅಳಿಸಿರುವ ಕಿಡಿಗೇಡಿಗಳು: 'ಶಿಕ್ಷಕರು ಹಾಗೂ ಮಕ್ಕಳು, ಅಶ್ಲೀಲ ವಿಡಿಯೊ ಹಾಗೂ ಸಂದೇಶಗಳಿಂದ ಮುಜುಗರಕ್ಕೀಡಾಗಿದ್ದರು. ಗರಂ ಆಗಿದ್ದ ಶಿಕ್ಷಕರು, 'ವಿಡಿಯೊ ಹಾಕಿದ್ದ ಯಾರು' ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದ್ದರು. ಹೆದರಿದ ಕಿಡಿಗೇಡಿಗಳು ಕೆಲ ವಿಡಿಯೊಗಳನ್ನು ಅಳಿಸಿ ಹಾಕಿದ್ದಾರೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ತರಗತಿ ವೇಳೆ ಹಲವು ಬಾರಿ ವಿಡಿಯೊಗಳು ಬಂದಿರುವುದಾಗಿ ಶಿಕ್ಷಕರು ಹೇಳುತ್ತಿದ್ದಾರೆ. ಅದಕ್ಕೆ ಪುರಾವೆಯಾಗಿ ಸ್ಕ್ರೀನ್ ಶಾರ್ಟ್‌ಗಳಿವೆ. ಶಾಲೆಗೆ ಸಂಬಂಧಪಟ್ಟವರೇ ಕೃತ್ಯ ಎಸಗಿರುವ ಅನುಮಾನವೂ ಇದೆ' ಎಂದು ಮೂಲಗಳು ಹೇಳಿವೆ.

ಮರ, ಕಂಬ, ಕಸದಲ್ಲಿ ಡ್ರಗ್ಸ್!

ಬೆಂಗಳೂರು: ನಗರದಲ್ಲಿ ಇತ್ತೀಚೆಗಷ್ಟೇ ಮಾದಕ ವಸ್ತು ಮಾರಾಟ ಜಾಲ ಭೇದಿಸಿದ್ದ ಸಿಸಿಬಿ ಪೊಲೀಸರು, ಐವರು ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.

'ಆಹಾರ ಪೊಟ್ಟಣಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಮಾರುತ್ತಿದ್ದ ಕೇರಳದ ಮೊಹಮ್ಮದ್ ಸಕಾರಿಯಾ, ಶ್ಯಾಮ್ ದಾಸ್ ಸೇರಿದಂತೆ ಐವರು ಆರೋಪಿಗಳನ್ನು ಇತ್ತೀಷೆಗಷ್ಟೇ ಬಂಧಿಸಲಾಗಿತ್ತು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಆನ್‌ಲೈನ್ ಜಾಲತಾಣ ಹಾಗೂ ವಾಟ್ಸ್‌ಆ್ಯಪ್ ಮೂಲಕ ಗ್ರಾಹಕರು ಡ್ರಗ್ಸ್ ಕಾಯ್ದಿರಿಸುತ್ತಿದ್ದರು. ಆರೋಪಿಗಳು, ಆಹಾರ ಹಾಗೂ ತಿಂಡಿ– ತಿನಿಸು ಪೊಟ್ಟಣಗಳಲ್ಲಿ ಡ್ರಗ್ಸ್ ಸರಬರಾಜು ಮಾಡುತ್ತಿದ್ದರು.'

'ಡ್ರಗ್ಸ್ ಪೊಟ್ಟಣಗಳನ್ನು ಮರ, ಕಂಬ, ಕಸದ ಡಬ್ಬಿಗಳ ಬಳಿ ಬಚ್ಚಿಟ್ಟು ಗ್ರಾಹಕರಿಗೆ ಹೇಳುತ್ತಿದ್ದರು. ಹಣ ಆನ್‌ಲೈನ್ ಮೂಲಕ ಪಾವತಿ ಮಾಡುತ್ತಿದ್ದರು' ಎಂದೂ ಮೂಲಗಳು ತಿಳಿಸಿವೆ.

ಪೊಲೀಸರ ಮೇಲೆ ಹಲ್ಲೆ; ರೌಡಿ ಪಟ್ಟಿಗೆ ಅಣ್ಣ– ತಮ್ಮನ ಹೆಸರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಠಾಣೆ ಪಿಎಸ್‌ಐ ಹಾಗೂ ಕಾನ್‌ಸ್ಟೆಬಲ್ ಮೇಲೆ ಲಾಠಿಯಿಂದ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಬಂಧಿಸಲಾಗಿರುವ ಅಣ್ಣ– ತಮ್ಮನ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಪೊಲೀಸರು ಮುಂದಾಗಿದ್ದಾರೆ.

'ಠಾಣೆ ವ್ಯಾಪ್ತಿಯ ಚಿಕ್ಕಬೆಟ್ಟಹಳ್ಳಿ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರು ತೆಗೆಯುವ ವಿಚಾರವಾಗಿ ಡಿ. 6ರಂದು ರಾತ್ರಿ ಗಲಾಟೆ ಆಗಿತ್ತು. ಮಫ್ತಿಯಲ್ಲಿದ್ದ ಪಿಎಸ್‌ಐ ಡಿ.ಕೆ. ಶ್ರೀಶೈಲ ಮೇಲೆ ಹಲ್ಲೆ ಮಾಡಲಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಹೋದ ಕಾನ್‌ಸ್ಟೆಬಲ್‌ಗಳಾದ ಅಸ್ಲಂ ಸಂಗಾಪುರ ಹಾಗೂ ಹನುಮಂತಪ್ಪ ಎಂಬುವರನ್ನೂ ಥಳಿಸಲಾಗಿತ್ತು. ಈ ಸಂಬಂಧ ಆರೋಪಿಗಳಾದ ಮನೋಜ್ ಹಾಗೂ ಆತನ ತಮ್ಮ ಧೀರಜ್‌ನನ್ನು ಬಂಧಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಘಟನೆ ಬಗ್ಗೆ ಕಾನ್‌ಸ್ಟೆಬಲ್ ಅಸ್ಲಂ ದೂರು ನೀಡಿದ್ದರು. ಜೀವ ಬೆದರಿಕೆ, ಅಪರಾಧ ಸಂಚು (ಐಪಿಸಿ 34), ಹಲ್ಲೆ ದೊಣ್ಣೆಯಿಂದ ಹಲ್ಲೆ ಸರ್ಕಾರಿ ಕೆಲಸಕ್ಕೆ ಅಡ್ಡಿ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು.'

'ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಮನೋಜ್ ಹಾಗೂ ಆಹಾರ ಪೂರೈಕೆ ಕಂಪನಿ ವ್ಯವಸ್ಥಾಪಕನಾದ ಧೀರಜ್, ಒಟ್ಟಿಗೆ ಸೇರಿ ಲಾಠಿ ಕಸಿದುಕೊಂಡು ಪೊಲೀಸರ ಮೇಲೆ ಹಲ್ಲೆ ಮಾಡಿದ್ದರು. ರೌಡಿ ರೀತಿಯಲ್ಲಿ ವರ್ತಿಸಿ ಸ್ಥಳೀಯರಲ್ಲಿ ಭಯವನ್ನುಂಟು ಮಾಡಿದ್ದರು. ಹೀಗಾಗಿ, ಅವರಿಬ್ಬರ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಕಡತ ಸಿದ್ಧಪಡಿಸಿ, ಡಿಸಿಪಿ ಮೂಲಕ ಪೊಲೀಸ್ ಕಮಿಷನರ್ ಅವರಿಗೆ ಕಳುಹಿಸಲಾಗುವುದು' ಎಂದೂ ಅಧಿಕಾರಿ ತಿಳಿಸಿದರು.

ಸೈಬರ್ ಕ್ರೈಂ ಇನ್‌ಸ್ಪೆಕ್ಟರ್ ಹೆಸರಿನಲ್ಲಿ ವಂಚನೆ

ಬೆಂಗಳೂರು: ಸೈಬರ್ ಕ್ರೈಂ ಠಾಣೆ ಇನ್‌ಸ್ಪೆಕ್ಟರ್ ಎಂಬುದಾಗಿ ಹೇಳಿಕೊಂಡು ಯುವಕರೊಬ್ಬರನ್ನು ಬೆದರಿಸಿ ಹಣ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ಎಫ್‌ಐಆರ್ ದಾಖಲಾಗಿದೆ.

'ಜಕ್ಕೂರಿನ ನಿವಾಸಿಯಾಗಿರುವ 28 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರ ವಾಟ್ಸ್‌ಆ್ಯಪ್‌ಗೆ ನ. 29ರಂದು ವಿಡಿಯೊ ಕರೆ ಮಾಡಿದ್ದ ಅಪರಿಚಿತ, ಆ ದೃಶ್ಯವನ್ನು ಚಿತ್ರೀಕರಿಸಿಕೊಂಡಿದ್ದ. ನಂತರ, ಕರೆ ಕಡಿತಗೊಳಿಸಿದ್ದ. ದೂರುದಾರರ ವಿಡಿಯೊವನ್ನು ಮಾರ್ಫಿಂಗ್ ಮಾಡಿದ್ದ ಆತ, ಅಶ್ಲೀಲವಾಗಿ ಬಿಂಬಿಸಿ ಬೇರೊಂದು ವಿಡಿಯೊ ಸೃಷ್ಟಿಸಿ ಅದನ್ನು ಡಿ. 6ರಂದು ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದ'

'ತಾನೊಬ್ಬ ಸೈಬರ್ ಕ್ರೈಂ ಠಾಣೆ ಇನ್‌ಸ್ಪೆಕ್ಟರ್ ಎಂಬುದಾಗಿ ಪರಿಚಯಿಸಿಕೊಂಡಿದ್ದ. 'ಅಶ್ಲೀಲ ವಿಡಿಯೊ ಚಿತ್ರೀಕರಿಸುತ್ತಿರುವ ಹಾಗೂ ಜಾಲತಾಣಗಳಲ್ಲಿ ಅಶ್ಲೀಲ ವಿಡಿಯೊ ಹರಿಬಿಡುತ್ತಿರುವ ಆರೋಪದಡಿ ನಿಮ್ಮ ವಿರುದ್ಧ ದೂರು ದಾಖಲಾಗಿದೆ' ಎಂಬುದಾಗಿ ಬೆದರಿಸಿದ್ದ' ಎಂದೂ ಮೂಲಗಳು ತಿಳಿಸಿವೆ.

'ಪ್ರಕರಣ ಮುಕ್ತಾಯಗೊಳಿಸಬೇಕಾದರೆ ಹಣ ನೀಡಬೇಕೆಂದು ಆರೋಪಿ ಬೇಡಿಕೆ ಇರಿಸಿದ್ದ. ಹೆದರಿದ್ದ ದೂರುದಾರ, ಆರೋಪಿಯ ಬ್ಯಾಂಕ್ ಖಾತೆಗೆ ₹ 7 ಸಾವಿರ ಹಾಕಿದ್ದರು. ನಂತರವೂ ಆರೋಪಿ ಹಣಕ್ಕಾಗಿ ಪೀಡಿಸಲಾರಂಭಿಸಿದ್ದ. ನೊಂದ ಯುವಕ, ಠಾಣೆಗೆ ಬಂದು ವಿಚಾರಿಸಿದ್ದರು. ಅಂಥ ಇನ್‌ಸ್ಪೆಕ್ಟರ್ ಯಾರೂ ಇಲ್ಲವೆಂಬುದು ಗೊತ್ತಾಗಿತ್ತು. ಬಳಿಕವೇ ದೂರು ನೀಡಿದ್ದಾರೆ' ಎಂದೂ ಹೇಳಿವೆ.

ಆಸ್ತಿ ನಗದೀಕರಣಕ್ಕೆ ಮುಂದಾದ ರಾಜ್ಯ

ಒಂದನೇ ಪುಟದಿಂದ

'2021ರ ಮಾರ್ಚ್ ಹಾಗೂ ಆಗಸ್ಟ್‌ನಲ್ಲಿ ಅರೆ ಸರ್ಕಾರಿ ಪತ್ರಗಳನ್ನು ನಿಮಗೆ ಕಳಿಸಲಾಗಿತ್ತು. ಎಲ್ಲ ರಾಜ್ಯಗಳೂ 'ಆಸ್ತಿಗಳ ನಗದೀಕರಣ ಮತ್ತು ಬಂಡವಾಳ ಹಿಂತೆಗೆತ'ಕ್ಕಾಗಿ ಮೂರು ವರ್ಷಗಳ ಯೋಜನೆಯನ್ನು ಸಿದ್ಧಪಡಿಸಿ ನೀತಿ ಆಯೋಗಕ್ಕೆ ಶೀಘ್ರವಾಗಿ ಕಳಿಸಬೇಕಾಗಿದ್ದು, ನಿಮ್ಮ ಇಲಾಖೆಗಳಿಂದ ಸೃಜಿಸಲಾದ ಆಸ್ತಿ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಯೋಜನಾ ಇಲಾಖೆಗೆ ಕಳಿಸಲು ಸೂಚಿಸಲಾಗಿತ್ತು. ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇಂಧನ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಗಳಿಂದ ಮಾತ್ರ ಕೆಲವೊಂದು ಮಾಹಿತಿಗಳು ಬಂದಿವೆ. ಎಲ್ಲ ಇಲಾಖೆಗಳವರೂ ಆಸ್ತಿ ನಗದೀಕರಣ ದತ್ತಾಂಶದ ಸಂಪೂರ್ಣ ಮಾಹಿತಿಯನ್ನು ಇದೇ 15ರೊಳಗೆ ಕಳಿಸಬೇಕು' ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

ಸ್ವತ್ತುಗಳ ಮೌಲ್ಯಮಾಪನಕ್ಕಾಗಿ ಉಪ ನೋಂದಣಾಧಿಕಾರಿಗಳು, ಕಂದಾಯ ಇಲಾಖೆಯವರು ಸಿದ್ಧಪಡಿಸಿದ ಮಾರ್ಗಸೂಚಿ ದರವನ್ನು ಬಳಸಲು ಹಾಗೂ ಆಸ್ತಿ ನಗದೀಕರಣಕ್ಕೆ ಸೂಕ್ತ ಯೋಜನೆಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ. ಪತ್ರದ ಜತೆ ಲಗತ್ತಿಸಲಾದ ನಮೂನೆಯಲ್ಲಿ, ಆಸ್ತಿಯ ವಿಧ, ಸ್ಥಳ, ಈ ಆಸ್ತಿಯು ನಗದೀಕರಣದ ಮೌಲ್ಯ ಹೊಂದಿದೆಯೇ ಎಂಬುದನ್ನು ತಿಳಿಸುವಂತೆ ಸೂಚಿಸಿದ್ದಾರೆ.

'ಒಕ್ಕಲಿಗರ ವಿ.ವಿ ಸ್ಥಾಪನೆಗೆ ಒತ್ತು'

ಪಿ.ವಿ.ಎಸ್ ಪ್ರಸಾದ್

ಬೆಂಗಳೂರು: 'ಚುನಾವಣೆಯಲ್ಲಿ ಗೆದ್ದು ಬಂದರೆ ಒಕ್ಕಲಿಗರ ವಿಶ್ವವಿದ್ಯಾಲಯ ಹಾಗೂ ಐಐಟಿ ಸ್ಥಾಪಿಸಲು ಒತ್ತು ನೀಡುತ್ತೇನೆ' ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರ ಮಂಡಳಿಯ ಚುನಾವಣೆಗೆ ಸ್ಪರ್ಧಿಸಿರುವ ಕೆ.ಎಚ್. ರಾಮಯ್ಯ ತಂಡದ ಅಭ್ಯರ್ಥಿ ಪಿ.ವಿ. ಎಸ್.ಪ್ರಸಾದ್ ತಿಳಿಸಿದ್ದಾರೆ.

'ಸಂಘದ ಅಧೀನದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಒಂದೇ ಸೂರಿನಡಿ ತರಲು ಯತ್ನಿಸುತ್ತೇನೆ. ಒಕ್ಕಲಿಗರ ವಿಶ್ವವಿದ್ಯಾಲಯ ಸ್ಥಾಪಿಸಲು ಹೋರಾಟ ನಡೆಸುತ್ತೇನೆ' ಎಂದು ಹೇಳಿದ್ದಾರೆ.

'ಆಡಳಿತ ಮಂಡಳಿಯಲ್ಲಿ ಮಹಿಳೆಯರಿಗೆ ಎರಡು ಸ್ಥಾನ ಮೀಸಲಿಡಲು ಆದ್ಯತೆ ನೀಡುತ್ತೇನೆ. ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳಿಗೆ ಶುಲ್ಕ ಹಾಗೂ ಆರೋಗ್ಯ ಸೇವೆಯಲ್ಲಿ ರಿಯಾಯಿತಿ ಕಲ್ಪಿಸಲೂ ಒತ್ತು ನೀಡುತ್ತೇನೆ. ಸಮುದಾಯದ ಸಾಧಕರನ್ನು ಗುರುತಿಸಿ ಅವರಿಗೆ ವಿಶೇಷ ಗೌರವ ನೀಡಲೂ ಪ್ರಯತ್ನಿಸಲಾಗುತ್ತದೆ' ಎಂದೂ ತಿಳಿಸಿದ್ದಾರೆ.

ಮಹಿಳಾ ಟೆಕಿ ಆತ್ಮಹತ್ಯೆ: ಪತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಪತಿ ವಿನಯ್‌ಕುಮಾರ್ ಜೊತೆ ಸಂಗೀತಾ

ಬೆಂಗಳೂರು: ನಗರದ ಸಾಫ್ಟ್‌ವೇರ್ ಕಂಪನಿಯೊಂದರ ಎಂಜಿನಿಯರ್ (ಟೆಕಿ) ಸಂಗೀತಾ (26) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಡ್ಯದ ಸಂಗೀತಾ, ನೆಲಮಂಗಲದ ವಿನಯ್ ಕುಮಾರ್ ಎಂಬುವರನ್ನು ಪ್ರೀತಿಸಿ ನಾಲ್ಕು ವರ್ಷಗಳ ಹಿಂದಷ್ಟೇ ಮದುವೆಯಾಗಿದ್ದರು. ಇಬ್ಬರೂ ಟೆಕಿಗಳು. ಪ್ರತ್ಯೇಕ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಅಮೃತಹಳ್ಳಿ ಬಳಿಯ ವೀರಣ್ಣಪಾಳ್ಯದ ಮನೆಯೊಂದರಲ್ಲಿ ದಂಪತಿ ಬಾಡಿಗೆಗೆ ಇದ್ದರು. ಅದೇ ಮನೆಯ ಕೊಠಡಿಯಲ್ಲಿ ಸಂಗೀತಾ ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರಂಭದಲ್ಲಿ ದಂಪತಿ ಚೆನ್ನಾಗಿದ್ದರು. ಆದರೆ, ಮದುವೆಯಾಗಿ ನಾಲ್ಕು ವರ್ಷವಾದರೂ ಸಂಗೀತಾ ಅವರಿಗೆ ಮಕ್ಕಳು ಆಗಿರಲಿಲ್ಲ. ಇದೇ ವಿಚಾರವಾಗಿ ಪತಿ ವಿನಯ್, ಪತ್ನಿ ಜೊತೆ ಜಗಳ ತೆಗೆಯಲಾರಂಭಿಸಿದ್ದರು. ನಿತ್ಯವೂ ಪತ್ನಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು. ಇದರಿಂದ ಸಂಗೀತಾ ಬೇಸತ್ತಿದ್ದರೆಂದು ಕುಟುಂಬದವರು ಹೇಳಿಕೆ ನೀಡಿದ್ದಾರೆ.'

'ಪತಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಸಂಗೀತಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹದ ಬಳಿ ಮರಣ ಪತ್ರ ಸಹ ಸಿಕ್ಕಿದೆ. ಪತಿ ನೀಡುತ್ತಿದ್ದ ಕಿರುಕುಳದ ಬಗ್ಗೆ ಪತ್ರದಲ್ಲಿ ಬರೆಯಲಾಗಿದೆ. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಹೂಡಿಕೆ ಹೆಸರಿನಲ್ಲಿ ₹ 10 ಲಕ್ಷ ವಂಚನೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ಹೂಡಿಕೆ ಹೆಸರಿನಲ್ಲಿ ₹ 10 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪಶ್ಚಿಮ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿಜಯನಗರದ ಬಿಸಿಸಿ ಬಡಾವಣೆ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಟೆಲಿಮಾರ್ಟ್ ಫಿನ್‌ಟೆಕ್ ಕಂಪನಿ,ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಮೇ 7ರಂದು ಕರೆ ಮಾಡಿದ್ದ ಆರೋಪಿಗಳು, ಟೆಲಿಮಾರ್ಟ್ ಕಂಪನಿ ಪ್ರತಿನಿಧಿಗಳೆಂದು ಪರಿಚಯಿಸಿಕೊಂಡಿದ್ದರು. ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ, ಪ್ರತಿ ವರ್ಷವೂ ದುಪ್ಪಟ್ಟು ಲಾಭ ಬರುವುದಾಗಿ ಹೇಳಿದ್ದರು. ಅದನ್ನು ನಂಬಿದ ದೂರುದಾರ, ಹಂತ ಹಂತವಾಗಿ ₹ 10 ಲಕ್ಷ ಹೂಡಿಕೆ ಮಾಡಿದ್ದರು.'

'ಹಣ ಪಡೆದ ನಂತರ ಕಂಪನಿ ಪ್ರತಿನಿಧಿಗಳು ನಾಪತ್ತೆಯಾಗಿದ್ದಾರೆ. ಕಂಪನಿ ಜಾಲತಾಣ ಸಹ ಬಂದ್ ಆಗಿದೆ' ಎಂದೂ ಮೂಲಗಳು ತಿಳಿಸಿವೆ.

₹ 2.45 ಲಕ್ಷ ವಂಚನೆ: ಹೂಡಿಕೆ ಹೆಸರಿನಲ್ಲಿ ₹2.45 ಲಕ್ಷ ವಂಚಿಸಿರುವ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ.



ಶಿವಾನಂದ ವೃತ್ತದಲ್ಲಿ ಉಕ್ಕಿನ ಸೇತುವೆ ಕಾಮಗಾರಿ ನಡೆಯುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ (ಎಡ ಚಿತ್ರ), ಸೇತುವೆ ಮೇಲೆ ಕಾಂಕ್ರಿಟ್ ಕಾಮಗಾರಿ ನಡೆಯುತ್ತಿದೆ –ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಉಕ್ಕಿನ ಸೇತುವೆ: 13 ತಿಂಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿಗೆ ನಾಲ್ಕೂವರೆ ವರ್ಷ ತೆಗೆದುಕೊಂಡ ಗುತ್ತಿಗೆದಾರ

54 ತಿಂಗಳ ಬಳಿಕವೂ ಮುಗಿಯದ ಕಾಮಗಾರಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 13 ತಿಂಗಳಲ್ಲಿ ಮುಗಿಯಬೇಕಿದ್ದ ಉಕ್ಕಿನ ಸೇತುವೆ ಕಾಮಗಾರಿ, 54 ತಿಂಗಳಾದರೂ ದೊರಕದ ಮುಕ್ತಿ, ಹತ್ತಾರು ಗಡುವುಗಳಿಗೂ ಇಲ್ಲ ಕಿಮ್ಮತ್ತು, ವಾಹನ ಸವಾರರಿಗೆ ತಪ್ಪಲಿಲ್ಲ ಕಿರಿಕಿರಿ...

ಶಿವಾನಂದ ವೃತ್ತದ ಬಳಿ ನಿರ್ಮಾಣವಾಗುತ್ತಿರುವ ಉಕ್ಕಿನ ಸೇತುವೆಯ ಕಥೆ ಇದು. 2017ರ ಜೂನ್‌ನಲ್ಲಿ ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಕಾಮಗಾರಿ ಗುತ್ತಿಗೆ ವಹಿಸಿ ಬಿಬಿಎಂಪಿ ಕಾರ್ಯಾದೇಶ ನೀಡಿತ್ತು. 13 ತಿಂಗಳಲ್ಲಿ ಅಂದರೆ 2018ರ ಜುಲೈನಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂಬ ಕಾಲಮಿತಿ ನಿಗದಿ ಮಾಡಿತ್ತು. ನಿಗದಿತ ಅವಧಿಗಿಂತ 4 ಪಟ್ಟು ಹೆಚ್ಚು ಸಮಯ ಮುಗಿದರೂ ಕಾಮಗಾರಿ ಪೂರ್ಣಗೊಂಡಿಲ್ಲ.

ಯೋಜನೆ ಜಾರಿಯಿಂದ ರಸ್ತೆ ಬದಿಯಿರುವ ಮರಗಳಿಗೆ ಕೊಡಲಿ ಬೀಳಲಿದೆ ಎಂದು ಕೆಲವರು ಕೋರ್ಟ್ ಮೆಟ್ಟಿಲೇರಿದ್ದರು. ಇದರಿಂದ 2018ರಲ್ಲಿ ಮೂರು ತಿಂಗಳ ಕಾಲ ಕಾಮಗಾರಿ ಸ್ಥಗಿತಗೊಂಡಿತ್ತು. ಕೋರ್ಟ್ ಒಪ್ಪಿಗೆ ಪಡೆದು ಕಾಮಗಾರಿ ಪುನಾರಂಭಿಸಿ ಮೂರು ವರ್ಷ ಪೂರ್ಣಗೊಂಡರೂ ಕಾಮಗಾರಿ ಮಾತ್ರ ಪೂರ್ಣಗೊಂಡಿಲ್ಲ. ಕಾಮಗಾರಿ ವಿಳಂಬಕ್ಕೆ ಈ ನೆಪವೊಂದನ್ನೇ ಹೇಳಿಕೊಂಡು ಬಿಬಿಎಂಪಿ ಕಾಲ ತಳ್ಳುತ್ತಿದೆ. ಅನಗತ್ಯ ವಿಳಂಬ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧವೂ ಕ್ರಮ ಕೈಗೊಂಡಿಲ್ಲ.

ಕುಮಾರಕೃಪಾ ರಸ್ತೆ, ರೇಸ್‌ಕೋರ್ಸ್ ರಸ್ತೆ, ಹರೇಕೃಷ್ಣ ರಸ್ತೆ ಹಾಗೂ ಬಸವೇಶ್ವರ ವೃತ್ತದೆಡೆಗೆ ಸಾಗುವ ರಸ್ತೆಗಳು ಶಿವಾನಂದ ವೃತ್ತದ ಬಳಿ ಸೇರುತ್ತವೆ. ನಾಲ್ಕೂ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ವಾಹನ ಸವಾರರು ಇಲ್ಲಿ ನಿತ್ಯ ಪಡಿಪಾಟಲು ಅನುಭವಿಸುತ್ತಿದ್ದಾರೆ.

‘ವಾಹನ ದಟ್ಟಣೆ ನಿಯಂತ್ರಣಕ್ಕಾಗಿ ಉಕ್ಕಿನ ಸೇತುವೆ ನಿರ್ಮಿಸುತ್ತಿದ್ದಾರೆ. ಆದರೆ, ಕಾಮಗಾರಿ ವಿಳಂಬದಿಂದ ಈ ಸೇತುವೆಯೇ ದಟ್ಟಣೆ ಹೆಚ್ಚಲು ಕಾರಣವಾಗಿದೆ. ಬೆಳಿಗ್ಗೆ ಹಾಗೂ ಸಂಜೆ ವೇಳೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಆಗ ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಪಡಬೇಕು. ಇಲ್ಲಿ ಕುಮಾರಕೃಪಾ ರಸ್ತೆಯನ್ನು ಹಾದು ಹೋಗಲು ಕನಿಷ್ಠ 20 ನಿಮಿಷ ಬೇಕು. ಸಂಜೆ ವೇಳೆ ಶಿವಾನಂದ ವೃತ್ತ ರಸ್ತೆಯಲ್ಲಿ ಬರಲು ಭಯವಾಗುತ್ತದೆ’ ಎನ್ನುತ್ತಾರೆ ಟ್ಯಾಕ್ಸಿ ಚಾಲಕ ಸುರೇಶ್.

ಕಾಮಗಾರಿ ನಡೆಯುತ್ತಿರುವುದರಿಂದ ರೇಸ್ ಕೋರ್ಸ್ ರಸ್ತೆಯಿಂದ ಪ್ರವೇಶ ಬಂದ್ ಮಾಡಲಾಗಿದೆ. ಬಸವೇಶ್ವರ ವೃತ್ತದ ಕಡೆಯಿಂದ ಬರುವ ವಾಹನಗಳು ರೇಸ್‌ಕೋರ್ಸ್ ರಸ್ತೆಯಲ್ಲೇ ಮುಂದುವರಿದು ಕುಮಾರಕೃಪಾ ರಸ್ತೆಯ ಕಡೆ ತಿರುವು ಪಡೆದುಕೊಂಡು ಶಿವಾನಂದ ವೃತ್ತಕ್ಕೆ ಬರಬೇಕು. ಕಳೆದ ನಾಲ್ಕು ವರ್ಷಗಳಿಂದ ಜನ ಈ ಸುತ್ತು ಬಳಸು ಹಾದಿಯಲ್ಲೇ ಕ್ರಮಿಸುತ್ತಿದ್ದಾರೆ. ಪರ್ಯಾಯ ಮಾರ್ಗಗಳ ಮೇಲೆ ಹೆಚ್ಚುವರಿ ಸಂಚಾರ ಒತ್ತಡ ಹೇರಲಾಗುತ್ತಿದೆ. ಅದರಿಂದ ಉಂಟಾಗುವ ದಟ್ಟಣೆಯಿಂದ ನಿಧಾನವಾಗಿ ಸಂಚರಿಸಬೇಕು. ಅದಕ್ಕೆ ಖರ್ಚಾಗುವ ಹೆಚ್ಚುವರಿ ಇಂಧನದ ಹೊರೆಯನ್ನೂ ಸವಾರ ಹೊರಬೇಕು.

‘ಗುತ್ತಿಗೆ ಪಡೆದವರು ಮತ್ತು ಬಿಬಿಎಂಪಿ ಅಧಿಕಾರಿಗಳ ಬೇಜವಾಬ್ದಾರಿಯಿಂದ ಆಗಿರುವ ವಿಳಂಬಕ್ಕೆ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗಿದೆ. ಅನಗತ್ಯವಾಗಿ ಕಾಮಗಾರಿ ವಿಳಂಬ ಮಾಡುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಸರಿಯಾಗಿ ಮೇಲುಸ್ತುವಾರಿ ವಹಿಸದ ಅಧಿಕಾರಿಗಳ ವಿರುದ್ಧವೂ ಕ್ರಮ ಆಗಬೇಕು’ ಎಂದು ಬೈಕ್ ಸವಾರ ರಮೇಶ್ ಒತ್ತಾಯಿಸಿದರು.

ಕಾಮಗಾರಿ ವಿಳಂಬದ ಕುರಿತು ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಯೋಜನೆ) ಎಂ. ಲೋಕೇಶ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಮುಖ್ಯಾಂಶಗಳು

- ಬೆಂಗಳೂರಿನ ಮೊದಲ ಉಕ್ಕಿನ ಸೇತುವೆ
- ಗುತ್ತಿಗೆ ಪಡೆದಿರುವ ಕಂಪನಿ; ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ
- ಬಿಬಿಎಂಪಿ ಯೋಜನಾ ವಿಭಾಗದಿಂದ ಕಾಮಗಾರಿ ನಿರ್ವಹಣೆ

ಪ್ರಜಾವಾಣಿ ವಿಶೇಷ

ದೂಳು, ಸಂಚಾರ ದಟ್ಟಣೆ ನಡುವೆ ನಾಲ್ಕು ವರ್ಷಗಳಿಂದ ಜೀವನ ನಡೆಸುತ್ತಿದ್ದೇವೆ. ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ ಬಿಬಿಎಂಪಿಗೆ ಗಮನವೇ ಇಲ್ಲ

ಮಾಯಣ್ಣ, ಸ್ಥಳೀಯ ವರ್ತಕ

ಸೇತುವೆ ಕೆಲಸ ಆರಂಭವಾಗಿ ನಾಲ್ಕರಿಂದ ಐದು ವರ್ಷವಾಗಿದ್ದು, ಇನ್ನೂ ಮುಗಿದಿಲ್ಲ. ಸಂಚಾರ ದಟ್ಟಣೆಯಿಂದ ತೀವ್ರ ತೊಂದರೆ ಉಂಟಾಗುತ್ತಿದೆ

ಅಮ್ಜದ್, ಸ್ಥಳೀಯ ವರ್ತಕ

ಅಂಕಿ ಅಂಶಗಳು

493 ಶಿವಾನಂದ ವೃತ್ತ ಉಕ್ಕಿನ ಸೇತುವೆಯ ಉದ್ದ

₹60 ಯೋಜನೆಯ ಅಂದಾಜು ವೆಚ್ಚ

2017ರ ಮಾರ್ಚ್ ಕಾಮಗಾರಿ ಆರಂಭವಾಗಿದ್ದು

ಸುದ್ದಿ 2 ನಿಮಿಷ

‘ನಾನೂ ಸಿ.ಎಂ ಆಕಾಂಕ್ಷಿ’

ದಾವಣಗೆರೆ: ‘ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 140 ಸ್ಥಾನ ಪಡೆಯಲಿದ್ದು, ನಾನೇ ಮುಖ್ಯಮಂತ್ರಿಯಾಗುತ್ತೇನೆ’ ಎಂದು ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಮತ ಚಲಾಯಿಸಿದ ಬಳಿಕ ಪತ್ರಕರ್ತರ ಜೊತೆ ಮಾತನಾಡಿ, ‘ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸುತ್ತದೆ. ಜನರು ಬಿಜೆಪಿ ಮೇಲೆ ಬೇಜಾರಾಗಿದ್ದಾರೆ. ನಾನು ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿ. ಅದರಲ್ಲಿ ತಪ್ಪೇನಿದೆ? ಮುಂದಿನ ಚುನಾವಣೆ ಬರಲಿ ನಾನು ಕೇಳುತ್ತೇನೆ’ ಎಂದು ಹೇಳಿದರು.

‘ಸಿದ್ದರಾಮಯ್ಯ ಅವರೂ ಆಕಾಂಕ್ಷಿಯೇ. ಆದರೆ ಇದನ್ನು ನಿರ್ಧರಿಸುವವರು ಮತದಾರರು. ಯಾರು ಕೈಎತ್ತುತ್ತಾರೋ ಅವರನ್ನು ಹೈಕಮಾಂಡ್ ಆಯ್ಕೆ ಮಾಡುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಿದರೆ ಕೇಳುತ್ತೇನೆ’ ಎಂದರು.



‘ಅಹಂ ಭಾವದಿಂದ ಹೆಚ್ಚುತ್ತಿರುವ ದೌರ್ಜನ್ಯ’

ಬೆಂಗಳೂರು: ‘ಮನುಷ್ಯರಲ್ಲಿ ಅಹಂ ಭಾವ ಹೆಚ್ಚುತ್ತಿದೆ. ಅದರಿಂದ ಕೌಟುಂಬಿಕ ಕಲಹಗಳು ಹಾಗೂ ದೌರ್ಜನ್ಯಗಳೂ ಏರುತ್ತಿವೆ’ ಎಂದು ವಕೀಲರ ಸಾಹಿತ್ಯ ಕೂಟದ ಉಪಾಧ್ಯಕ್ಷೆ ಬಿ.ಜೆ.ಜಿ.ಸತ್ಯಶ್ರೀ ಹೇಳಿದರು.

ಹೊಂಬೇಗೌಡ ನಗರದ ಕನ್ನಡ ಯುವಜನ ಸಂಘ ಹಮ್ಮಿಕೊಂಡಿದ್ದ ‘ಮಹಿಳೆ ಮತ್ತು ಕಾನೂನು’ ವಿಷಯದ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಹಾತ್ಮ ಗಾಂಧೀಜಿಯವರ ಕನಸಿನ ಕೂಸು ‘ಗ್ರಾಮ ಸ್ವರಾಜ್’ ನನಸಾಗಿದ್ದರೆ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೈಹಿಕ ಹಾಗೂ ಮಾನಸಿಕ ದೌರ್ಜನ್ಯಗಳನ್ನು ತಡೆಯಬಹುದಿತ್ತು. ನಗರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಪ್ರಭಾವದಿಂದ ಮನುಷ್ಯ ಕೊಳ್ಳುಬಾಕುತನಕ್ಕೆ ಇಳಿದಿದ್ದಾನೆ. ಮಿತಿಮೀರಿದ ಸಂಪಾದನೆಗೆ ಕೈಒಡ್ಡುತ್ತಿದ್ದಾನೆ. ಜೊತೆಗೆ ದೌರ್ಜನ್ಯಗಳನ್ನೂ ಎಸಗುತ್ತಿದ್ದಾನೆ’ ಎಂದರು.

ಕನ್ನಡ ಯುವಜನ ಸಂಘದ ಕಾರ್ಯದರ್ಶಿ ಮಹಾಂತೇಶ್ ದೇಗಾವಿ, ಜಗದೀಶ್ ರೆಡ್ಡಿ, ರಾಜು, ಕೆ.ಎಸ್.ಮೂರ್ತಿ ಇದ್ದರು.

ಲಾಕ್‌ಡೌನ್: ಆಟದಲ್ಲೇ ಹೆಚ್ಚು ತೊಡಗಿದ್ದ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಶಾಲಾ ಮಕ್ಕಳು ಆನ್‌ಲೈನ್ ಪಾಠಕ್ಕಿಂತಲೂ ಕೆಲಸ, ಆಟ, ಮೊಬೈಲ್ ಬಳಕೆ ಸೇರಿದಂತೆ ಇತರೆ ಚಟುವಟಿಕೆಗಳಲ್ಲೇ ಹೆಚ್ಚಾಗಿ ತೊಡಗಿಕೊಂಡಿದ್ದರು ಎಂಬುದು ಅಧ್ಯಯನದಿಂದ ಗೊತ್ತಾಗಿದೆ.

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (ಕೆಸಿಆರ್‌ಒ) ಹೊರ ತಂದಿರುವ ‘ಕೋವಿಡ್ 19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ರಾಜ್ಯದ ಮಕ್ಕಳ ಪರಿಸ್ಥಿತಿ’ ಎಂಬ ವರದಿಯಲ್ಲಿ ಹಲವು ಅಂಶಗಳನ್ನು ಉಲ್ಲೇಖಿಸಲಾಗಿದೆ.

ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಚ್.ಸಿ.ರಾಘವೇಂದ್ರ ವರದಿ ಬಿಡುಗಡೆ ಮಾಡಿದರು.

ಗ್ರಾಮೀಣ ಭಾಗದ ಮಕ್ಕಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಬಾಲ್ಯ ವಿವಾಹಗಳು ಹೆಚ್ಚಾಗಿರುವುದನ್ನು ಅಧ್ಯಯನಕ್ಕೊಳಪಟ್ಟ ಹಿರಿಯರು ಅಲ್ಲಗಳೆದಿದ್ದಾರೆ. ಹದಿಹರೆಯದವರು ಬಾಲ್ಯ ವಿವಾಹದಲ್ಲಿ ಏರಿಕೆಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಹೌದು / ಇಲ್ಲ

- ಲಾಕ್‌ಡೌನ್ ಅವಧಿಯಲ್ಲಿ ಅಂಗನವಾಡಿ ಮಕ್ಕಳ ಮನೆಗಳಿಗೆ ಪೌಷ್ಟಿಕ ಆಹಾರ ಪೂರೈಸಲಾಗಿತ್ತೇ? ಹೌದು 81%, ಇಲ್ಲ 19%
- ಮೊಟ್ಟೆ ಮತ್ತು ಬಾಲಾಮೃತ ವಿತರಿಸಲಾಗಿತ್ತೇ? ಹೌದು 81%, ಇಲ್ಲ 19%
- ಲಾಕ್‌ಡೌನ್ ನಂತರವೂ ಮಕ್ಕಳ ಮನೆಗೆ ಪೌಷ್ಟಿಕ ಆಹಾರ ಪೂರೈಸಲಾಗಿತ್ತೆ? ಹೌದು 77%, ಇಲ್ಲ 23%
- ಲಾಕ್‌ಡೌನ್ ಅವಧಿಯಲ್ಲಿ ಮಕ್ಕಳಿಗೆ ರೋಗ ನಿರೋಧಕಗಳನ್ನು ನೀಡಲಾಗಿತ್ತೇ? ಹೌದು 83%, ಇಲ್ಲ 17%
- ಲಾಕ್‌ಡೌನ್ ಅವಧಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮನೆಗಳಿಗೆ ಭೇಟಿ ನೀಡಿದ್ದರೇ? ಹೌದು 69%, ಇಲ್ಲ 31%
- ಅಂಗನವಾಡಿ ಮುಚ್ಚಿದ್ದ ಸಮಯದಲ್ಲಿ ಪೋಷಕರು ಮಕ್ಕಳನ್ನು ಎಲ್ಲಿ ಬಿಟ್ಟು ಹೋಗುತ್ತಿದ್ದರು? ಮನೆಯಲ್ಲಿ 91%, ನೆರೆಮನೆಯಲ್ಲಿ 9%
- ಮಕ್ಕಳು ಲಾಕ್‌ಡೌನ್ ಸಮಯದಲ್ಲಿ ಯಾವ ಚಟುವಟಿಕೆಗಳಲ್ಲಿ ತೊಡಗಿದ್ದರು? ಆನ್‌ಲೈನ್ ತರಗತಿ 30%, ಕೆಲಸ, ಆಟ, ಮೊಬೈಲ್ ಬಳಕೆ 70%
- ಶಾಲಾ ಬಿಸಿಯೂಟದ ಪಡಿತರವನ್ನು ಮಕ್ಕಳ ಮನೆಗಳಿಗೆ ತಲುಪಿಸಲಾಗಿತ್ತೇ?? ಹೌದು 85%, ಇಲ್ಲ 15%
- ಕಳೆದ ಒಂದೂವರೆ ವರ್ಷದಲ್ಲಿ ಮಕ್ಕಳ ದುಡಿಮೆ ಪ್ರಮಾಣ ಹೆಚ್ಚಾಗಿದೆಯೇ? ಹೌದು 48%, ಇಲ್ಲ 49%, ಗೊತ್ತಿಲ್ಲ 3%
- ಒಂದೂವರೆ ವರ್ಷದಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಏರಿಕೆಯಾಗಿವೆಯೇ? ಹೆಚ್ಚಾಗಿದೆ 43%, ಹೆಚ್ಚಾಗಿಲ್ಲ 57%
- ಒಂದೂವರೆ ವರ್ಷದಲ್ಲಿ ಮಕ್ಕಳ ಮೇಲಿನ ದೈಹಿಕ ಮತ್ತು ಲೈಂಗಿಕ ಶೋಷಣೆ ಹೆಚ್ಚಿದೆಯೇ? ಹೌದು 11%, ಇಲ್ಲ 82%, ಗೊತ್ತಿಲ್ಲ 7%

ಅಂಕಿ ಅಂಶಗಳು

40 ಅಧ್ಯಯನದ ಅವಧಿಯಲ್ಲಿ ನಡೆದ ಕೇಂದ್ರೀಕೃತ ಗುಂಪು ಚರ್ಚೆಗಳು

513 ಚರ್ಚೆಯಲ್ಲಿ ಭಾಗವಹಿಸಿದ 12–18 ವರ್ಷದ ಬಾಲಕ, ಬಾಲಕಿಯರು

501 ಚರ್ಚೆಯಲ್ಲಿ ಪಾಲ್ಗೊಂಡಿದ್ದ 19–56 ವರ್ಷದೊಳಗಿನ ಪುರುಷರು

510 ಚರ್ಚೆಯಲ್ಲಿ ಭಾಗಿಯಾಗಿದ್ದ 20–49 ವರ್ಷದೊಳಗಿನ ಮಹಿಳೆಯರು

ಪರಿಷತ್ ಫಲಿತಾಂಶ: 13ಕ್ಕೆ ಮೇಲ್ಮನವಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ನಗರ ವಿಧಾನ ಪರಿಷತ್ ಕ್ಷೇತ್ರದ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶವನ್ನು ನ್ಯಾಯಾಲಯದ ಅನುಮತಿ ಇಲ್ಲದೆ ಪ್ರಕಟಿಸಬಾರದು’ ಎಂಬ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿರುವ ಚುನಾವಣಾ ಆಯೋಗ ಮೇಲ್ಮನವಿ ಸಲ್ಲಿಸಿದೆ.

ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಬೆಳಗ್ಗೆ ಕಲಾಪ ಆರಂಭಿಸುತ್ತಿದ್ದಂತೆಯೇ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಅವರು ಚುನಾವಣಾ ಆಯೋಗದ ಪರ ಹಾಜರಾಗಿ ಮೇಲ್ಮನವಿ ಕುರಿತಂತೆ ನ್ಯಾಯಪೀಠಕ್ಕೆ ಅರುಹಿದರು.

‘ಏಕಸದಸ್ಯ ನ್ಯಾಯಪೀಠವು ಚುನಾವಣೆಯ ಕೊನೆ ಕ್ಷಣದಲ್ಲಿ ಈ ರೀತಿಯ ಮಧ್ಯಂತರ ಆದೇಶ ನೀಡಿರುವ ಪರಿಣಾಮ ಉಳಿದ 19 ಕ್ಷೇತ್ರಗಳ ಫಲಿತಾಂಶದಲ್ಲೂ ಇದೇ ಆದೇಶ ಪಾಲಿಸುವಂತೆ ಕೆಲ ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿವೆ. ಚುನಾವಣಾ ವೇಳಾ ಪಟ್ಟಿಯಂತೆ ಇದೇ 14ಕ್ಕೆ ಮತ ಎಣಿಕೆ ನಡೆದು ಅಂದೇ ಫಲಿತಾಂಶ ಪ್ರಕಟಗೊಳ್ಳಬೇಕಿದೆ. ಹಾಗಾಗಿ, ಪ್ರಕರಣ ತುರ್ತು ಇರುವುದರಿಂದ ಅರ್ಜಿಯನ್ನು ಇಂದೇ ವಿಚಾರಣೆಗೆ ಪರಿಗಣಿಸಬೇಕು’ ಎಂದು ಮನವಿ ಮಾಡಿದರು. ಆದರೆ, ನ್ಯಾಯಪೀಠ ಇದೇ 13ಕ್ಕೆ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಏನಿದು ಪ್ರಕರಣ?: ಆನೇಕಲ್, ಅತ್ತಿಬೆಲೆ ಮತ್ತು ಮಹದೇವಪುರ ಪುರಸಭೆಗೆ ನಾಮ ನಿರ್ದೇಶನಗೊಂಡಿರುವ 15 ಸದಸ್ಯರು, ಬೆಂಗಳೂರು ನಗರ ವಿಧಾನ ಪರಿಷತ್ ಸ್ಥಳೀಯ ಸಂಸ್ಥೆಗಳ 15 ನಾಮ ನಿರ್ದೇಶಿತ ಸದಸ್ಯರನ್ನು ಮತದಾರರ ಪಟ್ಟಿಯಿಂದ ಕೈಬಿಡುವಂತೆ ನಿರ್ದೇಶಿಸಬೇಕು’ ಎಂದು ಕೋರಿ ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಗುರುವಾರ (ಡಿ.9) ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಪ್ರತಿವಾದಿ 15 ಜನ ನಾಮನಿರ್ದೇಶಿತ ಸದಸ್ಯರು ಚುನಾವಣೆಯಲ್ಲಿ ತಮ್ಮ ಮತ ಚಲಾಯಿಸಬಹುದು. ಆದರೆ, ಇವರ ಮತದಾನವನ್ನು ಪ್ರತ್ಯೇಕ ಮತಪೆಟ್ಟಿಗೆಯಲ್ಲಿ ಇರಿಸಬೇಕು ಮತ್ತು ಫಲಿತಾಂಶವನ್ನು ಪ್ರಕಟಿಸುವಂತಿಲ್ಲ’ ಎಂದು ಆದೇಶಿಸಿತ್ತು.

ಅರ್ಜಿದಾರರ ವಾದವೇನು?: ‘ನಾಮ ನಿರ್ದೇಶಿತ ಸದಸ್ಯರಿಗೆ ಪರಿಷತ್ ಚುನಾವಣೆಯಲ್ಲಿ ಮತದಾನದ ಹಕ್ಕು ನೀಡಿರುವುದು ಮತ್ತು ಮತದಾನದ ಪಟ್ಟಿಯಲ್ಲಿ ಅವರ ಹೆಸರು ಸೇರ್ಪಡೆ ಮಾಡಿರುವುದು ಸಂವಿಧಾನ ಬಾಹಿರ ಹಾಗೂ ಜನತಾ ಪ್ರತಿನಿಧಿ ಕಾಯ್ದೆಗೆ ವಿರುದ್ಧವಾಗಿದೆ. ಆದ್ದರಿಂದ, ಇವರ ಹೆಸರುಗಳನ್ನು ಮತದಾರರ ಯಾದಿಯಿಂದ ಕೈಬಿಡುವಂತೆ ಚುನಾವಣಾ ಅಧಿಕಾರಿಗೆ ನಿರ್ದೇಶನ ನೀಡಬೇಕು’ ಎಂಬುದು ಅರ್ಜಿದಾರರ ವಾದ.

ಪ್ರಕರಣದಲ್ಲಿ ಕೇಂದ್ರ ಚುನಾವಣಾ ಆಯುಕ್ತರು, ಬೆಂಗಳೂರು ನಗರ ಜಿಲ್ಲೆಯ ವಿಧಾನ ಪರಿಷತ್ ಚುನಾವಣಾಧಿಕಾರಿಯೂ ಸೇರಿದಂತೆ ಒಟ್ಟು 15 ನಾಮನಿರ್ದೇಶಿತ ಸದಸ್ಯರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ನಾಮ ನಿರ್ದೇಶಿತ ಸದಸ್ಯರು: ಎಂ.ಜನಾರ್ದನ, ಕೆ.ಮಂಜುನಾಥ, ಕೆ.ಸುಧಾ ಜಾಧವ್, ಆರ್.ಜಗದೀಶ್, ವಿ.ನಿತಿನ್, ಕೆ.ಪ್ರಭಾಕರ್, ಕೆ.ನಟರಾಜ್, ಎಂ.ವೆಂಕಟೇಶ ರೆಡ್ಡಿ, ನರಸಿಂಹ ಸ್ವಾಮಿ, ಎ.ಎಂ.ರಾಜಪ್ಪ, ರಘು, ಪ್ರಕಾಶ್, ಬಿ.ಆರ್. ಪ್ರಸನ್ನಕುಮಾರ್, ಬಿ.ಎಂ. ಪ್ರವೀಣ್ ಕುಮಾರ್ ಹಾಗೂ ಕೆ.ಎಸ್. ಪ್ರದೀಪ್. ಅರ್ಜಿದಾರರ ಪರ ಬಿ.ಎನ್. ಸುರೇಶ್ ಬಾಬು ವಕಾಲತ್ತು ವಹಿಸಿದ್ದಾರೆ.

ಮಾನ್‌ಸ್ಟರ್ ಕಂಪನಿ ಜತೆ ಕೆಎಸ್‌ಡಿಸಿ ಒಪ್ಪಂದ

2 ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕೌಶಲಪೂರ್ಣ ಉದ್ಯೋಗಾಕಾಂಕ್ಷಿಗಳಿಗೆ ಲಭ್ಯ ಅವಕಾಶಗಳ ಬಗ್ಗೆ ಮಾಹಿತಿ ನೀಡುವ ಜತೆಗೆ ಉದ್ಯೋಗ ಗಿಟ್ಟಿಸಿಕೊಳ್ಳಲು ನೆರವು ನೀಡುವ ಗುರಿಯೊಂದಿಗೆ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆಎಸ್‌ಡಿಸಿ) ಮತ್ತು ಮಾನ್‌ಸ್ಟರ್.ಕಾಂ ಕಂಪನಿಗಳು ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕಿದವು.

ಇದರ ಅಂಗವಾಗಿ ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಉದ್ಯೋಗ ಸೃಷ್ಟಿಗೆ ರಾಜ್ಯ ಸರಕಾರವು ಸಾಕಷ್ಟು ಹಣವನ್ನು ವಿನಿಯೋಗಿಸುತ್ತಿದ್ದು, ನಿರುದ್ಯೋಗ ನಿವಾರಣೆಯೇ ಆದ್ಯತೆಯಾಗಿದೆ. ದೇಶದ ಸಂಘಟಿತ ವಲಯದಲ್ಲಿ 6 ಲಕ್ಷಕ್ಕೂ ಹೆಚ್ಚು ಮತ್ತು ರಾಜ್ಯವೊಂದರಲ್ಲೇ 2.30 ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳಿವೆ. ಉದ್ಯೋಗ ಸೃಷ್ಟಿಯ ಮೂಲಕ ಪ್ರತಿಭಾವಂತರು ವಿದೇಶಗಳಿಗೆ ವಲಸೆ ಹೋಗುವುದನ್ನು ತಡೆಯುವುದು ನಮ್ಮ ಗುರಿಗಳಲ್ಲಿ ಒಂದಾಗಿದೆ’ ಎಂದರು.

ಒಪ್ಪಂದದ ಪ್ರಕಾರ, ಕೆಎಸ್‌ಡಿಸಿ ಮತ್ತು ಮಾನ್‌ಸ್ಟರ್ ಕಂಪನಿ ಪರಸ್ಪರ ವೆಬ್ ಲಿಂಕ್‌ಗಳನ್ನು ಹಂಚಿಕೊಳ್ಳಲಿವೆ. ಮಿಗಿಲಾಗಿ ಮಾನ್‌ಸ್ಟರ್ ಕಂಪನಿಯು ಪ್ರತೀ ತಿಂಗಳು ಸಮೀಕ್ಷೆ ನಡೆಸುವ ಮೂಲಕ ಯಾವ್ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಉದ್ಯೋಗಗಳಿವೆ ಎನ್ನುವುದನ್ನು ಪಟ್ಟಿ ಮಾಡುತ್ತದೆ. ಇದರ ಆಧಾರದ ಮೇಲೆ ಕೌಶಲ ಅಭಿವೃದ್ಧಿ ನಿಗಮವು ತರಬೇತಿಯ ಸ್ವರೂಪವನ್ನು ನಿರ್ಧರಿಸುತ್ತದೆ ಎಂದು ಅವರು ವಿವರಿಸಿದರು.

ಈ ಒಪ್ಪಂದದ ಮೂಲಕ 1.86 ಲಕ್ಷಕ್ಕೂ ಹೆಚ್ಚು ಕೌಶಲಪೂರ್ಣ ಉದ್ಯೋಗಾಕಾಂಕ್ಷಿಗಳಿಗೆ ನೆರವು ಸಿಗಲಿದೆ. ಅಲ್ಲದೆ, ಈ ಅಭ್ಯರ್ಥಿಗಳಿಗೆ ಮಾನ್ ಸ್ಟರ್.ಕಾಂ ಕಂಪನಿಯು ವಿವಿಧೆಡೆಗಳಲ್ಲಿ ನಡೆಸುವ ಟ್ರಯಂಫ್, ಆಸ್ಪೈರ್, ವೆಲಾಸಿಟಿ ಮುಂತಾದ ನೇಮಕಾತಿ ಮೇಳಗಳಲ್ಲಿ ವಿಶೇಷ ಪ್ರವೇಶಾವಕಾಶ ಲಭ್ಯವಾಗಲಿದೆ. ಅಲ್ಲದೆ, ಮಾನ್ ಸ್ಟರ್ ಕಂಪನಿಯ ಜ್ಞಾನ ಸಂಪನ್ಮೂಲಗಳಾದ ವೆಬಿನಾರ್, ಉದ್ಯೋಗ ಸೂಚ್ಯಂಕ ಮತ್ತು ಜ್ಞಾನ ಕೇಂದ್ರಗಳ ನೆರವೂ ದೊರೆಯಲಿದೆ ಅವರು ತಿಳಿಸಿದರು.

ರಾಜ್ಯದಲ್ಲಿ ಸದ್ಯಕ್ಕೆ 11.74 ಲಕ್ಷಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಸೂಕ್ತ ಉದ್ಯೋಗಾವಕಾಶಗಳನ್ನು ಅರಸುತ್ತಿದ್ದು, ನೋಂದಾಯಿಸಿಕೊಂಡಿದ್ದಾರೆ. ಇವರೆಲ್ಲರಿಗೂ ಇನ್ನುಮುಂದೆ ಮಾನ್‌ಸ್ಟರ್ ಕಂಪನಿಯ ವೃತ್ತಿಸಂಬಂಧಿ ಸೇವೆಗಳು ಸಿಗಲಿವೆ. ಈ ಸೇವೆಗಳಲ್ಲಿ ಉದ್ಯೋಗ ಅಂದಾಜು, ಪರೀಕ್ಷೆಗಳು ಮುಂತಾದವು ಲಭ್ಯವಿವೆ ಎಂದು ಸಚಿವರು ನುಡಿದರು.

ಕಂಪನಿಯ ಸಿಇಒ ಶೇಖರ್ ಗರೀಸಾ, ‘ಈ ಒಪ್ಪಂದದಿಂದಾಗಿ ಉದ್ಯೋಗಾಕಾಂಕ್ಷಿಗಳಿಗೆ ಮಾಹಿತಿ ನೀಡುವುದರ ಜತೆಗೆ ಉದ್ಯಮಗಳ ಅಗತ್ಯಕ್ಕೆ ತಕ್ಕಂತೆ ಅವರಿಗೆ ಕೌಶಲಗಳನ್ನು ನೀಡಬಹುದು; ಅಲ್ಲದೆ, ಶಿಕ್ಷಣ ಸಂಸ್ಥೆಗಳನ್ನು ನೇರವಾಗಿ ಉದ್ದಿಮೆಗಳೊಂದಿಗೆ ಬೆಸೆಯಲಾಗುವುದು’ ಎಂದರು.

ರಾಜ್ಯ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ ಉಪಸ್ಥಿತರಿದ್ದರು.

‘ಇಂಟರ್‌ನೆಟ್ ವ್ಯಸನದಿಂದಲೂ ಮನೋರೋಗ’

ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಾ. ರಾಕೇಶ್ ಸರ್ವಾಲ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತಿಯಾದ ಇಂಟರ್‌ನೆಟ್ ಹಾಗೂ ಮೊಬೈಲ್ ಬಳಕೆಯೂ ವ್ಯಸನವಾಗಿ, ಕೆಲವರ ಜೀವಕ್ಕೆ ಮುಳುವಾಗುತ್ತಿದೆ. ನಗರ ಪ್ರದೇಶಗಳಲ್ಲಿ ಮಾನಸಿಕ ಸಮಸ್ಯೆಗಳು ಹೆಚ್ಚಳವಾಗಲು ಈ ವ್ಯಸನವೂ ಕಾರಣ’ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹಾಗೂ ನೀತಿ ಆಯೋಗದ ಹೆಚ್ಚುವರಿ ಕಾರ್ಯದರ್ಶಿ ಡಾ. ರಾಕೇಶ್ ಸರ್ವಾಲ್ ಕಳವಳ ವ್ಯಕ್ತಪಡಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ‘ನಗರಗಳು ಮತ್ತು ಮಾನಸಿಕ ಆರೋಗ್ಯ: ಕೋವಿಡ್ ಪಿಡುಗು ಭಾರತದ ನಗರಗಳಲ್ಲಿ ಅನಾವರಣಗೊಳಿಸಿದ ಮಾನಸಿಕ ಸಂದಿಗ್ಧತೆ’ ವಿಚಾರಸಂಕಿರಣದಲ್ಲಿ ಭಾಗವಹಿಸಿ, ಮಾತನಾಡಿದರು.

‘ಆರ್ಥಿಕ ಸ್ವಾವಲಂಬನೆಗೋಸ್ಕರ ಜನರು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಇದರಿಂದ ನಗರ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿದೆ. 2050ರ ವೇಳೆಗೆ ಪ್ರತಿ ಇಬ್ಬರಲ್ಲಿ ಒಬ್ಬರು ನಗರ ಪ್ರದೇಶದಲ್ಲಿ ವಾಸಿಸುತ್ತಾರೆ ಎಂದು ಸಮೀಕ್ಷೆಗಳು ಹೇಳುತ್ತವೆ. ಕೋವಿಡ್ ಕಾಣಿಸಿಕೊಂಡ ಬಳಿಕ ನಗರ ಪ್ರದೇಶದ ಜನರು ಹೆಚ್ಚಿನ ಪ್ರಮಾಣದಲ್ಲಿ ಹೈರಾಣರಾಗಿದ್ದಾರೆ. ಮಾನಸಿಕ ಅನಾರೋಗ್ಯ ಸಮಸ್ಯೆಗಳೂ ಹೆಚ್ಚಿನವರಲ್ಲಿ ಕಾಣಿಸಿಕೊಂಡಿವೆ. ಕೆಲವರು ಆತ್ಮಹತ್ಯೆಯ ನಿರ್ಧಾರಕ್ಕೆ ಬಂದಿರುವ ಉದಾಹರಣೆಗಳು ಇವೆ’ ಎಂದು ಹೇಳಿದರು.

‘ದೈಹಿಕ ಚಟುವಟಿಕೆಗಳ ಕೊರತೆ, ವಾಯುಮಾಲಿನ್ಯ, ಸಾರಿಗೆ ಸೌಲಭ್ಯದಲ್ಲಿ ವ್ಯತ್ಯಯ, ವಾಹನ ದಟ್ಟಣೆ ಸೇರಿದಂತೆ ವಿವಿಧ ಕಾರಣಗಳಿಂದ ನಗರ ಪ್ರದೇಶಗಳಲ್ಲಿ ಮಾನಸಿಕ ಸಮಸ್ಯೆಗಳು ಹೆಚ್ಚಳವಾಗುತ್ತಿವೆ. ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಿದೆ’ ಎಂದು ತಿಳಿಸಿದರು.

6 ಲಕ್ಷ ಕರೆಗಳು: ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ‘ಕೋವಿಡ್ ಕಾಣಿಸಿಕೊಂಡ ಬಳಿಕ ಮಾನಸಿಕ ಆರೋಗ್ಯದ ಮಹತ್ವ ಹಲವರ ಅರಿವಿಗೆ ಬಂದಿದೆ. ಪ್ರತಿನಿತ್ಯ ಒಂದಲ್ಲ ಒಂದು ಮಾನಸಿಕ ಸಮಸ್ಯೆಗಳು ಜನರನ್ನು ಕಾಡಿವೆ. ಆರ್ಥಿಕ ಸಮಸ್ಯೆ, ಉದ್ಯೋಗ ನಷ್ಟ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಸ್ಥೆಯ ಸಹಾಯವಾಣಿಗೆ 6 ಲಕ್ಷ ಕರೆಗಳು ಬಂದಿವೆ. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯಕ್ಕೂ ಹೆಚ್ಚಿನ ಮಹತ್ವ ನೀಡಬೇಕು’ ಎಂದು ಹೇಳಿದರು.

ಸಂಸ್ಥೆಯ ಸಾಂಕ್ರಾಮಿಕ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಜಿ. ಗುರುರಾಜ್, ‘ನಗರ ಪ್ರದೇಶಗಳಿಗೆ ವಲಸೆ ಬರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ನಗರ ಬೆಳೆದಂತೆ ಮಾನಸಿಕ ಸಮಸ್ಯೆಯೂ ಉಲ್ಬಣವಾಗುತ್ತಿದೆ. ಮೊದಲ ಹಂತದ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ ಪ್ರಕಾರ ಸಾಮಾನ್ಯ ಮಾನಸಿಕ ಅನಾರೋಗ್ಯ ಸಮಸ್ಯೆಗಳು ನಗರಗಳಲ್ಲಿ ಶೇ 8.86 ರಷ್ಟು ಇದ್ದರೇ, ಈ ಪ್ರಮಾಣ ಮಹಾನಗರಗಳಲ್ಲಿ ಶೇ 12.57 ರಷ್ಟು ಇದೆ’ ಎಂದು ತಿಳಿಸಿದರು.

ನಿಮ್ಹಾನ್ಸ್ ಹಮ್ಮಿಕೊಂಡ ವಿಚಾರಸಂಕಿರಣದಲ್ಲಿ ಸಾಂಕ್ರಾಮಿಕ ರೋಗಶಾಸ್ತ್ರದ ಮುಖ್ಯಸ್ಥ ಡಾ.ಬಿ.ಎಸ್ ಪ್ರದೀಪ್, ಡಾ.ಜಿ. ಗುರುರಾಜ್, ಸಂಸ್ಥೆಯ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಸಂಜೀವ್ ಸುಕುಮಾರನ್, ಡಾ. ಪ್ರತಿಮಾ ಮೂರ್ತಿ, ರಿಜಿಸ್ಟ್ರಾರ್ ಡಾ.ಬಿ.ಎಸ್ ಶಂಕರನಾರಾಯಣ ರಾವ್ ಹಾಗೂ ಪ್ರಾಧ್ಯಾಪಕ ವೈ.ಸಿ. ಜನಾರ್ದನ್ ರೆಡ್ಡಿ ಅವರು ಗಿಡಕ್ಕೆ ನೀರುಣಿಸಿದರು ಪ್ರಜಾವಾಣಿ ಚಿತ್ರ

ಅಂಬರ್‌ಗ್ರೀಸ್: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಮಿಂಗಿಲದ ವಾಂತಿ ‘ಅಂಬರ್‌ಗ್ರೀಸ್’ ಕಳ್ಳಸಾಗಣೆ ಪ್ರಕರಣದ ಆರೋಪಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಕೊಯನಾಡು ನಿವಾಸಿ ರಿಯಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಷರತ್ತುಬದ್ಧ ಜಾಮೀನು ನೀಡಿದೆ.

ಖಚಿತ ಮಾಹಿತಿ ಮೇರೆಗೆ ಮೈಸೂರು ಅರಣ್ಯ ಸಂಚಾರ ದಳದ ಅಧಿಕಾರಿಗಳು 2021ರ ಆಗಸ್ಟ್ 5ರಂದು ಕಾರೊಂದನ್ನು ತಡೆದು ಪರಿಶೀಲಿಸಿದ್ದರು. ಅದರಲ್ಲಿದ್ದ ನಾಲ್ವರು ಆರೋಪಿಗಳು 8.25 ಕೆ.ಜಿ. ತೂಕದ ಬೆಲೆಬಾಳುವ ಅಂಬರ್ ಗ್ರೀಸ್ ಕಳ್ಳಸಾಗಣೆ ಮಾಡುತ್ತಿರುವುದು ಪತ್ತೆಯಾಗಿತ್ತು. ಇವರನ್ನು ಬಂಧಿಸಿದ್ದ ಪೊಲೀಸರು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ವಿವಿಧ ಪ್ರಕರಣಗಳಡಿ ಎಫ್‌ಐಆರ್ ದಾಖಲಿಸಿದ್ದರು.

‘ನಾವು ರಿಯಾಜ್ ಪರವಾಗಿ ಅಂಬರ್‌ಗ್ರೀಸ್ ಖರೀದಿಸಿದ್ದೇವೆ’ ಎಂದು ಬಂಧಿತ ಆರೋಪಿಗಳು ತಿಳಿಸಿದ್ದರು. ರಿಯಾಜ್‌ನನ್ನು ಪ್ರಕರಣದಲ್ಲಿ ಮೊದಲ ಆರೋಪಿಯನ್ನಾಗಿ ಮಾಡಲಾಗಿತ್ತು. ಬಂಧನ ಭೀತಿಯಿಂದ ರಿಯಾಜ್ ಹೈಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು.

ಅಂಬರ್‌ಗ್ರೀಸ್ ಎಂದರೇನು?: ಅಂಬರ್‌ಗ್ರೀಸ್ ತಿಮಿಂಗಿಲಗಳ ಜೀರ್ಣಾಂಗದಲ್ಲಿ ಉತ್ಪತ್ತಿಯಾಗುವ ವಸ್ತು. ಇದು ಸ್ಪೆರ್ಮ್ ವೇಲ್ ಪ್ರಭೇದದ ತಿಮಿಂಗಿಲಗಳಿಂದ ಮಾತ್ರ ಹೊರ ಬರುತ್ತದೆ. ಇದು ತಿಮಿಂಗಿಲದ ಹೊಟ್ಟೆಯಲ್ಲಿ ತಿಂಗಳುಗಟ್ಟಲೆ ಸಂಗ್ರಹವಾಗಿದ್ದಾಗ ಹಲವು ರಾಸಾಯನಿಕ ಪ್ರಕ್ರಿಯೆಗಳಿಗೆ ಒಳಗಾಗಿ ಮೇಣದಂಥ ರಚನೆಯಲ್ಲಿ ಪರಿವರ್ತನೆಯಾಗಿರುತ್ತದೆ. ಸುಗಂಧಯುಕ್ತವಾದ ಈ ಅಂಬರ್‌ಗ್ರೀಸ್‌ಗೆ ಪಾಶ್ಚಾತ್ಯ ದೇಶಗಳಲ್ಲಿ ಭಾರಿ ಬೇಡಿಕೆಯಿದೆ.

ಅಬಕಾರಿ ಗಸ್ತು: 198 ಲೀಟರ್ ಮದ್ಯ ಜಪ್ತಿ

ಬೆಂಗಳೂರು: ಅಬಕಾರಿ ಪೊಲೀಸರು ನಗರದ ಮೂರು ಕಡೆ ದಾಳಿ ಮಾಡಿದ್ದು, ಅಕ್ರಮವಾಗಿ ಮಾರಲು ಯತ್ನಿಸುತ್ತಿದ್ದ 198 ಲೀಟರ್ ಮದ್ಯವನ್ನು ಜಪ್ತಿ ಮಾಡಿದ್ದಾರೆ.

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ನಗರದ ಹಲವೆಡೆ ಅಬಕಾರಿ ಪೊಲೀಸರು ಗಸ್ತು ತಿರುಗಿದರು.

‘ಜೆ.ಪಿ. ನಗರ 7ನೇ ಹಂತದ ಆವಲಹಳ್ಳಿ ಮತ್ತು ತಿಪ್ಪಸಂದ್ರಗಳಲ್ಲಿ ಅಕ್ರಮವಗಿ ಮದ್ಯ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಮೂರು ಪ್ರತ್ಯೇಕ ತಂಡಗಳಲ್ಲಿ ದಾಳಿ ನಡೆಸಿ ಇಬ್ಬರು ಮಹಿಳೆಯರು ಸೇರಿ ಮೂವರನ್ನು ಬಂಧಿಸಲಾಗಿದೆ. ಅಕ್ರಮವಾಗಿ ಮದ್ಯ ಸಂಗ್ರಹಿಸಿಟ್ಟುಕೊಂಡು ಆರೋಪಿಗಳು ಮಾರಾಟ ಮಾಡುತ್ತಿದ್ದರಿ’ ಎಂದು ಅಬಕಾರಿ ಪೊಲೀಸ್ ಮೂಲಗಳು ಹೇಳಿವೆ.

'ಉಪವಿಭಾಗ 15ರ ಅಬಕಾರಿ ಉಪ ಅಧೀಕ್ಷಕ ಚಂದ್ರಶೇಖರ್ ಮತ್ತು ಕೋಣನಕುಂಟೆ ವಲಯ ಅಬಕಾರಿ ನಿರೀಕ್ಷಕಿ ಎಂ.ಆರ್. ಶೋಭಾ ನೇತೃತ್ವದಲ್ಲಿ ದಾಳಿ ನಡೆಯಿತು’ ಎಂದೂ ತಿಳಿಸಿವೆ.

ಭದ್ರತಾ ಸಿಬ್ಬಂದಿ ಕೊಲೆ: ಮೂರು ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಭದ್ರತಾ ಸಿಬ್ಬಂದಿ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಯಲಹಂಕ ಉಪನಗರ ಪೊಲೀಸರು, ಮೂರು ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘ನ. 22ರಂದು ಭದ್ರತಾ ಸಿಬ್ಬಂದಿ ಕೊಲೆ ಆಗಿತ್ತು. ಅವರ ಮಗಳ ಸ್ನೇಹಿತನೇ ಕೃತ್ಯ ಎಸಗಿದ್ದು ತನಿಖೆಯಿಂದ ಗೊತ್ತಾಗಿತ್ತು. ಕೊಲೆ ಆರೋಪದಡಿ ಸ್ನೇಹಿತ ಹಾಗೂ ಇತರರ ವಿರುದ್ಧ ಮೊದಲ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಮ್ಮ ಅಪ್ರಾಪ್ತ ಮಗಳ ಮೇಲೆಯೇ ಭದ್ರತಾ ಸಿಬ್ಬಂದಿ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದರು. ಅದರಿಂದ ಬೇಸತ್ತ ಮಗಳು, ಸ್ನೇಹಿತರಿಗೆ ವಿಷಯ ತಿಳಿಸಿದ್ದರು. ಅದೇ ಕಾರಣಕ್ಕೆ ಸಿಟ್ಟಾದ ಸ್ನೇಹಿತರು, ಮನೆಗೆ ನುಗ್ಗಿ ಭದ್ರತಾ ಸಿಬ್ಬಂದಿಯನ್ನು ಕೊಲೆ ಮಾಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಭದ್ರತಾ ಸಿಬ್ಬಂದಿ ವಿರುದ್ಧವೂ ಇದೀಗ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಗರ್ಭಿಣಿಯಾದ ಅಪ್ರಾಪ್ತೆ: ‘ಕೊಲೆಯಾದ ಭದ್ರತಾ ಸಿಬ್ಬಂದಿಯ ಮಗಳ ಆರೋಗ್ಯದಲ್ಲಿ ಏರುಪೇರು ಕಂಡುಬಂದಿತ್ತು. ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದು ತಪಾಸಣೆ ಮಾಡಿಸಲಾಯಿತು. ಆಕೆ, ಗರ್ಭಿಣಿ ಎಂಬುದಾಗಿ ವೈದ್ಯರು ತಿಳಿಸಿದ್ದಾರೆ’ ಎಂದು ಮೂಲಗಳು ಮಾಹಿತಿ ನೀಡಿವೆ.

‘ಬಾಲಕಿ ಮೇಲೆ ಆಕೆಯ ಸ್ನೇಹಿತ ಸಹ ಲೈಂಗಿಕ ದೌರ್ಜನ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ, ಆತನ ವಿರುದ್ಧವೂ ಪೋಕ್ಸೊ ಕಾಯ್ದೆಯಡಿ ಇನ್ನೊಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತನನ್ನು ಈಗಾಗಲೇ ಬಂಧಿಸಲಾಗಿದೆ’ ಎಂದೂ ಮೂಲಗಳು ಹೇಳಿವೆ.

ಬಾಕಿ ಉಳಿದ 4.76 ಲಕ್ಷ ಅರ್ಜಿಗಳು: 2.76 ಲಕ್ಷ ಅರ್ಜಿ ಪರಿಗಣಿಸಲು ಸೂಚನೆ

ಪಡಿತರ ಚೀಟಿಗಾಗಿ ಪರದಾಟ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳು ಮತ್ತೊಮ್ಮೆ ಪರದಾಡುವ ಸ್ಥಿತಿ ಸೃಷ್ಟಿಯಾಗಿದೆ.

ಬಿಪಿಎಲ್ ಚೀಟಿ ಕೋರಿ ಸಲ್ಲಿಕೆಯಾಗಿರುವ 4.76 ಲಕ್ಷ ಅರ್ಜಿಗಳಲ್ಲಿ, 2.76 ಲಕ್ಷ ಅರ್ಜಿಗಳನ್ನು ಮಾತ್ರ ಪರಿಗಣಿಸುವಂತೆ ಸರ್ಕಾರ ಡಿ.3ರಂದು ಆದೇಶ ಹೊರಡಿಸಿದೆ. ಇದರಿಂದಾಗಿ ಪಡಿತರ ಚೀಟಿ ಪಡೆಯುವ ಅವಕಾಶದಿಂದ ವಂಚಿತರಾಗಬೇಕಾಗುತ್ತದೆ ಎನ್ನುವ ಆತಂಕ ಬಡ ಜನರಲ್ಲಿ ವ್ಯಕ್ತವಾಗಿದೆ.

2018ರಿಂದಲೂ ಆದ್ಯತಾ ಪಡಿತರ ಚೀಟಿಗಳಿಗಾಗಿ (ಬಡತನ ರೇಖೆಗಿಂತ ಕೆಳಗಿರುವ- ಬಿಪಿಎಲ್) ಸಲ್ಲಿಸಿರುವ ಈ ಅರ್ಜಿಗಳು ಪರಿಶೀಲನೆಗೆ ಬಾಕಿ ಉಳಿದಿವೆ.

1.55 ಲಕ್ಷ ಕುಟುಂಬಗಳಿಗೆ ಆದ್ಯತೇತರ ಪಡಿತರ ಚೀಟಿ (ಎಪಿಎಲ್) ವಿತರಿಸುವಂತೆಯೂ ಸರ್ಕಾರ ಆಹಾರ ಇಲಾಖೆಗೆ ಸೂಚಿಸಿದೆ.

ಪಡಿತರ ಚೀಟಿಗಾಗಿ ಹೊಸ ಅರ್ಜಿಗಳ ಸ್ವೀಕಾರ ಕಾರ್ಯವೂ ನಿರಂತರವಾಗಿ ನಡೆಯುತ್ತಿದೆ. ಮತ್ತೊಂದೆಡೆ, ಬಾಕಿ ಉಳಿದಿರುವ ಅರ್ಜಿಗಳ ಪರಿಶೀಲನೆ ಮತ್ತು ವಿಲೇವಾರಿ ನಿಧಾನಗತಿಯಲ್ಲಿ ಸಾಗುತ್ತಿದೆ.

ಅರ್ಜಿಗಳ ವಿಲೇವಾರಿಗೆ ಮಿತಿ ಹೇರುವುದು ಸಲ್ಲದು. ಬಾಕಿ ಉಳಿದಿರುವ ಎಲ್ಲ ಅರ್ಜಿಗಳ ಪರಿಶೀಲನೆ ಕೈಗೊಂಡು ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂಬುದು ಅರ್ಜಿ ಸಲ್ಲಿಸಿ ಪಡಿತರ ಚೀಟಿಗಾಗಿ ಕಾಯುತ್ತಿರುವ ಕುಟುಂಬಗಳ ಆಗ್ರಹವಾಗಿದೆ.

'ದಿನಕ್ಕೆ ಒಂದು ಸಾವಿರದಿಂದ ಎರಡು ಸಾವಿರ ಮಂದಿ ಹೊಸದಾಗಿ ಅರ್ಜಿ ಸಲ್ಲಿಸುತ್ತಿದ್ದಾರೆ. ಕೋವಿಡ್ ಮತ್ತು ಚುನಾವಣೆಗಳ ಕಾರಣಕ್ಕೆ ಅರ್ಜಿಗಳ ವಿಲೇವಾರಿ ವಿಳಂಬವಾಗಿದೆ. ವಿಧಾನ ಪರಿಷತ್ ಚುನಾವಣೆಯಿಂದಾಗಿ ಸದ್ಯ ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣೆ ಪ್ರಕ್ರಿಯೆ ಮುಗಿದ ತಕ್ಷಣ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳುತ್ತೇವೆ' ಎಂದು ಆಹಾರ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ ವಿಶೇಷ

'ಅರ್ಜಿಗಳ ಪ್ರಾಥಮಿಕ ಪರಿಶೀಲನೆ ಮಾಡಲಾಗಿದೆ. ಮಾನದಂಡಗಳನ್ನು ಪರಿಶೀಲಿಸಿಯೇ ಅರ್ಹರಿಗೆ ಪಡಿತರ ಚೀಟಿಗಳನ್ನು ನೀಡಲಾಗುವುದು. ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ಸ್ಥಳ ಪರಿಶೀಲನೆಯನ್ನು ಸ್ಥಳೀಯ ಅಧಿಕಾರಿಗಳು ಕೈಗೊಂಡಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಹೆಸರು, ವಿಳಾಸ ಅಥವಾ ಇತರ ಮಾಹಿತಿಯ ಸೇರ್ಪಡೆಗೆ ಅರ್ಜಿ ಸಲ್ಲಿಸುತ್ತಿರುವವರ ಸಂಖ್ಯೆ ಕಡಿಮೆ. ಸೇರ್ಪಡೆ ಅಥವಾ ತಿದ್ದುಪಡಿಯ ಬದಲು ಹೊಸದಾಗಿಯೇ ಅರ್ಜಿ ಸಲ್ಲಿಸುತ್ತಿದ್ದಾರೆ. ಇದರಿಂದಲೂ ಅರ್ಜಿಗಳ ಸಂಖ್ಯೆ ಹೆಚ್ಚಳವಾಗಿದೆ' ಎಂದು ತಿಳಿಸಿದ್ದಾರೆ.

'ವ್ಯವಸ್ಥೆ ಬುಡಮೇಲು ಮಾಡುವ ಹುನ್ನಾರ'

'ರಾಜ್ಯದಲ್ಲಿ 1.45 ಕೋಟಿಗೂ ಹೆಚ್ಚು ಮಂದಿ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ ಹೊಂದಿದ್ದಾರೆ. ಪಡಿತರ ಚೀಟಿ ನೀಡುವುದನ್ನು ವಿಳಂಬ ಮಾಡುವ ಮೂಲಕ ಈ ವ್ಯವಸ್ಥೆಯನ್ನೇ ತೆಗೆದು ಹಾಕುವ ಹುನ್ನಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡುತ್ತಿದೆ' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ್ ಆರೋಪಿಸಿದರು.

'ಕೋವಿಡ್ ಮತ್ತು ಅತಿವೃಷ್ಟಿಯಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೂ, ಸರ್ಕಾರಗಳು ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ' ಎಂದು ಕಿಡಿಕಾರಿದರು.

ವಿಲೇವಾರಿಗೆ ಬಾಕಿ ಇರುವ ಬಿಪಿಎಲ್ ಅರ್ಜಿಗಳು

2020-21	4,00,381
2019-20	61,595
2018	14,462
ಒಟ್ಟು	4,76,438

'ಮತಾಂತರ ನಿಷೇಧ ನಿರ್ದಿಷ್ಟ ಧರ್ಮ ಗುರಿ'

ಶಿವಮೊಗ್ಗ: 'ಒಂದು ನಿರ್ದಿಷ್ಟ ಧರ್ಮವನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುತ್ತಿದ್ದೇವೆ. ಎಷ್ಟೇ ವಿರೋಧ ವ್ಯಕ್ತವಾದರೂ ಕಾಯ್ದೆ ಜಾರಿಯಾಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾವುದೇ ಅಡೆತಡೆ ಇಲ್ಲದೇ ಕಾಯ್ದೆ ಜಾರಿಗೆ ತರಲು ವಿಧಾನಪರಿಶ್‌ನಲ್ಲಿ ಬಿಜೆಪಿಗೆ ಸ್ಪಷ್ಟಬಹುಮತ ಬೇಕಿದೆ. ಈ ಚುನಾವಣೆಯ ಫಲಿತಾಂಶದ ನಂತರ ಬಿಜೆಪಿ ಮೇಲ್ಮನೆಯಲ್ಲೂ ಬಹುಮತ ಪಡೆಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಮತಾಂತರ, ಪ್ರೇಮ ವಿವಾಹಗಳ ನೆಪದಲ್ಲಿ ಕೆಲವು ಧರ್ಮಗಳ ಜನರು ಹಿಂದೂ ಧರ್ಮದ ಅವನತಿಗೆ ಕಾರಣರಾಗುತ್ತಿದ್ದರೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿ ಕಾಂಗ್ರೆಸ್ ನಾಯಕರು ವೋಟಿನ ರಾಜಕಾರಣ ಮಾಡುತ್ತಿದ್ದಾರೆ. ಬಿಜೆಪಿ ಮತಾಂತರ ನಿಷೇಧ ಕಾಯ್ದೆ ಜಾರಿ ಮಾಡಿಯೇ ಮಾಡುತ್ತದೆ. ಆ ಮೂಲಕ ಹಿಂದೂ ಧರ್ಮ ರಕ್ಷಣೆ ಮಾಡಲಿದೆ' ಎಂದರು.

ಮೇಲ್ಮನೆ ಚುನಾವಣೆ: ಒಟ್ಟಾರೆ ಶೇ 99.80ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 20 ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿನ 25 ಕ್ಷೇತ್ರಗಳಿಗೆ ಶುಕ್ರವಾರ ನಡೆದ ಮತದಾನ ಶಾಂತಿಯುತವಾಗಿದ್ದು, ಸುಮಾರು ಶೇ 99.80 ರಷ್ಟು ಮತ ಚಲಾವಣೆಯಾಗಿದೆ.

ಬೆಳಿಗ್ಗೆ 8ಕ್ಕೆ ಮತದಾನ ಆರಂಭಗೊಂಡಿತು. ಮಧ್ಯಾಹ್ನದವರೆಗೆ ಕೆಲವು ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ತೀರಾ ಕಡಿಮೆ ಇತ್ತು. ಮಧ್ಯಾಹ್ನ 2 ಗಂಟೆ ಬಳಿಕ ಮತದಾನ ಬಿರುಸುಗೊಂಡಿತು. ಚಿತ್ರದುರ್ಗದಲ್ಲಿ ಮಧ್ಯಾಹ್ನ 2 ಗಂಟೆಗೆ ಮತದಾನ ಪ್ರಮಾಣ ಶೇ 10 ರಷ್ಟು ಮಾತ್ರ ಆಗಿತ್ತು. ಬಳಿಕ ಎರಡೇ ಗಂಟೆಗಳ ಅವಧಿಯಲ್ಲಿ ಶೇ 88 ರಷ್ಟು ಮತಗಳ ಚಲಾವಣೆ ಆಯಿತು.

ಮತಗಳ ಎಣಿಕೆ ಇದೇ 14 ರಂದು ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಎ.ನಾರಾಯಣ ಸ್ವಾಮಿ, ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ, ಜೆಡಿಎಸ್‌ನ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ ಚಲಾವಣೆ ಮಾಡಿದವರಲ್ಲಿ ಪ್ರಮುಖರು.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ನಾಲೂರು-ಕೊಳಿಗೆ ಗ್ರಾಮ ಪಂಚಾಯಿತಿಗೆ ಮೂರು ವರ್ಷಗಳಿಂದ ಮರಳು ಗಣಿಗಾರಿಕೆಯ ರಾಜಧನ ₹ 2.48 ಕೋಟಿ ನೀಡಿಲ್ಲ ಎಂಬ ಕಾರಣಕ್ಕೆ ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಸೇರಿ ಎಲ್ಲ 7 ಸದಸ್ಯರು ಮತದಾನ ಬಹಿಷ್ಕರಿಸಿದ್ದರು. ಈ ಪೈಕಿ ಆರು ಸದಸ್ಯರು ಕೊನೆಗಳಿಗೆಯಲ್ಲಿ ಮತಚಲಾಯಿಸಿದರು.

ಬೆಳಗಾವಿಯಲ್ಲಿ ಬಿಜೆಪಿ ಅಭ್ಯರ್ಥಿ ಮಹಂತೇಶ ಕವಟಗಿಮಠ ಅವರು ಸಮಯ ನೋಡಿಕೊಂಡು ಮತ ಚಲಾವಣೆ ಮಾಡಿದರೆ, ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ತಮ್ಮ ಪಕ್ಷದ ಕಾರ್ಯಾಧ್ಯಕ್ಷ ಶಾಸಕ ಸತೀಶ ಜಾರಕಿಹೊಳಿ ಅವರ ಕಾಲಿಗೆ ನಮಸ್ಕರಿಸಿದರು. ಮತದಾನದ ವೇಳೆ ಅವರು ತಮ್ಮ ಮೊಬೈಲ್ ಫೋನ್‌ನಲ್ಲಿದ್ದ ತುಮಕೂರಿನ ನೊಣವಿನಕೆರೆಯ ಕಾಡಸಿದ್ಧೇಶ್ವರ ಮಠದ ವೀರಗಂಗಾಧರಯ್ಯ ಸ್ವಾಮೀಜಿ ಫೋಟೊ ಪ್ರದರ್ಶಿಸಿ ಗಮನ ಸೆಳೆದರು.

ಮತದಾನದ ವೇಳೆ ಸಣ್ಣಪುಟ್ಟ ತಾಂತ್ರಿಕ ಗೊಂದಲ ಬಿಟ್ಟರೆ, ಉಳಿದಂತೆ ಶಾಂತವಾಗಿಯೇ ಮತದಾನ ನಡೆಯಿತು.

ಮತದಾನದ ಪ್ರಮಾಣ

ಕ್ಷೇತ್ರ	ಮತದಾನ ಪ್ರಮಾಣ	ಕ್ಷೇತ್ರ	ಮತದಾನ ಪ್ರಮಾಣ
ಬೀದರ್	99.83	ದಕ್ಷಿಣ ಕನ್ನಡ	99.71
ಕಲಬುರಗಿ	99.73	ಚಿಕ್ಕಮಗಳೂರು	99.78
ವಿಜಯಪುರ	99.55	ಹಾಸನ	99.78
ಬೆಳಗಾವಿ	99.98	ತುಮಕೂರು	99.78
ಉತ್ತರ ಕನ್ನಡ	99.76	ಮಂಡ್ಯ	99.85
ಧಾರವಾಡ	99.68	ಬೆಂಗಳೂರು ನಗರ	99.86
ರಾಯಚೂರು	99.86	ಬೆಂಗಳೂರುಗ್ರಾಮಾಂತರ	99.90
ಬಳ್ಳಾರಿ	99.81	ಕೋಲಾರ	99.96
ಚಿತ್ರದುರ್ಗ	99.88	ಕೊಡಗು	99.70
ಶಿವಮೊಗ್ಗ	99.86	ಮೈಸೂರು	99.73

ರಾಜ್ಯದ 19 ಜಿಲ್ಲೆಗಳಲ್ಲಿ ಹೊಸ ಕೊರೊನಾ ಸೋಂಕು ಪ್ರಕರಣ ಪತ್ತೆ

ಕೋವಿಡ್ ಮುಕ್ತ ಜಿಲ್ಲೆಗಳ ಸಂಖ್ಯೆ 3ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮುಕ್ತ ಜಿಲ್ಲೆಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದ್ದು, ಯಾದಗಿರಿ, ಗದಗ ಹಾಗೂ ರಾಯಚೂರಿನಲ್ಲಿ ಸಕ್ರಿಯ ಪ್ರಕರಣಗಳಿಲ್ಲ.

ಬೀದರ್, ಹಾವೇರಿ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ರಾಜ್ಯದಲ್ಲಿ ಶುಕ್ರವಾರ 1.19 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 314 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. 19 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ಸೋಂಕು ದೃಢ ಪ್ರಮಾಣ ಶೇ 0.26ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 179 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ದಕ್ಷಿಣ ಕನ್ನಡ ಹಾಗೂ ಕೊಡಗಿನಲ್ಲಿ ತಲಾ 26, ಚಿಕ್ಕಮಗಳೂರಿನಲ್ಲಿ 19, ಮೈಸೂರಿನಲ್ಲಿ 15 ಪ್ರಕರಣಗಳು ವರದಿಯಾಗಿವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30 ಲಕ್ಷದ ಗಡಿ (29,99,785) ಸಮೀಪಿಸಿದೆ.

ಸೋಂಕಿತರಲ್ಲಿ 339 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.54 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,305ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 5,482 ಸೋಂಕಿತರಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,255ಕ್ಕೆ ಏರಿಕೆಯಾಗಿದೆ.



ಓಮೈಕ್ರಾನ್: ಖಾಸಗಿ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕಿಗೆ ಒಳಗಾದ ಅಂತರರಾಷ್ಟ್ರೀಯ ಪ್ರಯಾಣಿಕರು ಖಾಸಗಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ ಪಡೆದುಕೊಳ್ಳಬಹುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಓಮೈಕ್ರಾನ್ ಪ್ರಕರಣಗಳು ವರದಿಯಾದ ದೇಶಗಳನ್ನು ಅಪಾಯಕಾರಿ ಗುಂಪಿಗೆ ಸೇರಿಸಲಾಗಿದ್ದು, ಈ ದೇಶಗಳಿಂದ ಬರುವ ಪ್ರಯಾಣಿಕರಿಗೆ ವಿಮಾನ ನಿಲ್ದಾಣಗಳಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಓಮೈಕ್ರಾನ್ ಸೋಂಕಿತರು ಹಾಗೂ ಸೋಂಕು ಶಂಕಿತರಿಗೆ ಪ್ರತ್ಯೇಕ ವಾಸಕ್ಕೆ ಬೆಂಗಳೂರಿನ ಬೌರಿಂಗ್ ಹಾಗೂ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯನ್ನು ಮೀಸಲಿಡಲಾಗಿದೆ.

'ಸರ್ಕಾರಿ ವ್ಯವಸ್ಥೆಯಡಿ ಚಿಕಿತ್ಸೆ ಪಡೆಯಲು ಇಚ್ಛಿಸದವರು ತಮ್ಮ ಸ್ವಂತ ಖರ್ಚಿನಲ್ಲಿ ನಿಗದಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು. ಈಗಾಗಲೇ ಹೊರಡಿಸಲಾದ ಮಾರ್ಗಸೂಚಿಯನ್ನು ಚಿಕಿತ್ಸೆ ನೀಡುವ ಖಾಸಗಿ ಆಸ್ಪತ್ರೆಗಳು ಪಾಲಿಸಬೇಕು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ಬೆಂಗಳೂರು ನಗರ ಕ್ಷೇತ್ರ ಪರಿಷತ್ ಚುನಾವಣೆ

ಶೇ 99.86 ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ನಡೆದ ವಿಧಾನ ಪರಿಷತ್ ದ್ವೈವಾರ್ಷಿಕ ಚುನಾವಣೆಯಲ್ಲಿ ಶೇ 99.86 ರಷ್ಟು ಮತದಾನವಾಗಿದೆ.

'86 ಮತಗಟ್ಟೆಗಳಲ್ಲಿ ಮತದಾನ ನಡೆದಿದೆ. ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಶಾಂತಿಯುತವಾಗಿ ಮತದಾನ ನಡೆದಿದೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಜೆ.ಮಂಜುನಾಥ್ ತಿಳಿಸಿದ್ದಾರೆ.

'ಒಟ್ಟು 2,073 ಮತದಾರರಲ್ಲಿ 2,070 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಇದರಲ್ಲಿ 992 ಪುರುಷ ಮತದಾರರು, 1077 ಮಹಿಳಾ ಮತದಾರರು ಹಾಗೂ ಇತರೆ ಒಬ್ಬ ಮತದಾರರು ಮತದಾನ ಮಾಡಿದ್ದಾರೆ' ಎಂದು ತಿಳಿಸಿದ್ದಾರೆ.

ಬೆಳಿಗ್ಗೆ ನೀರಸವಾಗಿ ನಡೆದ ಮತದಾನ ಮಧ್ಯಾಹ್ನದ ವೇಳೆಗೆ ಚುರುಕು ಪಡೆದುಕೊಂಡಿತು. ಸಂಜೆ ವೇಳೆಗೆ ಬಹುತೇಕ ಮತಗಟ್ಟೆಗಳಲ್ಲಿ ಶೇಕಡ 100ರಷ್ಟು ಮತದಾನವಾಗಿದೆ.

ಬೆಳಿಗ್ಗೆ 8 ಗಂಟೆಯಿಂದ ಆರಂಭವಾದ ಮತದಾನ ಸಂಜೆ 4 ಗಂಟೆಯವರೆಗೆ ನಡೆಯಿತು. ಗ್ರಾಮ ಪಂಚಾಯತಿಯ ಹಲವು ಸದಸ್ಯರು ಪರಿಷತ್ ಚುನಾವಣೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡಿದರು.

ಮತಗಟ್ಟೆಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲಾಗಿತ್ತು. ಮತದಾರರನ್ನು ಥರ್ಮಲ್ ಸ್ಕ್ಯಾನಿಂಗ್ ಮೂಲಕ ತಪಾಸಣೆ ನಡೆಸಲಾಗುತ್ತಿತ್ತು.

ನೆಲಮಂಗಲ ತಹಶೀಲ್ದಾರ್ ಮಂಜುನಾಥ್ ಸೋಂಪುರ ಮತ್ತು ತ್ಯಾಮಗೊಂಡ್ಲು ಹೋಬಳಿಯ ಹಲವಾರು ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಂಗ್ರೆಸ್‌ನಿಂದ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಮತ್ತು ಬಿಜೆಪಿಯಿಂದ ಎಚ್.ಎಸ್. ಗೋಪಿನಾಥ್ ಸ್ಪರ್ಧಿಸಿದ್ದಾರೆ.

ಬೆಂಗಳೂರಿನ ಕೆಂಗೇರಿ ಹೋಬಳಿಯ ಸೂಲಿಕೆರೆ ಗ್ರಾಮ ಪಂಚಾಯತಿ ಕಾರ್ಯಾಲಯದ ಮತಗಟ್ಟೆಯಲ್ಲಿ ಶುಕ್ರವಾರ ಮತ ಚಲಾಯಿಸಲು ಬಂದ ಗ್ರಾಮ ಪಂಚಾಯತಿ ಸದಸ್ಯರನ್ನು ಥರ್ಮಲ್ ಸ್ಕ್ಯಾನಿಂಗ್ ಮೂಲಕ ತಪಾಸಣೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಶಾಂತಿಯುತ ಮತದಾನ

ಕೆ.ಆರ್.ಪುರ: ಮಹದೇವಪುರದ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಂತಿಯುತವಾಗಿ ಮತದಾನ ನಡೆದಿದೆ. ಈ ಕ್ಷೇತ್ರದಲ್ಲಿ ಶೇಕಡ 100 ರಷ್ಟು ಮತದಾನವಾಗಿದೆ.

11 ಗ್ರಾಮ ಪಂಚಾಯತಿಯ 262 ಗ್ರಾ.ಪಂ. ಸದಸ್ಯರು ಮತದಾನ ಚಲಾಯಿಸಿದರು.ಹಲವು ಸದಸ್ಯರು ಗುಂಪಾಗಿ ತೆರಳಿ ಮತ ಚಲಾಯಿಸಿದರು. ಬಿದರಹಳ್ಳಿ, ಕಿತ್ತಗನೂರು, ಕಣ್ಣೂರು, ಮಂಡೂರು, ಅವಲಹಳ್ಳಿ, ದೊಡ್ಡಗುಬ್ಬಿ, ಕನ್ನಮಂಗಲ, ಶೀಗೆಹಳ್ಳಿ, ಹಾಲನಾಯಕನಹಳ್ಳಿ, ಕೊಡತಿ, ದೊಡ್ಡ ಬನಹಳ್ಳಿ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಮತದಾನದ ವ್ಯವಸ್ಥೆ ಮಾಡಲಾಗಿತ್ತು.

'ಸ್ವಾಮೀಜಿಗಳ ವಿರೋಧಕ್ಕೆ ಸರ್ಕಾರ ಮಣಿಯದಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 1ರಿಂದ 8ನೇ ತರಗತಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ವಾರದಲ್ಲಿ 3 ದಿನ ಮೊಟ್ಟೆ ಮತ್ತು ಬಾಳೆಹಣ್ಣು ವಿತರಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ಮೊಟ್ಟೆ ವಿತರಿಸುವ ಕ್ರಮಕ್ಕೆ ಕೆಲವು ಮಠಗಳ ಸ್ವಾಮೀಜಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಸರ್ಕಾರ ಮಣಿಯಬಾರದು' ಎಂದು ಭಾರತ ವಿದ್ಯಾರ್ಥಿ ಫೆಡರೇಷನ್‌ನ (ಎಸ್‌ಎಫ್‌ಐ) ರಾಜ್ಯ ಸಮಿತಿ ಒತ್ತಾಯಿಸಿದೆ.

'ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮೀಕ್ಷಾ ವರದಿಯ ಹಿನ್ನೆಲೆಯಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಈ ಕ್ರಮ ಸ್ವಾಗತಾರ್ಹವಾದುದು. ಸ್ವಾಮೀಜಿಗಳು ಧರ್ಮ ಹಾಗೂ ನಂಬಿಕೆಯ ನೆಪ ಮುಂದಿಟ್ಟು ಆದೇಶ ಹಿಂಪಡೆಯುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೇಲೆ ಒತ್ತಡ ಹೇರುತ್ತಿರುವುದು ಸರಿಯಲ್ಲ. ಮೊಟ್ಟೆ ತಿನ್ನುವುದು ಹಾಗೂ ಅದನ್ನು ತಿರಸ್ಕರಿಸುವ ಆಯ್ಕೆ ಮಕ್ಕಳಿಗೆ ಬಿಡಬೇಕು. ಅವರ ಆಹಾರದ ಹಕ್ಕಿನ ಮೇಲೆ ಸ್ವಾಮೀಜಿಗಳು ದಾಳಿ ನಡೆಸುವುದು ಸರಿಯಲ್ಲ. ಅದನ್ನು ನಾವು ಖಂಡಿಸುತ್ತೇವೆ' ಎಂದು ಸಮಿತಿಯ ಅಧ್ಯಕ್ಷ ಅಮರೇಶ ಕಡಗದ ಹೇಳಿದರು.

'ಶ್ರೀಗಳು ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಮುಂದಾಗುವ ಬದಲು ಜಾತಿ, ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಅಶಾಂತಿ ಮೂಡಿಸಲು ಪ್ರಯತ್ನಿಸುತ್ತಿರುವುದು ಸರಿಯಲ್ಲ. ಮೊಟ್ಟೆ ಮತ್ತು ಬಾಳೆಹಣ್ಣು ವಿತರಣೆ ಬಳಿಕ ಶಾಲೆಗಳಲ್ಲಿನ ಮಕ್ಕಳ ಹಾಜರಾತಿಯಲ್ಲಿ ಶೇ 12ರಷ್ಟು ಏರಿಕೆಯಾಗಿದೆ. ಶೇ 80ರಷ್ಟು ಮಕ್ಕಳು ಮೊಟ್ಟೆ ವಿತರಣೆಯ ಪರವಾಗಿದ್ದಾರೆ. ಇದನ್ನು ಸ್ವಾಮೀಜಿಗಳು ಅರ್ಥ ಮಾಡಿಕೊಳ್ಳಲಿ' ಎಂದಿದ್ದಾರೆ.

ರಾಜ್ಯ ಸಮಿತಿ ಉಪಾಧ್ಯಕ್ಷ ದಿಲೀಪ್ ಶೆಟ್ಟಿ, ಪ್ರಜ್ವಲ್, ಭೀಮನಗೌಡ, ಸಂಗಮೇಶ, ಬಸವರಾಜ, ಮಣಿಕಂಠ ಇದ್ದರು.

ಪೇಜಾವರ ಶ್ರೀಗೆ ಮಹದೇವಪ್ಪ ಪ್ರಶ್ನೆ

ಬೆಂಗಳೂರು: 'ಆಹಾರದ ವೈವಿಧ್ಯ ಅರಿಯದೇ ಬಡವರ ಆಹಾರದ ವಿರುದ್ಧ ದಾಳಿ ಮಾಡುವುದೇಕೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಅವರು ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ ಅವರನ್ನು ಪ್ರಶ್ನಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಮಹದೇವಪ್ಪ, 'ವೇದ ಪಂಡಿತರಾದ ಸ್ವಾಮಿಗಳೇ, ವೇದಗಳಲ್ಲಿ ಗೋಮಾಂಸ ಸೇವನೆಯನ್ನು ಶ್ರೇಷ್ಠ ಎಂದಿದ್ದಾರೆ. ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ್ದಾರೆ.

'ಶಾಲೆಗಳಲ್ಲಿ ಮೊಟ್ಟೆ ತಿನ್ನುವರಿಗೆ ಅವನ್ನು ಪ್ರತ್ಯೇಕವಾಗಿ ನೀಡಲಾಗುತ್ತದೆ. ಮೊಟ್ಟೆ ತಿನ್ನದವರಿಗೆ ಹಣ್ಣನ್ನೂ ಪ್ರತ್ಯೇಕವಾಗಿ ನೀಡಲಾಗುತ್ತದೆ. ಬಹುಶಃ ಈ ಸಂಗತಿ ಅರಿಯದ ಸ್ವಾಮೀಜಿಯವರು, ಯಾವುದಾದರೂ ಸರ್ಕಾರಿ ಶಾಲೆಗೆ ಸೇರಿ ಅಲ್ಲಿನ ಆಹಾರ ವಿತರಣೆ ವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳಲಿ' ಎಂದು ಸಲಹೆ ನೀಡಿದ್ದಾರೆ. 'ಆಹಾರದ ವಿಷಯದಲ್ಲಿ ಎಲ್ಲರಿಗೂ ಸ್ವಾತಂತ್ರ್ಯ ಇದೆ. ಸರ್ಕಾರವು ಮೊಟ್ಟೆ ಕೊಡುವ ಬದಲು ನೇರವಾಗಿ ಹಣ ನೀಡಿದರೆ ಯಾರಿಗೆ ಏನು ಬೇಕೋ ಅದನ್ನು ಖರೀದಿಸಿ ತಿನ್ನುತ್ತಾರೆ' ಎಂದು ಶ್ರೀಗಳು ಹೇಳಿದ್ದರು.

'ಮೊಟ್ಟೆ ವಿತರಣೆ: ಪುನರ್ ಪರಿಶೀಲಿಸಿ'

ಮೂಡಿಗೆರೆ: ಶಾಲಾ ಮಕ್ಕಳಿಗೆ ಮೊಟ್ಟೆ ನೀಡುತ್ತಿರುವ ಬಗ್ಗೆ ಅಪಸ್ವರ ಬಂದಿರುವುದು ನ್ಯಾಯಯುತವಾಗಿದೆ. ಮೊಟ್ಟೆ ನೀಡುತ್ತಿರುವ ಬಗ್ಗೆ ರಾಜ್ಯ ಸರ್ಕಾರ ಪುನರ್ ಪರಿಶೀಲಿಸಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೊಟ್ಟೆಯ ಬದಲು ಮಕ್ಕಳ ಪಾಲಕರ ಕೈಗೆ ಹಣ ನೀಡಿದರೆ ಅವರ ಆಹಾರವನ್ನು ಅವರೇ ನಿರ್ಧರಿಸುತ್ತಾರೆ. ಆಹಾರ ಪದ್ಧತಿಯನ್ನು ವಿರೋಧಿಸುವುದು ಕೂಡಾ ಸರಿಯಲ್ಲ' ಎಂದರು.

ಶ್ರೀಗಳು ಎದುರಾದರೆ ಈಗಲೂ ಕಾಲು ಹಿಡಿಯುವೆ: ನಿರಾಣಿ

ಬಾಗಲಕೋಟೆ: 'ಹಿಂದೂ ಸಂಸ್ಕೃತಿಯೊಳಗೆ ಯಾರೇ ಕಾವೀಧಾರಿಗಳು ಬಂದರೆ ಅವರ ಕಾಲು ಹಿಡಿಯುವುದು ನಮ್ಮ ಧರ್ಮ. ಚುನಾವಣೆ ಬಂದಾಗ ಮಾತ್ರ ನಮಿಸುವ ಪ್ರಶ್ನೆ ಬರೊಲ್ಲ. ಈಗಲೂ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎದುರಾದರೆ ಕಾಲು ಮುಟ್ಟಿಯೇ ನಮಿಸುವೆ. ನಮ್ಮನ್ನು ಯಾರು ಎಷ್ಟೇ ವಿರೋಧಿಸಿದರೂ ಏನೂ ಅಪೇಕ್ಷಿಸದೆ ನಮಸ್ಕರಿಸುವೆ' ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ತಿರುಗೇಟು ಹೇಳಿದರು.

'ಸಮಾಜದ ಸಚಿವರು ಚುನಾವಣೆ ಸಮಯದಲ್ಲಿ ಕಾಲು ಹಿಡಿಯುತ್ತಾರೆ' ಎಂಬ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೀಡಿದ್ದ ಹೇಳಿಕೆಗೆ ಬೀಳಗಿಯಲ್ಲಿ ಶುಕ್ರವಾರ ಮಾಧ್ಯಮದವರಿಗೆ ಮುರುಗೇಶ ನಿರಾಣಿ ಪ್ರತಿಕ್ರಿಯಿಸಿದರು.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಗೆ ತರಾಟೆ

ಮಂಗಳೂರು: ನಗರದ ಸರ್ವಿಸ್ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿಗಳನ್ನು ತಡೆದು ನಿಲ್ಲಿಸಿ, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯನ್ನು ತರಾಟೆಗೆ ತೆಗೆದುಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಶಿವಮೊಗ್ಗದ ವಿದ್ಯಾರ್ಥಿ ಮತ್ತು ಉಡುಪಿಯ ವಿದ್ಯಾರ್ಥಿನಿ ನಗರ ಹೊರವಲಯದ ಮಂಗಳೂರಿನ ಖಾಸಗಿ ಕಾಲೇಜೊಂದರ ಓದುತ್ತಿದ್ದಾರೆ. ಇವರು ಉಡುಪಿಗೆ ತೆರಳುವ ಬಸ್‌ನಲ್ಲಿ ಕುಳಿತಿದ್ದರು. ಇದನ್ನು ಕಂಡ ಕೆಲವರು ಬಸ್‌ನೊಳಗೆ ನುಗ್ಗಿದ್ದು, ವಿದ್ಯಾರ್ಥಿನಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ವಿದ್ಯಾರ್ಥಿಯ ಗುರುತಿನ ಚೀಟಿ ಮತ್ತು ವಿಳಾಸವನ್ನು ಕೇಳಿ ಬೆದರಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪೊಲೀಸ್ ಕಮಿಷನರ್ ಶಶಿಕುಮಾರ್, 'ಪ್ರಕರಣದ ಬಗ್ಗೆ ಮತ್ತು ವಿದ್ಯಾರ್ಥಿಗಳು ಎಲ್ಲಿಯವರು ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ತಿಳಿಸಿದ್ದಾರೆ.

ಹಲ್ಲೆ: ನೀರುಮಾರ್ಗ ಸಮೀಪ ಪಡು ಅಂಚೆಕಚೇರಿಯಬಳಿಯಬಿತ್‌ಪಾದೆಬಳಿ ಅಡ್ಯಾರ್ ಪದವಿನ ರಿಯಾಜ್ ಅಹ್ಮದ್ ಮೇಲೆ ಅಪರಿಚಿತ ವ್ಯಕ್ತಿಗಳು ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಕಾರನ್ನು ತಡೆದು ನಿಲ್ಲಿಸಿ ರಿಯಾಜ್‌ರನ್ನು ತರಾಟೆಗೆ ತೆಗೆದುಕೊಂಡಿದ್ದು, ಬಳಿಕ ಆಯುಧಗಳಿಂದ ಹಲ್ಲೆ ನಡೆಸಿದ್ದಾರೆ. ರಿಯಾಜ್ ತಲೆಗೆ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲ್ಲೆಗೆ ಕಾರಣ ತಿಳಿದು ಬಂದಿಲ್ಲ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಪ್ಪ–ಮಕ್ಕಳು ಗುದ್ದಾಡಿಕೊಂಡು ಅವಮಾನ ಮಾಡಿದರು'

ಮೈಸೂರು: 'ಪರಿಷತ್ ಟಿಕೆಟ್ ವಿಚಾರದಲ್ಲಿ ಜೆಡಿಎಸ್‌ನಲ್ಲಿ ಅಪ್ಪ–ಮಕ್ಕಳು ಗುದ್ದಾಡಿಕೊಂಡು ನನಗೆ ಅವಮಾನ ಮಾಡಿದರು. ನಾನೇನು ಜೆಡಿಎಸ್‌ನಿಂದ ಸ್ಪರ್ಧಿಸಬೇಕು ಎಂದಿರಲಿಲ್ಲ. ನಿಂತರೂ ಆ ಪಕ್ಷ ಸೋಲುತ್ತದೆ ಎಂಬುದು ಗೊತ್ತಿತ್ತು' ಎಂದು ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ನಾಮಪತ್ರ ಸಲ್ಲಿಸಲು ಕೊನೆಯ ದಿನದ ಹಿಂದಿನ ರಾತ್ರಿ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ. ರೇವಣ್ಣ ನನಗೆ 'ಬಿ' ಫಾರಂ ಕೊಟ್ಟಿದ್ದರು. ಆದರೆ, ಮೈಸೂರು ಮಹಾರಾಜರ (ಸಾ.ರಾ. ಮಹೇಶ್) ಮಾತು ಕೇಳಿ ಕುಮಾರ ಸ್ವಾಮಿ ನನಗೆ ಟಿಕೆಟ್ ತಪ್ಪಿಸಿದರು' ಎಂದರು.'ಜ.5ರಂದು ಪರಿಷತ್ ಸದಸ್ಯತ್ವ ಮುಗಿಯಲಿದೆ. ಜ.6ರಂದು ಜೆಡಿಎಸ್‌ಗೆ ರಾಜೀನಾಮೆ ನೀಡುತ್ತೇನೆ' ಎಂದರು.

ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ನಿಯೋಗ

ಪರಿಸರ ಸ್ನೇಹಿ ಬಜೆಟ್: ತಜ್ಞರ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸರ್ಗಿಕ ಸಂಪನ್ಮೂಲಗಳ ವ್ಯವಸ್ಥಿತ ಸದುಪಯೋಗದ ಆಶಯ ಹೊಂದಿರುವ ಪರಿಸರ ಸ್ನೇಹಿ ಬಜೆಟ್ ರೂಪಿಸುವಂತೆ ವಿವಿಧ ಕ್ಷೇತ್ರಗಳ ತಜ್ಞರ ನಿಯೋಗವು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿರುವ ನಿಯೋಗವು, ರಾಜ್ಯದ ಸುಸ್ಥಿರ ಅಭಿವೃದ್ಧಿ ಸಾಧಿಸುವ ಉದ್ದೇಶದ ಯೋಜನೆಗಳನ್ನು ಮುಂಬರುವ ಬಜೆಟ್‌ನಲ್ಲಿ ಪ್ರಕಟಿಸಬೇಕು ಎಂದು ಸಲಹೆ ನೀಡಿದೆ.

ವಿವಿಧ ಇಲಾಖೆಗಳ ಮೂಲಕ ಸಾಧಿಸಬೇಕಾದ ಪ್ರಮುಖ ಯೋಜನೆಗಳನ್ನು ನಿಯೋಗವು ಪ್ರಸ್ತಾಪಿಸಿದೆ. ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರು ಈ ತಜ್ಞರ ನಿಯೋಗದ ನೇತೃತ್ವ ವಹಿಸಿದ್ದರು.

ಪರಿಸರ ಅರ್ಥಶಾಸ್ತ್ರಜ್ಞ ಪ್ರೊ. ಬಿ.ಎಂ. ಕುಮಾರಸ್ವಾಮಿ, ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಡಾ. ವಾಮನ ಆಚಾರ್ಯ, ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಡಾ. ವೈ.ಬಿ. ರಾಮಕೃಷ್ಣ, ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ. ಟಿ.ವಿ ರಾಮಚಂದ್ರ, ಸಸ್ಯ ಶಾಸ್ತ್ರಜ್ಞ ಡಾ. ಕೇಶವ ಕೊರ್ಸೆ, ವೃಕ್ಷ ಲಕ್ಷ ಆಂದೋಲನದ ಬಿ.ಎಚ್. ರಾಘವೇಂದ್ರ, ಸಾಗರದ ಸಮುದಾಯ ವಿಜ್ಞಾನ ಕೇಂದ್ರದ ಕೆ. ವೆಂಕಟೇಶ್ ನಿಯೋಗದಲ್ಲಿದ್ದರು.

ಬಜೆಟ್ ಸಿದ್ಧಪಡಿಸುವ ಮುನ್ನವೇ ಈ ವಿಷಯದ ಬಗ್ಗೆ ಚರ್ಚಿಸುವುದಾಗಿ ಮುಖ್ಯಮಂತ್ರಿ ನಿಯೋಗಕ್ಕೆ ಭರವಸೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮನವಿ ಸಲ್ಲಿಸಿದರು.

ನಿಯೋಗದ ಪ್ರಮುಖ ಶಿಫಾರಸುಗಳು

- ಮಲೆನಾಡಿನಲ್ಲಿ ಭೂಕುಸಿತ ನಿಯಂತ್ರಿಸಬೇಕು. ದೇವರಕಾಡು ಹಾಗೂ ಡೀಮ್ಡ್ ಅರಣ್ಯ ಸಂರಕ್ಷಣೆಗೆ ಮತ್ತು ಕರಾವಳಿಯಲ್ಲಿ ಸಮುದ್ರ ಕೊರೆತ ತಪ್ಪಿಸಲು ಹಸಿರು ಕವಚ ನಿರ್ಮಿಸಬೇಕು.
- ಏಕಸಸ್ಯ ನೆಡುತೋಪುಗಳನ್ನು ನಿರ್ಬಂಧಿಸಬೇಕು ಮತ್ತು ಕೆರೆ ಒತ್ತುವರಿ ತಡೆಯಬೇಕು. ಪ್ಲಾಸ್ಟಿಕ್‌ನಿಂದ ಉಂಟಾಗುವ ಮಾಲಿನ್ಯ ತಡೆಗಟ್ಟಬೇಕು ಹಾಗೂ ಈಗಾಗಲೇ ನಿಷೇಧಿಸಿರುವ ಕ್ರಿಮಿನಾಶಕಗಳ ಬಳಕೆಯನ್ನು ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳಬೇಕು.
- ನದಿ ಮೂಲ ರಕ್ಷಣೆಯ ಯೋಜನೆಗಳನ್ನು ಜಾರಿಗೊಳಿಸಬೇಕು. ಜೇನು ಕೃಷಿಗೆ ಪ್ರೋತ್ಸಾಹ ನೀಡಬೇಕು.
- ಗ್ರಾಮ ಅರಣ್ಯ ಸಮಿತಿಗಳನ್ನು ಬಲಪಡಿಸಬೇಕು. ಬಯಲುಸೀಮೆ ಪ್ರದೇಶದಲ್ಲಿ ಅರಣ್ಯ ಪ್ರದೇಶ ಹೆಚ್ಚಿಸಬೇಕು
- ಔಷಧಿ ಮೂಲಿಕಾ ಸಂರಕ್ಷಿತ ಪ್ರದೇಶವನ್ನು ವಿಸ್ತರಿಸಲು ಯೋಜನೆಗಳನ್ನು ರೂಪಿಸಬೇಕು.
- ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆ ರಕ್ಷಿಸಲು ಸೌರಶಕ್ತಿ ಬೇಲಿಗೆ ಸಹಾಯಧನ ನೀಡಬೇಕು. ಕೃಷಿ-ಅರಣ್ಯ ಯೋಜನೆ ವಿಸ್ತರಿಸಬೇಕು. ನಗರಗಳ ತ್ಯಾಜ್ಯ ಬಳಸಿ ಬಯೋಗ್ಯಾಸ್ ಸ್ಥಾವರ ಸ್ಥಾಪಿಸಬೇಕು.

ನಗರದಲ್ಲಿ ಇಂದು

ಕ್ರಿಕೆಟ್ ಪಂದ್ಯ ಉದ್ಘಾಟನೆ: ವಿ. ಸೋಮಣ್ಣ, ಆಯೋಜನೆ: ಅಖಿಲ ಭಾರತ ವೀರಶೈವ ಮಹಾಸಭಾ ಯುವ ಘಟಕ, ಸ್ಥಳ: ಬಿಜಿಎಸ್ ಮೈದಾನ, ವಿಜಯನಗರ, ಬೆಳಿಗ್ಗೆ 9

ನ್ಯಾ.ಎಚ್.ಎನ್. ನಾಗಮೋಹನ್ ದಾಸ್ ಅವರ 'ಮಾನವ ಹಕ್ಕುಗಳು' ಪುಸ್ತಕ ಬಿಡುಗಡೆ: ನ್ಯಾ.ಕೆ. ಚಂದ್ರು, ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಎಸ್. ಶಂಕರಪ್ಪ, ಮಾವಳ್ಳಿ ಶಂಕರ್, ಗೋಪಾಲಕೃಷ್ಣ ಹರಳಹಳ್ಳಿ, ಆಯೋಜನೆ: ಜನ ಪ್ರಕಾಶನ, ಅಖಿಲ ಭಾರತ ವಕೀಲರ ಸಂಘ, ದಲಿತ ಸಂಘರ್ಷ ಸಮಿತಿ, ದಲಿತ ಹಕ್ಕುಗಳ ಸಮಿತಿ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸಾಕ್ಷ್ಯಚಿತ್ರ ಪ್ರದರ್ಶನ: 'ಕ್ಲಿನಿಂಗ್ ದಿ ಕೋರ್ಟ್ ರೂಮ್', ಅಧ್ಯಕ್ಷತೆ: ವಸಂತ್ ಆದಿತ್ಯ, ಅತಿಥಿಗಳು: ಋತುರಾಜ್ ಅವಸ್ತಿ, ಎನ್. ಸಂತೋಷ್ ಹೆಗ್ಡೆ, ಚಂದ್ರು, ರೂಪಾ ಮೌದ್ಗಿಲ್, ಎನ್.ಎಲ್. ರಾಜಾ, ಬಿ.ಟಿ. ವೆಂಕಟೇಶ್, ಸ್ಥಳ ಮತ್ತು ಆಯೋಜನೆ: ಸಂತ ಅಲೋಷಿಯಸ್ ಪದವಿ ಕಾಲೇಜು, ಕಾಕ್ಸ್ ಟೌನ್, ಬೆಳಿಗ್ಗೆ 11

ಪುನರ್ವಸತಿ ಕೇಂದ್ರ ಉದ್ಘಾಟನೆ: ಮುಖ್ಯ ಅತಿಥಿಗಳು: ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ರಾಘವೇಂದ್ರ ರಾಜ್‌ಕುಮಾರ್, ಬಿ.ಎಂ. ಮಹೇಶ್ವರಪ್ಪ, ಆಯೋಜನೆ ಮತ್ತು ಸ್ಥಳ: ಸಕ್ರ ವರ್ಲ್ಡ್ ಆಸ್ಪತ್ರೆ, ಮಾರತಹಳ್ಳಿ, ಬೆಳಿಗ್ಗೆ 11

ರಾಷ್ಟ್ರೀಯ ಕಾರ್ಯಾಗಾರ: 'ನೂತನ ಪಿಂಚಣಿ ಯೋಜನೆ ರದ್ಧತಿ ಮತ್ತು ಹೊರಗುತ್ತಿಗೆ ಉದ್ಯೋಗದ ಕುರಿತು', ಉದ್ಘಾಟನೆ: ಬಸವರಾಜ ಹೊರಟ್ಟಿ, ಅಧ್ಯಕ್ಷತೆ: ಮಹದೇವಯ್ಯ ಮಠಪತಿ, ಆಯೋಜನೆ: ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಸ್ಥಳ: ವೈ.ಎಂ.ಸಿ.ಎ. ಸಭಾಂಗಣ, ನೃಪತುಂಗ ರಸ್ತೆ, ಭಾರತೀಯ ರಿಸರ್ವ್ ಬ್ಯಾಂಕ್ ಹತ್ತಿರ, ಬೆಳಿಗ್ಗೆ 11

70ನೇ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಶಿಪ್ ಸಮಾರೋಪ ಸಮಾರಂಭ: ಮುಖ್ಯ ಅತಿಥಿಗಳು: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಎನ್.ಎ. ಹ್ಯಾರಿಸ್, ಅತಿಥಿಗಳು: ಆರಗ ಜ್ಞಾನೇಂದ್ರ, ಕೆ.ಸಿ. ನಾರಾಯಣಗೌಡ, ರಜನೀಶ್ ಗೋಯೆಲ್, ಶಿವರಾಜ್ ಕುಮಾರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಹಾಕಿ ಕ್ರೀಡಾಂಗಣ, ಶಾಂತಿನಗರ, ಮಧ್ಯಾಹ್ನ 3.30

'ಅನಂತಾಶ್ವಥ' ಗಾಯನಮಹೋತ್ಸವ: ಅತಿಥಿಗಳು: ಶಾಂತಾ ಅನಂತಸ್ವಾಮಿ, ಚಂದ್ರ ಅಶ್ವಥ್, ಯು.ಬಿ. ವೆಂಕಟೇಶ್, ಎಚ್.ಎಸ್. ವೆಂಕಟೇಶಮೂರ್ತಿ, ಲಹರಿ ವೇಲು, ಟಿ.ಎನ್. ಸೀತಾರಾಮ್, ಟಿ.ಎಸ್. ನಾಗಾಭರಣ, ಜಯಶ್ರೀ ಅರವಿಂದ್, ಬಿ.ಆರ್. ಲಕ್ಷ್ಮಣರಾವ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5

ಬಿಪಿನ್ ರಾವತ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ: ಅತಿಥಿಗಳು: ರಾಮ ಮಾಧವ್, ಪ್ರಕಾಶ್ ಬೆಳವಾಡಿ, ಸೇತುರಾಮ್, ಕರ್ನಲ್ ನರಸಿಂಹ, ಮಾಳವಿಕಾ ಅವಿನಾಶ್, ಮದನ್ ಗೋಪಾಲ್, ಆಯೋಜನೆ: ಸಿಟಿಜನ್ಸ್ ಫಾರ್ ಡೆಮಾಕ್ರಸಿ ಬೆಂಗಳೂರು, ಸ್ಥಳ: ಪುರಭವನ ಮುಂಭಾಗ, ಸಂಜೆ 5.30

'ನಾಟ್ಯಶ್ರೀ', 'ಯೋಗಶ್ರೀ' ಮತ್ತು 'ಅಜಿತಶ್ರೀ' ಪ್ರಶಸ್ತಿ ಪ್ರದಾನ ವಾರ್ಷಿಕ ಸಮಾರಂಭ: ಉದ್ಘಾಟನೆ: ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ: ಎಸ್.ಎಂ. ಕೃಷ್ಣ, ಪ್ರಶಸ್ತಿ ಪುರಸ್ಕೃತರು: ಸುಗ್ಗನಹಳ್ಳಿ ಷಡಕ್ಷರಿ, ಎಚ್.ಎನ್. ಮೀರಾ, ಬಿ.ಆರ್. ಜಯರಾಮ್, ವೀಣಾಮೂರ್ತಿ ವಿಜಯ್, ಆರ್.ಎಸ್. ರಮಾಕಾಂತ್, ಕೆ.ವಿ. ನಾಗರಾಜಮೂರ್ತಿ, ಬಿ.ಆರ್. ರಾಮಕೃಷ್ಣ, ಎಚ್.ಕೆ. ನರಸಿಂಹಮೂರ್ತಿ, ವಸುಂಧರಾ ದೊರೆಸ್ವಾಮಿ, ಆಯೋಜನೆ: ಅಜಿತ್ ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಸಂಜೆ 6

ರಂಗಪ್ರವೇಶ: ಜಿ. ಯಾಮಿನಿ, ಅತಿಥಿಗಳು: ಸುಮಾ ನಾಗೇಶ್, ಟಿ.ಎಸ್. ಲತಾ, ಆಯೋಜನೆ: ನಂದಿ ಭರತನಾಟ್ಯ ಕಲಾಶಾಲೆ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 7.45

ಜಿ.ಯಾಮಿನಿ

ನಟರಾಜ್ ಹುಳಿಯಾರ್ ಅವರ 'ಕವಿಜೋಡಿಯ ಆತ್ಮಗೀತ' ಪುಸ್ತಕ ಬಿಡುಗಡೆ: ಅತಿಥಿಗಳು: ಸಿದ್ಧಾರ್ಥ ಮಾಧ್ಯಮಿಕಾ, ಸೌಮ್ಯ ಕೋಡೂರು, ಎಚ್.ಎಲ್. ಪುಷ್ಪಾ, ಆರ್.ಜಿ. ಹಳ್ಳಿ ನಾಗರಾಜ್, ವಿನಯಾ ಒಕ್ಕುಂದ, ಎಂ.ಡಿ. ಒಕ್ಕುಂದ, ಭುವನಾ ಹಿರೇಮಠ, ಮೆಹಬೂಬ್ ಮುಲ್ತಾನಿ, ಆಯೋಜನೆ: ಪಲ್ಲವ, ಸ್ಥಳ: ಎಚ್.ಎನ್. ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 6.

ಜಾಲಪ್ಪ ಆರೋಗ್ಯದಲ್ಲಿ ಏರುಪೇರು

ಪ್ರಜಾವಾಣಿ ವಾರ್ತೆ

ಕೋಲಾರ: ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪ ಅವರ ಆರೋಗ್ಯ ಏರುಪೇರಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

97 ವರ್ಷದ ಜಾಲಪ್ಪ ಅವರು ಶ್ವಾಸಕೋಶ ಸಮಸ್ಯೆ ಹಾಗೂ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದು, 34 ದಿನಗಳಿಂದ ಇಲ್ಲಿಯ ಜಾಲಪ್ಪ ಆಸ್ಪತ್ರೆಯಲ್ಲಿದ್ದಾರೆ. ಫೆಬ್ರುವರಿ ತಿಂಗಳಲ್ಲಿ ಪಾರ್ಶ್ವವಾಯುಗೆ ತುತ್ತಾಗಿದ್ದ ಅವರಿಗೆ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಶಸ್ತ್ರ ಚಿಕಿತ್ಸೆ ನಂತರ ಚೇತರಿಸಿಕೊಂಡಿದ್ದರು.

'ಜಾಲಪ್ಪ ಅವರು ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಗುರುವಾರ ರಾತ್ರಿ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಯಿತು. ಶುಕ್ರವಾರ ಅವರಿಗೆ ಡಯಾಲಿಸಿಸ್ ಮಾಡಲಾಗಿದ್ದು, ಆರೋಗ್ಯದಲ್ಲಿ ಸುಧಾರಣೆಯಾಗಿದೆ' ಎಂದು ಸಂಬಂಧಿ ಜಿ.ಎಚ್.ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಜಾಲಪ್ಪ ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕಪಡುವ ಅಗತ್ಯವಿಲ್ಲ ಎಂದು ವೈದ್ಯರು ಹೇಳಿದ್ದಾರೆ. ಆರೋಗ್ಯ ವಿಚಾರಿಸಲು ಐಸಿಯುಗೆ ಹೋಗಿದ್ದ ಕುಟುಂಬ ಸದಸ್ಯರು ಹಾಗೂ ಸಂಬಂಧಿಕರನ್ನು ಜಾಲಪ್ಪ ಗುರುತು ಹಿಡಿದರು' ಎಂದರು.

ಶಾಸಕ ಕೆ.ಆರ್.ರಮೇಶ್‌ಕುಮಾರ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹಮ್ಮದ್ ಸೇರಿ ಅನೇಕ ಗಣ್ಯರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್

(ಭಾರತ ಸರ್ಕಾರದಿಂದ ಸ್ಥಾಪಿತ ಷೆಡ್ಯೂಲ್ಡ್ ಬ್ಯಾಂಕ್; ಪ್ರವರ್ತಕರು: ಕೆನರಾ ಬ್ಯಾಂಕ್)
ಪ್ರಧಾನ ಕಛೇರಿ, ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ

ಸಾರ್ವಜನಿಕ ಪ್ರಕಟಣೆ

ದಿನಾಂಕ 21.02.2022 ರಿಂದ ಅನ್ವಯವಾಗುವಂತೆ, ಕೆಲವು ಆಡಳಿತಾತ್ಮಕ ಕಾರಣಗಳಿಂದಾಗಿ ಬ್ಯಾಂಕಿನ ಈ ಕೆಳಕಂಡ ಶಾಖೆಗಳನ್ನು ಹತ್ತಿರವಿರುವ ಶಾಖೆಗಳಿಗೆ ವಿಲೀನಗೊಳಿಸಲು ನಿರ್ಧರಿಸಲಾಗಿದೆ.

ಕ್ರ ಸಂ	ಮುಕ್ತಾಯಗೊಳ್ಳುವ ಶಾಖೆ	ಮುಕ್ತಾಯಗೊಳ್ಳುವ ಶಾಖೆಯIFSC	ಜಿಲ್ಲೆ	ವಿಲೀನವಾಗುವ ಶಾಖೆ	ವಿಲೀನವಾಗುವ ಶಾಖೆ IFSC
1	ಬಳ್ಳಾರಿ ಇಂದಿರಾನಗರ, ಶಾಖೆ	PKGB0011193	ಬಳ್ಳಾರಿ	ಎಸ್. ಜಿ ನಗರ ಶಾಖೆ, ಬಳ್ಳಾರಿ	PKGB0010790
2	ಬಳ್ಳಾರಿ ಕಪ್ಪಗಲ್ ರಸ್ತೆ, ಶಾಖೆ	PKGB0010997	ಬಳ್ಳಾರಿ	ಗಾಂಧಿನಗರ ಶಾಖೆ, ಬಳ್ಳಾರಿ	PKGB0010605
3	ತಣ್ಣೀರುಹಳ್ಳ, ಶಾಖೆ	PKGB0012246	ಹಾಸನ	ಚನ್ನಪಟ್ಟಣ ಶಾಖೆ,	PKGB0012225
4	ಕಲಬುರ್ಗಿ ಇಂಡಸ್ಟ್ರೀಯಲ್ ಏರಿಯಾ, ಶಾಖೆ	PKGB0011138	ಕಲಬುರ್ಗಿ	ನೆಹರುಗಂಜ್ ಶಾಖೆ, ಕಲಬುರ್ಗಿ	PKGB0011116
5	ಕಲಬುರ್ಗಿ ಸರಾಫ ಬಜಾರ್, ಶಾಖೆ	PKGB0011173	ಕಲಬುರ್ಗಿ	ಸೂಪರ್ ಮಾರ್ಕೆಟ್ ಶಾಖೆ, ಕಲಬುರ್ಗಿ	PKGB0011001
6	ಕಲಬುರ್ಗಿ ಗೋದುತಾಯಿ ನಗರ, ಶಾಖೆ	PKGB0011159	ಕಲಬುರ್ಗಿ	ಬಿದ್ದಾಪುರ ಕಾಲೋನಿ ಶಾಖೆ, ಕಲಬುರ್ಗಿ	PKGB0011135
7	ಕಲಬುರ್ಗಿ ಹಳೆ ಜೇವರ್ಗಿ ರಸ್ತೆ, ಶಾಖೆ	PKGB0011160	ಕಲಬುರ್ಗಿ	ಕರುಣೇಶ್ವರ ನಗರ ಶಾಖೆ, ಕಲಬುರ್ಗಿ	PKGB0011115
8	ಪ್ರಶಾಂತ್ ನಗರ, ಶಾಖೆ	PKGB0012533	ತುಮಕೂರ	ಹನುಮಂತಪುರ ಶಾಖೆ, ತುಮಕೂರ	PKGB0012363

ಮುಕ್ತಾಯವಾಗುವ ಶಾಖೆಯ ಗ್ರಾಹಕರು ಎಂದಿನಂತೆಯೇ ಎಲ್ಲಾ ತರಹದ ಬ್ಯಾಂಕಿನ ಸೇವೆಗಳನ್ನು ವಿಲೀನವಾಗುವ ಶಾಖೆಗಳಲ್ಲಿ ಮೇಲ್ಕಂಡ ದಿನಾಂಕದ ನಂತರ ಪಡೆಯಬಹುದು. ಬ್ಯಾಂಕಿನ ಸೇವೆಯಲ್ಲಿ ಯಾವುದೇ ತೊಂದರೆಯಾಗುವುದಿಲ್ಲ ಮತ್ತು ಖಾತೆ ಸಂಖ್ಯೆಗಳಲ್ಲಿ ಯಾವುದೇ ಬದಲಾವಣೆ ಯಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತೇವೆ. ತಾಂತ್ರಿಕವಾದ ಅತ್ಯುತ್ತಮ ಸೇವೆಯು ಮುಂದುವರಿಯುವುದೆಂದು ಭರವಸೆ ನೀಡುತ್ತೇವೆ.

ದಿನಾಂಕ: 10.12.2021
ಸ್ಥಳ : ಬಳ್ಳಾರಿ

ಸಹಿ/-
ಮಹಾ ಪ್ರಬಂಧಕರು
ಎಸ್‌ಪಿ ಮತ್ತು ಡಿ ವಿಭಾಗ

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ಫ್ಯಾಕ್ಸ್: 080-23461576 ಇ-ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.26/2021 ದಿನಾಂಕ: 10-12-2021

ಅಧಿಸೂಚನೆ

ಕರ್ನಾಟಕದಲ್ಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಹಾಗೂ ಕರ್ನಾಟಕದ ವಿದ್ಯಾರ್ಥಿಗಳಿಗೆ ಆಯುಷ್ ಕೋರ್ಸುಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ – 2021-22

1. ಸರ್ಕಾರವು ತನ್ನ ಪತ್ರ ಸಂಖ್ಯೆ ಎಂಇಡಿ 173 ಆರ್‌ಜಿಯು 2021 ದಿನಾಂಕ 09-12-2021 ರಲ್ಲಿ 2021ನೇ ಸಾಲಿಗೆ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಅರ್ಜಿಯನ್ನು ಆಹ್ವಾನಿಸಲು ಮತ್ತು ದಾಖಲಾತಿ ಪರಿಶೀಲನೆಯನ್ನು ಪ್ರಾರಂಭಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆದೇಶಿಸಿರುತ್ತದೆ.
2. ಸರ್ಕಾರದ ನಿರ್ದೇಶನದಂತೆ, 2021-22ನೇ ಸಾಲಿಗೆ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕಪಪ್ರಾ) UGNEET-2021 ರಲ್ಲಿ ಅರ್ಹತೆಯನ್ನು ಪಡೆದಿರುವ ಹಾಗು ಅರ್ಹತಾ ಮಾನದಂಡಗಳನ್ನು ಪೂರೈಸುವ ಎಲ್ಲಾ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. UGNEET-2021 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ / ದಂತ ವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಕ್ಕೆ ನೊಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.
3. ಕರ್ನಾಟಕದ ಅಭ್ಯರ್ಥಿಗಳಿಂದ ಸರ್ಕಾರದ ಪಾಲಿನ ಆಯುಷ್ ಸೀಟುಗಳಿಗೂ ಸಹ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ.
4. ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಆದ್ದರಿಂದ UGNEET- 2021 ರಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ (50th Percentile) ಅರ್ಹತೆಯನ್ನು ಪಡೆಯಬಹುದಾಗಿದೆ ಹಾಗು ಪ್ರವೇಶಕ್ಕಾಗಿ ನೊಂದಣಿಯನ್ನು ಮಾಡಿಕೊಳ್ಳಬಹುದಾಗಿದೆ. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
5. UGNEET-2021 ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ಅರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಅಭ್ಯರ್ಥಿಗಳು ವೈದ್ಯಕೀಯ ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ನೊಂದಣಿ ಮಾಡಿಕೊಳ್ಳುವ ಮೊದಲು ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗು ಇತ್ಯಾದಿ ಮಾನದಂಡಗಳನ್ನು ಓದಿಕೊಂಡು ನೊಂದಣಿ ಮಾಡಿಕೊಳ್ಳಲು ಸೂಚಿಸಿದೆ.
6. **ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ದಿನಾಂಕ 13-12-2021 ರ ಮಧ್ಯಾಹ್ನ 2.00 ಗಂಟೆಯಿಂದ 17-12-2021 ರ ರಾತ್ರಿ 11.59 ರ ವರೆಗೆ ಆನ್‌ಲೈನ್ ಮೂಲಕ ನೊಂದಣಿ ಮಾಡಿಕೊಂಡು ಅರ್ಜಿಯಲ್ಲಿನ ವಿವರಗಳನ್ನು ಭರ್ತಿಮಾಡಬಹುದಾಗಿದೆ. ನೊಂದಣಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ 18-12-2021 ಸಂಜೆ. 5.30 ರೊಳಗೆ.**
7. ನೊಂದಣಿ ಶುಲ್ಕ, ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು, ಹಾಗು ಇತರೆ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿಕೊಂಡು ನೊಂದಣಿ ಮಾಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗಬಹುದು.

ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವ ಕರ್ನಾಟಕದ ಅಭ್ಯರ್ಥಿಗಳಿಗೆ ಮಾಹಿತಿ

ಈಗಾಗಲೇ ಯುಜಿಸಿಇಟಿ-2021ಕ್ಕೆ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು, ಯುಜಿನೀಟ್ 2021ರ ರೋಲ್ ನಂಬರ್ ಅನ್ನು ದಿನಾಂಕ 13-12-2021 ರ ಮಧ್ಯಾಹ್ನ 2.00 ಗಂಟೆಯಿಂದ 17-12-2021 ರ ರಾತ್ರಿ 11.59 ರ ವರೆಗೆ ಕೆಇಎ ವೆಬ್‌ಪೋರ್ಟಲ್‌ನಲ್ಲಿ ವೈದ್ಯಕೀಯ / ದಂತವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಾತಿಗಾಗಿ ದಾಖಲಿಸಬೇಕು ಆದರೆ ಮತ್ತೊಮ್ಮೆ ಶುಲ್ಕವನ್ನು ಪಾವತಿಸುವಂತಿಲ್ಲ, ಯುಜಿನೀಟ್ 2021ರ ರೋಲ್ ನಂಬರ್ ದಾಖಲಿಸಿದ ನಂತರ ಅರ್ಜಿ ನಮೂನೆಯ ಮುದ್ರಿತ ಪ್ರತಿ ಪ್ರಿಂಟ್ ತೆಗೆದುಕೊಂಡು ಅರ್ಜಿಯಲ್ಲಿ ಮುದ್ರಿತವಾಗಿರುವ ನೀಟ್ ರೋಲ್ ನಂಬರ್ ಅನ್ನು ಪರಿಶೀಲಿಸಿಕೊಳ್ಳಿ.

- ಯುಜಿಸಿಇಟಿ-2021 ರಲ್ಲಿ ರ‍್ಯಾಂಕ್ ಅನ್ನು ಪಡೆದು ಸಿಇಟಿ-2006ರ ನಿಯಮದಂತೆ ಈಗಾಗಲೇ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿ, ಹೆಚ್ಚುವರಿಯಾಗಿ ಕ್ಲೇಮ್ / ಬದಲಾವಣೆಯನ್ನು ಮಾಡದಿರುವವರು, ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳಿಗೆ ಮತ್ತೊಮ್ಮೆ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ, ಆದರೆ ನಿಗದಿಪಡಿಸುವ ದಿನಾಂಕಗಳಂದು UGNEET-2021 Verification Slip ಅನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು.
- CET-2006 ನಿಯಮಗಳ ಅನ್ವಯ ಒಂದು ವೇಳೆ ಮೀಸಲಾತಿಗೆ ಸಂಬಂಧಿಸಿದ ಬದಲಾವಣೆ ಮಾಡಿಕೊಂಡಲ್ಲಿ ಅಥವಾ Linguistic Minority ಸೀಟುಗಳನ್ನು ಅಥವಾ Religious Minority or NRI Ward ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿರುವ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ ಕೆಇಎ ವೆಬ್ ಪೋರ್ಟಲ್‌ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ, ಕ್ಲೇಮ್ ಮಾಡಿ, ನಂತರ ಕ್ಲೇಮ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕಗಳಂದು ಪರಿಶೀಲನೆಗೆ ಹಾಜರಾಗಬೇಕು.

ಕರ್ನಾಟಕೇತರ ಅಭ್ಯರ್ಥಿಗಳಿಗೆ ಮಾಹಿತಿ

ಕರ್ನಾಟಕೇತರ ಅಭ್ಯರ್ಥಿಗಳು, ಯುಜಿನೀಟ್ 2021 ರಲ್ಲಿ ಅರ್ಹತೆಯನ್ನು ಪಡೆದಿದ್ದರೆ, ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗಾಗಿ, ಅಭ್ಯರ್ಥಿಗಳು ಮೊದಲು ಕೆಇಎ ವೆಬ್‌ಪೋರ್ಟಲ್‌ನಲ್ಲಿ ನೊಂದಣಿ ಮಾಡಿ, ಶುಲ್ಕವನ್ನು ಪಾವತಿಸಬೇಕು. ನಂತರ 12ನೇ ತರಗತಿಯ ಅಂಕಗಳನ್ನು ಕೆಇಎ ಪೋರ್ಟಲ್‌ನಲ್ಲಿ ದಾಖಲಿಸಿ ಅಂಕಪಟ್ಟಿಯನ್ನು upload ಮಾಡಬೇಕು. ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.

ಆದರೆ OCI / PIO / NRI / Foreign Nationals ಅಭ್ಯರ್ಥಿಗಳು, ಕರ್ನಾಟಕೇತರ ಅಭ್ಯರ್ಥಿಗಳು Religious Minority or NRI Ward ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಮಾತ್ರ ನಿಗದಿತ ದಿನಾಂಕಗಳಂದು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.

8. ಸರ್ಕಾರದ ಆದೇಶದ ಸಂಖ್ಯೆ ಆಕುಕ 124 ಆರ್‌ಜಿಯು ಬೆಂಗಳೂರು ದಿನಾಂಕ 28-06-2017 ರಲ್ಲಿ, ಎಲ್ಲಾ ಸರ್ಕಾರಿ, ಖಾಸಗಿ (ಅಲ್ಪ ಸಂಖ್ಯಾತರೂ ಸೇರಿದಂತೆ), ಕಾಲೇಜುಗಳಲ್ಲಿನ ಸರ್ಕಾರಿ, ಖಾಸಗಿ, ಎನ್‌ಆರ್‌ಐ, ಮತ್ತು ಇತರೆ ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲು ನಿರ್ದೇಶಿಸಿದೆ.
9. 2021-22ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ವೈದ್ಯಕೀಯ / ದಂತವೈದ್ಯಕೀಯ ಕಾಲೇಜುಗಳಲ್ಲಿನ ವೈದ್ಯಕೀಯ ದಂತವೈದ್ಯಕೀಯ ಕೋರ್ಸುಗಳು, ಖಾಸಗಿ ಮತ್ತು ಅಲ್ಪ ಸಂಖ್ಯಾತ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟದ ಸೀಟುಗಳು, ಖಾಸಗಿ ವೈದ್ಯಕೀಯ / ದಂತ ವೈದ್ಯಕೀಯ (KPCF, KRLMPCA, AMPCK) ಸೀಟುಗಳಿಗೆ Karnataka Selection of Candidates for Admission to Government Seats in Professional Educational Institutions Rules, 2006 as amended from time to time ಹಾಗು as per the guidelines of MCI / DCI / Ministry of Health and Family Welfare, GOI / Government of India / Director Medical Education, Karnataka / Entrance Test Committee ಅನ್ವಯ KPCF, KRLMPCA, AMPCK ಕಾಲೇಜುಗಳಿಗೆ ಸರ್ಕಾರವು ನಿಗದಿಪಡಿಸುವ ಸೀಟುಗಳಿಗೆ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.
10. UGNEET-2021 ರಲ್ಲಿ ಅರ್ಹತೆಯನ್ನು ಪಡೆದ ಮಾತ್ರಕ್ಕೆ, ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ / ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯು ಯಾವುದೇ ಹಕ್ಕನ್ನು ಹೊಂದುವುದಿಲ್ಲ. ಮುಂದುವರಿದು, ನೊಂದಣಿ ಮಾಡಿಕೊಂಡು ದಾಖಲಾತಿ ಪರೀಶೀಲನೆಯನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳು ಮಾತ್ರ ಕರ್ನಾಟಕದಲ್ಲಿನ ಸರ್ಕಾರಿ / ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.
11. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ಗಮನಿಸಲು ಕೋರಿದೆ.

ಸೂಚನೆ: ನೊಂದಣಿ ಮಾಡದಿರುವ ಅಥವಾ ನೊಂದಣಿ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದೆ ಇರುವ ಅಭ್ಯರ್ಥಿಗಳು ಪ್ರಾಧಿಕಾರದಿಂದಾಗಲೀ ಅಥವಾ ಕಾಲೇಜುಗಳಿಂದಾಗಲೀ ಸೀಟುಗಳನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ, mop-up ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯಬಹುದಾದ ಸೀಟುಗಳನ್ನು ಆಯಾ ಕಾಲೇಜುಗಳಿಗೆ ವರ್ಗಾಯಿಸಲಾಗುತ್ತದೆ. ಈ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು, ಪ್ರಾಧಿಕಾರದಲ್ಲಿ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರೈಸಿದ ಆದರೆ ಯಾವುದೇ ಸೀಟನ್ನು ಹಂಚಿಕೆ ಮಾಡಿಕೊಳ್ಳದೇ ಇರುವ ಪ್ರಾಧಿಕಾರವು ಕಳುಹಿಸುವ UGNEET-2021 ಅಭ್ಯರ್ಥಿಗಳ ಪಟ್ಟಿಯ ಅನುಕ್ರಮದಂತೆ ಕಾಲೇಜುಗಳಲ್ಲಿ ಸೀಟುಗಳನ್ನು ಭರ್ತಿಮಾಡಿಕೊಳ್ಳಲಾಗುತ್ತದೆ. (ಭಾರತ ಸರ್ಕಾರದ ಸೂಚನೆಗಳ ಅನ್ವಯ)

ಸಹಿ/-
(ಎಸ್. ರಮ್ಯ ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ಬೆಂ.ನ./ಜಿಎ/ /2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಾನೇ ದೊಡ್ಡಗೌಡರ ಮನೆ ಬಾಗಿಲನ್ನು ಮುಚ್ಚಿಕೊಂಡು ಬಂದಿದ್ದೇನೆ: ಜಿಟಿಡಿ

'ಮೇಲ್ಮನೆ ಪ್ರತಿನಿಧಿಸಲು ಹಣವಿದ್ದರೆ ಟಿಕೆಟ್'

ಪ್ರಜಾವಾಣಿ ವಾರ್ತೆ

ಮೈಸೂರು: 'ಸ್ಥಳೀಯ ಸಂಸ್ಥೆಗಳಿಂದ ಮೇಲ್ಮನೆಯನ್ನು ಪ್ರತಿನಿಧಿಸಲು ಇರುವ ಅರ್ಹತೆಯನ್ನು ಯಾರೂ ಪರಿಗಣಿಸಲ್ಲ. ತಮ್ಮ ಪಕ್ಷ ಗೆಲ್ಲಬೇಕು, ಅಭ್ಯರ್ಥಿ ಬಳಿ ಹಣ ಇರಬೇಕು ಅಷ್ಟೇ. ದುಡ್ಡಿದ್ರೆ ಟಿಕೆಟ್. ಆತ ಯಾರನ್ನೇ ಸುಲಿಗೆ ಮಾಡಿದ್ದರೂ, ಎಷ್ಟೇ ಮೋಸ ಮಾಡಿದ್ದರೂ ಪರವಾಗಿಲ್ಲ ಎಂಬ ಸ್ಥಿತಿ ಇದೆ' ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ವಿಷಾದಿಸಿದರು.

ಜಿ.ಟಿ. ದೇವೇಗೌಡ

ನಗರದಲ್ಲಿ ಶುಕ್ರವಾರ ಮತ ಚಲಾಯಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಮೇಧಾವಿಗಳು, ಸಂವಿಧಾನ ತಜ್ಞರು, ಯೋಜನೆ ರೂಪಿಸುವವರು, ಆದರ್ಶ ವ್ಯಕ್ತಿಗಳಿಗೆಂದು ವಿಧಾನ ಪರಿಷತ್ ಇದ್ದರೂ ಉದ್ದೇಶ ಮಾತ್ರ ಬುಡಮೇಲಾಗಿದೆ' ಎಂದರು.

'ಜಿ.ಟಿ.ದೇವೇಗೌಡನಿಗೆ ಜೆಡಿಎಸ್ ಬಾಗಿಲು ಬಂದ್ ಆಗಿದೆ ಎಂದು ಯಾರೂ ಹೇಳುವ ಅಗತ್ಯವಿಲ್ಲ. ನಾನೇ ದೊಡ್ಡಗೌಡರ ಮನೆ ಬಾಗಿಲನ್ನು ಮುಚ್ಚಿಕೊಂಡು ಬಂದಿದ್ದೇನೆ' ಎಂದು ಎಚ್.ಡಿ.ಕುಮಾರಸ್ವಾಮಿಯವರಿಗೆ ತಿರುಗೇಟು ನೀಡಿದರು.

'ನನ್ನನ್ನು ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷರನ್ನಾಗಿ ಮಾಡುವುದರಲ್ಲಿ ಕುಮಾರಸ್ವಾಮಿ, ರೇವಣ್ಣ ಹಾಗೂ ಜಿಲ್ಲೆಯ ಶಾಸಕರು ಎಚ್.ಡಿ.ದೇವೇಗೌಡರ ನಿವಾಸಕ್ಕೆ ಕರೆಸಿಕೊಂಡಿದ್ದರು. ಅಲ್ಲಿಗೆ ಹೋದಾಗ ಮೈಸೂರಿನ ನಾಯಕರು ಆಕ್ಷೇಪಿಸಿದರು. ನಾನೇನೂ ಕೇಳಿರಲಿಲ್ಲ. ಸುಮ್ಮನೆ ಕರೆಸಿಕೊಂಡು ಏಕೆ ರೀತಿ ಮಾಡುತ್ತೀರಿ ಎಂದು ಬಾಗಿಲು ಹಾಕಿಕೊಂಡು ಬಂದೆ. ಆ ಬಾಗಿಲನ್ನು ಹಾಗೆಯೇ ಮುಚ್ಚಿದ್ದಾರೋ, ತೆಗೆದಿದ್ದಾರೋ ಗೊತ್ತಿಲ್ಲ. ನಾನಂತೂ ಮತ್ತೆ ಅಲ್ಲಿಗೆ ಹೋಗಿಲ್ಲ' ಎಂದರು.

'ಯಾರಿಗೆ ಮತ ಹಾಕಿದ್ದೇನೆ ಎಂಬುದು ತಮಗೆಲ್ಲಾ ಗೊತ್ತಿದೆ. ಅದನ್ನು ನಾನು ಹೇಳಲಾರೆ. ಎಲ್ಲೂ ಪ್ರಚಾರವನ್ನಾಗಲಿ, ಶಕ್ತಿ ಪ್ರದರ್ಶನವನ್ನಾಗಲಿ ಮಾಡಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಿಕ್ಕಿ ಬಿಕ್ಕಿ ಅತ್ತ ಬಿಜೆಪಿ ಅಭ್ಯರ್ಥಿ

ಮಂಡ್ಯ: ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮತದಾನ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಬಿಜೆಪಿ ಅಭ್ಯರ್ಥಿ ಬೂಕಹಳ್ಳಿ ಮಂಜು ಕಣ್ಣೀರಿಡುತ್ತಾ ನಗರದ ಪತ್ರಿಕಾ ಭವನದತ್ತ ಬಂದರು. ಸುದ್ದಿಗೋಷ್ಠಿ ನಡೆಸಿ 'ಅಪಪ್ರಚಾರ ನಡೆಸುತ್ತಿರುವ ವಿರೋಧಿಗಳು ಮತದಾರರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ' ಎಂದು ಬಿಕ್ಕಿ ಬಿಕ್ಕಿ ಅತ್ತರು.

'ಚುನಾವಣಾ ಕಣದಿಂದ ನಾನು ನಿವೃತ್ತಿಯಾಗುತ್ತಿದ್ದೇನೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಹೊಂದಾಣಿಕೆ ಮಾಡಿಕೊಂಡಿರುವುದಾಗಿ ಗಾಳಿ ಸುದ್ದಿ ಹಬ್ಬಿಸುತ್ತಿದ್ದಾರೆ. ಆದರೆ ನಾನು ನಿವೃತ್ತಿಯಾಗಿಲ್ಲ, ಕಡೇ ಕ್ಷಣದವರೆಗೂ ಹೋರಾಟ ಮಾಡುತ್ತೇನೆ. ಮತದಾರರು ನನ್ನ ಜೊತೆ ನಿಲ್ಲುತ್ತಾರೆ ಎಂಬ ನಂಬಿಕೆ ಇದೆ' ಎಂದರು.

'10 ತಿಂಗಳಿಂದ ಚುನಾವಣೆಗೆ ಸಿದ್ಧತೆ ಮಾಡಿಕೊಂಡಿದ್ದೆ, ಮತದಾರರನ್ನು 5-6 ಬಾರಿ ನೇರವಾಗಿ ಭೇಟಿ ಮಾಡಿದ್ದೆ. ಆದರೆ ಕೆಲವರು ನನ್ನ ಬೆನ್ನಿಗೆ ಚೂರಿ ಹಾಕಿದ್ದಾರೆ, ಯಾರು ಅದನ್ನು ಮಾಡಿದ್ದಾರೆ ಎಂಬುದು ದೇವರಿಗೆ ಗೊತ್ತು, ನನ್ನ ವಿರುದ್ಧ ರಾಜಕೀಯ ಕುತಂತ್ರ ಹೆಣೆಯಲಾಗಿದೆ' ಎಂದರು.

ಅದಕ್ಕೆ ಕೆ.ಆರ್.ಪೇಟೆಯಲ್ಲಿ ಪ್ರತಿಕ್ರಿಯೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡ, 'ನಾವು ಯಾರ ಜೊತೆಯಲ್ಲೂ ಹೊಂದಾಣಿಕೆ ಮಾಡಿಕೊಂಡಿಲ್ಲ. ಮಂಜು ಪರಿಶ್ರಮ ಪಟ್ಟು ಪ್ರಚಾರ ಮಾಡಿದ್ದಾರೆ. ಸಚಿವ ಸಂಪುಟ ಸಹಿತ ಹೋಗಿ ನಾವು ಜಿಲ್ಲೆಯಾದ್ಯಂತ ಪ್ರಚಾರ ಮಾಡಿದ್ದೇವೆ. ಆದರೆ ಬೇರೆ ಪಕ್ಷಗಳ ಅಭ್ಯರ್ಥಿಗಳು ಮತದಾರರಿಗೆ ಆಮಿಷ ಒಡ್ಡಿರುವುದರಿಂದ ಬೇಸರವಾಗಿ ಮಂಜು ಕಣ್ಣೀರು ಹಾಕಿದ್ದಾರೆ ಅಷ್ಟೇ' ಎಂದರು.

ಪ್ರಜಾ ಮತ ಜನತಂತ್ರದ ಹಬ್ಬ 2021

ಮತ ಚಲಾವಣೆ ವೇಳೆ ಬಿಎಸ್‌ವೈ ಎಡವಟ್ಟು?



ಶಿವಮೊಗ್ಗ: ಶಿಕಾರಿಪುರ ಪುರಸಭೆಯ ಮತಗಟ್ಟೆಯಲ್ಲಿ ಮತ ಚಲಾಯಿಸುವಾಗ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ಎಡವಟ್ಟು ಮಾಡಿಕೊಂಡಿದ್ದಾರೆ ಎಂಬ ವದಂತಿ ಮತದಾನದ ನಂತರ ಹರದಾಡಿತು.

ವಿಧಾನಪರಿಷತ್ ಚುನಾವಣೆಯಲ್ಲಿ ಮತ ಚಲಾಯಿಸಿದ ನಂತರ ಬೇಸರದ ಮುಖದಲ್ಲಿ ಹೊರಬಂದ ಅವರು ಮತಗಟ್ಟೆ ಅಧಿಕಾರಿಗಳ ಬಳಿ ತಪ್ಪಾಗಿದ್ದರೆ ಬ್ಯಾಲೆಟ್ ಪೇಪರ್ ಬೇರೆ ಕೊಡುತ್ತೀರಾ ಎಂದು ಪ್ರಶ್ನಿಸುತ್ತಿರುವ ವಿಡಿಯೊ ಹರಿದಾಡಿದೆ. 'ಮತ ಚಲಾಯಿಸುವಾಗ ಯಡಿಯೂರಪ್ಪ ಅವರು ತಮ್ಮ ಪಕ್ಷದ ಅಭ್ಯರ್ಥಿ ಡಿ.ಎಸ್. ಅರುಣ್ ಬದಲು ಬೇರೆ ಅಭ್ಯರ್ಥಿಗೆ ಮತ ಚಲಾಯಿಸಿದ್ದಾರಾ ಅಥವಾ ತಪ್ಪು ಪ್ರಾಶಸ್ತ್ಯದ ಅಂಕಿ ನಮೂದಿಸಿ ಬಿಟ್ಟಿದ್ದಾರಾ?' ಎಂಬ ಚರ್ಚೆಗಳು ನಡೆಯುತ್ತಿವೆ. ಈ ಕುರಿತು ಪ್ರತಿಕ್ರಿಯೆಗಾಗಿ ಬಿಎಸ್‌ವೈಗೆ ಕರೆ ಮಾಡಿದಾಗ, ಅವರು ಉತ್ತರಿಸಲಿಲ್ಲ.

'ಗ್ರಾಮಾಂತರದಲ್ಲೂ ಕಾಂಗ್ರೆಸ್ ಧೂಳೀಪಟ'

ಶಿವಮೊಗ್ಗ: 'ವಿಧಾನಪರಿಷತ್ ಚುನಾವಣಾ ಫಲಿತಾಂಶದ ನಂತರ ಗ್ರಾಮೀಣ ಪ್ರದೇಶಗಳಲ್ಲೂ ಕಾಂಗ್ರೆಸ್ ಹೇಗೆ ಧೂಳೀಪಟವಾಗಿದೆ ಎನ್ನುವುದು ಜಾಹೀರವಾಗಲಿದೆ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಶಿಕಾರಿಪುರದಲ್ಲಿ ಹೇಳಿದರು.

'ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ. ಬಿಜೆಪಿ ಅಲೆಗೆ ಕಾಂಗ್ರೆಸ್ ಕೊಚ್ಚಿಹೋಗಲಿದೆ. 'ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ. ಬಿಜೆಪಿ ಅಲೆಗೆ ಕಾಂಗ್ರೆಸ್ ಕೊಚ್ಚಿಹೋಗಲಿದೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಈ ಫಲಿತಾಂಶ ದಿಕ್ಸೂಚಿಯಾಗಲಿದೆ.

KARNATAKA GRAMIN BANK
Head Office: Ballari

TENDER NOTICE

Karnataka Gramin Bank, Head Office, Ballari hereby invites sealed tenders from the dealers/ suppliers for supply of various office Stationery items. The interested dealers/suppliers may contact the following address immediately and collect the Tender forms. They may also download the Tender form from our website: **www.karnatakagraminbank.com.**

The last date for submission of duly filled-in and sealed tenders is 29-12-2021, 5.30 P.M.

The Chief Manager, G.A Wing, Premises & Stock Section,
KARNATAKA GRAMIN BANK, HEAD OFFICE, No-32, Sanganakal Road, Gandhinagar, Ballari-583103. **Ph: 08392-236461, 236418.**

For details of Tender visit our website: **www.karnatakagraminbank.com**

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268 E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ-: ವಿವಿಧ ಲೆಕ್ಕ ಶೀರ್ಷಿಕೆ :2021-22-3842 ದಿನಾಂಕ:10/12/2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿಯ ಒಟ್ಟು 1490.00 ಲಕ್ಷ ಮೊತ್ತದಲ್ಲಿ ಒಟ್ಟು 23 ಕಾಮಗಾರಿಗೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ (E - Procurement) ಸ್ಟಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ- 1, 2, 3 ಮತ್ತು 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http:// www.eproc. Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

ವರ್ಕ ಇಂಡೆಂಟ್ ನಂ ಈ ಕೆಳಗಿನಂತಿವೆ:-
142949, 143312, 143115, 143116, 143117, 142706, 143361, 142842, 142840, 143172, 143324, 143325,143326, 142788, 142835, 142841, 142828, 142708, 142838, 142848, 143530, 142865, 142844 ಒಟ್ಟು 23 ಕಾಮಗಾರಿಗಳ ಪೈಕಿ 09 ಕಾಮಗಾರಿಗಳು ಸಾಮಾನ್ಯ ವರ್ಗದವರಿಗೆ, 09 ಕಾಮಗಾರಿಗಳು ಪರಿಶಿಷ್ಟ ಜಾತಿ ಹಾಗೂ 05 ಕಾಮಗಾರಿಗಳು ಪರಿಶಿಷ್ಟ ಪಂಗಡದವರಿಗೆ ಮಿಸಲಿರಿಸಲಾಗಿದೆ.

ಮೇಲಿನ ಕಾಮಗಾರಿಗೆ ಟೆಂಡರ ವಿವರ ಪಶ್ನೋತ್ತರ ದಿನಾಂಕಃ- 17-12-2021, ಟೆಂಡರ್ ಸಲ್ಲಿಸುವ ದಿನಾಂಕಃ- 20-12-2021 ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕಃ- 21-12-2021 ಆರ್ಥಿಕ ಬಿಡ್ ತೆರೆಯುವ ದಿನಾಂಕಃ- 22-12-2021 .

GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for dela

ಸಹಿ/- ಕಾರ್ಯಪಾಲಕ ಅಭಿಯಂತರರು,
ವಾ.ಸಾ.ಇ/ಗದಗ/376/2021-22/ದೇಶಪಾಂಡೆಪಬ್ಲಿಸಿಟಿ ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ದೂರವಾಣಿ ಸಂ:08338/ 273859 ಇ-ಮೇಲ್:eepwdckd@gmail.com
ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ-2/ಟೆಂಡರ್/2021-22/4498 ದಿನಾಂಕ:09/12/2021

ಅವಧಿ ವಿಸ್ತರಣೆ ಇ-ಅಲ್ಪಾವಧಿ ಟೆಂಡರ ಪ್ರಕಟಣೆ-1

ಈ ಕಚೇರಿ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ-2/ಟೆಂಡರ್/2021-22/4420 ದಿನಾಂಕ: 06/12/2021 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 13-12-2021 ರಂದು (11.00 ಗಂಟೆಗೆ) 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 15-12-2021 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 17-12-2021 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 20-12-2021 (ಸಾಯಂಕಾಲ 4.30 ಗಂಟೆಗೆ) 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1056/MCA/2021-22

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ (ಸಂಚಾರ ಇಲಾಖೆ)
ಸಂಖ್ಯೆ:ವಾಕರಸಾ/ಕೇಂಕ/ಹು/ಸಂ/ವಾ-2/2646 ದಿನಾಂಕ : 10-12-2021

ಮ್ಯಾನ್ಯುಯಲ್ ಸಂಧಾನ ಪ್ರಕಟಣೆ ಸಂಖ್ಯೆ : 01/2021

ವಾಕರಸಾ ಸಂಸ್ಥೆಯ ವ್ಯಾಪ್ತಿಯಲ್ಲಿನ ಸಾಮಾನ್ಯ, ವೇಗದೂತ ಹಾಗೂ ನಗರ-ಉಪನಗರ ಸಾರಿಗೆ ವಾಹನಗಳು ಸೇರಿದಂತೆ ಒಟ್ಟು 2000 ಬಸ್ಸುಗಳ ಒಳ ಮತ್ತು ಹೊರ ಭಾಗದಲ್ಲಿ ಜಾಹೀರಾತು ಅಳವಡಿಸಲು 5 ವರ್ಷಗಳ ಅವಧಿಗೆ ಮ್ಯಾನ್ಯುವಲ್ ಸಂಧಾನವನ್ನು ಆಹ್ವಾನಿಸಲಾಗಿದೆ.
(1) ಪ್ರತಿ ಬಸ್ಸಿಗೆ ನಿಗದಿತ ಮಿತವ್ಯಯ ಮಾಸಿಕ ಪರವಾನಗಿ ಶುಲ್ಕ ರೂ. **1,736/-**
(2) ಎರಡನೇ ವರ್ಷದಿಂದ ಮಾಸಿಕ ಪರವಾನಗಿ ಶುಲ್ಕ ಶೇ. 10 ರಷ್ಟು ಹೆಚ್ಚಳವಿರುತ್ತದೆ.
(3) ಇ.ಎಂ.ಡಿ. ಮೊತ್ತ ರೂ. **10,00,500/-** ಗಳನ್ನು ಡಿ.ಡಿ. ಮುಖಾಂತರ CAO-FA, NWKRTC, HUBBALLI-30 ರವರ ಹೆಸರಿಗೆ ಪಾವತಿಯಾಗುವಂತೆ ಸಲ್ಲಿಸುವುದು.
(4) ಅರ್ಜಿ ಶುಲ್ಕ ರೂ. **5,000/-** (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ) ಡಿ.ಡಿ. ಮುಖಾಂತರ CAO-FA, NWKRTC, HUBBALLI-30 ರವರ ಹೆಸರಿಗೆ ಪಾವತಿಯಾಗುವಂತೆ ಸಲ್ಲಿಸುವುದು. (5) ನಿಗದಿತ ದಿನಾಂಕ ಮತ್ತು ಸಮಯ:

ವಿಷಯ	ದಿನಾಂಕ	ಸಮಯ
ಸಂಧಾನ ಅರ್ಜಿಗಳನ್ನು ವಿತರಿಸಲು ಪ್ರಾರಂಭಿಸುವ ದಿನಾಂಕ	13-12-2021	11:00
ಸಂಧಾನ ಅರ್ಜಿಗಳನ್ನು ವಿತರಿಸುವ ಕೊನೆಯ ದಿನಾಂಕ	21-12-2021	17:00
ತಾಂತ್ರಿಕ ದಾಖಲಾತಿಗಳನ್ನು ಹಾಗೂ ಆರ್ಥಿಕ ಪ್ರಸ್ತಾವನೆಯ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ ಮತ್ತು ವೇಳೆ	23-12-2021	11:00
ಅದೇ ದಿನ ಸಂಧಾನ ಪ್ರಕ್ರಿಯೆ ನಡೆಸಲಾಗುವ ವೇಳೆ ಮತ್ತು ದಿನಾಂಕ	23-12-2021	12:00

(6) ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಆಸಕ್ತದಾರರೊಂದಿಗೆ ಸಂಧಾನ ಪ್ರಕ್ರಿಯೆ ನಡೆಸಲಾಗುವುದು. (7) ಸಂಧಾನಕ್ಕೆ ಸಂಬಂಧಿತ ದಾಖಲಾತಿಗಳು, ಸಂಧಾನದ ಅರ್ಜಿ, ಷರತ್ತು & ನಿಬಂಧನೆಗಳು ಮತ್ತು ಇತರೆ ದಾಖಲಾತಿಗಳನ್ನು ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿರವರ ಕಛೇರಿಯ ವೇಳೆಯಲ್ಲಿ ಅಂದರೆ, ಬೆಳಿಗ್ಗೆ 11.00 ಗಂಟೆಯಿಂದ 17.30 ಗಂಟೆಯವರೆಗೆ ಪಡೆಯಬಹುದಾಗಿರುತ್ತದೆ. (8) ಯಾವುದೇ ಕಾರಣ ನೀಡದೆ ಎಲ್ಲಾ ಸಂಧಾನವನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. (9) ಹೆಚ್ಚಿನ ಮಾಹಿತಿಗಾಗಿ ಮುಖ್ಯ ಸಂಚಾರ ವ್ಯವಸ್ಥಾಪಕರು - **7760991504,** ಉಪ ಮುಖ್ಯ ಸಂಚಾರ ವ್ಯವಸ್ಥಾಪಕರು -**9606041069,** ಸ.ಸಂ.ಅ. - **9686145044** ನ್ನು ಸಂಪರ್ಕಿಸಿ.

ಸಹಿ/- ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಹುಬ್ಬಳ್ಳಿ.

ಮೈಸೂರು–ಚಾಮರಾಜನಗರ: ಮಹಿಳಾ ಸದಸ್ಯರೇ ಮುಂದು!

ಪ್ರಜಾವಾಣಿ ವಾರ್ತೆ

ಮೈಸೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರಕ್ಕೆ ಶುಕ್ರವಾರ ಯಶಸ್ವಿಯಾಗಿ ಮತದಾನ ನಡೆದಿದ್ದು, ಅವಳಿ ಜಿಲ್ಲೆಯ 13 ತಾಲ್ಲೂಕುಗಳ ಪೈಕಿ 11ರಲ್ಲಿ ಶೇ 100ರಷ್ಟು ಮಹಿಳಾ ಮತದಾರರು ಮತದಾನ ಮಾಡಿದ್ದಾರೆ.

ಕೆ.ಆರ್.ನಗರ ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ ತಲಾ ಒಬ್ಬರು ಮಾತ್ರ ಹಕ್ಕು ಚಲಾಯಿಸಿಲ್ಲ. ಒಟ್ಟು 3,526 ಮಹಿಳಾ ಸದಸ್ಯರ ಪೈಕಿ 3,524 ಮಂದಿ ಮತ ಹಾಕಿದ್ದು, ಶೇ 99.94ರಷ್ಟು ಮತದಾನವಾಗಿದೆ. ಕ್ಷೇತ್ರದಲ್ಲಿದ್ದ ಒಬ್ಬ ತೃತೀಯ ಲಿಂಗಿ ಸದಸ್ಯರು ಹಕ್ಕು ಚಲಾಯಿಸಿದ್ದಾರೆ.

ಅವಳಿ ಜಿಲ್ಲೆಯ ಈ ಕ್ಷೇತ್ರದಲ್ಲಿ ಒಟ್ಟು ಶೇ 99.73ರಷ್ಟು ಮತದಾನವಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	6,444	6,233
ಹಾರಂಗಿ	2,859	2,854.94	64	900
ಕಬಿನಿ	2,284	2,283.70	1,370	700
ಹೇಮಾವತಿ	2,922	2,913.48	1,934	2,820
ಲಿಂಗನಮಕ್ಕಿ	1,819	1,811.30	1574	-
ಸೂಪಾ (ಮೀ)	564	554.30	326	4,171
ಮಾಣಿ	594.36	586.28	300	-
ತುಂಗಭದ್ರಾ	1,633	1,632.99	4,716	4,596
ಮಲಪ್ರಭಾ	2,079.50	2,077.35	232	1,019
ಘಟಪ್ರಭಾ	2,175	2,166.16	172	172
ಭದ್ರಾ	186	186	1057	1057
ಆಲಮಟ್ಟಿ (ಮೀ)	519.60	519.29	5,094	1,132
ನಾರಾಯಣಪುರ (ಮೀ)	492.25	491.94	676	7469

* ನೆಲಮಟ್ಟದಿಂದ

'ನಿರೀಕ್ಷೆಗಿಂತ ಹೆಚ್ಚು ಸ್ಥಾನ'

ಪ್ರಜಾವಾಣಿ ವಾರ್ತೆ

ರಾಮನಗರ: 'ಈ ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಒಗ್ಗಟ್ಟು ಪ್ರದರ್ಶಿಸಿದೆ. ನಾವು ನಿರೀಕ್ಷೆ ಮಾಡಿದ್ದಕ್ಕಿಂಥ ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕನಕಪುರದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು 'ಕಾಂಗ್ರೆಸ್ ಕಳೆದ ಬಾರಿಗಿಂತ ಹೆಚ್ಚು ಸ್ಥಾನ ಗೆಲ್ಲುತ್ತದೆ. ಸರ್ಕಾರದ ಯಂತ್ರ ದುರುಪಯೋಗ ಆಗಿರೋದರಿಂದ ಒಂದೆರಡು ಕಡೆ ಹೆಚ್ಚು-ಕಮ್ಮಿ ಆಗಬಹುದು' ಎಂದು ಶಂಕೆ ವ್ಯಕ್ತಪಡಿಸಿದರು.

'ಯಡಿಯೂರಪ್ಪ ಹತಾಶರಾಗಿ ಜೆಡಿಎಸ್ ಬೆಂಬಲ ಯಾಚಿಸುತ್ತಿದ್ದಾರೆ. ಬಿಜೆಪಿ ರಾಜ್ಯದಲ್ಲಿ ತನ್ನ ಶಕ್ತಿ ಕಳೆದುಕೊಂಡಿರುವುದಕ್ಕೆ ಇದು ಸಾಕ್ಷಿ. ಮಾಡಿದರು.

'ಯಡಿಯೂರಪ್ಪ ಕಾಂಗ್ರೆಸ್ ಧೂಳೀಪಟ ಮಾಡುತ್ತೇವೆ, 15 ವರ್ಷ ವಿರೋಧ ಪಕ್ಷದಲ್ಲೇ ಕೂರಿಸುತ್ತೇವೆ ಎಂದೆಲ್ಲ ಹೇಳಿದ್ದಾರೆ. ಈಗ ಅವರೇ ಜೆಡಿಎಸ್ ಬೆಂಬಲ ಕೇಳಿದ್ದಾರೆ'ಎಂದು ಅಬವರು ಲೇವಡಿ ಮಾಡಿದರು.

'ಸ್ಪರ್ಧಿಸಿದಲ್ಲೆಲ್ಲ ಜಯ'

ಬೆಳಗಾವಿ: 'ವಿಧಾನಪರಿಷತ್ ಚುನಾವಣೆಯಲ್ಲಿ ಎಲ್ಲೆಲ್ಲಿ ಸ್ಪರ್ಧಿಸಿದ್ದೀವೆಯೋ ಅಲ್ಲೆಲ್ಲವೂ ನಾವು ಗೆಲ್ಲುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಹಾವೇರಿಯಿಂದ ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯದಲ್ಲಿ ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ನಮ್ಮವರು ಕೊಟ್ಟಿರುವ ವರದಿಯ ಪ್ರಕಾರ ಎಲ್ಲ ಕಡೆಯೂ ನಮ್ಮ ಪರವಾಗಿ ಉತ್ತಮ ವಾತಾವರಣ ಇದೆ' ಎಂದು ತಿಳಿಸಿದರು.

'ಆರೂ ಕ್ಷೇತ್ರಗಳಲ್ಲಿ ಗೆಲುವು'

ರಾಮನಗರ: 'ಕೆಲವರು ಜೆಡಿಎಸ್ ಎಲ್ಲಿದೆ ಎಂದು ಲಘುವಾಗಿ ಮಾತನಾಡಿದ್ದಾರೆ. ಈ ಬಾರಿ ಪರಿಷತ್ ಚುನಾವಣೆಯಲ್ಲಿ ನಾವು ಸ್ಪರ್ಧಿಸಿರುವ ಆರೂ ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಅಂತಹವರಿಗೆ ತಿರುಗೇಟು ನೀಡುತ್ತೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಶುಕ್ರವಾರ ಮತ ಚಲಾವಣೆ ಮಾಡಿದ ಬಳಿಕ ಮಾತನಾಡಿದ ಅವರು, 'ಯಾರು ಶಕ್ತಿವಂತರು, ಯಾರ ಶಕ್ತಿ ಎಷ್ಟಿದೆ ಎಂದು ಸದ್ಯದಲ್ಲೇ ಗೊತ್ತಾಗುತ್ತದೆ. ಸಾರ್ವತ್ರಿಕ ಚುನಾವಣೆಗೆ ಇನ್ನೂ ಒಂದು ವರ್ಷ ಇದೆ. ಅಷ್ಟರಲ್ಲಿ ಏನು ಬೇಕಾದರೂ ಬದಲಾವಣೆ ಆಗಬಹುದು' ಎಂದರು.

'ದೇವೇಗೌಡರಾಗಲಿ, ನಾನಾಗಲಿ ನಮ್ಮನ್ನು ಪ್ರಧಾನಿ ಇಲ್ಲವೇ ಮುಖ್ಯಮಂತ್ರಿ ಮಾಡಿ ಎಂದು ಕಾಂಗ್ರೆಸ್ ಬಳಿ ಅರ್ಜಿ ಹಿಡಿದುಕೊಂಡು ಹೋಗಿರಲಿಲ್ಲ. ನಮಗೆ ಬೆಂಬಲ ಕೊಟ್ಟಂತೆ ಮಾಡಿ ಕುತ್ತಿಗೆ ಕುಯ್ಯುವುದೇ ಇವರ ಕೆಲಸ' ಎಂದು ಅವರು ದೂರಿದರು.

10ನೇ ತರಗತಿ ವಿದ್ಯಾರ್ಥಿಗಳಿಂದ ಕೃತ್ಯ: ವಿಡಿಯೊ ಮಾಡಿ ಪುಂಡಾಟಿಕೆ

ಶಿಕ್ಷಕನ ಮೇಲೆ ಕಸದ ಬುಟ್ಟಿ ಹಾಕಿದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಚನ್ನಗಿರಿ: ತಾಲ್ಲೂಕಿನ ನಲ್ಲೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಐವರು ವಿದ್ಯಾರ್ಥಿಗಳು ತಮಗೆ ಬುದ್ಧಿವಾದ ಹೇಳಿದ ಶಾಲೆಯ ಹಿಂದಿ ಶಿಕ್ಷಕನ ತಲೆಗೆ ಕಸದ ಬುಟ್ಟಿಯನ್ನು ಹಾಕಿ, ಪ್ಯಾಂಟ್ ಎಳೆದು ಕೀಟಲೆ ಮಾಡಿದ್ದಾರೆ. ವಿದ್ಯಾರ್ಥಿಗಳು ಪುಂಡಾಟಿಕೆ ನಡೆಸಿರುವ ವಿಡಿಯೊ ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಡಿ.3ರಂದು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದಿ ಪಾಠ ಮಾಡಲು ಬಂದ ಶಿಕ್ಷಕ ಪ್ರಕಾಶ್ ಬೋಗೆರ್ ಅವರು ಕೊಠಡಿಯೊಳಗೆ ಬಂದಾಗ ಗುಟ್ಕಾ ಹಾಗೂ ಸೂರ್ಯಕಾಂತಿ ಬೀಜ ತಿಂದು ಹಾಕಿದ ಪ್ಯಾಕೆಟ್‌ಗಳು ಬಿದ್ದಿರುವುದನ್ನು ಕಂಡು, 'ಈ ರೀತಿ ಶಾಲಾ ಕೊಠಡಿಯೊಳಗೆ ಗುಟ್ಕಾ ತರುವುದು ಸರಿಯಲ್ಲ' ಎಂದು ವಿದ್ಯಾರ್ಥಿಗಳಿಗೆ ಬುದ್ಧಿಮಾತು ಹೇಳಿದ್ದಾರೆ.

ಆಗ ತರಗತಿಯ ಐವರು ವಿದ್ಯಾರ್ಥಿಗಳು ಶಿಕ್ಷಕನ ಬಳಿಗೆ ಬಂದು ಮೂಲೆಯಲ್ಲಿದ್ದ ಕಸದ ಬುಟ್ಟಿಯನ್ನು ತಲೆಗೆ ಹಾಕಿದರು. ಶಿಕ್ಷಕ ಪ್ರತಿರೋಧವನ್ನು ತೋರಿದರೂ ಬಿಡದೇ ಪುಂಡಾಟಿಕೆ ನಡೆಸಿದರು. ಈ ದೃಶ್ಯವನ್ನು ಒಬ್ಬ ವಿದ್ಯಾರ್ಥಿ ಮೊಬೈಲ್‌ನಲ್ಲಿ ವಿಡಿಯೊ ಮಾಡಿಕೊಂಡಿದ್ದ. 'ಘಟನೆಯ ಬಗ್ಗೆ ಯಾರಿಗಾದರೂ ಹೇಳಿದಲ್ಲಿ ಮತ್ತೆ ನಿಮಗೆ ತೊಂದರೆ ಕೊಡುತ್ತೇವೆ' ಎಂದು ವಿದ್ಯಾರ್ಥಿಗಳು ಶಿಕ್ಷಕನಿಗೆ ಬೆದರಿಕೆಯನ್ನೂ ಹಾಕಿದ್ದರು.

> **ಘಟನೆ ಸಂಬಂಧ ದೂರು ನೀಡುವಂತೆ ಸೂಚಿಸಿದ್ದೇನೆ. ಡಿಡಿಪಿಐ ವರದಿ ನೀಡಿದ ಬಳಿಕ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.**
> **ಮಹಾಂತೇಶ ಬೀಳಗಿ,** ಜಿಲ್ಲಾಧಿಕಾರಿ

ಈ ಘಟನೆಯ ವಿಡಿಯೊ ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ಬೇರೆ ವಿದ್ಯಾರ್ಥಿಗಳ ಪೋಷಕರು ಹಾಗೂ ಗ್ರಾಮಸ್ಥರು ಶಾಲೆಗೆ ಬಂದು ಪ್ರಾಂಶುಪಾಲರನ್ನು ತರಾಟೆಗೆ ತೆಗೆದುಕೊಂಡರು. 'ಘಟನೆ ಬಗ್ಗೆ ಏಕೆ ಮಾಹಿತಿ ನೀಡಿಲ್ಲ? ಪುಂಡ ವಿದ್ಯಾರ್ಥಿಗಳ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ' ಎಂದು ಪ್ರಶ್ನಿಸಿದರು.

ನಂತರ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಸಿಪಿಐ ಕೆ.ಬಿ. ಮಧು, ಅಕ್ಷರ ದಾಸೋಹ ನಿರ್ದೇಶಕ ಕೆ.ಟಿ. ನಿಂಗಪ್ಪ ಅವರು ಗ್ರಾಮಸ್ಥರು ಹಾಗೂ ಶಾಲೆಯ ಶಿಕ್ಷಕರೊಂದಿಗೆ ಸಭೆ ನಡೆಸಿದರು.

'ಪಾಠ ಮಾಡಲು ಕೊಠಡಿಯೊಳಗೆ ಹೋದಾಗ ಗುಟ್ಕಾ ಹಾಗೂ ಸೂರ್ಯಕಾಂತಿ ಬೀಜದ ಪ್ಯಾಕೆಟ್‌ಗಳು ಬಿದ್ದಿರುವುದನ್ನು ನೋಡಿ ವಿದ್ಯಾರ್ಥಿಗಳಿಗೆ ಬುದ್ಧಿ ಹೇಳಿದೆ. ಆಗ ವಿದ್ಯಾರ್ಥಿಗಳು ನನ್ನ ತಲೆಗೆ ಕಸದ ಬುಟ್ಟಿಯನ್ನು ಹಾಕಿದರು. ಯಾರಿಗಾದರೂ ತಿಳಿಸಿದರೆ ಮತ್ತೆ ಇದೇ ರೀತಿ ತೊಂದರೆ ಕೊಡುತ್ತಾರೆ ಎಂದು ಘಟನೆ ಬಗ್ಗೆ ಯಾರಿಗೂ ಹೇಳಿರಲಿಲ್ಲ. ಯಾವ ಶಿಕ್ಷಕರಿಗೂ ಇಂತಹ ಸ್ಥಿತಿ ಬರಬಾರದು' ಎಂದು ಶಿಕ್ಷಕ ಪ್ರಕಾಶ್ ಬೋಗೆರ್ ಸಭೆಯಲ್ಲೇ ಕಣ್ಣೀರು ಹಾಕಿದರು.

ಪ್ರಕರಣ ದಾಖಲಿಸಿದರೆ ತಮ್ಮ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗಲಿದೆ ಎಂದು ಪುಂಡ ವಿದ್ಯಾರ್ಥಿಗಳ ಪೋಷಕರು ಅಳಲು ತೋಡಿಕೊಂಡರು. 'ಘಟನೆ ಬಗ್ಗೆ ಶಿಕ್ಷಕ ಪ್ರಕಾಶ್ ಪೊಲೀಸ್ ಠಾಣೆಗೆ ದೂರು ನೀಡಬೇಕು. ಮುಂದೆ ಇಂತಹ ಕೃತ್ಯ ಮಾಡುವುದಿಲ್ಲ ಎಂದು ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡು ಎಚ್ಚರಿಕೆ ನೀಡಬೇಕು' ಎಂಬ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಹದಿವಯಸ್ಸಿನಲ್ಲಿ ಹೆಣ್ಣುಮಕ್ಕಳಲ್ಲಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು, ಅವರಲ್ಲಿ ಒಮ್ಮೊಮ್ಮೆ ಖಿನ್ನತೆಗೂ ಕಾರಣವಾಗುತ್ತವೆ. ಇಂಥ ಮಾನಸಿಕ ತಲ್ಲಣಗಳನ್ನು ಪ್ರೀತಿ, ಸ್ನೇಹ, ವಿಶ್ವಾಸದೊಂದಿಗೆ ಗೆಲ್ಲಬೇಕಿದೆ.

ತಲ್ಲಣಿಸದಿರು ಮನವೇ..!

ರೇಷ್ಮಾ

'ನನ್ನ ಮಗಳು ಮಹತಿ ಇತ್ತೀಚೆಗೆ ತುಂಬಾನೇ ಖಿನ್ನತೆಗೊಳಗಾಗಿದ್ದಾಳೆ. ಸದಾ ಮಂಕಾಗಿರುತ್ತಾಳೆ. ಮನೆಯಲ್ಲಿ ಒಬ್ಬಳೇ ಕುಳಿತು ಏನೋ ಯೋಚಿಸುತ್ತಿರುತ್ತಾಳೆ. ಋತುಮತಿಯಾದಾಗಿನಿಂದಲೂ ಹೀಗೆ ವರ್ತಿಸುತ್ತಿದ್ದಾಳೆ. ಚಿಕ್ಕಪುಟ್ಟ ವಿಷಯಗಳಿಗೂ ಅಳುತ್ತಾಳೆ, ಬೇಸರ ಮಾಡಿಕೊಳ್ಳುತ್ತಾಳೆ. ಅವಳನ್ನು ಹೇಗೆ ಸರಿಪಡಿಸಬೇಕೆಂದೇ ತಿಳಿಯುತ್ತಿಲ್ಲ. ಹೆಣ್ಣುಮಕ್ಕಳು ಸಣ್ಣವರಿದ್ದಾಗಲೇ ಚಂದ. ಹದಿಹರೆಯಕ್ಕೆ ಕಾಲಿಟ್ಟ ನಂತರ ಆತಂಕ ಶುರುವಾಗುತ್ತದೆ. ಈ ಹಂತದಲ್ಲಿ ಹೆಣ್ಣುಮಕ್ಕಳನ್ನು ಭಾವನಾತ್ಮಕವಾಗಿ ಗಟ್ಟಿಗೊಳಿಸುವುದು ನಮಗೆಲ್ಲ ದೊಡ್ಡ ಸವಾಲು'

– ಅಂದು ಕಚೇರಿಯ ಊಟದ ಸಮಯದ ಬಿಡುವಿನಲ್ಲಿ ಸುಮತಿ ಪಾಟೀಲ್ ತನ್ನ ಮನೆಯ ಕತೆಯನ್ನು ಗೆಳತಿಯ ಬಳಿ ಹಂಚಿಕೊಂಡಿದ್ದರು. ಗೆಳತಿಯ ಮಾತಿಗೆ ಮಾತು ಜೋಡಿಸಿದ ಮಂಜುಳಾರಾವ್, 'ನನಗೂ ಈ ಅನುಭವವಾಗಿದೆ' ಎಂದಿದ್ದರು. ಇದು ಈ ಇಬ್ಬರು ಗೆಳತಿಯರ ಅನುಭವವಷ್ಟೇ ಅಲ್ಲ, ಹದಿವಯಸ್ಸಿನ ಹೆಣ್ಣುಮಕ್ಕಳ ಹಲವು ತಾಯಂದಿರ ಅನುಭವವೂ ಆಗಿರಬಹುದು. ಮನೆಯಲ್ಲಿ ಈ ವಯಸ್ಸಿನ ಹೆಣ್ಣುಮಕ್ಕಳಿದ್ದಾಗ, ಸಾಮಾನ್ಯವಾಗಿ ಇಂಥ ಸಮಸ್ಯೆಗಳು ತಾಯಂದಿರನ್ನು ಕಾಡುತ್ತವೆ. ಇವುಗಳನ್ನು ಸಂಭಾಳಿಸಲು ಅವರು ಬಹಳ ಹರಸಾಹಸಪಡುತ್ತಾರೆ.

ಬಾಲ್ಯಾವಸ್ಥೆಯಿಂದ ಹದಿಹರೆಯಕ್ಕೆ ಕಾಲಿಟ್ಟಾಗ ವಿಶೇಷವಾಗಿ ಹೆಣ್ಣುಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳಾಗುತ್ತವೆ. ಅವರ ಮೆದುಳು ದೊಡ್ಡವರ ಹಾಗೇ ವರ್ತಿಸಲು ಆರಂಭವಾಗುತ್ತದೆ. ಆದರೆ, ಸಂಪೂರ್ಣವಾಗಿ ಪ್ರೌಢವಾಗಿರುವುದಿಲ್ಲ. ಇದು ಸಂಕೀರ್ಣ ವಯಸ್ಸು. ಈ ವಯಸ್ಸಿನವರು ಕೆಲವೊಮ್ಮೆ ಬುದ್ಧಿವಂತರ ಹಾಗೆ, ಇನ್ನೂ ಕೆಲವೊಮ್ಮೆ ಅತಿ ಪೆದ್ದರಂತೆ ವರ್ತಿಸುತ್ತಾರೆ. ಈ ವರ್ತನೆಗಳ ಜೊತೆಗೆ ಇತ್ತೀಚೆಗೆ ತಂತ್ರಜ್ಞಾನದ ಅತಿಯಾದ ಪ್ರಭಾವವೂ ಹೆಣ್ಣುಮಕ್ಕಳ ಮನಸ್ಸನ್ನು ಮತ್ತಷ್ಟು ತಲ್ಲಣಗೊಳ್ಳುತ್ತಿದೆ.

'ಕೋವಿಡ್ – ಲಾಕ್‌ಡೌನ್ ನಂತರದಲ್ಲಿ ಇಂಥ ಪ್ರಕರಣಗಳು ಹೆಚ್ಚಾಗಿವೆ. ವರ್ಕ್ ಫ್ರಂ ಹೋಮ್, ಆನ್‌ಲೈನ್ ತರಗತಿಗಳಂತಹ ಚಟುವಟಿಕೆಗಳು ಹದಿಹರೆಯದವರಲ್ಲಿ ಅದರಲ್ಲೂ ಹೆಚ್ಚಾಗಿ ಯುವತಿಯರಲ್ಲಿ ಇಂಥ ಮಾನಸಿಕ ತಲ್ಲಣಗಳನ್ನು ಉಂಟು ಮಾಡಿವೆ' ಎನ್ನುತ್ತಾರೆ ಆಯುರ್ವೇದ ವೈದ್ಯೆ ಹಾಗೂ ಆಪ್ತಸಮಾಲೋಚಕಿ ಡಾ. ವಸುಂಧರಾ ಭೂಪತಿ.

'ಇಂತಹ ಸಂದರ್ಭದಲ್ಲಿ ಪೋಷಕರು ಮಕ್ಕಳೊಂದಿಗೆ ಬಹಳ ಜಾಗರೂಕತೆಯಿಂದ, ಗೌರವಯುತವಾಗಿ ನಡೆದುಕೊಳ್ಳುವುದು ಬಹಳ ಮುಖ್ಯ. ಜೊತೆಗೆ, ದೈಹಿಕ-ಮಾನಸಿಕ ಪರಿಸ್ಥಿತಿ ನಿಭಾಯಿಸಲು ಮಕ್ಕಳ ಮನಸ್ಸನ್ನು ಸಜ್ಜುಗೊಳಿಸಬೇಕು. 'ನಾವೂ ಇದೇ ಹಂತವನ್ನು ದಾಟಿ ಬಂದವರು. ಅವರ ವಯಸ್ಸಲ್ಲಿ ನಾವು ಹಾಗಿರಲಿಲ್ಲ. ಇವಳೇಕೆ ಹೀಗಾಡುತ್ತಾಳೆ' ಎನ್ನುತ್ತಾ ಗದರುವುದು, ನಿಂದಿಸುವುದು, ಹೊಡೆಯುವುದು ಮಾಡಬೇಡಿ. ಮಕ್ಕಳ ಮನೋಭಾವ ಅರಿತು, ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಬಹಳ ಮುಖ್ಯವಾಗುತ್ತದೆ' ಎನ್ನುತ್ತಾರೆ ವಸುಂಧರಾ.

ಹದಿಹರೆಯದ ಹೆಣ್ಣುಮಕ್ಕಳ ಮಾನಸಿಕ ತೊಳಲಾಟವನ್ನು ಸ್ನೇಹ, ಪ್ರೀತಿಯ ಚಿಕಿತ್ಸೆಯೊಂದಿಗೆ ಸರಿಪಡಿಸಬೇಕೇ ವಿನಾ, ಗದರಿ, ನಿಂದಿಸಿ, ನೀತಿ ನಿಯಮಗಳನ್ನು ಹೇರಬಾರದು. ದೇಹದಲ್ಲಿ ಶಕ್ತಿ ಕ್ಷೀಣಿಸುವುದೂ ಖಿನ್ನತೆಗೆ ಕಾರಣ. ಹಾಗಾಗಿ, ಹದಿವಯಸ್ಸಿನ ಹೆಣ್ಣುಮಕ್ಕಳ ದೈಹಿಕ ಆರೋಗ್ಯ ಉತ್ತಮವಾಗಿರಬೇಕು. ಊಟದಲ್ಲಿ ಸೊಪ್ಪು, ತರಕಾರಿ, ಹಣ್ಣುಗಳ ಸೇವಿಸಬೇಕು. ದಿನಕ್ಕೆ 3 ಲೀಟರ್ ನೀರು ಕುಡಿಯಬೇಕು. ಜಂಕ್‌ಫುಡ್ ಸೇವನೆ ತುಂಬ ಮಿತಿಗೊಳಿಸಿಕೊಳ್ಳಬೇಕು.

– ಡಾ. ವಸುಂಧರಾ ಭೂಪತಿ, ಆಯುರ್ವೇದ ವೈದ್ಯೆ

ಸೌಹಾರ್ದ ಸಂಬಂಧವಿರಲಿ..

ಹದಿವಯಸ್ಸಿಗೆ ಬಂದಾಗ ಹೆಣ್ಣುಮಕ್ಕಳಿಗೆ ಭಾವನಾತ್ಮಕವಾಗಿ ಸ್ಪಂದಿಸುವುದು ಅಗತ್ಯ. ಅಮ್ಮಂದಿರು ಮಕ್ಕಳಲ್ಲಿ ಸಮಸ್ಯೆ ಕಂಡ ತಕ್ಷಣ ಅವರೊಂದಿಗೆ ಮುಕ್ತವಾಗಿ ಮಾತಾಡಿ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಸೂಕ್ಷ್ಮವಾಗಿ ಭಾವನೆಗಳನ್ನು ಅವಲೋಕಿಸಿ, ಅವರ ನೋವಿಗೆ ಸ್ಪಂದಿಸಬೇಕು. ಸಾಂತ್ವನ ಹೇಳಬೇಕು ಎಂದು ಸಲಹೆ ನೀಡುತ್ತಾರೆ ವಸುಂಧರಾ.

ಇಂಥ ಸಮಯದಲ್ಲಿ ಮನೆಯವರಿಗಿಂತ ಮಕ್ಕಳಿಗೆ ಸ್ನೇಹಿತರ ಅವಶ್ಯಕತೆ ಹೆಚ್ಚಿರುತ್ತದೆ. ಆ ಕಾರಣಕ್ಕೆ ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸ್ನೇಹಿತರನ್ನು ಮಾಡಿಕೊಳ್ಳುತ್ತಾರೆ. ಇದನ್ನು ತಪ್ಪಾಗಿ ಭಾವಿಸದೇ ಮಗಳ ನಡವಳಿಕೆ ಮತ್ತು ಅವರ ಗೆಳೆಯರ ಬಗ್ಗೆ ನಿಗಾ ಇಟ್ಟರೆ ಸಾಕು. ಅದು ಬಿಟ್ಟು, ಆಕೆ 'ಸ್ನೇಹ ಮಾಡಿದ್ದೇ ತಪ್ಪು' ಎಂದು ರಾದ್ಧಾಂತ ಮಾಡುವುದು ಸಲ್ಲ. ಸ್ನೇಹ ಮಾಡುವ ಮೊದಲು, ಅದು ಹೇಗೆ ಮುಂದುವರಿಯಬೇಕು ಎಂಬುದನ್ನು ಮಕ್ಕಳಿಗೆ ತಿಳಿ ಹೇಳಿ. ಅದರೊಂದಿಗೆ ಸ್ನೇಹಿತರಿಗೆ ಗೌರವ ನೀಡುವುದನ್ನೂ ಕಲಿಸಿ.

ದುಶ್ಚಟದಿಂದ ದೂರವಿರಲಿ..

ಹದಿಹರೆಯದಲ್ಲಿ ಹೆಣ್ಣುಮಕ್ಕಳ ಮನಸ್ಸು ಚಂಚಲವಾಗಿರುತ್ತದೆ. ತಾವು ಮಾಡುತ್ತಿರುವುದು ತಪ್ಪು ಎಂಬುದರ ಅರಿವಿರುವುದಿಲ್ಲ. ಸ್ನೇಹಿತರಿಗೆ ಧೂಮಪಾನ, ಮದ್ಯಪಾನದಂತಹ ದುಶ್ಚಟಗಳಿದ್ದಾಗ, ಅವರ ಪ್ರಭಾವದಿಂದಲೋ ಅಥವಾ ಇದನ್ನು ಅನುಕರಿಸದಿದ್ದರೆ ನನ್ನನ್ನು ಕೇವಲವಾಗಿ ನೋಡುತ್ತಾರೆಂದೋ, ಆ ಚಟವನ್ನು ಕಲಿಯಲು ಪ್ರಯತ್ನಿಸಬಹುದು. ಅಂಥ ವೇಳೆ ಸಂಯಮದಿಂದ ವರ್ತಿಸಿ. ಒಮ್ಮೆಲೆ ಆ 'ಸಂಗ' ದಿಂದ ದೂರ ಮಾಡಲು ಪ್ರಯತ್ನಿಸಬೇಡಿ. ಮೊದಲು ದುಶ್ಚಟಗಳಿಂದಾಗುವ ದುಷ್ಪರಿಣಾಮಗಳನ್ನು ಉದಾಹರಣೆ ಸಹಿತ ತಿಳಿಸಿ ಹೇಳಿ. ಒಮ್ಮೆ ಹೇಳಿ ಗದರಿಸಿ ಬಿಟ್ಟು ಬಿಟ್ಟರೆ ಸಾಲದು, ಬದಲಿಗೆ ಅವರ ಮೇಲೆ ನಿಗಾ ಇಟ್ಟು, ಆಗಾಗ ಪರಿಸ್ಥಿತಿ ಗಮನಿಸಿ ಮನವರಿಕೆ ಮಾಡುತ್ತಿರಬೇಕು. ಆಗ ನಿಧಾನವಾಗಿಯಾದರೂ ಭವಿಷ್ಯದಲ್ಲಿ ಮಕ್ಕಳನ್ನು ದುಶ್ಚಟದಿಂದ ದೂರ ಮಾಡಬಹುದು.

ಪ್ರಬುದ್ಧವಾಗಿ ನಡೆದುಕೊಳ್ಳಿ

ಈ ವಯಸ್ಸಿನವರು ಮಕ್ಕಳೂ ಅಲ್ಲ, ದೊಡ್ಡವರು ಅಲ್ಲ. ಮಾನಸಿಕವಾಗಿ ಅಷ್ಟೆಲ್ಲ ಬೆಳವಣಿಗೆ ಹೊಂದಿರುವವರೂ ಅಲ್ಲ. ಆ ಕಾರಣಕ್ಕೆ ನೀವು ಎಂತಹ ಕಷ್ಟದ ಸಂದರ್ಭವಾದರೂ ಅವರ ಬಳಿ ಪ್ರಬುದ್ಧವಾಗಿ ಹಾಗೂ ತಿಳಿವಳಿಕೆಯಿಂದ ನಡೆದುಕೊಳ್ಳಬೇಕು. ಮಗಳ ಬಗ್ಗೆ ನಿಮ್ಮಲ್ಲಿರುವ ಅನುಮಾನವನ್ನು ಎತ್ತಾಡುವ ಬದಲು, ಆಕೆಯೊಂದಿಗೆ ಚರ್ಚಿಸಿ. ಆ ಚರ್ಚೆ ಆರೋಗ್ಯಕರವಾಗಿರಲಿ.

ಮಗಳಿಗೆ ಸ್ನೇಹಿತೆಯಾಗಿರಿ

ಹದಿವಯಸ್ಸಿನ ಹೆಣ್ಣುಮಕ್ಕಳಿಗೆ ತಾಯಿಯೇ ಮೊದಲ ಸ್ನೇಹಿತೆ. ಈ ವಯಸ್ಸಿಗೆ ಬಂದ ಮೇಲಂತೂ ಮಕ್ಕಳು ಒಂದಿಷ್ಟು ದಿನ ಯಾರೊಂದಿಗೂ ಬೆರೆಯಲು ಹಿಂಜರಿಯುತ್ತಾರೆ. ಅಲ್ಲದೇ ತಮ್ಮ ಮನದಲ್ಲಾಗುತ್ತಿರುವ ತಲ್ಲಣಗಳನ್ನು ಹೇಳಿಕೊಳ್ಳಲು ಅವರು ಉತ್ತಮ ಸ್ನೇಹಕ್ಕಾಗಿ ಹಾತೊರೆಯುತ್ತಿರುತ್ತಾರೆ. ಆಗ ತಾಯಿಯಾದವರು ಮಗಳೊಂದಿಗೆ ಗೆಳತಿಯಂತಿರುವುದು ಬಹಳ ಮುಖ್ಯ. ಮಗಳ ಪ್ರತಿ ನಡೆಯಲ್ಲೂ ಅವರು ಸ್ನೇಹಿತೆಯಂತೆ ಹೆಜ್ಜೆ ಇಡಬೇಕು. ಪ್ರೀತಿಯ ಸಾಗರವೇ ಆಗಿರುವ ಅಮ್ಮ, ಮಗಳ ನೋವು-ನಲಿವಿಗೆ ಹೆಗಲಾಗಬೇಕು. ❖

ಫಿಶ್ ಮಂಚೂರಿಯನ್, ಫಿಶ್ ಸೂಪ್

ಮಂಚೂರಿಯನ್

ಬೇಕಾಗುವ ಸಾಮಗ್ರಿಗಳು: ಮೀನು – 250 ಗ್ರಾಂ, ಕಾರ್ನ್ ಫ್ಲೋರ್ – ಒಂದೂವರೆ ಚಮಚ, ಮೈದಾಹಿಟ್ಟು – ಒಂದೂವರೆ ಚಮಚ, ಉಪ್ಪು – ರುಚಿಗೆ, ಎಣ್ಣೆ – ಕರಿಯಲು

ನೆನೆಸಿಡಲು: ಸೋಯಾ ಸಾಸ್ – ಮುಕ್ಕಾಲು ಚಮಚ, ಕಾಳುಮೆಣಸಿನ ಪುಡಿ – ಕಾಲು ಚಮಚ, ಶುಂಠಿ ಪೇಸ್ಟ್ – 1 ಚಮಚ, ಬೆಳ್ಳುಳ್ಳಿ ಪೇಸ್ಟ್ – 1 ಚಮಚ,

ಮಂಚೂರಿಯನ್ ತಯಾರಿಸಲು: ಬೆಳ್ಳುಳ್ಳಿ ಎಸಳು – 3, ಈರುಳ್ಳಿ ದಂಟು – 2, ಹಸಿರು ದೊಣ್ಣೆ ಮೆಣಸು – ಕಾಲು ಕಪ್, ಕೆಂಪು ದೊಣ್ಣೆ ಮೆಣಸು – ಕಾಲು ಕಪ್, ಸೋಯಾ ಸಾಸ್ – 1 ಚಮಚ, ವಿನೆಗರ್ – 1 ಚಮಚ, ಚಿಲ್ಲಿ ಸಾಸ್ – 2 ಚಮಚ, ನೀರು – 2 ಚಮಚ, ಸಕ್ಕರೆ – 1 ಚಮಚ, ಕಾರ್ನ್ ಫ್ಲೋರ್ – ಮುಕ್ಕಾಲು ಚಮಚ.

ತಯಾರಿಸುವ ವಿಧಾನ: ಒಂದು ಬಟ್ಟಲಿನಲ್ಲಿ ಸೋಯಾ ಸಾಸ್, ಚಿಲ್ಲಿ ಸಾಸ್, ಸಕ್ಕರೆ ಹಾಗೂ ವಿನೆಗರ್ ಸೇರಿಸಿ ಮಿಶ್ರಣ ಮಾಡಿ ಇಡಿ. ಮೀನನ್ನು ಚೆನ್ನಾಗಿ ತೊಳೆದು ಕತ್ತರಿಸಿಟ್ಟುಕೊಳ್ಳಿ. ಅದಕ್ಕೆ ಸೋಯಾ ಸಾಸ್, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಗೂ ಕಾಳುಮೆಣಸಿನ ಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಮಿಶ್ರಣ ಮಾಡಿಕೊಂಡ ಮೀನಿನ ತುಂಡಿಗೆ ಕಾರ್ನ್ ಫ್ಲೋರ್, ಮೈದಾಹಿಟ್ಟು ಹಾಗೂ ಉಪ್ಪು ಸೇರಿಸಿ. ಸ್ವಲ್ಪ ನೀರು ಚಿಮುಕಿಸಿ, ಹಿಟ್ಟು ಮೀನಿಗೆ ಚೆನ್ನಾಗಿ ಹಿಡಿಯುವಂತೆ ನೋಡಿಕೊಳ್ಳಿ. ಪಾತ್ರೆಯೊಂದರಲ್ಲಿ ಎಣ್ಣೆ ಬಿಸಿ ಮಾಡಿ. ಅದರಲ್ಲಿ ಮೀನಿನ ತುಂಡುಗಳನ್ನು ಕರಿಯಿರಿ. ಇನ್ನೊಂದು ಪಾತ್ರೆಗೆ ಎರಡು ಚಮಚ ಕರಿದ ಎಣ್ಣೆ ಹಾಕಿ, ಅದಕ್ಕೆ ಬೆಳ್ಳುಳ್ಳಿ-ಶುಂಠಿ ಹಾಕಿ ಪರಿಮಳ ಬರುವವರೆಗೆ ಹುರಿಯಿರಿ. ನಂತರ ದೊಣ್ಣೆ ಮೆಣಸು, ಈರುಳ್ಳಿ ಹಾಕಿ ದೊಡ್ಡ ಉರಿಯಲ್ಲಿ 2 ನಿಮಿಷ ಹುರಿದುಕೊಳ್ಳಿ. ಮೊದಲೇ ಮಿಶ್ರಣ ಮಾಡಿಟ್ಟುಕೊಂಡಿದ್ದ ಸಾಸ್ ಸೇರಿಸಿ ಅದಕ್ಕೆ 2 ಚಮಚ ನೀರು ಸೇರಿಸಿ. ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ ಒಮ್ಮೆ ರುಚಿ ನೋಡಿಕೊಂಡು ಸಾಸ್ ಅಥವಾ ಉಪ್ಪು ಬೇಕಾದರೆ ಸೇರಿಸಿ. ಈ ಮಿಶ್ರಣ ಸ್ವಲ್ಪ ದಪ್ಪಗಾದ ಮೇಲೆ ಹುರಿದುಕೊಂಡು ಮೀನು ಸೇರಿಸಿ ಮಿಶ್ರಣ ಮಾಡಿ ದೊಡ್ಡ ಉರಿಯಲ್ಲಿ ಎರಡು ನಿಮಿಷ ಬೇಯಿಸಿ. ನಿಮಗೆ ಬೇಕಾದರೆ ಕಾರ್ನ್‌ಫ್ಲೋರ್‌ಗೆ ಸೇರಿಸಿ ಅದಕ್ಕೆ ಸೇರಿಸಿ ಮತ್ತೆ ಮೀನು ಬೇಯುವವರೆಗೆ ಕುದಿಸಿ.

ನಳಪಾಕ

ಕಬಾಬ್

ಬೇಕಾಗುವ ಸಾಮಗ್ರಿಗಳು: ಮೀನು – ಅರ್ಧ ಕೆಜಿ, ನಿಂಬೆರಸ – 1 ಚಮಚ, ಕಡಲೆಹಿಟ್ಟು – 1 ಕಪ್, ಶುಂಠಿ- ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಹಸಿಮೆಣಸಿನ ಪೇಸ್ಟ್ – ಅರ್ಧ ಚಮಚ, ಕೊತ್ತಂಬರಿ ಪುಡಿ – ಅರ್ಧ ಚಮಚ, ಅರಿಸಿನ ಪುಡಿ – ಕಾಲು ಚಮಚ, ಜೀರಿಗೆ ಪುಡಿ – 1 ಚಮಚ, ಗರಂಮಸಾಲೆ – ಅರ್ಧ ಚಮಚ, ಕೊತ್ತಂಬರಿ ಸೊಪ್ಪು – 1 ಕಪ್, ಈರುಳ್ಳಿ – 1 ಕಪ್, ಉಪ್ಪು – ರುಚಿಗೆ, ಎಣ್ಣೆ – ಕರಿಯಲು

ತಯಾರಿಸುವ ವಿಧಾನ: ಮೊದಲು ಮೀನನ್ನು ಚೆನ್ನಾಗಿ ತೊಳೆದು ಒಣಗಿಸಿ. ಅದನ್ನು ಬೌಲ್ ಒಂದರಲ್ಲಿ ಹಾಕಿ ಅದಕ್ಕೆ ಉಪ್ಪು ಹಾಗೂ ನಿಂಬೆರಸ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಎಣ್ಣೆಯನ್ನು ಬಿಸಿಮಾಡಿ ಮೀನನ್ನು ಎಣ್ಣೆಯಲ್ಲಿ ಕರಿಯಿರಿ. ಮೀನನ್ನು ತಣ್ಣಗಾದ ಮೇಲೆ ಅದನ್ನು ಸ್ವಲ್ಪ ಸಣ್ಣದಾಗಿ ಕತ್ತರಿಸಿಕೊಳ್ಳಿ. ಅದಕ್ಕೆ ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಹಸಿಮೆಣಸಿನ ಪೇಸ್ಟ್, ಕೊತ್ತಂಬರಿ ಪುಡಿ, ಅರಿಸಿನ ಪುಡಿ, ಜೀರಿಗೆ ಪುಡಿ, ಗರಂ ಮಸಾಲೆ, ಉಪ್ಪು ಹಾಗೂ ಹೆಚ್ಚಿದ ಕೊತ್ತಂಬರಿ ಸೊಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದನ್ನು 30 ನಿಮಿಷ ಹಾಗೆ ಇಡಿ. ಅದಕ್ಕೆ ಕಡಲೆಹಿಟ್ಟು ಹಾಗೂ ಈರುಳ್ಳಿ ಸೇರಿಸಿ ಮಿಶ್ರಣ ಮಾಡಿ. ಎಣ್ಣೆ ಬಿಸಿ ಮಾಡಿ ಎಣ್ಣೆಯಲ್ಲಿ ಮೀನನ್ನು ಕರಿಯಿರಿ. ಮೀನಿನ ಕಬಾಬ್ ತಿನ್ನಲು ತುಂಬಾ ಚೆನ್ನಾಗಿರುತ್ತದೆ.

ಸೂಪ್

ಬೇಕಾಗುವ ಸಾಮಗ್ರಿಗಳು: ಮೀನು – 1, ಆಲಿವ್ ಎಣ್ಣೆ – 2 ಚಮಚ, ಈರುಳ್ಳಿ – 1 ದೊಡ್ಡದು (ಉದ್ದಕ್ಕೆ ಸೀಳಿಕೊಂಡಿದ್ದು), ಬೆಳ್ಳುಳ್ಳಿ ಎಸಳು – 6, ಕೊತ್ತಂಬರಿ ಪುಡಿ – 1 ಚಮಚ, ಜೀರಿಗೆ ಪುಡಿ – 1 ಚಮಚ, ಟೊಮೆಟೊ – 2 ಮಧ್ಯಮ ಗಾತ್ರದ್ದು, ಚಿಕನ್ ಸ್ಟಾಕ್ – 5 ಕಪ್, ಉಪ್ಪು – ರುಚಿಗೆ, ಕಾಳುಮೆಣಸಿನ ಪುಡಿ – ರುಚಿಗೆ, ಕಾರ್ನ್‌ಫ್ಲೋರ್ – 3 ಚಮಚ, ಕ್ಯಾರೆಟ್ – 3, ಕೊತ್ತಂಬರಿ ಸೊಪ್ಪು – ಸ್ವಲ್ಪ

ತಯಾರಿಸುವ ವಿಧಾನ: ಮೀನನ್ನು ಚೆನ್ನಾಗಿ ತೊಳೆದು ಕತ್ತರಿಸಿಕೊಂಡು ಅದಕ್ಕೆ ಉಪ್ಪು ಹಾಗೂ ಕಾಳುಮೆಣಸಿನ ಪುಡಿ ಸೇರಿಸಿ ಕಲೆಸಿ ಇಡಿ. ಒಂದು ದಪ್ಪ ತಳದ ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ. ಅದಕ್ಕೆ ಈರುಳ್ಳಿ, ಬೆಳ್ಳುಳ್ಳಿ ಸೇರಿಸಿ ಪರಿಮಳ ಬರುವವರೆಗೂ ಹುರಿದುಕೊಳ್ಳಿ. ಅದಕ್ಕೆ ಕೊತ್ತಂಬರಿ ಹಾಗೂ ಜೀರಿಗೆ ಪುಡಿ ಸೇರಿಸಿ ಮಿಶ್ರಣ ಮಾಡಿ. ಅದಕ್ಕೆ ಚಿಕ್ಕದಾಗಿ ಕತ್ತರಿಸಿದ ಟೊಮೆಟೊ ಸೇರಿಸಿ ಟೊಮೆಟೊ ಮೆದುವಾಗುವವರೆಗೂ ಬೇಯಿಸಿ. ಅದಕ್ಕೆ ಕ್ಯಾರೆಟ್, ಹಸಿಮೆಣಸು, ಚಿಕನ್ ಸ್ಟಾಕ್, ಉಪ್ಪು, ಕಾಳುಮೆಣಸಿನ ಪುಡಿ ಸೇರಿಸಿ ಸಣ್ಣ ಉರಿಯಲ್ಲಿ ಅರ್ಧ ಗಂಟೆ ಕುದಿಸಿ. ಅದಕ್ಕೆ ಮೊದಲೇ ಮಿಶ್ರಣ ಮಾಡಿ. ಅದಕ್ಕೆ ಕಾರ್ನ್‌ಫ್ಲೋರ್ ನೀರು ಸೇರಿಸಿ ಮತ್ತೆ ಕುದಿಸಿ. ಅದಕ್ಕೆ ಮೀನಿನ ತುಂಡು ಹಾಗೂ ಕೊತ್ತಂಬರಿ ಸೊಪ್ಪು ಸೇರಿಸಿ 10 ನಿಮಿಷ ಕುದಿಸಿ. ನಂತರ ರುಚಿ ನೋಡಿಕೊಂಡು ಉಪ್ಪು ಬೇಕಾದರೆ ಸೇರಿಸಿ. ಈಗ ನಿಮ್ಮ ಮುಂದೆ ರುಚಿಯಾದ ಫಿಶ್ ಸೂಪ್ ಕುಡಿಯಲು ಸಿದ್ಧ. ಇದು ಆರೋಗ್ಯದ ದೃಷ್ಟಿಯಿಂದಲೂ ಉತ್ತಮ.

ಪ್ರೇಮಕಾಮಗಳ ಆಕರ್ಷಣೆ ಋಣಾತ್ಮಕವೇ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

●24ರ ಎಂಎಸ್ಸಿ ಓದಿರುವ ಯುವತಿ. ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ಓದುವಾಗ ತುಂಬಾ ಋಣಾತ್ಮಕ ಅಂದರೆ ಲೈಂಗಿಕತೆಯ ಯೋಚನೆಗಳು ಬರುತ್ತವೆ. ಸಂಗಾತಿಯ ಬಗೆಗಿನ ಕಲ್ಪನೆಗಳು ಮೂಡಿ ಕಳೆದುಹೋಗುತ್ತೇನೆ. ಮನಸ್ಸನ್ನು ಹಿಡಿತದಲ್ಲಿಡಲಾಗದೆ ಸಮಯ ವ್ಯರ್ಥ ಮಾಡುತ್ತೇನೆ. ಪರಿಹಾರವೇನು?

ಹೆಸರು, ಊರು ತಿಳಿಸಿಲ್ಲ.

ಪ್ರೇಮಕಾಮಗಳ ಒತ್ತಡಗಳು ನಿಮ್ಮ ಓದಿಗೆ ತೊಂದರೆ ಕೊಡುತ್ತಿದೆ ಎನ್ನುವುದೇನೋ ನಿಜ. ಆದರೆ ಅವುಗಳು ಋಣಾತ್ಮಕ ಯೋಚನೆಗಳು ಎಂದು ಹೇಗೆ ಹೇಳುತ್ತೀರಿ? ವಿವಾಹವಾದ ಮೇಲೆ ಇವುಗಳ ಆಕರ್ಷಣೆಯಿಲ್ಲದೆ ಸಂಗಾತಿಯ ಜೊತೆ ಸಂತೋಷದ ಬದುಕು ಹೇಗೆ ಸಾಧ್ಯವಾಗಬಲ್ಲದು? ಆಕರ್ಷಣೆಗಳನ್ನು ಋಣಾತ್ಮಕವೆಂದು ನೀವು ತಿರಸ್ಕರಿಸಿದರೂ ದೇಹದಲ್ಲಿ ಪ್ರಾಕೃತಿಕವಾಗಿ ಸೃಜನೆಯಾಗುವ ಹಾರ್ಮೋನ್‌ಗಳು ಒಪ್ಪುತ್ತಿಲ್ಲವಲ್ಲ. ಆಕರ್ಷಣೆಗಳು ತಿರಸ್ಕರಿಸಿದಷ್ಟೂ ಬಿಟ್ಟೂಬಿಡದೆ ಕಾಡುವ ಹಟಮಾರಿಗಳು! ಮೊದಲು ನನ್ನೊಳಗೆ ಮೂಡುವ ಆಕರ್ಷಣೆ ಸಹಜವಷ್ಟೇ ಅಲ್ಲ ಅಮೂಲ್ಯವಾದದ್ದು ಎಂದು ಒಪ್ಪಿಕೊಳ್ಳಿ. ಅವುಗಳಿಗೂ ನಿಮ್ಮ ಮನಸ್ಸಿನಲ್ಲಿ, ಸಮಯದಲ್ಲಿ ಸ್ವಲ್ಪ ಜಾಗ ಕೊಡಿ. ಹಗಲುಗನಸುಗಳನ್ನು ಆನಂದಿಸಿ. ಅವುಗಳಲ್ಲಿ ಕಳೆದುಹೋಗಬೇಡಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ.

Advertorial

ನೋವು ಇಲ್ಲ, ಅನುಕೂಲವೇ ಎಲ್ಲಾ

ಸಂದರ್ಭ:

ನಿಮ್ಮ ಬೆಳಗಿನ ನಡಿಗೆಯನ್ನು ಪೂರ್ಣಗೊಳಿಸಲು ಕಷ್ಟವಾಗುತ್ತಿದೆಯೇ? ಅಥವಾ ಒಂದೆರಡು ಮಹಡಿಗಳ ಮೆಟ್ಟಿಲೇರಲು ಸಾಧ್ಯವಾಗುತ್ತಿಲ್ಲವೇ? ಹಾಗಿದ್ದಲ್ಲಿ ನೀವು ಸಂಧಿವಾತ ಪೀಡಿತರಾಗಿರಬಹುದು ಅದರಲ್ಲೂ ಅದು ಆಸ್ಟಿಯೋಆರ್ಥ್ರೈಟಿಸ್ (Osteoarthritis) ಕೀಲು ಕ್ಷೀಣಿಸುವುದರಿಂದ ಮಂಡಿ ಮತ್ತಿತರ ಭಾರಹೊರುವ ಕೀಲುಗಳು ದುರ್ಬಲವಾಗುತ್ತವೆ.

ಸಂಧಿವಾತದಿಂದ ಕೀಲುಗಳು ದುರ್ಬಲವಾಗಿ ಬದುಕೇ ಬದಲಾಗುವ ಸ್ಥಿತಿ ನಿರ್ಮಾಣವಾಗುತ್ತದೆ. ರೋಗನಿಯಂತ್ರಣ ಮತ್ತು ತಡೆಗಟ್ಟುವ ಕೇಂದ್ರಗಳ ಪ್ರಕಾರ, ಸಂಧಿವಾತ ಪೀಡಿತರಲ್ಲಿ ಮೂವರಲ್ಲೊಬ್ಬರು ತಮ್ಮ ಕೆಲಸ ಮತ್ತು ವಿಶ್ರಾಂತಿಗಳ ಚಟುವಟಿಕೆಗಳು ನಿರ್ಬಂಧಿತವಾಗಿದೆಯೆಂದು ಹೇಳುತ್ತಾರೆ. ಅವರ ಪೈಕಿ, 25%ರಷ್ಟು ಮಂದಿ ತೀವ್ರ ನೋವಿನಿಂದ ನರಳುತ್ತಾರೆ (ಏಳಕ್ಕೂ ಅಧಿಕ ಪೀಡಿತರು ಶೂನ್ಯದಿಂದ 10ರವರೆಗಿನ ಶ್ರೇಣಿಯಲ್ಲಿದ್ದಾರೆ)

ನೂರಕ್ಕೂ ಹೆಚ್ಚಿನ ವಿವಿಧ ಬಗೆಯ ಸಂಧಿವಾತಗಳು ಮತ್ತು ಅದರ ಸಂಬಂಧಿತ ಕಾಯಿಲೆ ಗಳಿದ್ದು, ಸಾಮಾನ್ಯವಾಗಿ ಆಸ್ಟಿಯೋಆರ್ಥ್ರೈಟಿಸ್ (ಓಎ) ರ್ಯೂಮಟಾಯ್ಡ್ ಆರ್ಥ್ರೈಟಿಸ್ (ಆರ್‌ಎ) ಸೋರಿಯಾಟಿಕ್ ಆರ್ಥ್ರೈಟಿಸ್, ಫೈಬ್ರೋಮಯಾಲ್ಜಿಯ ಮತ್ತು ಗೌಟ್ ಇವುಗಳು ಕಂಡುಬರುತ್ತವೆ. ಜಗತ್ತಿನೆಲ್ಲೆಡೆ ಮಂಡಿಯ ಸಂಧಿವಾತವು ಇಳಿವಯಸ್ಸಿನವರಿಗೆ ಮಸ್ಕಿಲೋಸ್ಕೆಲಿಟಲ್ ವೈಪರೀತ್ಯಗಳಿಗೆ ಮತ್ತು ಅಸಮರ್ಥನೆಗಳ ದೆಸೆಯಿಂದ ಉತ್ತಮ ದರ್ಜೆಯ ಬದುಕು ದುರ್ಭರವಾಗಿರುತ್ತದೆ.

ಪ್ರಸ್ತಾವಿತ ಪರಿಹಾರ:

ಓಎಗೆ ಚಿಕಿತ್ಸೆಗಾಗಿ ಈಗಿನ ನಿರ್ವಹಣಾ ವಿಧಾನವು ತಾತ್ಕಾಲಿಕವಾಗಿ ನೋವಿನ ಲಕ್ಷಣಾತ್ಮಕ ಪರಿಹಾರ ನೀಡುತ್ತಿದೆಯೇ ವಿನಃ ರೋಗದ ಮೂಲದ ಪ್ರಕ್ರಿಯೆಯತ್ತ ಪ್ರಯಾಣಿಸುತ್ತಿಲ್ಲ. ಎನ್‌ಎಎಸ್‌ಐಡಿ ಗಳೆಂದು ಕರೆಯುವ ನೋವು ನಿವಾರಕಗಳು ಕಿಡ್ನಿ ವೈಫಲ್ಯ, ಹೊಟ್ಟೆಯ ಹುಣ್ಣುಗಳಂತಹ ಸಂಕೀರ್ಣ ಪರಿಸ್ಥಿತಿಗಳಿಗೆ ಕಾರಣವಾಗುತ್ತಿದೆ.

" PEMF ಚಿಕಿತ್ಸೆಯು ಸಂಧಿವಾತ ಸಂಬಂಧಿತ ನೋವು ಸೆಟೆತವನ್ನು ತಗ್ಗಿಸುವಲ್ಲಿ ದೈಹಿಕ ಚಲನೆ ಕುರಿತಂತೆ ಗಮನಾರ್ಹ ಅನುಕೂಲ ಒದಗಿಸುತ್ತದೆ "

ಜರ್ನಲ್ ಆಫ್ ಕ್ಲಿನಿಕಲ್ ಇಂಟರ್‌ವೆನ್ಷನ್ ಇನ್ ಏಜಿಂಗ್, 2013

ವೈದ್ಯಕೀಯ ಇತಿಹಾಸದಲ್ಲಿ ಸಂಧಿವಾತಕ್ಕೆ ಮಂಡಿ/ಕೀಲಿನ ಬದಲಿಸುವಿಕೆ ಮಾತ್ರ ಏಕೈಕ ಲಭ್ಯ ಚಿಕಿತ್ಸೆಯಾಗಿದೆ. ಇದೊಂದು ಮೇಜರ್ ಸರ್ಜರಿಯಾಗಿದ್ದು ಇದರಲ್ಲಿ ರಿಸ್ಕ್ , ಪಾರ್ಶ್ವಪರಿಣಾಮ ಮತ್ತು ಸಂಕೀರ್ಣ ಸಂದರ್ಭಗಳ ಮಿತಿಯಿಂದ ಕೂಡಿದೆ. ಆದರೆ, Total Orthocare ನಲ್ಲಿ ಆಸ್ಟಿಯೋಆರ್ಥ್ರೈಟಿಸ್‌ಗೆ ಸುರಕ್ಷಿತ ಚಿಕಿತ್ಸೆಯ ಆಯ್ಕೆಯಿದೆ. ಇದನ್ನು ಪಲ್ಸ್‌ಡ ಎಲೆಕ್ಟ್ರೋ ಮ್ಯಾಗ್ನೆಟಿಕ್ ಫೀಲ್ಡ್ (PEMF) ಥೆರಪಿ ಎನ್ನುತ್ತಾರೆ. PEMF ಬಯೋಫಿಸಿಕಲ್ ಥೆರಾಪೆಟಿಕ್ ಮಾಡಲಿಟಿ ಪಲ್ಸ್‌ಡ ಎಲೆಕ್ಟ್ರೋ ಮ್ಯಾಗ್ನೆಟಿಕ್ ಫೀಲ್ಡ್‌ಗಳನ್ನಾಧರಿಸಿದ್ದು ಇದು ಅತ್ಯಂತ ಪರಿಣಾಮಕಾರಿಯಾಗಿದೆ.

PEMF ಚಿಕಿತ್ಸೆಯು ಮೃದ್ವಸ್ಥಿ ಸಂಬಂಧಿತ ಸಮಸ್ಯೆಗಳಿಗೆ ಪರಿಣಾಮಕಾರಿ ಚಿಕಿತ್ಸೆಯಾಗಿದೆ.

ಈ ಚಿಕಿತ್ಸಾ ವಿಧಾನ ಸಂಪೂರ್ಣ ನೋವುರಹಿತ ಛೇದರಹಿತವಾದ ಸರಳ ವಿಧಾನವಾಗಿದ್ದು ರೋಗಿಯ ಆರಾಮ ಹೆಚ್ಚಿಸಿ ನೋವಿನ ಸಂಕಟವನ್ನು ತಗ್ಗಿಸುತ್ತದೆ PEMF ಕ್ರಿಯೆಯ ಪ್ರಾಥಮಿಕ ವಿಧಾನವು ಕೀಲಿನ ನೋವನ್ನು ತಗ್ಗಿಸಲು ಊತವನ್ನು ಕಡಿಮೆ ಮಾಡುವುದಾಗಿದೆ. ಇದು ಮೃದ್ವಸ್ಥಿಗಳ ಕೋಶದ ಪ್ರಸರಣದ ಮೇಲೆ ಉತ್ತಮ ಪರಿಣಾಮ ಬೀರಿ ಅದರ ಪುನರ್‌ರಚನೆಗೆ ನೆರವಾಗುತ್ತದೆ.

ಆಸ್ಟಿಯೋಆರ್ಥ್ರೈಟಿಸ್ ಚಿಕಿತ್ಸೆಯಲ್ಲಿ ಮೃದ್ವಸ್ಥಿಯ ಮರುಸೃಷ್ಟಿ ಮಾಡಿ ರೋಗದ ಸಮಗ್ರ ಪ್ರಕ್ರಿಯೆಯನ್ನು ಹಿಂದುಮುಂದಾಗಿಸಬಲ್ಲ ವಿಧಾನ ವೆಂದರೆ PEMF ಮಾತ್ರ. ನೋವನ್ನು ತಗ್ಗಿಸುವುದಲ್ಲದೆ ಇದರಲ್ಲಿ ಅಡ್ಡಪರಿಣಾಮಗಳಿಲ್ಲ. ಹಾಗಾಗಿ, ಇದು ಮಂಡಿಚಿಪ್ಪು ಬದಲಿಕೆಗೆ ಅಲ್ಪವೆಚ್ಚದ ಅತ್ಯುತ್ತಮ ಪರ್ಯಾಯವೆನಿಸಿದ್ದು, ಎರಡೂ ಮಂಡಿಗಳಿಗೆ ಒಟ್ಟಿಗೆ ಚಿಕಿತ್ಸೆ ನೀಡಬಹುದು. ಇದು ಚಲನಶೀಲತೆ ಹೆಚ್ಚಿಸಿ ಮಂಡಿಯ ಕೀಲುಗಳ ಸ್ಥಿರತೆ ಸುಧಾರಿಸಿ ರೋಗದ ಮುನ್ನಡೆಯನ್ನು ಸ್ಥಗಿತಗೊಳಿಸುತ್ತದೆ.

PEMF ಚಿಕಿತ್ಸೆಯ ಅನುಕೂಲ

- ಶಸ್ತ್ರಚಿಕಿತ್ಸೆರಹಿತ ಛೇದರಹಿತ
- ಅಡ್ಡಪರಿಣಾಮಗಳಿಲ್ಲ
- ಆಸ್ಪತ್ರೆಗೆ ಸೇರದೆ ಹೊರರೋಗಿಗಳ ಚಿಕಿತ್ಸೆ ಪಡೆಯಬಹುದು
- ಎಲ್ಲಾ ವಯೋಮಾನದವರಿಗೂ ಚಿಕಿತ್ಸೆ ಸಾಧ್ಯ
- ಬೇರೆ ವೈದ್ಯಕೀಯ ಸ್ಥಿತಿಗಳಿಂದ ಈ ಚಿಕಿತ್ಸೆಗೆ ತೊಂದರೆಯಿಲ್ಲ
- ಚಿಕಿತ್ಸೆಯ ನಂತರ ನೋವಿಗಾಗಿ ಔಷಧಿ ಅಗತ್ಯವಿಲ್ಲ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

Total Orthocare

It's a JOINT effort

ನಂ.59ಎ, ಎಂಎನ್‌ಆರ್ ಕಾಂಪ್ಲೆಕ್ಸ್, ಸ್ಟೀಲ್ ಫ್ಯಾಕ್ಟರಿ ಬಸ್ ನಿಲ್ದಾಣದ ಬಳಿ, ದೊಡ್ಡ ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು–560043

ದೂ: +91-7204148290

www.totalorthocare.in

ಸುಭಾಷಿತ

ಕಳೆದುಹೋದದ್ದರ ಬಗ್ಗೆ ವಿಶ್ಲೇಷಿಸುವುದಕ್ಕಿಂತ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದು ಹೆಚ್ಚು ಮುಖ್ಯ ಎನಿಸುತ್ತದೆ. -ಸಿ.ಕೆ.ಪ್ರಹ್ಲಾದ್

ರೆಪೊ ದರದಲ್ಲಿ ಯಥಾಸ್ಥಿತಿ ಹಣದುಬ್ಬರ ನಿಯಂತ್ರಣವೂ ಬೇಕು

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ತನ್ನ ದ್ವೈಮಾಸಿಕ ಸಭೆಯಲ್ಲಿ, ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಕೈಗೊಂಡಿದೆ. ಅರ್ಥ ವ್ಯವಸ್ಥೆಯ ಚೇತರಿಕೆಗೆ ಹಣಕಾಸು ನೀತಿಯ ಬೆಂಬಲದ ಅಗತ್ಯ ಇದೆ ಎಂದು ಆರ್‌ಬಿಐ ಹೇಳಿದೆ. ಹೊಂದಾಣಿಕೆಯ ಹಣಕಾಸು ನೀತಿಯನ್ನು ಮುಂದುವರಿಸುವ ತೀರ್ಮಾನವನ್ನೂ ಸಮಿತಿಯು ಕೈಗೊಂಡಿದೆ. ರೆಪೊ ದರದಲ್ಲಿ ಬದಲಾವಣೆ ಮಾಡದೆ ಇರುವುದು ಮತ್ತು ಹೊಂದಾಣಿಕೆಯ ನಿಲುವನ್ನು ಮುಂದುವರಿಸಿದ್ದು ನಿರೀಕ್ಷಿತವಾಗಿಯೇ ಇದೆ. ಅರ್ಥ ವ್ಯವಸ್ಥೆಗೆ ಹಣಕಾಸು ನೀತಿಯ ಬೆಂಬಲದ ಅಗತ್ಯ ಇನ್ನೂ ಇದೆ ಎಂದು ಹೇಳಿರುವುದು ಅರ್ಥ ವ್ಯವಸ್ಥೆಯು ಈಗಲೂ ಸ್ಥಿರತೆಯ ಹಾದಿಗೆ ಬಂದಿಲ್ಲ ಎಂಬುದನ್ನು ಸೂಚಿಸುವಂತೆ ಇದೆ. ಕೊರೊನಾ ವೈರಾಣುವಿನ ಓಮೈಕ್ರಾನ್ ರೂಪಾಂತರಿ ತಳಿಯು ದೇಶದಲ್ಲಿ ಅಲ್ಲಲ್ಲಿ ಹರಡುತ್ತಿದ್ದು, ಇದು ಅರ್ಥ ವ್ಯವಸ್ಥೆಯ ಚೇತರಿಕೆಯ ಮೇಲೆ ಒಂದಿಷ್ಟು ದುಷ್ಪರಿಣಾಮಗಳನ್ನು ಬೀರಬಹುದೇ ಎಂಬ ಆತಂಕ ಎದುರಾಗಿರುವುದು ನಿಜ. ಇದನ್ನು ಸಮಿತಿಯು ಗುರುತಿಸಿದೆ. ಹೀಗಾಗಿ ಆರ್‌ಬಿಐ ಪ್ರಸಕ್ತ ಹಣಕಾಸು ವರ್ಷದ ಮೂರನೆಯ ತ್ರೈಮಾಸಿಕದಲ್ಲಿ (ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿ) ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರದ ಅಂದಾಜನ್ನು ತುಸು ತಗ್ಗಿಸಿದೆ. ಮೂರನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 6.8ರಷ್ಟು ಇರಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಆರ್‌ಬಿಐ ಈಗ ಅದನ್ನು ಶೇ 6.56ಕ್ಕೆ ಇಳಿಕೆ ಮಾಡಿದೆ. ಆದರೆ, ಇಡೀ ವರ್ಷದ (2021–22) ಜಿಡಿಪಿ ಬೆಳವಣಿಗೆ ದರದ ಅಂದಾಜಿನಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ವಾರ್ಷಿಕ ಜಿಡಿಪಿ ಬೆಳವಣಿಗೆ ದರವು ಶೇ 9.5ರ ಮಟ್ಟದಲ್ಲಿ ಇರಲಿದೆ ಎನ್ನುವ ಮಾತನ್ನು ಆರ್‌ಬಿಐ ಪುನರುಚ್ಚಾರ ಮಾಡಿದೆ. ಸಾರ್ವಜನಿಕರಿಂದ ಮಾರುಕಟ್ಟೆಯಲ್ಲಿ ಸೃಷ್ಟಿಯಾಗುವ ಬೇಡಿಕೆಯು ದೇಶದ ಆರ್ಥಿಕ ಬೆಳವಣಿಗೆಯ ಮುಖ್ಯ ಚಾಲಕ ಶಕ್ತಿಗಳಲ್ಲಿ ಒಂದು. ಈ ಬೇಡಿಕೆಯು ಕಡಿಮೆ ಮಟ್ಟದಲ್ಲಿ ಇದೆ. ಖಾಸಗಿ ವಲಯದಿಂದ ಆಗುವ ಬಂಡವಾಳ ವೆಚ್ಚವು ಸಾಂಕ್ರಾಮಿಕಕ್ಕೂ ಮೊದಲಿನ ಹಂತವನ್ನು ತಲುಪಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಅಸ್ಥಿರತೆ ಇನ್ನೂ ಇದೆ. ಪೂರೈಕೆ ವ್ಯವಸ್ಥೆಯಲ್ಲಿ ಕೂಡ ಒಂದಿಷ್ಟು ಅಡೆತಡೆಗಳು ಉಳಿದಿವೆ.

ಹಣಕಾಸು ನೀತಿ ಸಮಿತಿಯು ಹಣದ ಹರಿವು ಹೆಚ್ಚಿಸುವ ಭರದಲ್ಲಿ ಹಣದುಬ್ಬರದ ಪ್ರಮಾಣವು ಹಿತಕರ ಮಟ್ಟಕ್ಕಿಂತ ಜಾಸ್ತಿ ಆಗದಂತೆ ನೋಡಿಕೊಳ್ಳಬೇಕಾಗಿದೆ

ದೇಶದಲ್ಲಿನ ಆರ್ಥಿಕ ಚಟುವಟಿಕೆಗಳು ಚುರುಕು ಪಡೆದುಕೊಳ್ಳುತ್ತಿವೆ ಎಂದು ಎಂಪಿಸಿ ಹೇಳಿದೆ. ಆರ್ಥಿಕ ಪುನಶ್ಚೇತನವು ದಿನಕಳೆದಂತೆಲ್ಲ ವಿಸ್ತೃತ ನೆಲೆಯಲ್ಲಿ ಆಗುತ್ತಿದೆ ಎಂದು ಅದು ಹೇಳಿದೆ. ದೀರ್ಘಾವಧಿಗೆ ಸಾಗುವ, ಬಲಿಷ್ಠವಾದ ಮತ್ತು ಎಲ್ಲ ವಲಯಗಳನ್ನೂ ಒಳಗೊಳ್ಳುವ ಆರ್ಥಿಕ ಪುನಶ್ಚೇತನದ ನಿರೀಕ್ಷೆ ಇದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ದರವು ಶೇ 5.3ರ ಪ್ರಮಾಣದಲ್ಲಿ ಇರಲಿದೆ ಎಂದು ಎಂಪಿಸಿ ಹೇಳಿದೆ. ಮೂರು ಮತ್ತು ನಾಲ್ಕನೆಯ ತ್ರೈಮಾಸಿಕಗಳಲ್ಲಿ ಹಣದುಬ್ಬರದ ಪ್ರಮಾಣದಲ್ಲಿ ತುಸು ಬದಲಾವಣೆಗಳು ಆಗಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಮತ್ತು ಮೌಲ್ಯವರ್ಧಿತ ತೆರಿಗೆ ಪ್ರಮಾಣವನ್ನು ಈಚೆಗೆ ತುಸು ತಗ್ಗಿಸಿರುವ ಪರಿಣಾಮವಾಗಿ, ಈ ತೈಲೋತ್ಪನ್ನಗಳ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಕಡಿಮೆ ಆಗಿದೆ. ಇದರಿಂದ ಒಂದಿಷ್ಟು ಒಳಿತು ಆಗಲಿದೆ ಎನ್ನುವುದು ಎಂಪಿಸಿ ಅಭಿಮತ. ಆದರೆ, ಇಷ್ಟೆಲ್ಲದರ ನಡುವೆ ಹಣದುಬ್ಬರದ ಪರಿಣಾಮವನ್ನು ಕಡೆಗಣಿಸುವಂತೆ ಇಲ್ಲ. ಹಣದುಬ್ಬರದಿಂದ ಗಂಭೀರ ಪರಿಣಾಮಗಳು ಇರುವುದಿಲ್ಲ ಎಂದು ಭಾವಿಸಬಾರದು.

ಆರ್ಥಿಕ ಬೆಳವಣಿಗೆಗೆ ಇಂಬು ನೀಡುವ ರೀತಿಯಲ್ಲಿ ಹಣಕಾಸು ನೀತಿಗಳು ಇರಬೇಕು ಎಂಬ ವಾದವು ಬಲವಾಗಿಯೇ ಇದೆ. ಆದರೆ, ಎಂಪಿಸಿ ಪಾಲಿನ ಮೂಲ ಕರ್ತವ್ಯಗಳಲ್ಲಿ ಹಣದುಬ್ಬರದ ನಿಯಂತ್ರಣವೂ ಒಂದು. ಈ ಕರ್ತವ್ಯ ನಿಭಾಯಿಸುವ ವಿಚಾರದಲ್ಲಿ ಎಡವಬಾರದು. ವ್ಯವಸ್ಥೆಯಲ್ಲಿ ನಗದು ಹರಿವು ಹೆಚ್ಚಿಸಲು ರೆಪೊ ದರವನ್ನು ಕಡಿಮೆ ಮಟ್ಟದಲ್ಲಿಯೇ ಇರಿಸುವ ತೀರ್ಮಾನ ಸದ್ಯದ ಸಂದರ್ಭದಲ್ಲಿ ಸರಿ ಇರಬಹುದು. ಆದರೆ, ಹಣದ ಹರಿವು ಹೆಚ್ಚಿಸುವ ಭರದಲ್ಲಿ ಹಣದುಬ್ಬರ ಪ್ರಮಾಣವು ಹಿತಕರ ಮಟ್ಟಕ್ಕಿಂತ ಜಾಸ್ತಿ ಆಗದಂತೆಯೂ ನೋಡಿಕೊಳ್ಳಬೇಕಿರುವುದು ಸಮಿತಿಯ ಪ್ರಧಾನ ಕೆಲಸಗಳಲ್ಲಿ ಒಂದು. ಮುಂದಿನ ದಿನಗಳಲ್ಲಿ ತರಕಾರಿ ಬೆಲೆ ತಗ್ಗಲಿದೆ, ಕೇಂದ್ರ ಸರ್ಕಾರ ಕೈಗೊಂಡ ಕೆಲವು ಕ್ರಮಗಳ ಪರಿಣಾಮವಾಗಿ ಅಡುಗೆ ಎಣ್ಣೆ ಬೆಲೆ ಇಳಿಕೆ ಆಗಲಿದೆ ಎಂಬ ನಿರೀಕ್ಷೆಯಲ್ಲಿ ಹಣದುಬ್ಬರ ಶೇ 5.3ರ ಮಟ್ಟದಲ್ಲಿ ಇರಲಿದೆ ಎಂದು ಎಂಪಿಸಿ ಅಂದಾಜು ಮಾಡಿದೆ. ಈ ಮಟ್ಟವು ಎಂಪಿಸಿ ತಾನು ನಿಗದಿ ಮಾಡಿಕೊಂಡಿರುವ ಹಿತಕರ ಮಟ್ಟವಾದ ಶೇ 4ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಇದೆ ಎಂಬುದನ್ನು ಗಮನಿಸಬೇಕು. ಆರ್‌ಬಿಐ ತಾನು ಈಗ ತೆಗೆದುಕೊಂಡಿರುವ ಹಣಕಾಸಿನ ನಿಲುವನ್ನು ಬದಲಿಸಬೇಕಾದ, ರೆಪೊ ದರ ಹೆಚ್ಚಿಸಿ ನಗದು ಹರಿವನ್ನು ಕಡಿಮೆ ಮಾಡಬೇಕಾದ ಸಂದರ್ಭ ಶೀಘ್ರವೇ ಎದುರಾಗಬಹುದು. ಆರ್ಥಿಕ ಚಟುವಟಿಕೆಗಳಿಗೆ ಬಿರುಸು ತಂದುಕೊಡುವ ಹೊಣೆಯು ಸರ್ಕಾರಗಳ ಮೇಲೆಯೂ ಇದೆ. ಅದು ಆರ್‌ಬಿಐ ಕೆಲಸವೊಂದೇ ಅಲ್ಲ.

ದಿನದ ಟ್ವೀಟ್

ಕಾಳಜಿ ವಹಿಸಬೇಕಿದೆ

ನಿರ್ದಿಷ್ಟವಾಗಿ ಭಾರತದಲ್ಲಿ ಮಾತ್ರವಲ್ಲ, ವಿಶ್ವದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಂದಿ, ಹತ್ತಾರು ಕಾಯಿಲೆಗಳಿಗೆ ಕಾರಣ ಆಗಬಲ್ಲ ವಿಟಮಿನ್ ‘ಡಿ’ ಕೊರತೆಯನ್ನು ಎದುರಿಸುತ್ತಿದ್ದಾರೆ. ಇದೊಂದು ಗಂಭೀರವಾದ ಸಾರ್ವಜನಿಕ ಸಮಸ್ಯೆಯಾಗುತ್ತಿದ್ದು, ಡಯಟ್‌ನಿಂದಷ್ಟೇ ಇದನ್ನು ಸರಿಪಡಿಸಲು ಸಾಧ್ಯವಿಲ್ಲ.

ಡಾ. ಸಂಗೀತಾ ರೆಡ್ಡಿ, ವೈದ್ಯೆ

ಕಿಡಿನುಡಿ

ಈ ಬಾರಿಯ ವಿಧಾನಪರಿಷತ್ ಚುನಾವಣೆಯಲ್ಲೂ ಹಣವೇ ಸದ್ದು ಮಾಡಿತು. ಧರ್ಮಸ್ಥಳ ಮಂಜುನಾಥಸ್ವಾಮಿಯ ಬೆಳ್ಳಿ ನಾಣ್ಯ ಮಾಡಿ, ಅದರಲ್ಲಿ ಉಪ್ಪು, ಮಾರಿಯ ತಲೆಕೂದಲು ಹಾಕಿ, ಅದಕ್ಕೆ ನಮಸ್ಕಾರ ಮಾಡಿಸಿಕೊಂಡಿದ್ದಾರೆ. ಗ್ರಾಮ ಪಂಚಾಯಿತಿ ಸದಸ್ಯರು ಮತ ಹಾಕುವುದಾಗಿ ಪ್ರಮಾಣ ಮಾಡಿ ಹಣ ಪಡೆದಿದ್ದಾರೆ. ಇದೆಂಥಾ ವ್ಯವಸ್ಥೆ?

ಜಿ.ಟಿ.ದೇವೇಗೌಡ, ಜೆಡಿಎಸ್ ಶಾಸಕ

25 ವರ್ಷಗಳ ಹಿಂದೆ

ಬುಧವಾರ, 11-12-1996

• ಜಯಲಲಿತಾ ಆಸ್ತಿ ಇನ್ನಷ್ಟು ಚಿನ್ನ, ಬೆಳ್ಳಿ ಪತ್ತೆ

ಚೆನ್ನೈ, ಡಿ. 10 (ಪಿಟಿಐ)– ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ನಿವಾಸದ ಶೋಧ ನಾಲ್ಕನೇ ದಿನವಾದ ಇಂದೂ ಮುಂದುವರಿಯಿತು.

ವಿವಿಧ ಪ್ರದೇಶಗಳಲ್ಲಿನ ಅವರ ನಿವಾಸಗಳಲ್ಲಿ ಪತ್ತೆಯಾದ ವಸ್ತುಗಳಲ್ಲಿ 400 ಜೊತೆ ವಜ್ರಖಚಿತ ಬಳೆಗಳು, 200 ಸವರನ್ ಚಿನ್ನದ ತಟ್ಟೆಗಳು, ಸುಮಾರು 750 ಕೆ.ಜಿ ತೂಕದ ಬೆಳ್ಳಿ ತಟ್ಟೆಗಳು, 100 ವಜ್ರಖಚಿತ ವಾಚುಗಳು, 79 ಗ್ರಾಂ ತೂಕದ ಚಿನ್ನದ ಭರ್ಜಿ ಹಾಗೂ 200 ಸವರನ್ ತೂಕದ ಚಿನ್ನದ ಕತ್ತಿ ಇವು ಸೇರಿವೆ. ಜಯಲಲಿತಾ ಅವರು ವಾಸಿಸುತ್ತಿರುವ ಬಂಗ್ಲೆಯಲ್ಲಿ ಹವಾನಿಯಂತ್ರಿತ 50 ಕೋಣೆಗಳಿವೆ. ಇದಕ್ಕೆ ತಾಗಿಕೊಂಡು 3 ಮಹಡಿಗಳ ಇನ್ನೊಂದು ಬಂಗ್ಲೆ ಇದೆ. ಬಂಗ್ಲೆಯ ಕೊನೆಯ ಮಹಡಿಯಲ್ಲಿ ಮಿನಿ ಸಿನಿಮಾ ಮಂದಿರ ಇರುವುದು ಪತ್ತೆಯಾಗಿದೆ.

• ಕಾಂಗ್ರೆಸ್‌ಗೆ ಬಂಗಾರಪ್ಪ ಸೇರ್ಪಡೆ

ನವದೆಹಲಿ, ಡಿ. 10– ನಿರೀಕ್ಷೆಯಂತೆ, ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹಾಗೂ ಲೋಕಸಭೆ ಸದಸ್ಯ ಎಸ್. ಬಂಗಾರಪ್ಪ ಅವರು ಇಂದು ಅಧಿಕೃತವಾಗಿ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಮರಳಿದರು. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರ ಮರು ಪ್ರವೇಶವನ್ನು ಇಂದು ಎಐಸಿಸಿ ವಕ್ತಾರ ವಿ.ಎನ್. ಗಾಡ್ಗೀಳ್ ಅವರು ಪ್ರಕಟಿಸಿದರು.

ಎಐಸಿಸಿ ಕಾರ್ಯಾಲಯದಲ್ಲಿ ನಡೆದ ದೈನಂದಿನ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತ-ರಿದ್ದ ಬಂಗಾರಪ್ಪ ಅವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಗುಲಾಂ ನಬಿ ಆಜಾದ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಧರ್ಮಸಿಂಗ್ ಅವರು ಸ್ವಾಗತಿಸಿದರು.

50 ವರ್ಷಗಳ ಹಿಂದೆ

ಶನಿವಾರ, 11-12-1971

• ಛಂಬ್‌ನಲ್ಲಿ ಭೀಕರ ಕದನ: ಕಂಗೆಟ್ಟ ಶತ್ರುಪಡೆ ಹಿನ್ನಡೆ

ನವದೆಹಲಿ, ಡಿ. 10– ಇಂದು ಪೂರ್ವ ವಲಯ ರಣರಂಗದಲ್ಲಿ ಭಾರತೀಯ ಪಡೆಗಳ ಮಿಂಚಿನ ಕಾರ್ಯಾಚರಣೆಯಿಂದ ಬಾಂಗ್ಲಾ ದೇಶದ ಢಾಕಾ ಪತನ ಸನ್ನಿಹಿತವಾದಂತೆ ಪಶ್ಚಿಮ ವಲಯದ ಛಂಬ್‌ನಲ್ಲಿ ತೀವ್ರ ಪೆಟ್ಟು ತಿಂದು ಕಂಗೆಟ್ಟ ಶತ್ರುಪಡೆಗಳು ಹಿಮ್ಮೆಟ್ಟಿದವು.

ಅಡೆತಡೆಗಳಿಲ್ಲದೆ ಮಿಂಚಿನ ವೇಗದಲ್ಲಿ ನುಗ್ಗುತ್ತಿರುವ ಭಾರತೀಯ ಪಡೆಗಳಿಗೆ ಢಾಕಾ ಪತನ ಸನ್ನಿಹಿತವಾದಂತೆ ಇಂದು ಭಾರತೀಯ ವಿಮಾನಗಳು ರಾಕೆಟ್ ದಾಳಿಯಿಂದ ಢಾಕಾ ರೇಡಿಯೊ ಕೇಂದ್ರವನ್ನು ಸ್ತಬ್ಧಗೊಳಿಸಿದವು.

• ‘ಜಯ ನಮ್ಮದು’ ಸಮರವೀರರಿಗೆ ಪ್ರಧಾನಿ ಸಂದೇಶ

ನವದೆಹಲಿ, ಡಿ. 10– ‘ಇಡೀ ರಾಷ್ಟ್ರ ನಿಮ್ಮನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಿದೆ. ಜನತೆ ನಿಮ್ಮೊಂದಿಗಿದೆ’ ಎಂದು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಸಶಸ್ತ್ರ ಪಡೆಗಳಿಗೆ ಅಭಿನಂದನಾ ಸಂದೇಶ ನೀಡಿದ್ದಾರೆ.

ಸಶಸ್ತ್ರ ಪಡೆಗಳ ಅಧಿಕಾರಿಗಳನ್ನು ಉದ್ದೇಶಿಸಿ ಇಂದು ಪ್ರಸಾರ ಭಾಷಣ ಮಾಡಿದ ಅವರು, ‘ಎಲ್ಲ ಮತ, ಧರ್ಮಗಳ ಜನರು ನಮ್ಮ ಸಹೋದರರು ಎಂಬ ಮಹಾನ್ ತತ್ವದ ರಕ್ಷಣೆಗಾಗಿ ನಾವು, ನೀವು ಹೋರಾಟ ನಡೆಸಿದ್ದೇವೆ’ ಎಂದು ತಿಳಿಸಿದರು.

ಪರ್ವತಗಳನ್ನು ಸಂರಕ್ಷಿಸುವ ಕ್ರಮವನ್ನು ನೇಪಾಳದಿಂದ ಕಲಿಯೋಣ

ಪ್ರಯಾಸದ ಪರ್ವತ ಪ್ರವಾಸ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ನಮ್ಮ ಪಶ್ಚಿಮ ಘಟ್ಟ, ಹಿಮಾಲಯ ಪರ್ವತ, ಅರಾವಳಿ ಬೆಟ್ಟ ಸಾಲುಗಳನ್ನು ಚಿತ್ರಗಳಲ್ಲಿ ಕಂಡಾಗ, ಪ್ರವಾಸ ಮಾಡಿ ಖುದ್ದಾಗಿ ನೋಡಿದಾಗ ಆಗುವ ಆನಂದ ಹೇಳತೀರದು. ಟ್ರೆಕ್ಕಿಂಗ್, ಕ್ಲೈಂಬಿಂಗ್, ತೀರ್ಥಯಾತ್ರೆ ಮತ್ತು ರಜೆಯ ಮೋಜಿಗಾಗಿ ಪರ್ವತ ಪ್ರದೇಶಗಳಿಗೆ ನಾವೆಲ್ಲ ಆಗಾಗ ಭೇಟಿ ನೀಡುತ್ತೇವೆ. ಜಲಪಾತಗಳ ವೈಭವ, ವನರಾಶಿ, ಚಿಟ್ಟೆ, ಕೀಟ, ಪಕ್ಷಿ- ಪ್ರಾಣಿ- ಮರ, ಝರಿ, ತಂಗಾಳಿ, ಕುಳಿರ್ಗಾಳಿ, ಮಳೆ, ವಿಹಂಗಮ ನೋಟ, ಒಡಲೊಳಗಿನ ಸತ್ವಶಾಲಿ ಅದಿರು, ಗಿಡಮೂಲಿಕೆ, ಬುಡಕಟ್ಟು ಜನರ ಜೀವನವೈವಿಧ್ಯ, ಕಟ್ಟುಪಾಡು, ಔಷಧಕ್ರಮ, ನೆಲಮೂಲದ ಜ್ಞಾನಗಳನ್ನು ಕಂಡು ಜೀವನ ಸಾರ್ಥಕ ವಾಯಿತು ಎಂದುಕೊಳ್ಳುತ್ತೇವೆ. ಅಲ್ಲಿನ ಅಧ್ವಾನಗಳನ್ನು ನೋಡಿ ಕೆಂಡಾಮಂಡಲ ಕೋಪ ಬರುವುದೂ ಇದೆ.

ಗಿರಿಶ್ರೇಣಿಗಳನ್ನು ತೆರೆದಿಟ್ಟ ತಿಜೋರಿಗಳೆಂದು ಪರಿಗಣಿಸಿ, ನಿರಂತರ ದಾಳಿ ಮಾಡಿ ಸಂಪನ್ಮೂಲಗಳನ್ನೆಲ್ಲಾ ಮನಬಂದಂತೆ ಲೂಟಿ ಮಾಡಿಯಾದ ಮೇಲೆ ಅವುಗಳ ತಪ್ಪಲಿನಲ್ಲಿ ಮನೆ ಕಟ್ಟಿ, ಬೆಟ್ಟ ಕುಸಿತಕ್ಕೆ ಸಿಲುಕಿ ನಲುಗಿದಾಗ ‘ಅಯ್ಯೋ ಎಲ್ಲ ನಾಶವಾಯಿತಲ್ಲ’ ಎಂದು ಪರಿತಪಿಸುತ್ತೇವೆ. ಪರ್ವತಗಳ ಪ್ರಾಮುಖ್ಯ ತಿಳಿಸಲೆಂದೇ ಈ ಸಲದ ಅಂತರರಾಷ್ಟ್ರೀಯ ಪರ್ವತ ದಿನಾಚರಣೆಯನ್ನು (ಡಿ. 11) ‘ಸಸ್ಟೇನಬಲ್ ಮೌಂಟನ್ ಟೂರಿಸಂ’ (ಸುಸ್ಥಿರ ಪರ್ವತ ಪ್ರವಾಸೋದ್ಯಮ) ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.

ಅನ್ಯ ಪ್ರದೇಶಗಳಿಗೆ ಹೋಲಿಸಿದರೆ ಪರ್ವತ ಪ್ರದೇಶಗಳ ಜೀವವೈವಿಧ್ಯ ಅತ್ಯಂತ ಸೂಕ್ಷ್ಮ ಮತ್ತು ಕಿರಿದು. ಮುನ್ನೂರು ಮೀಟರ್ ಎತ್ತರವಿರುವ ಬೆಟ್ಟ ಪ್ರದೇಶವನ್ನು ಪರ್ವತ ಎನ್ನುತ್ತಾರೆ. ಜಗತ್ತಿನ ಮುಕ್ಕಾಲು ಪಾಲು ಸಿಹಿನೀರಿನ ಮೂಲಗಳು ಪರ್ವತದಲ್ಲೇ ಇವೆ. ವಿಶ್ವ ಜನಸಂಖ್ಯೆಯ ಕಾಲು ಭಾಗ ಪರ್ವತಗಳಲ್ಲಿ ಮತ್ತು ಆಸುಪಾಸಿನಲ್ಲಿ ನೆಲೆ ನಿಂತಿದೆ. ವಿಶ್ವಪರಂಪರೆಯ ತಾಣವೆಂಬ ಹೆಗ್ಗಳಿಕೆಯೂ ಪರ್ವತಗಳಿಗೆ ಸಂದಿದೆ.

ದಕ್ಷಿಣ ಭಾರತದ ಜಲಶಿಖರವೆಂದೇ ಕರೆಯಲಾಗುವ ಅಸಾಧಾರಣ ಜೀವವೈವಿಧ್ಯ ಮತ್ತು ಸ್ಥಳೀಯ ಪ್ರಭೇದಗಳಿಂದ ತುಂಬಿರುವ ಪಶ್ಚಿಮ ಘಟ್ಟಗಳು ತಮಿಳುನಾಡಿನಿಂದ ಗುಜರಾತಿನ ಗಡಿಯಂಚಿನ ವರೆಗೆ ಹಬ್ಬಿದ್ದು, ಕಳೆದ ನಾಲ್ಕು ದಶಕಗಳಿಂದ ಗಣಿಗಾರಿಕೆ, ಸುರಂಗ ಮಾರ್ಗ, ರೈಲು ಮಾರ್ಗ, ಜಲವಿದ್ಯುತ್ ಯೋಜನೆ, ಮರಳು ಸಾಗಣೆ, ಅಣುಸ್ಥಾವರದ ಯೋಜನೆಗಳಿಂದ ತತ್ತರಿಸಿ ಹೋಗಿವೆ. ಥಾರ್ ಮರುಭೂಮಿಯ ವಿಸ್ತರಣೆಗೆ ತಡೆಗೋಡೆಯಾಗಿ ನಿಂತು ತನ್ನ ವ್ಯಾಪ್ತಿಯ 20ಕ್ಕೂ ಹೆಚ್ಚು ಅಭಯಾರಣ್ಯಗಳ ಲಕ್ಷೋಪಲಕ್ಷ ಜೀವಜಂತುಗಳಿಗೆ ನೆಲೆ ನೀಡಿರುವ ಅರಾವಳಿ ತನ್ನೊಳಗಿನ ಗುಲಾಬಿ ಗ್ರಾನೈಟ್, ಡೋಲೋಮೈಟ್, ಫಾಸ್ಫೋರೈಟ್‌ಗಳಿಂದ ಸಿಡಿಮದ್ದಿನ ಪಾಲಾಗಿ ಛಿದ್ರವಾಗಿ ನೆಲಕ್ಕುರುಳುತ್ತಿದೆ.

ಪರ್ವತ ಪ್ರವಾಸೋದ್ಯಮ ವಾರ್ಷಿಕ ಲಕ್ಷಾಂತರ ಕೋಟಿ ರೂಪಾಯಿ ಆದಾಯ ತರುತ್ತದೆ. ವಿಶ್ವದ ಪ್ರವಾಸ ವಿಧಗಳಲ್ಲಿ ಪರ್ವತ ಪ್ರವಾಸದ ಪಾಲು ಶೇ 20ರಷ್ಟಿದ್ದು, ಹೆಚ್ಚಿನ ರಂಜನೆ ನೀಡುವ ಪ್ರವಾಸ ಎಂದು ನಂಬಲಾಗಿದೆ. ಜನರ ಬಳಿ ದುಡ್ಡು ಮತ್ತು ಸಮಯ ಎರಡೂ ಇವೆ, ಸರ್ಕಾರಗಳಿಗೆ ಆದಾಯವೂ ಹೆಚ್ಚು ಎಂಬ ಕಾರಣದಿಂದ ಅದಕ್ಕೆ ಇನ್ನಿಲ್ಲದ ಪ್ರೋತ್ಸಾಹ ನೀಡಲಾಗುತ್ತಿದೆ.

ತೀರ ಮತ್ತು ದ್ವೀಪ ಪ್ರದೇಶಗಳ ಪ್ರವಾಸ ನಂಬರ್ ಒನ್ ಸ್ಥಾನದಲ್ಲಿದ್ದರೆ, ಪರ್ವತ ಪ್ರವಾಸ ಎರಡನೆಯ ಸ್ಥಾನದಲ್ಲಿದೆ. ಪರ್ವತ ಪ್ರವಾಸ ಕೆಲ ತಾಸುಗಳಿಂದ ಹಿಡಿದು ತಿಂಗಳವರೆಗೂ ವಿಸ್ತರಿಸಿಕೊಳ್ಳುತ್ತದೆ. ನೇಚರ್ ವಾಕ್, ಸೈಕಲ್, ಮೌಂಟನ್ ಬೈಕ್ ಓಡಿಸುವವರು, ಕಲ್ಲುಬಂಡೆ, ಹಿಮಕೋಡುಗಳನ್ನು ಏರುವವರು, ಹ್ಯಾಂಗ್ ಗ್ಲೈಡಿಂಗ್, ಗ್ಲೇಸಿಯರ್ ಸ್ಕೀಯಿಂಗ್, ಸ್ನೊ ಸ್ಕೂಟರಿಂಗ್, ಸ್ನೊ ಬೋರ್ಡಿಂಗ್, ಕ್ರಾಸ್ ಕಂಟ್ರಿ ಓಡುವವರು, ಸಿನಿಮಾ ಶೂಟಿಂಗ್, ಕೇವಿಂಗ್ (ಗುಹೆವಾಸ) ಮಾಡುವವರೆಲ್ಲರಿಗೂ ಪರ್ವತಗಳು ಬೇಕು. ಪ್ರವಾಸಿಗರಲ್ಲದೇ ಪರ್ವತ ಜೀವಿಪರಿಸ್ಥಿತಿ ಅಧ್ಯಯನ ಮಾಡಲು ತಜ್ಞರ ತಂಡಗಳೂ ಬರುತ್ತವೆ. ಪ್ರತೀ ಬೆಟ್ಟದ ತುದಿಯ ದೇವಸ್ಥಾನಗಳಿಗೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ. ರಾತ್ರಿ ಅಲ್ಲಿಯೇ ಕ್ಯಾಂಪ್ ಮಾಡುತ್ತಾರೆ. ಕಡಿಮೆ ಜಾಗದಲ್ಲಿ ಹೆಚ್ಚು ಜನ ಸೇರುತ್ತಾರೆ. ಟನ್‌ಗಟ್ಟಲೇ ಕಸ ಹುಟ್ಟುತ್ತದೆ. ಅಲ್ಲಿನ ಪರಿಸರ ನಾಶ ನಮ್ಮ ದುರಂತದ ಮುನ್ನುಡಿ ಎಂಬುದು ಅರಿವಾಗುವುದೇ ಇಲ್ಲ.

‘ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ’ ಎಂಬ ಕವಿಗೀತೆಯನ್ನು ಕೇಳಿ- ಹಾಡುತ್ತ ಬೆಳೆದವರು ನಾವು. ಬೆಟ್ಟ ಏರಿ ಚಿತ್ರ ಕ್ಲಿಕ್ಕಿಸುವಾಗ ಇರುವ ಪ್ರೀತಿ ಬೆಟ್ಟ ಇಳಿಯುತ್ತಿದ್ದಂತೆ ಕರಗಿ ಹೋಗಿರುತ್ತದೆ. ಎಸೆದ ಕಸದ ನೆನಪಾಗುವುದೇ ಇಲ್ಲ.

ಭೂಕಂಪ, ನೆಲಕುಸಿತ, ಲಾವಾ ಹರಿವು, ಬಂಡೆ ಕುಸಿತ, ಹಿಮಪಾತಗಳು ವಿಶ್ವದಾದ್ಯಂತ ಸಂಭವಿಸುತ್ತಿವೆ. ತ್ವರಿತವಾಗಿ ಬೆಳೆಯುತ್ತಿರುವ ವಿಶ್ವ ಪ್ರವಾಸೋದ್ಯಮ ಈಗಾಗಲೇ ಭೂಮಿ ಬಿಸಿಗೆ ಶೇ 5ರಷ್ಟು ಇಂಗಾಲದ ಡೈ ಆಕ್ಸೈಡ್ ಅನ್ನು ಸೇರಿಸುತ್ತಿದ್ದು ಮುಂದಿನ ದಶಕಗಳಲ್ಲಿ ಇದು ಇನ್ನೂ ಹೆಚ್ಚಲಿದೆ. ಬೆಟ್ಟದ ದಾರಿ ನಿರ್ಮಾಣ, ಆಟದ ಇಳಿಜಾರಿಗೆ ಕಟ್ಟೆ ಕಟ್ಟುವ ಚಟುವಟಿಕೆಗಳಿಂದ ಅಲ್ಲಿನ ಪ್ರಶಾಂತ ವಾತಾವರಣವು ಕಸ ಹಾಗೂ ಶಬ್ದ-ಮಾಲಿನ್ಯಕ್ಕೆ ಈಡಾಗುತ್ತದೆ. ಎಲ್ಲೆಲ್ಲಿಂದಲೋ ಬರುವ ಜನ ತಮ್ಮ ಚಪ್ಪಲಿ, ಆಹಾರಗಳ ಮೂಲಕ ವಾತಾವರಣಕ್ಕೆ ಹೊಂದದ, ಆಕ್ರಮಣಕಾರಿ ಸಸ್ಯಪ್ರಭೇದಗಳನ್ನೂ ತರುತ್ತಾರೆ. ಕಳೆ ಬೆಳೆದು ಸ್ಥಳೀಯ ಪ್ರಭೇದಗಳು ಒತ್ತಡಕ್ಕೆ ಸಿಲುಕುತ್ತವೆ ಇಲ್ಲವೆ ನಾಶವಾಗಿಬಿಡುತ್ತವೆ.

ನೀತಿ ಆಯೋಗ ತನ್ನ ವರದಿಯಲ್ಲಿ ಸಿಕ್ಕಿಂ ಮತ್ತು ಹಿಮಾಚಲ ಪ್ರದೇಶ ಹೊರತುಪಡಿಸಿ ಹಿಮಾಲಯದ ಬೇರೆ ಭಾಗಗಳಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಸಾಧ್ಯ ಎಂದಿದೆ. ಇಂಡಿಯನ್ ಹಿಮಾಲಯನ್ ರೀಜನ್‌ನ (ಐಎಚ್‌ಆರ್) ಪ್ರವಾಸೋದ್ಯಮವನ್ನು ಸರಿಯಾಗಿ ಅಭಿವೃದ್ಧಿಪಡಿಸಿದರೆ ದೇಶದ ಜಿಡಿಪಿಗೆ ದೊಡ್ಡ ಮೊತ್ತದ ಆದಾಯ ಸಿಗಲಿದೆ. ಸ್ಥಳೀಯ ಸಂಸ್ಕೃತಿಗೆ ಪ್ರೋತ್ಸಾಹ, ಉದ್ಯೋಗ ಸೃಷ್ಟಿ ಮತ್ತು ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥಿತ ಹಾಗೂ ಪರಿಣಾಮಕಾರಿ ಯೋಜನೆ ಜಾರಿಗೆ ತಂದರೆ ವಿಶ್ವಸಂಸ್ಥೆ ಹೇಳಿರುವ ಸುಸ್ಥಿರ ಅಭಿವೃದ್ಧಿ ಗುರಿ 8 (ಯೋಗ್ಯ ಕೆಲಸ, ಆರ್ಥಿಕ ಪ್ರಗತಿ) ಹಾಗೂ 12 (ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ) ಎರಡನ್ನೂ ಸಾಧಿಸಬಹುದು.

ಪರ್ವತಗಳನ್ನು ಸಂರಕ್ಷಿಸುವ ಕ್ರಮವನ್ನು ನೇಪಾಳ ದೇಶದಿಂದ ಕಲಿಯಬೇಕು. ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯುಡಬ್ಲ್ಯುಎಫ್) ಮತ್ತು ನೇಪಾಳ ಜಂಟಿಯಾಗಿ ಕೈಗೊಂಡಿರುವ ‘ಗ್ರೀನ್ ಹೈಕರ್’ ಅಭಿಯಾನದಲ್ಲಿ ನಿಸರ್ಗಸ್ನೇಹಿ ಪ್ರವಾಸ ಹೇಗಿರಬೇಕು ಎಂಬುದರ ಬಗ್ಗೆ ಅಲ್ಲಿಗೆ ಬಂದವರಿಂದಲೇ ಚಿತ್ರ-ವಿಡಿಯೊ ಪಡೆದು ಸಂವಾದ ನಡೆಸಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಯಾಣಿಕ ವಾಹನ ಹಾಗೂ ಸರಕುಸಾಗಣೆ ವಾಹನಗಳು ಉಗುಳುವ ಹೊಗೆ ಹಾಗೂ ದಟ್ಟಣೆಯು ಬೆಟ್ಟದ ಪ್ರಶಾಂತ ಪರಿಸರಕ್ಕೆ ದೊಡ್ಡ ಧಕ್ಕೆ ತರುತ್ತವೆಯಾದ್ದರಿಂದ ಖಾಸಗಿ ಟೂರ್ ಆಪರೇಟರ್ ಹಾಗೂ ಇತರ ವಾಹನಗಳನ್ನು ಬೆಟ್ಟದ ತಳದಲ್ಲಿಯೇ ತಡೆದು ಜನರನ್ನು ಎಲೆಕ್ಟ್ರಿಕ್ ವಾಹನಗಳಲ್ಲಿ ಕಳಿಸಿಕೊಡಲಾಗುತ್ತಿದೆ. ಅಲ್ಲಿಗೆ ತೆರಳುವ ಪ್ರತಿಯೊಬ್ಬರೂ ಒಂದು ಗಿಡ ನೆಡಬೇಕು ಇಲ್ಲವೆ ಬೆಳೆದು ನಿಂತ ಮರಗಳನ್ನು ದತ್ತು ತೆಗೆದುಕೊಂಡು ಪೋಷಿಸಬೇಕು. ಜನ ತರುವ ಆಹಾರ, ಪಾನೀಯದ ಪ್ಯಾಕೆಟ್- ಬಾಟಲಿಗಳಿಗೆ ಬೆಟ್ಟ ಪ್ರದೇಶಕ್ಕೆ ಪ್ರವೇಶವೇ ಇಲ್ಲ. ಅಲ್ಲದೆ ಬಳಸಿದ ಪೊಟ್ಟಣಗಳನ್ನು ಹಿಂತಿರುಗಿ ಬೇಸ್ ಸ್ಟೇಷನ್‌ಗೆ ತರಲೇಬೇಕು ಇಲ್ಲವೆ ಅಲ್ಲಲ್ಲೇ ನಿಗದಿ ಮಾಡಿರುವ ಜಾಗಗಳಲ್ಲಿ ವಿಲೇವಾರಿ ಮಾಡಿದ್ದಕ್ಕೆ ದಾಖಲೆ ತರಬೇಕು. ಆಗಮಾತ್ರ ಅವರವರ ಸಾಮಾನು ಪ್ರವಾಸಿಗರಿಗೆ ಸಿಗುತ್ತದೆ! ಇಂಥ ಕ್ರಮ ನಮ್ಮಲ್ಲೂ ಬರಬೇಕು.

ಚುರುಮುರಿ

(ವಿ)ದೇಶ ಪ್ರೇಮ!

• ಎಸ್.ಬಿ.ರಂಗನಾಥ್

‘**ಕಾಲೇಜ್** ಕ್ಯಾಂಪಸ್‌ಗಳಲ್ಲಿ ಕೊರೊನಾ ಹೆಚ್ಚಾಗ್ತಿದೆ, ಹುಷಾರು ಕಣಯ್ಯ’ ಎಂದೆ ಪಿಯುಸಿ ಓದುತ್ತಿದ್ದ ಕುಮಾರ ಕಂಠೀರವನಿಗೆ.

‘ಹೌದು ಡ್ಯಾಡಿ, ಮತ್ತೆ ಆನ್‌ಲೈನ್ ಕ್ಲಾಸ್ ಶುರುವಾಗ್ತಾವೇನೋ’ ಎಂದ.

ಅಷ್ಟರಲ್ಲಿ ಬಂದ ಅವನ ಅಮ್ಮನ ಉವಾಚ- ‘ಆನ್‌ಲೈನ್‌ನಲ್ಲಿ ಓದಿದೋರು ಅದೇನು ಎಂಜಿನಿಯರ್, ಡಾಕ್ಟರ್ ಆಗ್ತಾರ್ರೀ? ನಮ್ಮ ಪುಟ್ಟ ಎಂಜಿನಿಯರಿಂಗ್ ಮುಗಿಸೋವರೆಗೂ ಅದು ಬಾರದಿರಲಿ’.

‘ಎಂಜಿನಿಯರಿಂಗಲ್ಲಿ ಯಾವ ಬ್ರ್ಯಾಂಚ್ ತಗೊಳ್ತೀಯೋ?’ ನಾನು ಕೇಳಿದೆ.

‘ನಮ್ಮೂರ ಕಾಲೇಜಲ್ಲೇ ಸಿವಿಲ್ ಮಾಡ್ತೀನಿ, ಲೋಕೋಪಯೋಗಿ ಇಲಾಖೆ ಸೇರಿದ್ರೆ ಚೆನ್ನಾಗಿರುತ್ತಂತೆ’.

‘ಬೇಡ, ನೀನು ಸಾಫ್ಟ್‌ವೇರ್ ಮಾಡಿ ಅಮೆರಿಕಕ್ಕೆ ಹೋಗಬೇಕು’ ತಾಯಿಯ ಒತ್ತಾಯ.

‘ಟ್ವಿಟರ್ ಸಿಇಒ ಪರಾಗ್ ಅಗರ್‌ವಾಲರ ಕೋಟ್ಯಂತರ ರೂಪಾಯಿ ಸಂಬಳ ನೋಡಿ ಹಾಗಂತೀಯ. ಪರಾಗ್, ಇಂದ್ರಾ ನೂಯಿ, ಸುಂದರ್ ಪಿಚೈ, ಸತ್ಯ ನಾದೆಲ್ಲಾ ಅಂಥೋರು ಐಐಟಿಗಳಲ್ಲಿ ಓದಿದ ಪ್ರತಿಭಾವಂತರು. ನಿನ್ನ ಮುದ್ದಿನ ಮಗನಿಗೆ ಮನೆ ಬಾಗಿಲಲ್ಲಿರೋ ಕಾಲೇಜೇ ಆಗ್ಬೇಕಂತಲ್ಲಾ’.

ಮೊಬೈಲಲ್ಲಿ ತಲ್ಲೀನನಾಗಿದ್ದ ಮಗ ಅದನ್ನ ತಾಯಿಗೆ ತೋರಿಸಿದ.

ಚಣಕಾಲ ಬೆರಗಾಗಿ ದಿಟ್ಟಿಸಿದ ಆಕೆ ಮೆಲ್ಲಗೆ ಹೇಳಿದಳು- ‘ಅಲ್ರೀ, ನಮ್ಮ ದೇಶದ ಖರ್ಚಲ್ಲಿ ಓದಿದೋರು ವಿದೇಶಗಳ ಚಾಕರಿ ಮಾಡೋದ್ಯಾಕ್ರೀ? ಮೋದೀಜಿಯವ್ರು ಅಂಥೋರಿಗೆ ನಮ್ಮಲ್ಲೇ ಅವಕಾಶ ಮಾಡಿಕೊಡ್ತೀವಿ ಅಂದಿದಾರಲ್ಲ’.

ಮಗ- ‘ಪಪ್ಪಾ, ನಾನು ಇಲ್ಲೇ ಇದ್ದು ದೇಶ ಸೇವೆ ಮಾಡ್ತೀನಿ’.

ಮಗನ ಮೊಬೈಲ್ ಇಸಿದುಕೊಂಡು ನೋಡಿದೆ. ಅಮೆರಿಕದಲ್ಲಿ ಜೂಮ್ ಕರೆಯ ಮೂಲಕ 900 ನೌಕರರ ವಜಾ ಮಾಡಿದ ಬೆಟರ್ ಡಾಟ್ ಕಾಮ್ ಕಂಪನಿಯ ಸಿಇಒ, ಭಾರತ ಮೂಲದ ವಿಶಾಲ್ ಗಾರ್ಗ್ ಹಿಂದೆಯೂ ಉದ್ಯೋಗಿಗಳನ್ನು ಕೈಬಿಟ್ಟಾಗ ಅತ್ತಿದ್ದುದಾಗಿ ವಿವರವಿತ್ತು.

ತಾಯಿ- ಮಗನಲ್ಲಿ ದಿಢೀರನೆ ಹುಟ್ಟಿದ ದೇಶಪ್ರೇಮದ ಕಾರಣ ಗೊತ್ತಾಗಿ ದಂಗಾದೆ!

ಸಂಗತ

ಹಕ್ಕುಗಳು ಮಡುಗಟ್ಟಿದರೆ...

ಮಾನವ ಹಕ್ಕುಗಳ ಅನುಭೋಗಕ್ಕೆ ಸ್ವಯಂ ಸಂಚಕಾರವಾಗುವ ವಿಪರ್ಯಾಸ ಮನುಷ್ಯನಿಗೆ!

• ಬಿ.ಎಸ್.ಭಗವಾನ್

ಒಂದು ಪ್ರಬುದ್ಧ ಜನಸಮುದಾಯವು ಮಾನವ ಹಕ್ಕುಗಳ ಅನುಷ್ಠಾನದಲ್ಲಿ ವಿಶ್ವಾಸವಿಡುತ್ತದೆ. ಪ್ರಭುತ್ವ ಎಡವಿದರೆ ಅದನ್ನು ಪ್ರಶ್ನಿಸುವ ಜನರ ಅಧಿಕಾರವನ್ನು ಮಾನ್ಯ ಮಾಡುತ್ತದೆ. ವರ್ಗ, ವರ್ಣ, ಜಾತಿ, ಮತ, ಧರ್ಮ, ಗಡಿ, ಜನಾಂಗೀಯತೆ, ಭಾಷೆ ಮೀರಿದ ಸ್ವಾತಂತ್ರ್ಯ ವಿಜೃಂಭಿಸಬೇಕು. ತೃಪ್ತಿಯುತ, ನೆಮ್ಮದಿಯ ಸಂಪೂರ್ಣ ಜೀವನ ಯಾರ ಕೈಯೂ ತಪ್ಪಬಾರದು. ಪ್ರತಿಯೊಬ್ಬರೂ ಸಮಾನತೆ, ಘನತೆ, ಗೌರವ ಆಧಾರಿತ ಗುಣಮಟ್ಟದ ಜೀವನ ನಡೆಸಬೇಕೆನ್ನುವುದೇ ಆಶಯ.

ಮಾನವ ಹಕ್ಕುಗಳೆಂದರೆ ಬದುಕುವ ಹಕ್ಕುಗಳು, ವ್ಯಕ್ತಿಗೆ ಹುಟ್ಟಿನಿಂದ ಸಾವಿನವರೆಗೆ ಇರಬೇಕಾದ ಮೂಲ ಹಕ್ಕುಗಳು. ಅಂದಹಾಗೆ ಮಾನವ ಹಕ್ಕುಗಳು ಅವಕಾಶವಾಗಲೀ, ಅನುಕಂಪದ ಅನುದಾನವಾಗಲೀ ಅಲ್ಲ. ಅವು ಸಾರ್ವತ್ರಿಕವು ಹಾಗೂ ಹಸ್ತಾಂತರಗೊಳಿಸಲಾಗದವು.

ಜಗತ್ತು ವೈವಿಧ್ಯಮಯ ಗುಣಲಕ್ಷಣಗಳುಳ್ಳ ಜನರಿರುವ ಆವಾಸ. ಆದರೇನು, ಸರ್ವರೂ ಸಮಾನರು, ಸಮಾನವಾಗಿ ಪರಿಗಣಿಸಲ್ಪಡಬೇಕಾದವರು. ಉಳ್ಳವರು, ಬಲಾಢ್ಯರು ತಮ್ಮ ಪ್ರಭಾವದಿಂದ ಇತರರನ್ನು ಸಲ್ಲದ ರೀತಿಯಲ್ಲಿ ನಡೆಸಿಕೊಳ್ಳುವ ಪ್ರವೃತ್ತಿ ಅಮಾನವೀಯ. ನಮ್ಮ ನಿತ್ಯ ಬದುಕಿನ ಒಂದಷ್ಟು ನಿದರ್ಶನಗಳನ್ನು ಅವಲೋಕಿಸೋಣ. ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲಿನಲ್ಲಿ ತನ್ಮಯರಾದರೆ ಪರರ ಖಾಸಗಿತನಕ್ಕೆ ಚ್ಯುತಿ. ಅಕ್ಕಪಕ್ಕದವರ ಮನೆ ಮುಂದೆ ಕಾರು ನಿಲ್ಲಿಸಿದರೆ ಅಥವಾ ಇಳಿಜಾರುಂಟೆಂಬ ಕಾರಣಕ್ಕೆ ಕೊಳಾಯಿ ನೀರನ್ನೆಲ್ಲ ಸಂಗ್ರಹಿಸಿದರೆ ಆಸುಪಾಸಿನವರ ಪಾಡು ಎಂಥದ್ದು ಯೋಚಿಸಬೇಕಲ್ಲವೆ?

ಹಕ್ಕುಗಳಿಗೆ ತಕ್ಕಂತೆ ಆಯಾ ಜವಾಬ್ದಾರಿಗಳೂ ಲಗತ್ತಾಗಿರುತ್ತವೆ. ಹಕ್ಕು, ಹೊಣೆಗಾರಿಕೆ ಒಂದೇ ನಾಣ್ಯದ ಎರಡು ಮುಖಗಳು. ನಮ್ಮ ಪರಂಪರೆಯಲ್ಲಿ ಮಾನವ ಹಕ್ಕುಗಳು ವಿಸ್ತೃತವಾಗಿ ಪ್ರಸ್ತಾಪಗೊಂಡಿವೆ. ಪಂಪ ‘ಮನುಷ್ಯಜಾತಿ ತಾನೊಂದೆ ವಲಂ’ ಎಂದು ಮಾನವರ ನಡುವೆ ಭೇದ ಅಸಂಗತ ಎಂದಿದ್ದಾನೆ. ಸರ್ವಜ್ಞ, ತನ್ನಂತೆ ಪರರ ಬಗೆದೊಡೆ ಅಲ್ಲೇ ಕಲ್ಯಾಣ ಎಂದು ಉದ್ಗರಿಸುತ್ತಾನೆ. ಹಳ್ಳದಲ್ಲಿ ಬಿದ್ದ ಕೀಲಿಕೈ ತೆಗೆದುಕೊಳ್ಳಲು ಇನ್ನೊಬ್ಬರ ನೆರವು ಪಡೆಯುವ ಮುನ್ನ ಅವರಿಗೂ ನಮ್ಮಷ್ಟೇ ಅಪಾಯಾಸ್ಪದ ಎನ್ನುವ ಪ್ರಜ್ಞೆ ಮೂಡಿದರೆ ಮಾನವ ಹಕ್ಕನ್ನು ಆದರಿಸುವ ದಿಸೆಯಲ್ಲಿ ಒಂದು ಹೆಜ್ಜೆ ಇರಿಸಿದಂತೆಯೆ.

ಲಾರ್ಡ್ ವಿಲಿಯಂ ಬೆಂಟಿಂಕ್ ಭಾರತದ ಗವರ್ನರ್ ಜನರಲ್ ಆಗಿದ್ದರು. ಸಮಾಜ ಸುಧಾರಕ ರಾಜಾ ರಾಮ್ ಮೋಹನ್ ರಾಯ್ ಅವರು ತಾಂಡವವಾಡುತ್ತಿದ್ದ ಸಾಮಾಜಿಕ ಮೌಢ್ಯಾಚರಣೆಗಳ ಬಗ್ಗೆ ಬೆಂಟಿಂಕ್‌ರೊಂದಿಗೆ ಚರ್ಚಿಸಿದರು. ಈ ಇಬ್ಬರೂ ಮಹನೀಯರಿಗೆ ‘ಸತಿ’ ಕ್ರೂರ ಪದ್ಧತಿಯನ್ನು ನಿಷೇಧಿಸಲೇಬೇಕೆನ್ನಿಸಿತು. ಸಂಕಲ್ಪಿಸಿದರು, ಹೋರಾಡಿದರು, ಗೆದ್ದರು. ಬಾಲ್ಯವಿವಾಹದ ತಡೆಗೂ ಭದ್ರ ಬುನಾದಿ ಹಾಕಿದರು. ಇತಿಹಾಸದಲ್ಲಿ ಅಸಾಮಾನ್ಯ ತಾರೆಗಳಾದರು.

ಮಾನವ ಹಕ್ಕುಗಳ ಅನುಭೋಗಿಗಳಾದರೆ ಮಾತ್ರ ಸಾಲದು. ಅವರು ತಮ್ಮಂತೆಯೆ ಎಲ್ಲರೂ ಮಾನವ ಹಕ್ಕುಗಳಿಗೆ ಅರ್ಹರೆನ್ನುವುದನ್ನು ಮನಗಾಣಬೇಕು. ಆದರೆ ಸಂಪತ್ತು, ಸವಲತ್ತು ಪ್ರವಹಿಸದೆ ಒಂದೆಡೆಯೇ ಮಡುಗಟ್ಟಿ ‘ಸಿಕ್ಕಿದವರಿಗೆ ಸೀರುಂಡೆ’ ಆಗಿದೆ. ಬಡವರು ಹೆಚ್ಚು ಬಡವರಾಗುತ್ತಿದ್ದಾರೆ, ಸಿರಿವಂತರೂ ಹೆಚ್ಚು ಸಿರಿವಂತರಾಗುತ್ತಿದ್ದಾರೆ. ಅರ್ಥಶಾಸ್ತ್ರದ ಅದೇ ಹಳೆಯ ಪಾಠ! ಸಮ ಸಮಾಜಕ್ಕೆ ಅಡ್ಡಿ.

ಐಷಾರಾಮಿ ಜೀವನಕ್ಕೆ ಅತಿಯಾದ ಇಂಧನ ಸಂಪನ್ಮೂಲಗಳ ಬಳಕೆಯ ಪರಿಣಾಮ ತಿಳಿದದ್ದೆ. ಮಿತಿಮೀರಿದ ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ವಾತಾವರಣ ಸೇರುತ್ತಿದೆ. ಭೂಮಿ ಬಿಸಿಯೇರಿ ಧ್ರುವ ಪ್ರದೇಶಗಳು ಕರಗತೊಡಗಿವೆ. ಒಟ್ಟಾರೆ ಮನುಷ್ಯ ತನ್ನ ಕೈಯಾರೆ ಎಡವಟ್ಟಿಗೆ ಮಣೆ ಹಾಕುತ್ತಿದ್ದಾನೆ. ಮಾನವ ಹಕ್ಕುಗಳ ಅನುಭೋಗಕ್ಕೆ ತನಗೆ ತಾನೆ ಸಂಚಕಾರವಾಗುವ ವಿಪರ್ಯಾಸ ಮನುಷ್ಯನಿಗೆ!



ವಿಶ್ವಸಂಸ್ಥೆಯ ಮಹಾಅಧಿವೇಶನವು 1948ರಲ್ಲಿ ಡಿಸೆಂಬರ್ 10ರಂದು ‘ವಿಶ್ವ ಮಾನವ ಹಕ್ಕುಗಳ ದಿನ’ ಆಚರಿಸಬೇಕೆಂದು ನಿಶ್ಚಯಿಸಿತು. 1948ಕ್ಕೂ ಮುಂಚೆ ಇದ್ದ ಪರಿಸ್ಥಿತಿ ಊಹಿಸಲೂ ಆಗದು. ಜಗತ್ತಿನ ಹಲವೆಡೆ ಅರಾಜಕತೆ. ಯುದ್ಧ, ವರ್ಗ–ವರ್ಣ ಸಂಘರ್ಷ, ಹಿಂಸೆ, ನಿಂದನೆ, ತಾರತಮ್ಯ, ಕಾರಣವಿಲ್ಲದೆ ಯಾರೇ ಯಾರನ್ನಾದರೂ ಬಂಧಿಸುವ ದಬ್ಬಾಳಿಕೆ, ಗುಲಾಮಗಿರಿ... ಒಂದೆರಡಲ್ಲ. ಗಾಬರಿ ಹುಟ್ಟಿಸುವ, ಗದರಿಕೆಯ ರುದ್ರ ತಾಂಡವ.

ವಿಶ್ವಸಂಸ್ಥೆ ‘ಇನ್ನು ಇದು ನಡೆಯದು, ಸಾಕು’ ಎಂದು ಸಾರಿತು. ಎಲ್ಲರೂ ಎಲ್ಲರಿಗಾಗಿ ಮನುಜರಂತೆ ಸಮಾನ ಹಕ್ಕು ಮತ್ತು ಹೊಣೆಗಾರಿಕೆಗಳ ಪ್ರಜ್ಞೆಯಿಂದ ನೆಮ್ಮದಿಯ ಬದುಕು ಅರಸಬೇಕೆಂದು ಕರೆಯಿತ್ತಿತು, ಜಾಗೃತಿ ಮೂಡಿಸಿತು.

ಈ ಬಾರಿಯ ಘೋಷಣಾ ವಾಕ್ಯ ‘ಮಾನವ ಹಕ್ಕುಗಳಿಗಾಗಿ ಎದ್ದು ನಿಲ್ಲಿ’. ಜಗತ್ತಿನಲ್ಲಿ ಪ್ರಜಾಪ್ರಭುತ್ವಗಳು ಸಮರ್ಥಗೊಂಡಂತೆ ಮಾನವ ಹಕ್ಕುಗಳು ಸುಸ್ಥಿರಗೊಳ್ಳುತ್ತವೆ. ಶೋಷಣೆ, ಅವಹೇಳನ, ಭ್ರಷ್ಟಾಚಾರದಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಸೆಟೆದು ನಿಲ್ಲುವ ಮನೋಸ್ಥೈರ್ಯ ತುಂಬುತ್ತವೆ. ವಿಶೇಷವಾಗಿ ಮಾನವ ಹಕ್ಕುಗಳು ಸರ್ಕಾರಗಳ ಉತ್ತರದಾಯಿತ್ವಕ್ಕೆ ಸರ್ವಮಾನ್ಯ ಮಾಪನ ಒದಗಿಸುತ್ತವೆ. ಶುದ್ಧ ನೀರು, ಸ್ವಚ್ಛ ಗಾಳಿ, ತಾಜಾ ಮಣ್ಣು ಮನುಷ್ಯನಿಗೆ ಇತರೆ ಹಕ್ಕುಗಳಷ್ಟೇ ಮುಖ್ಯ. ತಂತ್ರಜ್ಞಾನ, ಆವಿಷ್ಕಾರಗಳು ವರವೇ. ಅವುಗಳಿಂದ ಆತಂಕವೇನಿಲ್ಲ. ಏನಿದ್ದರೂ ಅವನ್ನು ಬಳಸುವ ಮನುಷ್ಯನಿಂದ!

ಸಾರಾಂಶ ಸ್ಪಷ್ಟವಿದೆ. ಗಣಕಗಳು ಮನುಷ್ಯರಂತೆ ಆಲೋಚಿಸಲು ಕಲಿಯಲಿ, ಆದರೆ ಮನುಷ್ಯರು ಗಣಕಗಳ ಹಾಗೆ ಆಲೋಚಿಸುವುದು ಬೇಡ.

ವಾಚಕರ ವಾಣಿ

ಚುನಾವಣಾ ಪ್ರಕ್ರಿಯೆ ಬದಲಾಗಲಿ

ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ನನ್ನನ್ನು ಮೈಕ್ರೊ ಅಬ್ಸರ್ವರ್ ಆಗಿ ಒಂದು ಮತಗಟ್ಟೆಗೆ ನೇಮಿಸಲಾಗಿತ್ತು. ಅಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಮಾತ್ರ ಮತದಾರರು. ಈ ಮತಗಟ್ಟೆಯಲ್ಲಿ ಕೇವಲ ಹನ್ನೆರಡು ಜನ ಮತದಾರರು. ಅದಕ್ಕಾಗಿ ನಿಯೋಜಿಸಿದ ಅಧಿಕಾರಿಗಳ ಸಂಖ್ಯೆ ಎಂಟು! ಚುನಾವಣೆ ತರಬೇತಿ ಹಾಗೂ ಚುನಾವಣೆಗೆ ಎರಡು ದಿನ ಸೇರಿ ಒಟ್ಟು ಮೂರು ದಿನಗಳಿಗೆ ಪ್ರತೀ ಬ್ಯಾಂಕ್ ಶಾಖೆಯಿಂದ ಶೇ 90ರಷ್ಟು ಸಿಬ್ಬಂದಿಯನ್ನು ಈ ಕಾರ್ಯಕ್ಕೆ ನಿಯೋಜಿಸಿದ್ದರಿಂದ ಬ್ಯಾಂಕಿನ ವಹಿವಾಟಿಗೆ ತೊಂದರೆಯಾಗಿತ್ತು.

ಒಟ್ಟು ತಾಲ್ಲೂಕಿನಲ್ಲಿ ಇರುವ ಮತದಾರರು 348. ಮತಗಟ್ಟೆಗಳ ಸಂಖ್ಯೆ 42. ಇದಕ್ಕಾಗಿ ಚುನಾವಣಾ ಪ್ರಕ್ರಿಯೆಯ ಎಲ್ಲಾ ನಿಯಮಗಳು ಪಾಲನೆಯಾಗಬೇಕು. ಇದರ ಬದಲಾಗಿ ತಾಲ್ಲೂಕು ಮುಖ್ಯಕೇಂದ್ರದಲ್ಲಿ ಒಂದೋ ಎರಡೋ ಮತಗಟ್ಟೆ ಮಾಡಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಮತದಾನ ಮಾಡಲು ವಾಹನ ವ್ಯವಸ್ಥೆ ಮಾಡಬಹುದಿತ್ತು. ಇದರಿಂದ ಆಡಳಿತ ವೆಚ್ಚ ತಗ್ಗಿಸಬಹುದಿತ್ತಲ್ಲದೆ ಇತರ ಇಲಾಖೆಗಳು ಸುಸೂತ್ರವಾಗಿ ಕೆಲಸ ನಿರ್ವಹಿಸಬಹುದಿತ್ತು.

ರಾಮಸ್ವಾಮಿ ಕಳಸವಳ್ಳಿ, ಸಾಗರ

ಭಾವನೆ ಜೊತೆಗೆ ಇರಲಿ ಜಾಗರೂಕತೆ

ನಾಯಿಗಳ ಬಗ್ಗೆ ಮಾಲೀಕರಿಗೆ ಭಾವನಾತ್ಮಕ ಮನೋಭಾವ ಸಹಜ ಮತ್ತು ಅದು ಮಾನವೀಯ ಗುಣ ಕೂಡ ಹೌದು. ಆದರೆ, ಆ ಮೂಕಪ್ರಾಣಿಗಳನ್ನು ಸಾಕುವವರು ತಮ್ಮ ಸುತ್ತಲಿನ ಪರಿಸರ, ಜನರ ಸುರಕ್ಷತೆ ಬಗ್ಗೆ ಕಾಳಜಿ ವಹಿಸದೇ ಇರುವುದನ್ನೇ ಹೆಚ್ಚಾಗಿ ನೋಡುತ್ತೇವೆ. ಈ ವಿಚಾರದಲ್ಲಿ ನ್ಯಾಯಾಲಯವು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ (ಬಿಬಿಎಂಪಿ) ಮೌಖಿಕ ಎಚ್ಚರಿಕೆ ನೀಡಿ, ಮಾಲೀಕರು ನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಗೆ ಕರೆತಂದು ಮಲ, ಮೂತ್ರ ವಿಸರ್ಜನೆ ಮಾಡಿಸುವುದನ್ನು ತಡೆಯಲು ಕ್ರಮ ಜರುಗಿಸಬೇಕು ಎಂದಿರುವುದು ಸೂಕ್ತವಾಗಿದೆ (ಪ್ರ.ವಾ., ಡಿ. 10).

ಬಿಬಿಎಂಪಿಯು ಸಮಸ್ಯೆಗಳಿಗೆ ದಂಡ ಸಂಗ್ರಹವೇ ಏಕೈಕ ಪರಿಹಾರ ಎಂದುಕೊಳ್ಳದೆ, ಮಾಲೀಕರು ಕಡ್ಡಾಯವಾಗಿ ನಾಯಿಯ ಮಲವನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ವಿಧಾನದ ಬಗ್ಗೆ ಅರಿವು ಮೂಡಿಸಬೇಕು. ಜೊತೆಗೆ ಅದನ್ನು ‘ಪ್ರತ್ಯೇಕವಾಗಿ’ ಸಂಗ್ರಹಿಸುವ ಸೌಕರ್ಯ ಒದಗಿಸಬೇಕು. ಅದು ಇತರ ತ್ಯಾಜ್ಯದೊಂದಿಗೆ ಮಿಶ್ರಣವಾಗದ ರೀತಿಯಲ್ಲಿ ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವಂತೆ ನೋಡಿಕೊಳ್ಳಬೇಕು. ಆಗ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ. ಭಾವನೆ ಜೊತೆಗೆ ಜಾಗರೂಕತೆ ಇದ್ದರೆ ಪ್ರಾಣಿಗಳ ಸಖ್ಯ ಎಷ್ಟೊಂದು ಚೆಂದ ಅಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಶುಲ್ಕ ಏರಿಸಬೇಕೇ ವಿನಾ ಇಳಿಸುವುದಲ್ಲ

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಶುಲ್ಕವನ್ನು ಪ್ರಸ್ತುತ ಇರುವ ₹ 500ರಿಂದ 250ಕ್ಕೆ ಇಳಿಸಿ, ಒಂದು ಕೋಟಿ ಸದಸ್ಯರನ್ನು ನೋಂದಾಯಿಸುವುದಾಗಿ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ. ಕಸಾಪ ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಪ್ರಾರಂಭವಾಗಿದ್ದು, ಕೇವಲ ಮತ ಗಳಿಕೆಗಾಗಿ ಸದಸ್ಯತ್ವ ಎನ್ನುವ ಬದಲಿಗೆ ಪ್ರಜ್ಞಾವಂತ ಸದಸ್ಯರ ಕೇಂದ್ರವಾಗಬೇಕು. ಚುನಾವಣೆ, ಸಮ್ಮೇಳನ ಅಲ್ಲದೆ ಇತರ ಮಾಹಿತಿಗಳೂ ದೊರಕುವಂತೆ ಎಲ್ಲ ಸದಸ್ಯರಿಗೆ ಒಂದು ಪತ್ರಿಕೆಯು ಪರಿಷತ್ತಿನಿಂದ ಹೋಗಬೇಕು. ಯಾವ ಸಂಸ್ಥೆಯೇ ಆಗಲಿ ಶುಲ್ಕ ಏರಿಕೆಯ ಕಡೆಗೆ ಗಮನ ಹರಿಸಬೇಕೇ ವಿನಾ ಇಳಿಸುವ ಕಡೆಗೆ ಮನಸ್ಸು ಮಾಡಿದರೆ ಆರ್ಥಿಕ ಹೊರೆಯನ್ನು ಅನುಭವಿಸಬೇಕಾಗುತ್ತದೆ, ಹೆಸರಿಗೆ ಹಾಗೂ ಚುನಾವಣೆಗೆ ಮಾತ್ರ ಸದಸ್ಯರು ಎಂಬಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಶುಲ್ಕ ಇಳಿಸುವ ಹಾಗೂ ಕೋಟಿ ಸದಸ್ಯರ ಯೋಜನೆಯನ್ನು ವಾಸ್ತವ ನೆಲೆಯಲ್ಲಿ ನೋಡುವ ಬಗ್ಗೆ ಆಲೋಚನೆ ನಡೆಯಲಿ.

ಈ.ಬಸವರಾಜು, ಬೆಂಗಳೂರು

ಅತಿಶಯೋಕ್ತಿ ಎನಿಸದ ನಡೆ!

ಗುತ್ತಿಗೆದಾರರು ಶೇ 40ರಷ್ಟು ಕಮಿಷನ್ ನೀಡಬೇಕಾದ ಸ್ಥಿತಿ ಬಗ್ಗೆ ಪ್ರಧಾನಿಗೆ ಪತ್ರ ಬರೆದ ಸುದ್ದಿ ಆಡಳಿತ ಪಕ್ಷದ ವಿರುದ್ಧ ವಿರೋಧ ಪಕ್ಷದವರು ಕಿಡಿಕಾರಲು ಉಪಯೋಗವಾಯಿತು. ಆದರೆ ಜನಸಾಮಾನ್ಯರಿಗೆ ಇದು ಅತಿಶಯೋಕ್ತಿ ಎನಿಸಲಿಲ್ಲ. ಇದು ಸಾರ್ವಜನಿಕ ಸತ್ಯ ಎಂದು ಜನರು ಸುಮ್ಮನಾದಂತಿದೆ. ಹೊರೆಯಾದ ಶುಲ್ಕವನ್ನು ಭರಿಸದೇ ಇದ್ದ ವಿದ್ಯಾರ್ಥಿಯನ್ನು ತರಗತಿಯಿಂದ ಹೊರಹಾಕಿದ್ದಕ್ಕೆ ಅವರ ತಂದೆಯು ಪ್ರಧಾನಿಗೆ ಪತ್ರ ಬರೆದು ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ.

ಇದನ್ನೆಲ್ಲ ನೋಡಿದರೆ, ನಾವೆಲ್ಲ ಏಕಿದ್ದೇವೆ ಎಂದು ಜನಪ್ರತಿನಿಧಿಗಳೆಲ್ಲ ಪ್ರಶ್ನಿಸಿಕೊಳ್ಳುವ ಕಾಲ ಬಂದಂತಿದೆ. ಸಂವೇದನೆ ಉಳ್ಳವರು ಪ್ರಶ್ನಿಸಿಕೊಳ್ಳುವರೇ? ಇಲ್ಲ, ನಮಗೆ ಪತ್ರ ಬರಲಿಲ್ಲವಲ್ಲ, ನಾವು ಪ್ರಶ್ನಾತೀತರು ಅಲ್ಲವೇ ಎಂದುಕೊಂಡು ಸುಮ್ಮನಾಗುವರೇ?

ಮಲ್ಲಿಕಾರ್ಜುನ, ಸುರಧೇನುಪುರ

ಭಾಷೆ: ಯಾವುದೂ ಶುದ್ಧವಲ್ಲ ಮತ್ತೊಂದಕ್ಕಿಂತ

‘ಜಗತ್ತಿನಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆ ಮಾತ್ರ ಅತ್ಯಂತ ಶುದ್ಧ ಎಂಬ ಕೀರ್ತಿಗೆ ಪಾತ್ರವಾಗಿವೆ’ ಎಂಬ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಹೇಳಿಕೆ ಈ ಎರಡು ಭಾಷೆಗಳ ಬಗ್ಗೆ ಅವರಿಗಿರುವ ಮೋಹವನ್ನು ಹೇಳುತ್ತದೆಯೇ ವಿನಾ ವೈಜ್ಞಾನಿಕವಾಗಿ ಸರಿಯಲ್ಲ. ಜಗತ್ತಿನಲ್ಲಿ ಈಗ ಬಳಕೆಯಾಗುತ್ತಿರುವ ಸಾವಿರಾರು ಭಾಷೆಗಳಲ್ಲಿ ಯಾವೊಂದು ಭಾಷೆಯೂ ಮತ್ತೊಂದಕ್ಕಿಂತ ಶುದ್ಧವೂ ಅಲ್ಲ ಅಶುದ್ಧವೂ ಅಲ್ಲ. ಬಳಕೆಯಾಗುತ್ತಿರುವ ಪ್ರತಿಯೊಂದು ಭಾಷೆಯಲ್ಲಿಯೂ ಹತ್ತಾರು ಬಗೆಯ ಪ್ರಾದೇಶಿಕ ಉಪಭಾಷೆಗಳು ಮತ್ತು ನೂರಾರು ಬಗೆಯ ಸಾಮಾಜಿಕ ಉಪ ಭಾಷೆಗಳು ಇರುತ್ತವೆಯೇ ವಿನಾ ಅವುಗಳಲ್ಲಿ ಯಾವೊಂದು ಬಗೆಯೂ ಮತ್ತೊಂದಕ್ಕಿಂತ ಶುದ್ಧವಲ್ಲ.

ಕರ್ನಾಟಕದ ಉದ್ದಗಲದಲ್ಲಿ ಬಳಕೆಯಾಗುತ್ತಿರುವ ಕನ್ನಡದ ಮಾತಿನಲ್ಲಿ ಪ್ರತೀ ಹತ್ತು ಹದಿನೈದು ಕಿಲೊ ಮೀಟರ್ ಅಂತರದಲ್ಲಿ ಕನ್ನಡಿಗರು ಉಚ್ಚಾರಣೆ ಮಾಡುವ ಮಾತಿನ ಧ್ವನಿಗಳಲ್ಲಿ, ಪದರೂಪಗಳಲ್ಲಿ ಮತ್ತು ವಾಕ್ಯಗಳಲ್ಲಿ ಸ್ವಲ್ಪ-ಮಟ್ಟಿನ ವ್ಯತ್ಯಾಸಗಳು ಕಂಡುಬರುತ್ತವೆ. ಊರುಗಳ ಅಂತರ ಹೆಚ್ಚಾದಂತೆಲ್ಲ ನುಡಿ ಸಾಮಗ್ರಿಗಳ ಉಚ್ಚಾರಣೆಯ ಸ್ವರೂಪದಲ್ಲಿನ ವ್ಯತ್ಯಾಸವೂ ಹೆಚ್ಚಾಗುತ್ತದೆ. ಇದು ಕನ್ನಡ ಭಾಷೆಯಲ್ಲಿರುವ ಒಳನುಡಿಗಳ ಬಗೆಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಯಾವೊಂದು ರೂಪದ ಕನ್ನಡವನ್ನು ‘ಇದು ಶುದ್ಧ ಕನ್ನಡವಲ್ಲ ಹಾಗೂ ಸ್ಪಷ್ಟ ಕನ್ನಡವಲ್ಲ’ ಎಂದು ನಿರಾಕರಿಸಬಾರದು.

ಸಿ.ಪಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮತಾಂತರ ನಿಷೇಧ ಕಾಯ್ದೆಯ ಅಗತ್ಯ ಇದೆಯೇ?

ಕ್ರೈಸ್ತರ ಹಿಂಸಿಸುವುದೇ ಮಸೂದೆಯ ಉದ್ದೇಶ

ಸ್ವಇಚ್ಛೆಯಿಂದ ಮತಾಂತರವಾಗುವುದು ತಪ್ಪೇ? ಮತಾಂತರ ಅಪರಾಧವಲ್ಲ. ಅದೊಂದು ಬಿಡುಗಡೆಯ ಅಸ್ತ್ರ. ಎಲ್ಲಿ ಸಮಾನತೆ, ಆತ್ಮಶಾಂತಿ ಇಲ್ಲವೋ ಅಲ್ಲಿಂದ ಹೊರನಡೆದು ನಮಗೆ ಬೇಕಾದ ಧರ್ಮವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಸಂವಿಧಾನ ನಮಗೆ ನೀಡಿದೆ. ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರೇ ಬೌದ್ಧ ಧರ್ಮಕ್ಕೆ ಮತಾಂತರವಾದರು ಎಂಬುದನ್ನು ನಾವು ಮನಗಾಣಬೇಕಿದೆ

ಪ್ರಜಾವಾಣಿ ಚರ್ಚೆ

• ಪೀಟರ್ ಮಚಾದೊ

ಸರ್ಕಾರದ ಪಡಸಾಲೆಯಿಂದಲೇ ಆರಂಭವಾದ ರಾಜ್ಯದಲ್ಲಿನ ಮತಾಂತರದ ಚರ್ಚೆಯು ಕ್ಷಿಪ್ರ ವೇಗವನ್ನು ಪಡೆದುಕೊಂಡು ಈ ಕ್ಷಣಕ್ಕೆ ರಾಜ್ಯವನ್ನು ಮೀರಿ, ರಾಷ್ಟ್ರೀಯ ಸುದ್ದಿಯಾಗಿದೆ; ಈ ಹೊತ್ತಿನಲ್ಲಿ, ಅತ್ತ ಸರ್ಕಾರವು ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯನ್ನು ಮಂಡಿಸಲು ಸರ್ವ ಸನ್ನದ್ಧವಾಗಿದೆ. ಸಂವಿಧಾನ ವಿರೋಧಿಯಾಗಿರುವ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಈ ನೆಲದ ಕ್ರೈಸ್ತರ ಅಸ್ಮಿತೆಯನ್ನು ನಗಣ್ಯ ಮಾಡುವ ಪ್ರಯತ್ನವನ್ನು ಮಾಡುತ್ತಿದೆ.

ವಿಧಾನಸಭೆಯ ಕಳೆದ ಅಧಿವೇಶನದಲ್ಲಿ ಮಾತನಾಡಿದ್ದ ಹೊಸದುರ್ಗ ಶಾಸಕ ಗೂಳಿಹಟ್ಟಿ ಶೇಖರ್ ಮತಾಂತರದ ಕುರಿತು ಪ್ರಸ್ತಾಪಿಸಿದ್ದರು. ತಮ್ಮ ತಾಲೂಕಿನಲ್ಲಿ ಭಾರಿ ದೊಡ್ಡ ಪ್ರಮಾಣದಲ್ಲಿ ಬಲವಂತದ ಅಥವಾ ಆಮಿಷದ ಮತಾಂತರಗಳು ನಡೆಯುತ್ತಿವೆ ಎಂದು ಹೇಳಿದ್ದರು. ಸ್ವತಃ ತಮ್ಮ ತಾಯಿಯೇ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದಾರೆ ಎಂದು ದೂರಿದ್ದರು. ಈ ಘಟನೆಯ ನಂತರ ಕ್ರೈಸ್ತ ಧರ್ಮದ ಮೇಲೆ ಭುಗಿಲೆದ್ದ ಅಸಮಾಧಾನ ಒಂದು ತಿಂಗಳ ಅವಧಿಯಲ್ಲಿ ಅನೇಕ ಚರ್ಚುಗಳ, ಪ್ರಾರ್ಥನಾಲಯಗಳ ಮೇಲಿನ ದಾಳಿಗೆ ಕಾರಣವಾಯಿತು. ಸಾರ್ವಜನಿಕವಾಗಿ ಕ್ರೈಸ್ತರು ಪ್ರಾರ್ಥಿಸುವುದು ಸಹ ತಪ್ಪು ಎಂಬಂತೆ ಸರ್ಕಾರದ ಅನೇಕ ಪ್ರಾಧಿಕಾರಗಳು ಕ್ರೈಸ್ತ ಸಮುದಾಯದ ಜನರನ್ನು ಅಪರಾಧಿಗಳಂತೆ ಕಂಡವು. ಸ್ವಇಚ್ಛೆಯ ಮತಾಂತರ - ಬಲವಂತದ ಮತಾಂತರ ಹಾಗೂ ಆಮಿಷ ಒಡ್ಡಿ ಮಾಡುವ ಮತಾಂತರದ ಜಿಜ್ಞಾಸೆಯಲ್ಲಿ ಕ್ರೈಸ್ತ ಧರ್ಮ ಏಕೆ ಮತಾಂತರ ನಿಷೇಧ ಮಸೂದೆಯನ್ನು ವಿರೋಧಿಸುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸುತ್ತೇನೆ.

ಭಾರತದ ಸಂವಿಧಾನದ 25ನೇ ವಿಧಿಯು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದೆ. ಈ ಸಂಪೂರ್ಣ ಸ್ವಾತಂತ್ರ್ಯದ ಪರಿಧಿಯೊಳಗೆ ಧಾರ್ಮಿಕ ಸ್ವಾತಂತ್ರ್ಯವೂ ಇದೆ. ತನಗಿಷ್ಟವಾದ ಧರ್ಮವನ್ನು ಮುಕ್ತವಾಗಿ ಆಚರಿಸುವ ಹಾಗೂ ಅದನ್ನು ಪ್ರಚಾರ ಮಾಡುವ ಹಕ್ಕನ್ನು ಸಂವಿಧಾನವು ನೀಡಿದೆ. ಹೀಗಿರುವಾಗ, ಈ ನೆಲದ ಕ್ರೈಸ್ತರು ಎಲ್ಲಿಂದಲೋ ಬಂದ ದೇಶಾಂತರಿಗಳಲ್ಲ. ಇದೇ ಭರತ ಭೂಮಿಯ ಮಣ್ಣಿನ ಮಕ್ಕಳು. ಈ ದೇಶದ ಪ್ರಜೆಗಳಾಗಿ ತಮ್ಮ ಧರ್ಮವನ್ನು ಆಚರಿಸುವ ಹಕ್ಕನ್ನು ಹೊಂದಿರುವವರು.

ದೇಶದಲ್ಲಿ ಭಾರಿ ಪ್ರಮಾಣದ ಮತಾಂತರದಿಂದಾಗಿ ಹಿಂದೂಗಳ ಸಂಖ್ಯೆ ಕ್ಷೀಣಿಸುತ್ತಿದೆ; ಕ್ರೈಸ್ತರ ಸಂಖ್ಯೆ ಅಧಿಕವಾಗುತ್ತಿದೆ ಎನ್ನುವವರು ಈ ಕುರಿತು ಸತ್ಯಾಂಶಗಳನ್ನು ಪರಿಶೀಲಿಸಬೇಕು. 2001ರ ಸಾರ್ವತ್ರಿಕ ಜನಗಣತಿಯ ಪ್ರಕಾರ ದೇಶದಲ್ಲಿನ ಕ್ರೈಸ್ತ ಸಮುದಾಯದ ಜನರ ಪ್ರಮಾಣ ಶೇ 2.34ರಷ್ಟಿತ್ತು. ಹತ್ತುವರ್ಷಗಳ ನಂತರ, ಅಂದರೆ 2011ರ ಜನಗಣತಿಯ ಪ್ರಕಾರ, ಕ್ರೈಸ್ತರ ಪ್ರಮಾಣ ಶೇ 2.30ರಷ್ಟು ಇತ್ತು. ದೇಶದಲ್ಲಿ ಕ್ರೈಸ್ತರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. 2001ರಲ್ಲಿ ಕರ್ನಾಟಕದಲ್ಲಿ ಕ್ರೈಸ್ತರ ಪ್ರಮಾಣವು ಶೇ 1.91ರಷ್ಟಿತ್ತು. 2011ರ ಜನಗಣತಿಯ ಪ್ರಕಾರ, ಈ ಪ್ರಮಾಣವು ಶೇ 1.87ಕ್ಕೆ ಇಳಿದಿದೆ. ಇದು ನಾವು ನೀಡುತ್ತಿರುವ ಅಂಕಿಅಂಶಗಳಲ್ಲ; ಬದಲಿಗೆ ಸರ್ಕಾರವೇ ಅಧಿಕೃತವಾಗಿ ನೀಡಿರುವ ಅಂಕಿಅಂಶಗಳು. ಮತಾಂತರ ನಡೆಯುತ್ತಿದ್ದರೆ ಕ್ರೈಸ್ತರ ಸಂಖ್ಯೆ ಅಧಿಕವಾಗಬೇಕಿತ್ತು. ಆದರೆ ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿರುವುದು ಮತಾಂತರದ ಆರೋಪಗಳು ಶುದ್ಧ ಸುಳ್ಳು ಎಂಬುದನ್ನು ಸಾಬೀತು ಮಾಡುತ್ತದೆ.

ಕ್ರೈಸ್ತ ಸಮುದಾಯವು ಮತಾಂತರ ನಿಷೇಧ ಮಸೂದೆಯನ್ನು ತೀವ್ರವಾಗಿ ವಿರೋಧಿಸುವುದಕ್ಕೆ ಹಲವು ಕಾರಣಗಳಿವೆ. ಮೊದಲನೆಯದಾಗಿ, ಈ ದೇಶದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯ್ದೆಗಳ ಕುರಿತು ಅವಲೋಕನ ನಡೆಸೋಣ: ಮೊದಲು ಮತಾಂತರ ನಿಷೇಧ ಕಾನೂನನ್ನು ಒರಿಸ್ಸಾ ರಾಜ್ಯವು 1967ರಲ್ಲಿ ಜಾರಿಗೆ ತಂದಿತು. ಈ ಕಾಯ್ದೆ ಜಾರಿಯಾದ ನಂತರದ ದಿನಗಳಲ್ಲಿ ಆರಂಭವಾದ ಅಲ್ಲಿನ ಆದಿವಾಸಿ ಕ್ರೈಸ್ತರ ಮೇಲಿನ ದಾಳಿ ಹಾಗೂ ಹಲ್ಲೆಗಳು ದಶಕಗಳ ಕಾಲ ಮುಂದುವರಿದು 2008ರ ಕಂದಮಾಲ್ ನರಮೇಧದೊಂದಿಗೆ ಮುಕ್ತಾಯವಾಯಿತು. ಸಾವಿರಾರು ಆದಿವಾಸಿ ಕ್ರೈಸ್ತರನ್ನು ಹರಕೆಯ ಕುರಿಗಳಂತೆ ಕೊಚ್ಚಲಾಯಿತು, ನೂರಾರು ಜನರನ್ನು ಕೊಲ್ಲಲಾಯಿತು ಹಾಗೂ ಅನೇಕ ನಿರಪರಾಧಿಗಳು ಈಗಲೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಮೊನ್ನೆಯಷ್ಟೇ, ಯುನೈಟೆಡ್ ಕ್ರಿಶ್ಚಿಯನ್ ಫೋರಂ, ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಮತ್ತು ಯುನೈಟೆಡ್ ಅಗೈನ್ಸ್ಟ್ ಹೇಟ್ ಎಂಬ ಸಂಸ್ಥೆಗಳು ಜಂಟಿಯಾಗಿ ನಡೆಸಿದ ಅಧ್ಯಯನ ವರದಿಯು ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯದಲ್ಲೇ ಕ್ರೈಸ್ತರ ಮೇಲೆ ಅತಿ ಹೆಚ್ಚು ಹಲ್ಲೆಗಳನ್ನು ಮಾಡಲಾಗಿದೆ ಎಂಬ ಆಘಾತಕಾರಿ ಅಂಶವನ್ನು ಬಹಿರಂಗಗೊಳಿಸಿದೆ. ಕ್ರೈಸ್ತರ ಮೇಲಿನ ದಾಳಿ ಹಾಗೂ ಹಲ್ಲೆ ಪ್ರಕರಣಗಳಲ್ಲಿ ದೇಶದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ 'ಮತಾಂತರ ನಿಷೇಧ ಕಾಯ್ದೆಯನ್ನು ರೂಪಿಸುತ್ತೇವೆ' ಎಂದು ಸರ್ಕಾರವು ಹೇಳಿದ ನಂತರ ಕ್ರೈಸ್ತರ ಮೇಲೆ ಹಲ್ಲೆ ಪ್ರಕರಣಗಳು ನಡೆದಿವೆ. ಈ ಕಾಯ್ದೆಯು ಜಾರಿಯಾದರೆ ಆಗಬಹುದಾದ ಘಟನೆಗಳ ಕುರಿತು ಈಗಾಗಲೇ ನಡೆದಿರುವ ಹಲ್ಲೆ ಪ್ರಕರಣಗಳು ಸೂಕ್ಷ್ಮ ಸಂದೇಶವನ್ನು ನೀಡುತ್ತವೆ.

ಎರಡನೆಯದಾಗಿ, ಈ ದೇಶದಲ್ಲಿ ಈಗಾಗಲೇ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯ್ದೆಗಳನ್ನು ಪರಿಶೀಲಿಸಿದಾಗ ಕಂಡು ಬಂದ ಒಂದು ಸಾಮಾನ್ಯ ಅಂಶ ಹೀಗಿದೆ: ಯಾವುದೇ ವ್ಯಕ್ತಿಯ ಮೇಲೆ ಬಲವಂತದ ಮತಾಂತರ ಅಥವಾ ಆಮಿಷದ ಮತಾಂತರದ ಆರೋಪ ಕೇಳಿಬಂದರೆ ಆ ಆರೋಪಗಳು ಸುಳ್ಳು ಎಂದು ಸಾಬೀತುಪಡಿಸಲು ಆತನೇ ಪುರಾವೆಗಳನ್ನು ಒದಗಿಸಬೇಕಾಗಿದೆ. ಸಾಮಾನ್ಯವಾಗಿ, ಭಾರತೀಯ ದಂಡ ಸಂಹಿತೆಯ (ಐಪಿಸಿ) ನಿಯಮಾವಳಿಗಳ ಪ್ರಕಾರ ಒಬ್ಬ ವ್ಯಕ್ತಿಯ ಮೇಲೆ ಆರೋಪವನ್ನು ಮಾಡಿದಾಗ ಅದನ್ನು ಸಾಬೀತುಪಡಿಸುವ ಹಾಗೂ ಆ ಕುರಿತು ನ್ಯಾಯಾಲಯಕ್ಕೆ ಪುರಾವೆಗಳನ್ನು ನೀಡುವ ಹೊಣೆಗಾರಿಕೆ ಪ್ರಾಸಿಕ್ಯೂಷನ್ ಮೇಲಿರುತ್ತದೆ. ಆದರೆ ಮತಾಂತರ ನಿಷೇಧ ಕಾಯ್ದೆಯ ಪ್ರಕಾರ ಆರೋಪಿಯೇ ತಾನು ನಿರಪರಾಧಿಯೆಂದು ಸಾಬೀತುಪಡಿಸಬೇಕಾದ ಅನಿವಾರ್ಯ ಇದೆ. ಅಂದರೆ, ಯಾರು ಬೇಕಾದರೂ ಸುಳ್ಳು ಆರೋಪಗಳನ್ನು ಮಾಡಿ, ಆ ಮೂಲಕ ನಿರಪರಾಧಿ ಕ್ರೈಸ್ತರನ್ನು ಹಿಂಸಿಸಬಹುದಾಗಿದೆ. ಕೋತಿ ತಾನು ತಿಂದು ಮೇಕೆಯ ಮುಖಕ್ಕೆ ಒರೆಸಿದ ಕಥೆಯ ತದ್ರೂಪಿನಂತಿರುವ ಈ ಕಾಯ್ದೆಯ ಮೂಲ ಉದ್ದೇಶ ಕ್ರೈಸ್ತ ಸಮುದಾಯವನ್ನು ಹಿಂಸೆಗೆ ಗುರಿಪಡಿಸುವುದೇ ಆಗಿದೆ.

ಗೂಳಿಹಟ್ಟಿ ಶೇಖರ್ ಮಾಡಿದ ಪುಂಖಾನುಪುಂಖ ಆರೋಪಗಳತ್ತ ಗಮನ ಹರಿಸೋಣ: ಶೇಖರ್ ಅವರು ಮಾಡಿದ ಮತಾಂತರ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರವು ಹೊಸದುರ್ಗ ತಾಲ್ಲೂಕು ಆಡಳಿತಕ್ಕೆ ಆದೇಶಿಸಿತು. ತಾಲ್ಲೂಕು ಆಡಳಿತವು ತನಿಖೆ ನಡೆಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ತಾಲೂಕಿನಲ್ಲಿ ಬಲವಂತದ ಮತಾಂತರದ ಯಾವುದೇ ಪ್ರಕರಣ ನಡೆದಿಲ್ಲ ಎಂದು ಹೊಸದುರ್ಗ ತಾಲ್ಲೂಕಿನ ತಹಶೀಲ್ದಾರ್ ಅವರು ವರದಿಯಲ್ಲಿ ಹೇಳಿದ್ದಾರೆ. ಇಲ್ಲಿನ ಮತಾಂತರ ಪ್ರಕರಣಗಳಲ್ಲಿ ಎಲ್ಲರೂ ತಮ್ಮ ಸ್ವಂತ ಇಚ್ಛೆಯಿಂದ ಮತಾಂತರವಾಗಿದ್ದಾರೆ ಎಂಬುದನ್ನೂ ಉಲ್ಲೇಖಿಸಿದ್ದಾರೆ. ಅಷ್ಟಕ್ಕೂ ಸ್ವಇಚ್ಛೆಯಿಂದ ಮತಾಂತರವಾಗುವುದು ತಪ್ಪೇ? ಮತಾಂತರ ಅಪರಾಧವಲ್ಲ. ಅದೊಂದು ಬಿಡುಗಡೆಯ ಅಸ್ತ್ರ. ಎಲ್ಲಿ ಸಮಾನತೆ, ಆತ್ಮಶಾಂತಿ ಇಲ್ಲವೋ ಅಲ್ಲಿಂದ ಹೊರನಡೆದು ನಮಗೆ ಬೇಕಾದ ಧರ್ಮವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಸಂವಿಧಾನ ನಮಗೆ ನೀಡಿದೆ. ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರೇ ಬೌದ್ಧ ಧರ್ಮಕ್ಕೆ ಮತಾಂತರವಾದರು ಎಂಬುದನ್ನು ನಾವು ಮನಗಾಣಬೇಕಿದೆ. ಬಲವಂತದ ಮತಾಂತರ ಅಥವಾ ಆಮಿಷ ಒಡ್ಡಿ ಮಾಡುವ ಮತಾಂತರವನ್ನು ನಾವು ಬೆಂಬಲಿಸುತ್ತಿಲ್ಲ. ಹಾಗೇ ಮಾಡಿದವರ ವಿರುದ್ಧ ತನಿಖೆ ನಡೆಸಿ, ಕಾನೂನಿನ ಪ್ರಕಾರ ಅವರನ್ನು ಶಿಕ್ಷಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಸಂವಿಧಾನ ಹಾಗೂ ಐಪಿಸಿಯಲ್ಲಿ ಅಗತ್ಯ ನಿಯಮಗಳು ಮತ್ತು ಅವಕಾಶಗಳು ಇವೆ. ಆದರೆ ಒಂದೆರಡು ಪ್ರಕರಣಗಳನ್ನೇ ಮಾನದಂಡವಾಗಿಟ್ಟುಕೊಂಡು ಇಡೀ ಸಮುದಾಯವನ್ನೇ ಅಪರಾಧೀಕರಿಸುವಂತಹ ಕಠೋರ ಮತಾಂತರ ಕಾಯ್ದೆಯನ್ನು ತಂದು ಶತಮಾನಗಳಿಂದಲೂ ಶಾಂತಿಯಿಂದ ಜೀವಿಸುತ್ತಿರುವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ನಿರಂತರ ಸೇವೆಯನ್ನು ಸಲ್ಲಿಸುತ್ತಿರುವ ಕ್ರೈಸ್ತ ಸಮುದಾಯವನ್ನು ಈ ನೆಲದ ಎರಡನೇ ದರ್ಜೆಯ ನಾಗರಿಕರಂತೆ ಕಾಣುವುದು ಸಲ್ಲದು.

ಲೇಖಕ: ಆರ್ಚ್‌ಬಿಷಪ್, ಬೆಂಗಳೂರು

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಬದುಕೇ ಒಂದು ಹೋರಾಟ

ಬದುಕು ಅಂದರೇನೆ ಹೋರಾಟ. ಈ ಭೂಮಿಗೆ ಬರುವಾಗಲೂ ಜೀವಕ್ಕಾಗಿ ಹೋರಾಟ ನಡೆಸುತ್ತೇವೆ. ಈ ಭೂಮಿಯಿಂದ ಹೋಗುವಾಗಲೂ ಮೃತ್ಯು ಜೊತೆ ಹೋರಾಡಿಯೇ ಹೊರಡುತ್ತೇವೆ. ಹುಟ್ಟಿನೊಂದಿಗೆ ಜಯಿಸಿ ಬರುವ ನಾವು, ಸಾವಿನೊಂದಿಗೆ ಸೋತು ನಿರ್ಗಮಿಸುತ್ತೇವೆ. ಅಂದರೆ ಒಂದು ಜೀವದ ಹುಟ್ಟು ಜಯವಾದರೆ, ಸಾವು ಆ ಜೀವದ ಸೋಲು. ನಮ್ಮ ಜನ್ಮ ಜಾತಕವೇ ಹೀಗಿರುವಾಗ, ನಮಗೆ ಹೋರಾಟದ ಬದುಕು ಬೇಡ, ನಿರಾಳವಾದ ಬದುಕು ಬೇಕೆಂದು ಹಂಬಲಿಸುವುದು ಮೂರ್ಖತನ. ಭಗವಂತನ ಸೃಷ್ಟಿಸೂತ್ರದಲ್ಲಿ ಭೂಮಿ ಮೇಲೆ ಹುಟ್ಟಿದ ಪ್ರತಿ ಜೀವಿಯೂ ಬದುಕಿಗಾಗಿ ನಿತ್ಯ ಹೋರಾಡಲೇ ಬೇಕು. ಒಂದು ಕ್ಷಣ ಬದುಕಿನ ಹೋರಾಟ ನಿಲ್ಲಿಸಿದಾಕ್ಷಣವೇ ಮೃತ್ಯು ಬಾಯ್ತೆರೆದು ನಿಲ್ಲುತ್ತದೆ.

ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇರುತ್ತದೆ ಅಂತ ಈಗ ಆಧುನಿಕ ವಿಜ್ಞಾನ ಹೇಳುವ ಸೂತ್ರವನ್ನು, ಸಾವಿರಾರು ವರ್ಷಗಳ ಹಿಂದೆಯೆ, ನಮ್ಮ ಹಿಂದೂ ಧರ್ಮದ ಕರ್ಮಫಲಸೂತ್ರದಲ್ಲಿ ಹೇಳಲಾಗಿದೆ. ಮನುಷ್ಯ ತಾನು ಮಾಡಿದ ಕರ್ಮದ ಫಲವನ್ನ ಅನುಭವಿಸಲೇಬೇಕು ಅನ್ನುವುದರಲ್ಲೇ ಬದುಕಿನ ಸತ್ಯ ಅನಾವರಣಗೊಳ್ಳುತ್ತದೆ. ಭಗವಂತನ ಭೌತಿಕ ಮತ್ತು ಭೌಗೋಳಿಕ ಸೂತ್ರದಂತೆ ನಾವು ಮಾಡುವ ಒಳ್ಳೆಯ ಕೆಲಸಕ್ಕೆ ಪ್ರತಿಫಲವಾಗಿ ಒಳ್ಳೆಯದೇ ಸಿಗುತ್ತದೆ. ನಾವು ಕೆಟ್ಟದ್ದು ಮಾಡಿ ಒಳ್ಳೆಯದನ್ನು ಬಯಸಿದರೆ ಸಿಗಲಾರದು. ಬೇವು ನೆಟ್ಟು ಮಾವು ಬಯಸಿದಂತಾಗುತ್ತದಷ್ಟೆ. ಭಗವಂತನ 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ' ನೀಡುವ ಸತ್ಯ ಅರಿಯದ ಜನ ನಾನಾ ಕುತಂತ್ರಗಳನ್ನು ಮಾಡಿ, ತಕ್ಕ ಪ್ರತಿಫಲವನ್ನು ಪಡೆಯುತ್ತಿದ್ದಾರೆ. ಮಾಡಿದ ಪಾಪದ ಫಲವನ್ನು ಇಹದಲ್ಲೇ ಅನುಭವಿಸುತ್ತಿದ್ದಾರೆ.

ಶ್ರಮವರಿತ ಜೀವನವೇ ಪಾವನ ಅನ್ನೋ ಮಾತಿದೆ. ಇದು ಅಕ್ಷರಶಃ ಸತ್ಯ. ನಾವು ಶ್ರಮಪಟ್ಟಷ್ಟು ನಮ್ಮ ದೇಹ ಆರೋಗ್ಯವಾಗಿರುತ್ತದೆ. ವಿಶ್ರಮಿಸಿದಷ್ಟು ದೇಹ ರೋಗದ ಗೂಡಾಗುತ್ತದೆ. ನಾವು ಎಷ್ಟು ಕಷ್ಟಪಡುತ್ತೇವೋ ಅಷ್ಟೇ ಸುಖ ಅನುಭವಿಸುತ್ತೇವೆ. ಇಲ್ಲಿ ಸುಖ ಅಂದರೆ, ಹಣವಲ್ಲ, ಜೀವನದ ತೃಪ್ತಿ. ಹಣವನ್ನ ಭಗವಂತ ಸೃಷ್ಟಿಸಿದ್ದಲ್ಲ, ಅದು ಮನುಷ್ಯ ಸೃಷ್ಟಿಸಿದ ಕೃತ್ರಿಮ ಸಾಧನ. ಭಗವಂತನ ದೃಷ್ಟಿಯಲ್ಲಿ ಹಣಕ್ಕೆ ಆದ್ಯತೆ ಇಲ್ಲ, ಗುಣವನ್ನಷ್ಟೆ ಆದರಿಸುತ್ತಾನೆ. ಅದು ನಾವು ಮಾಡುವ ಒಳ್ಳೆಯ ಕಾಯಕದಲ್ಲಿ. ಮಂತ್ರಕ್ಕೆ ಹೇಗೆ ಕಾಯಿ ಉದುರುವುದಿಲ್ಲವೋ ಹಾಗೇ ಹಣದಿಂದ ಯಾವ ಕೆಲಸವೂ ಆಗುವುದಿಲ್ಲ. ಹಣ ಸಹ ಮನುಷ್ಯ ನಿರ್ಮಿಸಿದ ಇಟ್ಟಿಗೆ-ಕಬ್ಬಿಣ-ಗಾರೆಯಂತೆ ಒಂದು ಸಾಧನವಷ್ಟೆ. ಇಟ್ಟಿಗೆ-ಕಬ್ಬಿಣ-ಗಾರೆಯನ್ನು ಶ್ರಮಪಟ್ಟು ಕಟ್ಟಿದಾಗಲೇ ಕಟ್ಟಡ ನಿರ್ಮಾಣವಾಗುವುದು. ಇಲ್ಲಿ ಹಣ ಅನ್ನುವುದು ಗೌಣ. ಶ್ರಮವಷ್ಟೇ ಮನುಷ್ಯನ ಗುಣ ಮೌಲ್ಯ ಅಳೆಯುವ ಮಾಪನ.

ಮನುಷ್ಯರಲ್ಲಿ ನೈಜಕ್ಕಿಂತಲೂ ಕೃತ್ರಿಮಕ್ಕೆ ಹೆಚ್ಚು ಆದ್ಯತೆ. ಹೀಗಾಗಿ ಹಣವಂತರಷ್ಟೆ ಈ ಜಗತ್ತಿನ ಸಾಧಕರು ಅಂದುಕೊಳ್ಳುತ್ತಾರೆ. ಭಗವಂತನ ದೃಷ್ಟಿಯಲ್ಲಿ ಶ್ರಮಿಕನಷ್ಟೇ ಸಾಧಕ. ಕಷ್ಟಪಡದೆ ಯಾವ ಸಾಧನೆಯನ್ನೂ ಮಾಡಲಾಗುವುದಿಲ್ಲ. ಪರಿಶ್ರಮದಿಂದಲೇ ನಮ್ಮ ನಾಗರಿಕ ಜಗತ್ತು ರೂಪುಗೊಂಡಿದೆ. ಶ್ರಮವಿಲ್ಲದೆ ಒಂದು ಹುಲ್ಲುಕಡ್ಡಿಯೂ ಈ ಭೂಮಿ ಮೇಲೆ ಬೆಳೆಯಲಾರದು.

ಜಗತ್ತಿನಲ್ಲಿರುವ ಎಲ್ಲಾ ಪ್ರಾಣಿ-ಪಕ್ಷಿಗಳು ಹೊಟ್ಟೆಪಾಡಿಗಾಗಿ ನಿತ್ಯ ಹೋರಾಟ ನಡೆಸುತ್ತಿದ್ದರೆ, ಮನುಷ್ಯ ಮಾತ್ರ ಹೊಟ್ಟೆಪಾಡಿಗಲ್ಲದೆ ತನ್ನ ಷೋಕಿಗಾಗಿಯೂ ಹೋರಾಟ ನಡೆಸುತ್ತಾನೆ. ಸ್ವಾರ್ಥಸುಖಕ್ಕೆ ಅಮಾಯಕರ ಬಲಿ ಕೊಡಲೆಂದೇ ಕಾಂಚಾಣಮೃಗವನ್ನು ಸಾಕಿಕೊಂಡಿದ್ದಾನೆ. ಕಾಂಚಾಣ ಮೃಗ ಇದ್ದರೆ, ಎಲ್ಲರನ್ನೂ ಎದುರಿಸಬಹುದು, ಎಲ್ಲವನ್ನೂ ಕಬಳಿಸಬಹುದೆಂದು ಭಾವಿಸಿದ್ದಾನೆ. 'ತಾನೊಂದು ಬಗೆದರೆ, ದೈವ ಒಂದು ಬಗೆಯುತ್ತದೆ' ಅನ್ನೋ ಜೀವನದ ಸತ್ಯ ಅರಿಯದೆ ಸೃಷ್ಟಿಗೆ ವಿರುದ್ಧವಾದ ಸುಖ ಬಯಸುತ್ತಿದ್ದಾನೆ. ತಾನೇ ಸೃಷ್ಟಿಸಿಕೊಂಡ ವಿಕೃತ ಬದುಕಿನೊಂದಿಗೆ ಬಂಧಿಯಾಗಿ ಪರಿತಪಿಸುತ್ತಿರುವ ಮಾನವರಿಗೆ ಜ್ಞಾನೋದಯವಾದಾಗ 'ಸಚ್ಚಿದಾನಂದ'ದ ದರ್ಶನವಾಗುತ್ತದೆ. •

ಮತಾಂತರ: ಸಾಮರಸ್ಯಕ್ಕೆ ಸಂಚಕಾರ

• ಡಾ. ಶಿವಮೂರ್ತಿ ಮುರುಘಾ ಶರಣರು

ಅಸಮಾನತೆ, ಅನ್ಯಾಯ, ಅತೃಪ್ತಿ, ಅಸಮಾಧಾನದ ಜತೆಗೆ ಯಥಾಸ್ಥಿತಿವಾದವು ಕೂಡ ಮತಾಂತರಕ್ಕೆ ಅವಕಾಶ ಮಾಡಿಕೊಡುತ್ತದೆ. ಯಥಾಸ್ಥಿತಿ ವಾದವು ಪ್ರಗತಿಪರ ವಾದಕ್ಕೆ ಅವಕಾಶವನ್ನು ನಿರಾಕರಿಸುತ್ತದೆ. ಎಷ್ಟೇ ಅಸಮಾನತೆ, ಅನ್ಯಾಯ ಅತೃಪ್ತಿ ಇದ್ದರೂ ಅದನ್ನು ಪ್ರಶ್ನಿಸಬಾರದು ಎನ್ನುತ್ತದೆ ಸಂಪ್ರದಾಯವಾದ. ಜಗತ್ತಿನಲ್ಲಿ ಸಾಮ್ರಾಜ್ಯ ವಿಸ್ತರಣೆಗೆಂದು ಯುದ್ಧಗಳು, ರಕ್ತಪಾತಗಳು ನಡೆದಿವೆ. ಅದನ್ನು ಬಿಟ್ಟರೆ, ಧರ್ಮ ಮತ್ತು ದೇವರ ಹೆಸರಲ್ಲಿ ಹಿಂಸೆ, ದೌರ್ಜನ್ಯ, ಕಗ್ಗೊಲೆ ನಡೆದಿರುವ ಉದಾಹರಣೆಗಳು ಸಾಕಷ್ಟು ಇವೆ. ಆಗಾಗ ಅಲ್ಲಲ್ಲಿ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯವನ್ನು ವಿರೋಧಿಸಿ ಪ್ರತಿಭಟನೆಗಳು ಜರುಗಿವೆ. ಪ್ರತೀ ಯುದ್ಧದ ಹಿಂದೆಯೂ ಸ್ವಾರ್ಥ ಇರುತ್ತದೆ. ಧರ್ಮ ಮತ್ತು ದೇವರ ಹೆಸರಿನಲ್ಲಿ ಮತಾಂಧತೆಯು ಸೃಷ್ಟಿಯಾಗುತ್ತದೆ. ಯುದ್ಧದಂತೆ ಧಾರ್ಮಿಕ ಮತಾಂಧತೆಯೂ ಅತಿ ಅಪಾಯಕಾರಿ. ಅದರಿಂದ ಯಾರಿಗೂ ಲಾಭವಿಲ್ಲ. ಬದಲಾಗಿ ಆಸ್ತಿಪಾಸ್ತಿ ನಷ್ಟ, ಜೀವಹಾನಿ ಸಂಭವಿಸುತ್ತದೆ.

ಸಾಮಾಜಿಕ ಅಸಮಾನತೆಯನ್ನು ಇಲ್ಲವಾಗಿಸಲು ಹಲವಾರು ಹೋರಾಟಗಳು ನಡೆದಿವೆ. ಯಥಾಸ್ಥಿತಿ ವಾದವನ್ನು ಪ್ರಶ್ನಿಸಲು ಮುಂದಾದಾಗ ಪ್ರತಿರೋಧ ಎದುರಾಗುತ್ತದೆ. ಶ್ರೇಣೀಕೃತ ವ್ಯವಸ್ಥೆಯಲ್ಲಿನ ವರ್ಣಾಶ್ರಮವು ವರ್ಣಪ್ರಧಾನವಾದುದು. ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರವರ್ಗವನ್ನು ಹೊರತುಪಡಿಸಿ, ಉಳಿದವರದು ಬುದ್ಧಿಯ ತಾಕತ್ತು, ಖಡ್ಗ ಹಿಡಿದು ಹೋರಾಡುವ ಶಕ್ತಿಯ ಕಸರತ್ತು ಮತ್ತು ವ್ಯವಹಾರದ ಮಸಲತ್ತು. ಈ ಮೂರು ವರ್ಗಗಳನ್ನುಳಿದು ಉಳಿದವರದು ಶಾರೀರಿಕ ಶ್ರಮ, ಪರಿಶ್ರಮ. ಮೇಲಿನ ಮೂರು ವರ್ಗಗಳ ಸೇವೆಯನ್ನು ಇವರು ಮಾಡಬೇಕು. ಕೆಲವರು ಮಾತ್ರ ಸೇವೆ ತೆಗೆದುಕೊಳ್ಳುವವರು, ಹಲವರು ಸೇವೆ ಮಾಡುವವರು.

ಈ ಅಸಮಾನತೆಯನ್ನು ಪ್ರಶ್ನಿಸಲು ಹೋದಾಗ ಸಂಘರ್ಷ ನಡೆದಿದೆ, ಮುಂದೆ ಅದು ಹೋರಾಟದ ಸ್ವರೂಪ ಪಡೆದುಕೊಂಡಿದೆ. ಬಸವಣ್ಣನವರು ಲಿಂಗತಾರತಮ್ಯವನ್ನು ಪ್ರಶ್ನಿಸಿದ್ದರಿಂದ ಸಂಘರ್ಷ ಉಂಟಾಯಿತು. ಬಹಿಷ್ಕಾರಕ್ಕೆ ಒಳಗಾದ ಬಸವಣ್ಣನವರು ಏಕವ್ಯಕ್ತಿ ಪ್ರಯತ್ನ ಮುಂದುವರಿಸುತ್ತ ಹೋಗುತ್ತಾರೆ. ಒಬ್ಬ ವ್ಯಕ್ತಿಯಿಂದ ಉಂಟಾದ ಅರಿವು ಹಲವಾರು ವ್ಯಕ್ತಿಗಳಿಗೆ ವಿಸ್ತರಿಸುತ್ತ ಹೋಯಿತು. ಬಹುವ್ಯಕ್ತಿಗಳಿಗೆ ಅರಿವು ಪಸರಿಸಲ್ಪಟ್ಟು, ಕ್ರಾಂತಿಯ ಸ್ವರೂಪ ಪಡೆದುಕೊಂಡಿತು. ಅಸಮಾನತೆಯಿಂದ ತುಂಬಿದ ವ್ಯವಸ್ಥೆಯಲ್ಲಿ ಬದುಕುವುದಕ್ಕಿಂತ ಬಹಿಷ್ಕಾರದ ಬದುಕು ಮೇಲೆಂದು ಹೊರಬರುತ್ತಾರೆ. ತಿರಸ್ಕಾರ ಮತ್ತು ಬಹಿಷ್ಕಾರ ಎರಡು ಕೂಡಿಕೊಂಡು ಹೊಸಪಥದ ಆವಿಷ್ಕಾರವಾಯಿತು. ವೈಜ್ಞಾನಿಕ ಲೋಕದಲ್ಲಿ ಅನ್ವೇಷಣೆಗಳು, ತತ್ವಜ್ಞಾನದಲ್ಲಿ ಆವಿಷ್ಕಾರಗಳು ನಿರಂತರವಾಗಿ ನಡೆಯುತ್ತ ಹೋಗುತ್ತವೆ. ಅಂದು ಹೊಸಪಥದ ಅನ್ವೇಷಣೆ. ಗೌತಮ ಬುದ್ಧರು ಎರಡೂವರೆ ಸಾವಿರ ವರ್ಷಗಳ ಹಿಂದೆ ಬೋಧಿಸಿದ ಮಾರ್ಗವು ಸ್ವತಂತ್ರ ಧರ್ಮ ಉದಯಕ್ಕೆ ಕಾರಣವಾಯಿತು. ಅದರಂತೆ ಇತರೆ ಧರ್ಮಗಳ ದಾರ್ಶನಿಕರು ಬೋಧಿಸಿದಂತಹ ತತ್ವಗಳು ಕ್ರಮೇಣ ಸ್ವತಂತ್ರ ಧರ್ಮದ ಮನ್ನಣೆ ಪಡೆದಿವೆ.

ಯಾವ ದಾರ್ಶನಿಕರೂ ಭೀತಿಯನ್ನು ಬಿತ್ತುತ್ತ ಧರ್ಮಪ್ರಸಾರ ಮಾಡಬೇಕೆಂದು ಆದೇಶಿಸಿರುವುದಿಲ್ಲ. ಧರ್ಮ ಪ್ರಚಾರ ಮಾಡಲಿ; ಆಸಕ್ತಿ ತಳೆದವರಿಗೆ ದೀಕ್ಷೆ ಕೊಡಲಿ. ಅದರಿಂದ ಯಾವುದೇ ತೊಂದರೆಯಿಲ್ಲ. ಒಂದಿಲ್ಲೊಂದು ಗುಂಗಿಗೆ ಒಳಪಡಿಸುತ್ತ ಮತಾಂತರ ಮಾಡುವುದು ಯಾವ ಧರ್ಮಕ್ಕೂ ಭೂಷಣವಲ್ಲ; ಶ್ರೇಯಸ್ಕರವಲ್ಲ

ಅದರಂತೆ ಅಂದು ಶರಣಧರ್ಮ; ಇಂದು ಬಸವಧರ್ಮ. ಬಸವಣ್ಣನವರಿಂದ ಹೊಸಪಥದ ಆವಿಷ್ಕಾರ.

ವೈದಿಕತೆಯಲ್ಲಿದ್ದಂತಹ ಹಲವಾರು ವೈರುಧ್ಯಗಳನ್ನು ಪ್ರಶ್ನಿಸಿದ ಮತ್ತೋರ್ವ ಧೀಮಂತ ವ್ಯಕ್ತಿಯೆಂದರೆ ಬಾಬಾಸಾಹೇಬ್ ಅಂಬೇಡ್ಕರ್. ಶೂದ್ರರ ಸ್ಥಿತಿಯು ಬಹುದಯನೀಯ ಹಾಗು ಶೋಚನೀಯ ಆಗಿದ್ದಂತಹ ಸಂದರ್ಭದಲ್ಲಿ ಅವರಿಗಾಗಿ ಎಲ್ಲ ರೀತಿಯ ಅವಮಾನ ಅನುಭವಿಸುತ್ತ, ಸ್ವಾಭಿಮಾನ ಮೂಡಿಸುತ್ತ ಹೋದರು. ಬದುಕಿನ ಅನಾವರಣಕ್ಕೆ ಬೇಕಾದ ಸ್ವಾತಂತ್ರ್ಯ ಸಿಗದಿದ್ದಾಗ (ಕೊಡದಿದ್ದಾಗ) ಅದನ್ನು ಒತ್ತಾಯದಿಂದ ಪಡೆಯಬೇಕು ಎಂದಿದ್ದಾರೆ. ಅದನ್ನು ನಿರಾಕರಿಸಿದ ಸಂದರ್ಭದಲ್ಲಿ ಅಂಬೇಡ್ಕರರು ತಾವು ಜನಿಸಿದ ಧರ್ಮವನ್ನು ತೊರೆದು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಬಸವಣ್ಣನವರ ಹೊಸಪಥದ ಆವಿಷ್ಕಾರವಾಗಲಿ, ಅಂಬೇಡ್ಕರ್ ಅವರ ಮತಾಂತರ ಪ್ರಕ್ರಿಯೆಯಾಗಲಿ ಯಾವುದೇ ಆಮಿಷಕ್ಕೆ ಒಳಗಾಗಿ ಅಲ್ಲ. ಅವರದು ಬೌದ್ಧಿಕ ಚಿಂತನೆ, ತಾತ್ವಿಕ ಸುಧಾರಣೆ.

ಇಂದು, ಆಮಿಷವೊಡ್ಡಿ ಮತಾಂತರ ಮಾಡುತ್ತಾರೆ ಎಂದು ಹೇಳಲಾಗುತ್ತದೆ. ವಸ್ತುಗಳನ್ನು ತೆಗೆದುಕೊಂಡು, ಹಣವನ್ನು ಪಡೆದುಕೊಂಡು ಮತಾಂತರಗೊಳ್ಳುವುದು ಅಪ್ರಬುದ್ಧ ಅನಿಸುತ್ತದೆ. ನಾನು ಮತಾಂತರ ವಿರೋಧಿ ಅಲ್ಲ; ಅದು ಬುದ್ಧಿಪೂರ್ವಕವಾಗಿ ನಡೆಯಬೇಕೆಂದು ಬಯಸುವ ಒಬ್ಬ ಬುದ್ಧಿಜೀವಿ ಅರ್ಥಾತ್ ಪ್ರಜ್ಞಾವಂತ. ಧರ್ಮ ಪ್ರಸಾರಕರು ಪ್ರಜ್ಞಾವಂತರಾದಷ್ಟು ಸಮಾಜಕ್ಕೆ ಅವರಿಂದ ಆಗುವ ಪ್ರಯೋಜನಗಳು ಹಲವಾರು. ಮುಗ್ಧರಾಗಿದ್ದಷ್ಟು ಸಮಾಜಕ್ಕೆ ಅವರಿಂದ ಅನಾಹುತಗಳೇ ಸಂಭವಿಸಬಹುದು. ಕಾಣದ ಲೋಕವನ್ನು ಪ್ರಸ್ತಾಪಿಸುತ್ತ ಮುಗ್ಧರನ್ನು ಬಲೆಗೆ ಬೀಳಿಸಲಾಗುತ್ತದೆ. ಕೆಲವರು ನರಕದ ಭೀತಿಯನ್ನು ಸೃಷ್ಟಿಸುತ್ತ ಸೆಳೆಯಲು ಯತ್ನಿಸುತ್ತಾರೆ. ಕೆಲವರು ಪುನರ್ಜನ್ಮದ ಬಗೆಗೆ ಪ್ರಸ್ತಾಪಿಸುತ್ತ ಸಮ್ಮೋಹನ ವಿದ್ಯೆ ಪ್ರದರ್ಶಿಸುತ್ತ ಮುಗ್ಧರ ಮೇಲೆ ನಿಯಂತ್ರಣ ಸಾಧಿಸುತ್ತಾರೆ. ಪಾಪ ವಿಮೋಚನೆಗಾಗಿ ತಮ್ಮ ಮೂಲಪುರುಷರನ್ನು ನೆನಪಿಸಿಕೊಳ್ಳುತ್ತ ಆಗಾಗ ಭಜನೆ ಮಾಡಬೇಕೆನ್ನುತ್ತಾರೆ. ಅವರ ಹೆಸರನ್ನು ಬಾರಿಬಾರಿ ಸ್ಮರಿಸುತ್ತ ಹೋದರೆ, ಬಂದ ಕಷ್ಟಗಳು ಮರೆಯಾಗುತ್ತವೆ ಎಂದು ಭಾವನಾತ್ಮಕವಾಗಿ ವಿವರಿಸುತ್ತ ಹೋಗುತ್ತಾರೆ; ತಮ್ಮ ಪ್ರಭಾವ ಮೂಡಿಸುತ್ತಾರೆ. ಕೆಲವರು ಪಾಪ-ಪುಣ್ಯ ಕುರಿತು ಪ್ರಚುರಪಡಿಸುತ್ತಾರೆ. ಈ ಬಗ್ಗೆ ಬಸವಣ್ಣನವರು- ಪುಣ್ಯ ಪಾಪವೆಂಬುವು ತಮ್ಮ ಇಷ್ಟ ಕಂಡಿರೆ, ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ. ದೇವಾ, ಭಕ್ತಾ, ಜಯಾ ಜೀಯಾ ಎಂಬ ನುಡಿಯೊಳಗೆ ಕೈಲಾಸವೈದುವುದೆ ಕೂಡಲಸಂಗಮದೇವ ಎಂದಿದ್ದಾರೆ.

ಧರ್ಮಪ್ರಸಾರಕರು ಜನಸಾಮಾನ್ಯರಲ್ಲಿ ಪ್ರಜ್ಞಾವಂತಿಕೆ ಬಿತ್ತಬೇಕು; ಬೆಳೆಯಬೇಕು. ಸ್ವರ್ಗ-ನರಕ, ಪಾಪ-ಪುಣ್ಯ, ಪುನರ್ಜನ್ಮದಂತಹ ಭಾವನಾತ್ಮಕ ಸಂಗತಿಗಳನ್ನು ಬಿತ್ತುತ್ತ, ಅವಾಸ್ತವ ಬದುಕಿನತ್ತ ಕೊಂಡೊಯ್ಯಬಾರದು. ಜನಸಾಮಾನ್ಯರ ಮುಗ್ಧತೆಯನ್ನು ಬಳಸಿಕೊಂಡು, ಗುಂಗು ಹಿಡಿಸುವುದರಿಂದ ತಮ್ಮ ದಾರ್ಶನಿಕರಿಗೆ (ಮೂಲಪುರುಷರಿಗೆ) ಅಗೌರವ ಸಲ್ಲಿಸಿದಂತೆ ಎಂದು ಭಾವಿಸಬೇಕಾಗುತ್ತದೆ. ಯಾವ ದಾರ್ಶನಿಕರೂ ಭೀತಿಯನ್ನು ಬಿತ್ತುತ್ತ ಧರ್ಮಪ್ರಸಾರ ಮಾಡಬೇಕೆಂದು ಆದೇಶಿಸಿರುವುದಿಲ್ಲ. ಧರ್ಮ ಪ್ರಚಾರ ಮಾಡಲಿ; ಆಸಕ್ತಿ ತಳೆದವರಿಗೆ ದೀಕ್ಷೆ ಕೊಡಲಿ. ಅದರಿಂದ ಯಾವುದೇ ತೊಂದರೆಯಿಲ್ಲ. ಒಂದಿಲ್ಲೊಂದು ಗುಂಗಿಗೆ ಒಳಪಡಿಸುತ್ತ ಮತಾಂತರ ಮಾಡುವುದು ಯಾವ ಧರ್ಮಕ್ಕೂ ಭೂಷಣವಲ್ಲ; ಶ್ರೇಯಸ್ಕರವಲ್ಲ.

ಒತ್ತಾಯದ ಮತಾಂತರವು ಬೇರೊಂದು ಸಮಸ್ಯೆ ಸೃಷ್ಟಿಗೆ ಕಾರಣ ಆಗಬಹುದು. ಒಂದು ಸಂಘಟನೆಯಿಂದ ಮತಾಂತರ, ಮತ್ತೊಂದು ಸಂಘಟನೆಯಿಂದ ಲವ್ ಜಿಹಾದ್, ಇನ್ನೊಂದು ಸಂಘಟನೆಯಿಂದ ಮರ್ಯಾದೆಗೇಡು ಹತ್ಯೆ, ಮಗದೊಂದು ಸಂಘಟನೆಯಿಂದ ಕೋಮುಭಾವನೆ... ಇಂತಹ ಮತಾಂಧತೆಯು ಸಾರ್ವಜನಿಕರನ್ನು ಕೆರಳಿಸುವಂತಾಗಬಾರದು. ಧರ್ಮಾಂತರವು ಪರಸ್ಪರ ತಿಳಿವಳಿಕೆಯಿಂದ ನಡೆಯಬಹುದಾದ ಪ್ರಕ್ರಿಯೆ. ಅದು ಪ್ರಜ್ಞಾಪೂರ್ಣ ವಿಧಾನ. ಪ್ರಜ್ಞಾವಂತಿಕೆ ಮುಖ್ಯ ಆಗಬೇಕು. ಬಡವರು, ಶೋಷಿತರು ಮತಾಂತರಗೊಳ್ಳುತ್ತಿರುವುದು ವಿಷಾದನೀಯ.

ಶ್ರೀಮಠವು ಸರ್ವಧರ್ಮದ ಜನರ ಜತೆಗೂ ಉತ್ತಮ ಸಂಪರ್ಕ ಇಟ್ಟುಕೊಂಡಿದ್ದು, ಸಮಭಾವ ಕಾಯ್ದುಕೊಂಡಿದೆ. ಬಸವಣ್ಣನವರ ಸಮಾನತೆ, ಗೌತಮ ಬುದ್ಧರ ಮಾನವೀಯತೆ, ಮಹಾವೀರರ ಜೀವಪರತೆ, ಏಸುಕ್ರಿಸ್ತರ ಮಮತೆ (ಪ್ರೀತಿ), ಮೊಹಮ್ಮದ್ ಪೈಗಂಬರರ ಕರ್ತವ್ಯಪರತೆ, ಗುರುನಾನಕರ ಕ್ರಿಯಾಶೀಲತೆ ಮೊದಲಾದ ದಾರ್ಶನಿಕರ ಗುಣಗಳನ್ನು ಗೌರವಿಸಬೇಕು: ಸಾಧ್ಯವಾದರೆ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಭಾವನೆಯೊಂದಿಗೆ ಬಸವಣ್ಣನವರ ಕಾರ್ಯಕ್ಷೇತ್ರ ಬಸವಕಲ್ಯಾಣ, ಐಕ್ಯಕ್ಷೇತ್ರ ಕೂಡಲಸಂಗಮ, ಗೌತಮಬುದ್ಧರ ಜನ್ಮಭೂಮಿ ಲುಂಬಿನಿ ಮತ್ತು ಬುದ್ಧಗಯಾ, ಏಸುಕ್ರಿಸ್ತರ ಜನ್ಮಭೂಮಿ ಜೆರುಸಲೇಂ ಮತ್ತು ರೋಮ್‌ನಗರದ ವ್ಯಾಟಿಕನ್ ಸಿಟಿ, ಗಾಂಧೀಜಿಯವರ ಐಕ್ಯಭೂಮಿ ಹರಿಶ್ಚಂದ್ರ ಘಾಟ್, ಅಂಬೇಡ್ಕರರ ಚೈತನ್ಯಭೂಮಿ ಇತ್ಯಾದಿ ಸಂದರ್ಶಿಸಿದ್ದೇನೆ.

ಮತಾಂತರದಂತಹ ಸಂಕೀರ್ಣ ಸಂಗತಿಗಳು ಸಾಮಾಜಿಕ ಸಾಮರಸ್ಯವನ್ನು ಹಾಳು ಮಾಡದಿರಲಿ. ತನ್ಮೂಲಕ ದೇಶದಲ್ಲಿ ಹಿಂಸೆಯನ್ನು ಮುನ್ನೆಲೆಗೆ ತಂದು ನಿಲ್ಲಿಸದಿರಲೆಂಬುದು ನನ್ನ ಕಾಳಜಿ. ಒಂದುವೇಳೆ ಸರ್ಕಾರವು ಮತಾಂತರ ನಿಷೇಧ ಕಾಯಿದೆಯನ್ನು ತಂದಲ್ಲಿ ಅದಕ್ಕೆ ಸಹಮತವಿದೆ. ಇತ್ತೀಚೆಗೆ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಸರ್ವಧರ್ಮ ಮಠಾಧೀಶರ ಸಮಾಲೋಚನಾ ಸಭೆ ಜರುಗಿತು. ಅಲ್ಲಿ ಮುಖ್ಯವಾಗಿ ಅಸ್ಪೃಶ್ಯತೆ ನಿವಾರಣೆ ಮತ್ತು ಮತಾಂತರ ತಡೆಗಟ್ಟುವಿಕೆ ಕುರಿತು ಗಂಭೀರ ಚರ್ಚೆ ನಡೆದಿದೆ.

ಲೇಖಕ: ಚಿತ್ರದುರ್ಗದ ಶ್ರೀ ಮುರುಘಾ ಮಠದ ಪೀಠಾಧಿಪತಿ

ಪದಬಂಧ 4804

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಪುರದ ಹಿತವನ್ನು ಬಯಸುವ ಪೂಜಾರಿ (4)
3.ನಾರಿ ಹಿಡಿದಿರುವ ತೆಂಗಿನಕಾಯಿ (4)
5.ಗುರುಗುಟ್ಟುತ್ತಿರುವ ಗಂಡುಕುರಿ (3)
7.ಪಿನಾಕದ ಹತ್ತಿರವಿರುವ ಕೋಗಿಲೆ (2)
8.ಸುಗಮವಾಗಿ ಕಿತ್ತಿರುವ ಹೂವು (2)
11.ಹಮ್ಮೀರನಿಗೊಲಿದ ಶಿವ (2)
13.ತಪ್ಪಲ್ಲ!ಒಪ್ಪಿಗೆ ಸೂಚಿಸುವಾಗ ಹೇಳುವ ಮಾತು (2)
14.ಪರವಾಗಿ ಹಿಡಿದ ಕೊಡಲಿ! (3)
16.ಶ್ರೀ ವೆಂಕಟೇಶ್ವರನ ನೆಲೆನಾಡು (4)
17.ಮಧುರವಾದ ಧ್ವನಿ (4)

ಮೇಲಿಂದ ಕೆಳಕ್ಕೆ

1.ನಡುವಿನ ಗಾಡಿ ತಿರುಗಿಸಿದಾಗ ಸಿಕ್ಕಿರುವ ಚಿಲ್ಲರೆ ಹಣ! (4)
2.ತಟಕ್ಕನೆ ತಲುಪಿದ ನದಿಯ ದಡ (2)
3.ನಾಗರಿಕರು ಹಿಡಿದಿರುವ ಗುಂಜು (2)
4.ಉಲ್ಟಾ ಆಗಿರುವ ತುತ್ತು (3)
6.ದುಷ್ಟ ಹೆಂಗಸು ಇಲ್ಲಿದ್ದಾಳೆ (3)
7.ತಂದೆಯ ತಂದೆ (4)
9.ಈ ಹೆಣ್ಣು ದುಂಬಿ ಇನ್ನೂ ಮರಿ! (4)
10.ಆಸಕ್ತನಾದವನು ಇಲ್ಲಿದ್ದಾನೆ (3)
12.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
13.ಈಕೆ ಉಪಪತ್ನಿ (3)
14.ಪದಾತಿಯಲ್ಲಿರುವ ಗಂಡ (2)
15.ಶುನಕವನ್ನು ನೋಡುತ್ತಿರುವ ಗಿಳಿ (2)

4803ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ರತ್ನ5.ಮಂದಿರ
6.ನಾರಿ7.ರೆಕ್ಕಸ
9.ಗಟಾರ10.ವಾದಸರಣಿ
11.ಕತ್ತರಿ12.ತಪ್ಪಲೆ
15.ಡಬ್ಬಿ16.ಉಚಿತ
17.ಚಾಚಾ

ಮೇಲಿಂದ ಕೆಳಕ್ಕೆ:
1.ಕ್ಷೀರಧಾರೆ2.ನಾದಿನಿ
3.ಪರಿವಾರ8.ಸವಾರಿ
9.ಗಣಿತ11.ಕನ್ನಡಕ
13.ಲೆಕ್ಕಾಚಾರ14.ಕುಂಚಿಗೆ

ಸುಡೊಕು 5190

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

5189 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಡಿಸೆಂಬರ್ 11, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಅಷ್ಟಮಿ ಗಂ. 42-59 (ರಾ. 11-49) ಶನಿವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 51-51 (ರಾ. 3-21) ವಜ್ರ ನಾಮ ಯೋಗ ಗಂ. 14-26 ಭದ್ರೆ ಕರಣ ಗಂ. 13-45 ವಿಷ ಗಂ. 7-51 ಅಮೃತ ಗಂ 32-5 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-35 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 3, 9

ಮೇಷ: ಆದಾಯ ಮತ್ತು ವೆಚ್ಚಗಳೆರೆಡೂ ಹೆಚ್ಚಾಗುವ ಸಾಧ್ಯತೆ. ನ್ಯಾಯಾಲಯದ ಕೆಲಸ ಕಾರ್ಯಗಳಲ್ಲಿ ಪ್ರಗತಿ. ಹೊಸ ಆದಾಯದ ಮೂಲಗಳು ಗೋಚರವಾಗಲಿವೆ. ಸರಿ–ತಪ್ಪುಗಳನ್ನು ಅರಿತು ಮುಂದುವರೆಯಿರಿ.

ವೃಷಭ: ಕೆಲಸ–ಕಾರ್ಯಗಳಿಗೆ ವಿಘ್ನಗಳುಂಟಾದರೂ ಎದೆಗುಂದದೇ ಮುಂದುವರಿದು ಯಶಸ್ಸು. ಸಹೋದ್ಯೋಗಿಗಳ ಸಹಕಾರದಿಂದಾಗಿ ನೆಮ್ಮದಿ. ಹೊಂದಾಣಿಕೆಯಿಂದ ವರ್ತಿಸಿ. ಹಿರಿಯರ ಸಲಹೆಗಳನ್ನು ಗೌರವಿಸಿ.

ಮಿಥುನ: ಕುಟುಂಬ ಸದಸ್ಯರಲ್ಲಿ ಅಸಹನೆ ಕಂಡುಬರಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕಡಿಮೆಯಾದರೂ ಗುರಿ ಸಾಧನೆಗೆ ತೊಡಕಾಗದು. ನಿರುದ್ಯೋಗಿಗಳು ಉತ್ತಮ ಅವಕಾಶಕ್ಕಾಗಿ ಕಾಯಬೇಕಾದೀತು.

ಕರ್ಕಾಟಕ: ಉತ್ತಮ ಫಲ ನೀಡುವ ದಿನವಾಗಿದ್ದು ಸಣ್ಣಪುಟ್ಟ ಪ್ರಯಾಣ ಯೋಗ ಕಂಡುಬರುವುದು. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಮರ್ಥ್ಯವನ್ನರಿತು ಕೆಲಸ ನಿರ್ವಹಿಸುವುದು ಉತ್ತಮ.

ಸಿಂಹ: ವಿವಿಧ ಮೂಲಗಳಿಂದ ಧನಾಗಮನದಿಂದಾಗಿ ಕಾರ್ಯಾನುಕೂಲವಾಗಲಿದೆ. ಮಹಿಳಾ ಉದ್ಯೋಗಿಗಳಿಗ ಪದೋನ್ನತಿ ದೊರಕುವ ಸಾಧ್ಯತೆ. ಅಸಹನೆಯ ಮನೋವೃತ್ತಿ ಅನಾವಶ್ಯಕ ತಪ್ಪು ಅಭಿಪ್ರಾಯಕ್ಕೆ ಹೇತುವಾದೀತು.

ಕನ್ಯಾ: ನಿಮ್ಮ ಇಚ್ಛೆಗಳು ಸುಗಮವಾಗಿ ಈಡೇರುವವು. ಯೋಗ್ಯ ವಯಸ್ಕರಿಗೆ ಉತ್ತಮ ಅವಕಾಶಗಳಿಂದಾಗಿ ವೈವಾಹಿಕ ಭಾಗ್ಯ. ಪ್ರೇಮಿಗಳ ಪಾಲಿಗೆ ಪ್ರತಿಕೂಲ ವಾತಾವರಣ. ಇತರರೊಂದಿಗೆ ಉತ್ತಮ ಸಂಬಂಧವನ್ನು ಸಾಧಿಸಲಿದ್ದೀರಿ.

ತುಲಾ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಿ. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಬೇಕಾದೀತು. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ. ಅನಿರೀಕ್ಷಿತ ಪ್ರವಾಸ ಹೋಗುವ ಸಂದರ್ಭ ಒದಗಿ ಬರಬಹುದು.

ವೃಶ್ಚಿಕ: ನೌಕರ ವರ್ಗದವರಿಗೆ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಬದಲಾವಣೆ ಸಾಧ್ಯತೆ. ಮಹಿಳೆಯರು ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದ್ದು ಸಮಾಧಾನ ಚಿತ್ತರಾಗಿ ವ್ಯವಹರಿಸಿ.

ಧನು: ಆರೋಗ್ಯದಲ್ಲಿ ಕೊಂಚ ಏರುಪೇರುಂಟಾಗುವ ಸಾಧ್ಯತೆ. ಆರ್ಥಿಕ ಸಬಲತೆಯನ್ನು ಕಾಣಬಹುದು. ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು ದಿನದ ಮಟ್ಟಿಗೆ ಬೇಡ. ಉತ್ತಮ ಸಂಗಾತಿ ದೊರಕುವ ಸಾಧ್ಯತೆ.

ಮಕರ: ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬ ಸದಸ್ಯರಲ್ಲಿ ಅಸಹನೆ ಉಂಟಾಗಬಹುದು. ನಿರ್ಧಾರಗಳನ್ನು ಪದೇ ಪದೇ ಬದಲಿಸದಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಬಿಡುವಿಲ್ಲದ ಶ್ರಮ.

ಕುಂಭ: ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಅಗತ್ಯ. ಧೈರ್ಯದಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು. ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ತೃಪ್ತಿ.

ಮೀನ: ತಾಳ್ಮೆ, ಸಮಾಧಾನ ಅವಶ್ಯ. ಯಾವುದೇ ವಿಚಾರದಲ್ಲಿ ಆತುರತೆಯ ತೀರ್ಮಾನ ಬೇಡ. ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಒತ್ತಡ ಹೆಚ್ಚಾಗಿ ಮಾನಸಿಕ ಗೊಂದಲ ಮತ್ತು ಆಯಾಸ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ನಿಮ್ಮ ಜನ್ಮದಿನ 11-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಸಂಘರ್ಷದ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ಕೂಡಿಬರುವ ಸಾಧ್ಯತೆ. ಅನಾವಶ್ಯಕವಾಗಿ ಭಾವೋದ್ವೇಗಕ್ಕೆ ಒಳಗಾಗುವ ಪ್ರಸಂಗ ಬಂದೊದಗೀತು. ಕಠಿಣ ನಿಲುವಿನಿಂದಾಗಿ ಪಶ್ಚಾತ್ತಾಪಪಡಬೇಕಾದೀತು. ತಾಳ್ಮೆಯ ನಡೆ ಅವಶ್ಯಕ.

ನೌಕರರ ಪ್ರತಿಭಟನೆ

ತಮಗೆ ಉತ್ತಮ ಕೆಲಸದ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಆರೋಗ್ಯ ಮಿಷನ್‌ನ ನೌಕರರು ಶುಕ್ರವಾರ ಅಮೃತಸರದಲ್ಲಿ ಪಂಜಾಬ್‌ನ ಉಪಮುಖ್ಯಮಂತ್ರಿ ಅವರ ಮನೆ ಮುಂದೆ ಪ್ರತಿಭಟನೆ ನಡೆಸಿದರು. ಬ್ಯಾರಿಕೇಡ್ ದಾಟಿ ನುಗ್ಗಲು ಯತ್ನಿಸಿದವರನ್ನು ತಡೆಯಲು ಪೊಲೀಸರು ಹರಸಾಹಸ ಮಾಡಿದರು –ಎಎಫ್‌ಪಿ ಚಿತ್ರ

ಯೋಗಿ ಕೋಟೆಯ ಬ್ರಾಹ್ಮಣ ನಾಯಕ ಎಸ್‌ಪಿಯತ್ತ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಬ್ರಾಹ್ಮಣ ಸಮುದಾಯದ ಪ್ರಭಾವಿ ನಾಯಕ ಪಂಡಿತ್ ಹರಿ ಶಂಕರ್ ತಿವಾರಿ ಅವರು ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ಭಾನುವಾರ ಸೇರ್ಪಡೆ ಆಗಲಿದ್ದಾರೆ. ಪೂರ್ವಾಂಚಲ ಪ್ರದೇಶದಲ್ಲಿ ಅವರು ಅತಿ ಹೆಚ್ಚು ಪ್ರಭಾವ ಹೊಂದಿದ್ದಾರೆ. ಅವರ ಇಬ್ಬರು ಮಕ್ಕಳೂ ಎಸ್‌ಪಿ ಸೇರಲಿದ್ದಾರೆ. ಅವರಲ್ಲಿ ಒಬ್ಬರು ಬಿಎಸ್‌ಪಿ ಶಾಸಕರಾಗಿದ್ದರೆ, ಇನ್ನೊಬ್ಬರು ಮಾಜಿ ಸಂಸದ.

ಹರಿಶಂಕರ್ ಅವರು ಚಿಲ್ಲುಪುರ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಹರಿಶಂಕರ್ ಅವರು ಈ ಹಿಂದೆ ಭೂಗತ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ರೌಡಿಶೀಟರ್ ಆಗಿದ್ದ ಅವರ ಮೇಲೆ ಹಲವು ಅಪರಾಧ ಪ್ರಕರಣಗಳು ದಾಖಲಾಗಿದ್ದವು. ಹರಿಶಂಕರ್ ಅವರು ಒಂದು ಅವಧಿಗೆ ಸಚಿವರೂ ಆಗಿದ್ದರು. 2012ರ ಬಳಿಕ ಅವರು ಚುನಾವಣೆಗೆ ಸ್ಪರ್ಧಿಸಿಲ್ಲ.

ಅವರ ಮಗ ವಿನಯ ಶಂಕರ ತಿವಾರಿ ಅವರು 2017ರಲ್ಲಿ ಚಿಲ್ಲುಪುರ ಕ್ಷೇತ್ರದಿಂದ ಬಿಎಸ್‌ಪಿ ಟಿಕೆಟ್‌ನಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ. ಇನ್ನೊಬ್ಬ ಮಗ ಭೀಷ್ಮ ಶಂಕರ ಅಲಿಯಾಸ್ ಕುಶಾಲ್ ತಿವಾರಿ ಅವರು 2007 ಮತ್ತು 2009ರಲ್ಲಿ ಸಂತ ಕಬೀರ್ ನಗರ ಲೋಕಸಭಾ ಕ್ಷೇತ್ರದಿಂದ ಬಿಎಸ್‌ಪಿ ಟಿಕೆಟ್‌ನಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಈ ಇಬ್ಬರೂ ಎಸ್‌ಪಿ ಸೇರುತ್ತಾರೆ ಎಂಬ ವದಂತಿ ದಟ್ಟವಾಗಿತ್ತು. ಹಾಗಾಗಿ, ಕೆಲ ದಿನಗಳ ಹಿಂದೆ ಅವರನ್ನು ಬಿಎಸ್‌ಪಿಯಿಂದ ವಜಾ ಮಾಡಲಾಗಿದೆ.

‘ರಾಜ್ಯದ ಪೂರ್ವಾಂಚಲ ಪ್ರದೇಶದಲ್ಲಿ ತಿವಾರಿ ಕುಟುಂಬವು ಭಾರಿ ಪ್ರಭಾವಿಯಾಗಿದೆ. ಇವರು ಎಸ್‌ಪಿ ಸೇರುವುದರಿಂದ ಅಖಿಲೇಶ್ ಯಾದವ್ ಅವರಿಗೆ ದೊಡ್ಡ ಮಟ್ಟದಲ್ಲಿ ಪ್ರಯೋಜನ ಆಗಲಿದೆ’ ಎಂದು ಲಖನೌನ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ರಾಜ್ಯದ ಬ್ರಾಹ್ಮಣ ಸಮುದಾಯವು ಬಿಜೆಪಿಯ ಬಗ್ಗೆ ಅತೃಪ್ತವಾಗಿದೆ ಎಂದು ಹೇಳಲಾಗುತ್ತಿದೆ. ಇಂತಹ ಸಂದರ್ಭದಲ್ಲಿಯೇ ತಿವಾರಿ ಕುಟುಂಬವು ಎಸ್‌ಪಿಗೆ ಸೇರ್ಪಡೆ ಆಗಿದ್ದು ಮಹತ್ವ ಪಡೆದಿದೆ.

ಯೋಗಿ ನೇತೃತ್ವದ ಸರ್ಕಾರವು ಬ್ರಾಹ್ಮಣ ಸಮುದಾಯವನ್ನು ಕಡೆಗಣಿಸಿದೆ ಎಂದು ಬಿಜೆಪಿ ಮುಖಂಡರೇ ಹೇಳುತ್ತಿರುವುದು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಬ್ರಾಹ್ಮಣ ಸಮುದಾಯದ ಸುರಕ್ಷತೆಗೆ ಸರ್ಕಾರ ಹೊಂದಿರುವ ಯೋಜನೆಗಳು ಏನು ಎಂದು ಲಂಬುಆ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ದೇವಮಣಿ ದ್ವಿವೇದಿ ಅವರು ಇತ್ತೀಚೆಗೆ ಪ್ರಶ್ನಿಸಿದ್ದರು. ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಎಷ್ಟು ಬ್ರಾಹ್ಮಣರ ಹತ್ಯೆ ಆಗಿದೆ ಎಂದೂ ಅವರು ಕೇಳಿದ್ದರು.

ಬ್ರಾಹ್ಮಣ ಸಮುದಾಯವನ್ನು ನಿರ್ಲಕ್ಷಿಸಲಾಗಿದೆ ಎಂಬ ಆರೋಪಕ್ಕೆ ಉತ್ತರ ನೀಡುವುದಕ್ಕಾಗಿಯೇ, ಕಾಂಗ್ರೆಸ್‌ನಲ್ಲಿದ್ದ ಬ್ರಾಹ್ಮಣ ಸಮುದಾಯದ ನಾಯಕ ಜಿತಿನ್ ಪ್ರಸಾದ ಅವರನ್ನು ಬಿಜೆಪಿಗೆ ಸೇರಿಸಿಕೊಂಡು, ರಾಜ್ಯದ ಸಚಿವರನ್ನಾಗಿಯೂ ಮಾಡಲಾಗಿದೆ. ರಾಜ್ಯದಲ್ಲಿ ಬ್ರಾಹ್ಮಣರ ಜನಸಂಖ್ಯೆಯು ಶೇ 10ರಷ್ಟಿದೆ ಮತ್ತು 10ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳು ಹಾಗೂ 50ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಈ ಸಮುದಾಯವು ನಿರ್ಣಾಯಕವಾಗಿದೆ.

ಜನತಂತ್ರದ ಹಬ್ಬ 2021

‘ಮರಳು ಅಕ್ರಮ ಗಣಿಗಾರಿಕೆ: ಕ್ರಮ ಕೈಗೊಂಡರೆ ಮುಖ್ಯಮಂತ್ರಿಗೆ ಬಹುಮಾನ’

ನವದೆಹಲಿ (ಪಿಟಿಐ): ಮರಳು ಅಕ್ರಮ ಗಣಿಗಾರಿಕೆ ವಿರುದ್ಧ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಕ್ರಮ ಕೈಗೊಂಡರೆ, ಪ್ರತೀ ಪ್ರಕರಣಕ್ಕೆ ₹25,000 ಬಹುಮಾನವನ್ನು ಅವರಿಗೆ ನೀಡುವುದಾಗಿ ಆಮ್ ಆದ್ಮಿ ಪಕ್ಷ (ಎಎಪಿ) ಶುಕ್ರವಾರ ಹೇಳಿದೆ.

ಮರಳು ಅಕ್ರಮ ಗಣಿಗಾರಿಕೆ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಪುರಾವೆ ಕೊಟ್ಟವರಿಗೆ ₹25,000 ಬಹುಮಾನ ನೀಡಲಾಗುವುದು ಎಂದು ಚನ್ನಿ ಗುರುವಾರವಷ್ಟೇ ಹೇಳಿದ್ದರು. ಅವರು ಈ ಘೋಷಣೆ ಮಾಡಿದ ಮರುದಿನ ಸುದ್ದಿಗೋಷ್ಠಿ ನಡೆಸಿದ ಎಎಪಿ ವಕ್ತಾರ ರಾಘವ್ ಛಡ್ಡಾ ಈ ಸವಾಲು ಎಸೆದಿದ್ದಾರೆ. ಮರಳು ಅಕ್ರಮ ಗಣಿಗಾರಿಕೆಯನ್ನು ತಡೆಯುವುದು ನಿಜವಾದ ಉದ್ದೇಶವಾಗಿದ್ದರೆ ಅದರ ವಿರುದ್ಧ ಕ್ರಮ ಕೈಗೊಳ್ಳಿ ಎಂದಿದ್ದಾರೆ.

‘ಚನ್ನಿ ಅವರ ವಿಧಾನಸಭೆ ಕ್ಷೇತ್ರವಾದ ರಾಮ್‌ಪಂತ್‌ನಲ್ಲಿಯೇ ಮರಳು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಯಾವ ಸ್ಥಳಗಳಲ್ಲಿ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳಿಂದ ಕೇವಲ ಐದು ನಿಮಿಷಗಳಲ್ಲಿ ಮುಖ್ಯಮಂತ್ರಿ ಪಡೆಯಬಹುದು. ನೀವು ನನ್ನ ಜೊತೆ ಬನ್ನಿ. ಯಾವ ಸ್ಥಳಗಳಲ್ಲಿ ಮರಳು ಗಣಿಗಾರಿಕೆ ನಡೆಯುತ್ತಿದೆ ಎಂದು ನಾನು ನಿಮಗೆ ತೋರಿಸುತ್ತೇನೆ’ ಎಂದು ಅವರು ಸವಾಲು ಎಸೆದಿದ್ದಾರೆ.

‘ನಿಮ್ಮ ಕ್ಷೇತ್ರದ ಜಿಂದಾಪುರ್ ಪಿಂಡ್ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದಕ್ಕೆ ನಾನು ನಿಮಗೆ ಪುರಾವೆಗಳನ್ನು, ನಿಮ್ಮ ವಿರುದ್ಧವೇ ಮೊದಲು ಎಫ್‌ಐಆರ್ ದಾಖಲಿಸಿಕೊಳ್ಳಿ. ಮುಖ್ಯಮಂತ್ರಿಯೇ ಅಕ್ರಮ ಗಣಿಗಾರಿಕೆಯ ಅತಿದೊಡ್ಡ ಮಾಫಿಯಾ ಆದಂತಿದೆ’ ಎಂದಿದ್ದಾರೆ. ಚನ್ನಿ ಅವರ ವಿಧಾನಸಭೆ ಕ್ಷೇತ್ರದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದನ್ನು ಬಹಿರಂಗಪಡಿಸಿದ್ದೇವೆ ಎಂದು ಈ ಮೊದಲೇ ಛಡ್ಡಾ ಹೇಳಿದ್ದರು.

ಜನನ–ಮರಣ ನೋಂದಣಿ: ಮಾಹಿತಿದಾರರ ನೇಮಕ

ಬೆಂಗಳೂರು: ಜನನ, ಮರಣಗಳ ನೋಂದಣಿಗಾಗಿ ನೋಂದಣಾಧಿಕಾರಿಗಳಿಗೆ ಮಾಹಿತಿ ನೀಡಲು ರಾಜ್ಯ ಸರ್ಕಾರ ಮಾಹಿತಿದಾರರನ್ನು ನೇಮಕ ಮಾಡಿ ಸುತ್ತೋಲೆ ಹೊರಡಿಸಿದೆ.

ಇದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ಗಳಲ್ಲಿ ಜನನ ಮತ್ತು ಮರಣ ಘಟನೆಗಳ ತ್ವರಿತ ನೋಂದಣಿಗೆ ಸಹಾಯಕವಾಗಲು ಅಧಿಕಾರಿಗಳನ್ನು ಒಳಗೊಂಡ ಒಂದು ವಾಟ್ಸಾಪ್ ಗ್ರೂಪ್ ರಚಿಸಲಾಗುವುದು. ಮಾಹಿತಿದಾರರು ವಾಟ್ಸಾಪ್ ಮೂಲಕ ನೋಂದಣಿ ಮಾಡಬಹುದು.

ಮಾಹಿತಿದಾರರು ಯಾರು: ಮನೆ–ಕುಟುಂಬದ ಯಜಮಾನ. ಆಸ್ಪತ್ರೆ, ಪ್ರಸವ ಗೃಹ– ಪ್ರಭಾರದಲ್ಲಿರುವ ವೈದ್ಯಾಧಿಕಾರಿ ಅಥವಾ ಅಧಿಕೃತ ವ್ಯಕ್ತಿ. ಜೈಲು– ಪ್ರಭಾರದಲ್ಲಿರುವ ಜೈಲರು. ಹೋಟೆಲ್, ಛತ್ರ, ವಸತಿನಿಲಯ, ವಸತಿ ಗೃಹ–ಪ್ರಭಾರದಲ್ಲಿರುವ ವ್ಯಕ್ತಿ. ಸಾರ್ವಜನಿಕ ಸ್ಥಳ (ನವಜಾತ ಶಿಶು ಅಥವಾ ಮೃತ ದೇಹದ ಸಂಬಂಧ)– ಗ್ರಾಮದ ಮುಖ್ಯಸ್ಥ, ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿ. ಚಲಿಸುವ ವಾಹನಗಳು– ವಾಹನದ ಪ್ರಭಾರ ಹೊಂದಿರುವ ವ್ಯಕ್ತಿ. ತೋಟ (ಪ್ಲಾಂಟೇಶನ್)– ತೋಟದ ಅಧೀಕ್ಷಕ.

ಇದಲ್ಲದೇ ಅಂಗನವಾಡಿ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ತಮ್ಮ ಕ್ಷೇತ್ರಗಳಲ್ಲಿ ಸಂಭವಿಸುವ ಜನನ– ಮರಣಗಳ ಘಟನೆಗಳ ಮಾಹಿತಿಯನ್ನು ನೋಂದಣಾಧಿಕಾರಿಗಳಿಗೆ ತಿಳಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆ ಸುತ್ತೋಲೆಯ ಮೂಲಕ ಸೂಚನೆ ನೀಡಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

28ನೇ ವರ್ಷದ ಪುಣ್ಯಸ್ಮರಣೆ



ಟಿ. ಕೆ. ಸ್ವಾಮಿ
ಅಬಕಾರಿ ಗುತ್ತಿಗೆದಾರರು ಮತ್ತು ಸಗಟು ಮದ್ಯ ಮಾರಾಟಗಾರರು
10-04-1942 - 11-12-1993
ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶಗಳ ನೆನಪೇ ನಮಗೆ ಸ್ಫೂರ್ತಿ, ಮಾರ್ಗದರ್ಶನ. ನಿಮ್ಮ ಸವಿನೆನಪು ನಮ್ಮ ಮನದಾಳದಲ್ಲಿ ಅವಿಸ್ಮರಣೀಯವಾಗಿದೆ.
ಸದಾ ಸ್ಮರಿಸುವ,
ಶ್ರೀಮತಿ ಪುಟ್ಟತಾಯಮ್ಮ ಅಂಡ್ ಫ್ಯಾಮಿಲಿ

ಮತಾಂತರ ನಿಷೇಧ ಕಾಯ್ದೆಗೆ ಮಠಾಧೀಶರ ಒತ್ತಾಯ:ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟರು, ಹಿಂದುಳಿದವರು ಮಾತ್ರವಲ್ಲ ಲಿಂಗಾಯತರನ್ನೂ ಮತಾಂತರಿಸಲಾಗುತ್ತಿದೆ. ಇದರಿಂದ ಆಯಾ ಸಮುದಾಯಗಳ ಮಠಾಧೀಶರು ಮತಾಂತರ ನಿಷೇಧ ಕಾಯ್ದೆಯನ್ನು ಜಾರಿ ತರಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

ಮಾಜಿಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಜನ್ಮದಿನದ ಅಂಗವಾಗಿ ಶುಕ್ರವಾರ ವಿಧಾನಸೌಧ ಪಶ್ಚಿಮ ದ್ವಾರದಲ್ಲಿ ಇರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರ ಜತೆ ಮಾತನಾಡಿ, ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರುವುದರಲ್ಲಿ ತಪ್ಪೇನು ಇಲ್ಲ. ಈ ಅಧಿವೇಶನದಲ್ಲಿ ಮಂಡಿಸುವ ಬಗ್ಗೆ ನಿರ್ಧಾರ ಆಗಿಲ್ಲ ಎಂದರು.

ಮಧುರಾ ವೀಣಾ ಸೇರಿ 26 ಮಂದಿಗೆ ಐಪಿಎಸ್ ಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಸೇವೆಯ (ಕೆಎಸ್‌ಪಿಎಸ್) 26 ಅಧಿಕಾರಿಗಳನ್ನು ಭಾರತೀಯ ಪೊಲೀಸ್ ಸೇವೆಗೆ (ಐಪಿಎಸ್) ಬಡ್ತಿ ನೀಡಿ ಪ್ರೊಬೇಷನರಿಯಾಗಿ ನೇಮಕ ಮಾಡಲಾಗಿದೆ.

ಬಡ್ತಿ ಪಡೆದವರಲ್ಲಿ ಮಧುರಾ ವೀಣಾ ವಿರುದ್ಧ ಹಣ ವಸೂಲಿಯ ಆರೋಪ ಇತ್ತು. 2016ರಲ್ಲಿ ಇವರು ಸಿಐಡಿ ಮಾನವ ಸಾಗಣೆ ನಿಗ್ರಹದ ಘಟಕದ ಎಸ್ಪಿ ಆಗಿದ್ದಾಗ ನಗರದ ಐಷಾರಾಮಿ ಹೋಟೆಲ್‌ವೊಂದರ ಮೇಲೆ ದಾಳಿ ನಡೆಸಿ, ಹೋಟೆಲ್ ಮಾಲೀಕರಿಗೆ ಬೆದರಿಸಿ ₹2 ಲಕ್ಷ ವಸೂಲಿ ಮಾಡಿದ ಆರೋಪಕ್ಕೆ ಗುರಿಯಾಗಿದ್ದರು. ಈ ಪ್ರಕರಣದ ಬಗ್ಗೆ ಸೋನಿಯಾ ನಾರಂಗ್ ತನಿಖೆ ನಡೆಸಿದ್ದರು.

ಮತ್ತೊಬ್ಬ ಅಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರನ್ನು ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಯೋಗೀಶಗೌಡ ಗೌಡರ ಹತ್ಯೆ ಪ್ರಕರಣ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು. ಹತ್ಯೆ ನಡೆದಾಗ ಹುಬ್ಬಳ್ಳಿ-ಧಾರವಾಡ ಕಮಿಷನರೇಟ್ ವ್ಯಾಪ್ತಿಯಲ್ಲಿ ಡಿಸಿಪಿ (ಅಪರಾಧ) ಆಗಿ ಕೆಲಸ ಮಾಡುತ್ತಿದ್ದರು. ಅದೇ ಕಾರಣಕ್ಕೆ ಸಿಬಿಐ ಅಧಿಕಾರಿಗಳು ವಿಚಾರಣೆಗೆ ಬರುವಂತೆ ಬಾಲದಂಡಿಗೆ ನೋಟಿಸ್ ನೀಡಿದ್ದರು.

ಬಡ್ತಿ ಪಡೆದ ಅಧಿಕಾರಿಗಳು: 2016ರ ಪಟ್ಟಿಯಲ್ಲಿ ಎಂ.ವಿ ಚಂದ್ರಕಾಂತ್, ಎಂ.ಎಲ್.ಮಧುರಾ ವೀಣಾ. 2017ರ ಪಟ್ಟಿಯಲ್ಲಿ ಚನ್ನಬಸವಣ್ಣ ಲಂಗೋಟಿ, ಜಯಪ್ರಕಾಶ್, ಕೆ.ಪಿ.ಅಂಜಲಿ, ಎಂ.ನಾರಾಯಣ, ಎಂ.ಮುತ್ತುರಾಜು, ಎಚ್.ಟಿ.ಶೇಖರ್, ರವೀಂದ್ರ ಕಾಶೀನಾಥ್ ಗಡಾದಿ, ಅನಿತಾ ಭೀಮಪ್ಪ ಹದ್ದಣ್ಣನವರ್, ಎ. ಕುಮಾರಸ್ವಾಮಿ, ಸಾರಾ ಫಾತಿಮಾ, ರಶ್ಮಿ ಪರಡ್ಡಿ, ಎಂ.ಎ.ಅಯ್ಯಪ್ಪ ಸೇರಿದ್ದಾರೆ.

2019ರ ಪಟ್ಟಿಯಲ್ಲಿ ಶಿವಕುಮಾರ್, ಮಲ್ಲಿಕಾರ್ಜುನ ಬಾಲದಂಡಿ, ವೈ.ಅಮರನಾಥ್ ರೆಡ್ಡಿ, ಪವನ್ ನೆಜ್ಜೂರು, ಬಿ.ಎಲ್. ಶ್ರೀಹರಿಬಾಬು, ಎಂ.ಎಸ್.ಗೀತಾ, ಯಶೋಧಾ ವಂಟಗೋಡಿ, ಎಂ. ರಾಜೀವ್, ವಿ.ಜೆ.ಶೋಭಾರಾಣಿ, ಡಾ.ಎಸ್.ಕೆ.ಸೌಮ್ಯಲತಾ, ಬಿ.ಟಿ. ಕವಿತಾ ಮತ್ತು ಉಮಾ ಪ್ರಶಾಂತ್ ಬಡ್ತಿ ಪಡೆದಿದ್ದಾರೆ.

ಮುಂಬಡ್ತಿಗೆ ತೆರೆದ ಬಾಗಿಲು

ಒಂದನೇ ಪುಟದಿಂದ

ಪ್ರಥಮ ದರ್ಜೆ ಸಹಾಯಕರ 50 ಹುದ್ದೆಗಳಲ್ಲಿ 25 ಅನ್ನು ನೇರ ನೇಮಕಾತಿ, ಉಳಿದ 25 ಅನ್ನು ಮುಂಬಡ್ತಿ ಮುಖೇನ ತುಂಬಲಾಗುತ್ತಿತ್ತು. ಹೊಸ ಆದೇಶದ ಅನ್ವಯ 50 ಹುದ್ದೆಗಳನ್ನೂ ಮುಂಬಡ್ತಿ ಮೂಲಕವೇ ತುಂಬಲು ಅವಕಾಶ ಸಿಗಲಿದೆ.

ಹಿಂದೆ ಇದ್ದ ನಿಯಮಗಳೇನು: 1976ರ ಸುತ್ತೋಲೆ ಪ್ರಕಾರ ನೇರ ನೇಮಕಾತಿ ಹಾಗೂ ಮುಂಬಡ್ತಿ ಪಾಲಿನ ಖಾಲಿ ಸ್ಥಾನಗಳನ್ನು ವರ್ಗೀಕರಣ ಮಾಡಿ ಲೆಕ್ಕ ಹಾಕಲು ‘ಬ್ಲಾಕ್ ಅವಧಿ’ಯನ್ನು ಗುರುತಿಸಬೇಕಾಗಿತ್ತು. ಅದರಂತೆ, ಆಯಾ ಇಲಾಖೆಗಳು ರಚಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ನೇರ ನೇಮಕಾತಿ ಮುಖಾಂತರ ನೇಮಕಾತಿಯಾಗುವವರೆಗೆ ಬ್ಲಾಕ್ ಅವಧಿಯನ್ನು ಗುರುತಿಸಬೇಕಿತ್ತು. ವೃಂದ ಮತ್ತು ನೇಮಕಾತಿ ನಿಯಮಗಳು ಈ ಮಧ್ಯೆ ತಿದ್ದುಪಡಿಯಾದಲ್ಲಿ, ತಿದ್ದುಪಡಿಯಾದ ದಿನಾಂಕದವರೆಗೆ ಈ ನಿಯಮ ಅನ್ವಯಿಸಬೇಕಾಗಿತ್ತು. ಹೀಗೆ ಒಂದು ಬ್ಲಾಕ್ ಅವಧಿಯಲ್ಲಿ ಯಾವುದೇ ಕಾರಣದಿಂದ (ನಿಧನ, ನಿವೃತ್ತಿ, ರಾಜೀನಾಮೆ, ವಜಾ) ಸೃಷ್ಟಿಯಾದ ಖಾಲಿ ಹುದ್ದೆಗಳನ್ನು ನಿಗದಿತ ಅನುಪಾತದ ಅನ್ವಯ ನೇರನೇಮಕಾತಿಯ ಖಾಲಿ ಸ್ಥಾನಗಳು ಮತ್ತು ಮುಂಬಡ್ತಿಗಾಗಿನ ಖಾಲಿ ಸ್ಥಾನಗಳು ಎಂದು ವರ್ಗೀಕರಿಸಬೇಕಾಗಿತ್ತು. ಈ ಪೈಕಿ ನೇರ ನೇಮಕಾತಿ ಮತ್ತು ಮುಂಬಡ್ತಿಯ ಖಾಲಿ ಸ್ಥಾನಗಳ ಮೀಸಲನ್ನು ಬದಲಾವಣೆ ಮಾಡಲು ಅವಕಾಶ ಇರಲಿಲ್ಲ.

ಇದರಿಂದಾಗಿ, ಇಲಾಖೆಯಲ್ಲಿ ನೂರಾರು ಖಾಲಿ ಹುದ್ದೆಗಳಿದ್ದರೂ ಮುಂಬಡ್ತಿಯಿಂದ ತುಂಬುವ ಅವಕಾಶ ಇಲ್ಲದೇ ಇರುವ ಕಾರಣಕ್ಕೆ ಇವೆಲ್ಲವೂ ಖಾಲಿಯೇ ಉಳಿದಿದ್ದವು. ಬಡ್ತಿ ಪಡೆಯುವ ಅರ್ಹತೆ ಇದ್ದ ಸಾವಿರಾರು ನೌಕರರು ಪದೋನ್ನತಿಯಿಂದ ವಂಚಿತರಾಗಿದ್ದರು. ಈ ನಿಯಮವನ್ನು ಬದಲಾವಣೆ ಮಾಡುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಅನೇಕ ಬಾರಿ ಮನವಿ ಮಾಡಿತ್ತು. ಸರ್ಕಾರದ ಈ ನಿರ್ಧಾರದಿಂದಾಗಿ, ಬಡ್ತಿಗೆ ಕಾಯುತ್ತಿದ್ದ ಅನೇಕರಿಗೆ ಅವಕಾಶದ ಬಾಗಿಲು ತೆರೆಯಲಿದೆ.

ರಾವತ್ ಸಾವಿಗೆ ಅವಹೇಳನ: ಅಮಾನತು

ಶ್ರೀನಗರ: ಹೆಲಿಕಾಪ್ಟರ್ ಪತನದ ದುರಂತದಲ್ಲಿ ಮೃತಪಟ್ಟ ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಅವರ ಸಾವಿಗೆ ಅವಹೇಳನಾಕಾರಿ ಪ್ರತಿಕ್ರಿಯಿಸಿದ್ದ ಬ್ಯಾಂಕ್‌ನ ನೌಕರರೊಬ್ಬರನ್ನು ಶುಕ್ರವಾರ ಅಮಾನತು ಮಾಡಲಾಗಿದೆ.

ಸರ್ಕಾರಿ ಸ್ವಾಮ್ಯದ ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್‌ನ ಉದ್ಯೋಗಿಯಾಗಿರುವ ಅಫ್ರೀನ್ ಹಸನ್ ನಕಾಶ್ ಅಮಾನತುಗೊಂಡವರು.

ಗೋವಾ: ಪ್ರಿಯಾಂಕಾ ಭೇಟಿ ದಿನವೇ ಸಾಮೂಹಿಕ ರಾಜೀನಾಮೆ

ಪಣಜಿ (ಪಿಟಿಐ): ಗೋವಾದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಭೇಟಿಯ ದಿನವೇ (ಶುಕ್ರವಾರ) ಅಲ್ಲಿನ ಕಾಂಗ್ರೆಸ್ ನಾಯಕರು ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ.

ಪೋರ್‌ವೊರಿಮ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕರ ಗುಂಪು ಶುಕ್ರವಾರ ಬೆಳಿಗ್ಗೆಯೇ ರಾಜೀನಾಮೆ ಸಲ್ಲಿಸಿತು. ದಿಢೀರ್ ರಾಜೀನಾಮೆಯಿಂದಾಗಿ ಗೋವಾದಲ್ಲಿ ಮುಂಬರುವ ಚುನಾವಣೆಯಲ್ಲಿ ಸಮಾನ ಮನಸ್ಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಯೋಚನೆಯಲ್ಲಿದ್ದ ಕಾಂಗ್ರೆಸ್‌ಗೆ ಈಗ ಗೊಂದಲ ಎದುರಾಗಿದೆ.

ಪೋರ್‌ವೊರಿಮ್ ವಿಧಾನಸಭಾಕ್ಷೇತ್ರದ ಬೆಳವಣಿಗೆಯ ಬೆನ್ನಲ್ಲೇ ಕಾಂಗ್ರೆಸ್ ಹಿರಿಯ ನಾಯಕ ಮೊರೊನಾ ರೆಬೆಲೊ ಅವರು ರಾಜೀನಾಮೆ ನೀಡಿದ್ದಾರೆ.

‘ಪಕ್ಷದ ವಿರುದ್ಧ ಕೆಲಸ ಮಾಡಿದ್ದರೂ ಕರ್ಟೊರಿಮ್ ವಿಧಾನಸಭಾ ಕ್ಷೇತ್ರಕ್ಕೆ ಹಾಲಿ ಶಾಸಕ ಅಲೆಕ್ಸೊ ರೆಜಿನಾಲ್ಡೊ ಲೌರೆಂಕೊ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದ ಕಾರಣ ತಾವು ಅಸಮಾಧಾನ ಹೊಂದಿರುವುದಾಗಿ’ ರೆಬೆಲೊ ತಮ್ಮ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

‘ಕಳೆದ ನಾಲ್ಕೂವರೆ ವರ್ಷಗಳಿಂದ ಪಕ್ಷದ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸದೇ ಪಕ್ಷದ ನಾಯಕರನ್ನು ಮತ್ತು ನಿಮ್ಮನ್ನು ನಿಂದಿಸಿರುವ ಅಲೆಕ್ಸೊ ರೆಜಿನಾಲ್ಡೊ ಲೌರೆಂಕೊ ಅವರು ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಕರ್ಟೊರಿಮ್‌ನ ಅಧಿಕೃತ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿದ್ದಾರೆ. ಅಂಥವರಿಗೇ ಪಕ್ಷದ ಕಾರ್ಯಾಧ್ಯಕ್ಷರಾಗಿ ಬಡ್ತಿ ನೀಡಲಾಗಿದೆ ಮತ್ತು ಇತ್ತೀಚೆಗೆ ನಡೆದ ಸಮಾವೇಶದಲ್ಲಿ ಹಿರಿಯ ನಾಯಕರು ಅಭ್ಯರ್ಥಿ ಎಂದು ಘೋಷಿಸಲಾಗಿದೆ’ ಎಂದು ರೆಬೆಲೊ ಅವರು ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿ (ಜಿಪಿಸಿಸಿ) ಅಧ್ಯಕ್ಷ ಗಿರೀಶ್ ಚೋಡಂಕರ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

‘ಮಹಿಳೆಯರಿಗೆ ಶೇ 30 ಮೀಸಲಾತಿ’

ಪಣಜಿ: ‘ಗೋವಾದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ 30 ಮೀಸಲಾತಿ ಕಲ್ಪಿಸುವುದಾಗಿ’ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಭರವಸೆ ನೀಡಿದ್ದಾರೆ.

ಇಲ್ಲಿನ ಕ್ವಿಪೆಮ್ ವಿಧಾನಸಭಾ ಕ್ಷೇತ್ರದ ಮೊರ್ಪಿರ್ಲಾ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿನ ಬುಡಕಟ್ಟು ಮಹಿಳೆಯೊಂದಿಗೆ ಸಂವಾದ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಗೋಮಾಂಸ ತಿಂದ ಬುಡಕಟ್ಟಿನ 24 ಮಂದಿಗೆ ಬಹಿಷ್ಕಾರ

ಇಡುಕ್ಕಿ, ಕೇರಳ (ಪಿಟಿಐ): ತಮ್ಮ ಸಂಪ್ರದಾಯಕ್ಕೆ ವಿರುದ್ಧ ಎನ್ನಲಾದ ಆಹಾರ ಪದ್ಧತಿ ಗೋಮಾಂಸ ಸೇವನೆ ಮಾಡಿದ 24 ಮಂದಿ ಬುಡಕಟ್ಟು ಜನಾಂಗದ ಪುರುಷರಿಗೆ ಆ ಜನಾಂಗದ ಊರುಕ್ಕೂಟಮ್ (ಬುಡಕಟ್ಟು ಜನಾಂಗದ ಪರಿಷತ್ತು) ಸಾಮಾಜಿಕ ಬಹಿಷ್ಕಾರ ಹೇರಿರುವ ಘಟನೆ ಕೇರಳದ ಇಡುಕ್ಕಿ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ಮರಯೂರು ಅರಣ್ಯ ಪ್ರದೇಶದಲ್ಲಿ ನಡೆದಿರುವ ಈ ಘಟನೆಯ ಹಿನ್ನೆಲೆಯಲ್ಲಿ ಸ್ಥಳೀಯ ಸ್ವಯಂ ಆಡಳಿತ ಮತ್ತು ಬುಡಕಟ್ಟು ಸಚಿವಾಲಯವು ಬುಡಕಟ್ಟು ಸಮುದಾಯದ ಮುಖಂಡರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಿವೆ ಎಂದು ಪೊಲೀಸರು ಹೇಳಿದರು.

ಕಾಬೂಲ್: ವಿಶೇಷ ವಿಮಾನದಲ್ಲಿ 104 ಜನರ ಸ್ಥಳಾಂತರ

ನವದೆಹಲಿ (ಪಿಟಿಐ): ಹತ್ತು ಭಾರತೀಯ ಪ್ರಜೆಗಳು ಸೇರಿದಂತೆ ಒಟ್ಟು 104 ಜನರನ್ನು ಭಾರತವು ವಿಶೇಷ ವಿಮಾನದ ಮೂಲಕ ಶುಕ್ರವಾರ ಕಾಬೂಲ್‌ನಿಂದ ದೆಹಲಿಗೆ ಸ್ಥಳಾಂತರಿಸಿದೆ.

‘ದೇವಿ ಶಕ್ತಿ’ ಕಾರ್ಯಾಚರಣೆ ಅಡಿಯಲ್ಲಿ ಭಾರತವು ವಿಶೇಷ ವಿಮಾನವನ್ನು ವ್ಯವಸ್ಥೆಗೊಳಿಸಿತ್ತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ.

10 ಭಾರತೀಯರು, 94 ಅಫ್ಗಾನಿಸ್ತಾನಿಯರನ್ನು ಸ್ಥಳಾಂತರ ಮಾಡಲಾಗಿದೆ. ಇವರಲ್ಲಿ 9 ಮಕ್ಕಳು ಹಾಗೂ ಮೂರು ಶಿಶುಗಳು ಸೇರಿವೆ.

ವಿಮಾನವು ಗುರುಗ್ರಂಥ ಸಾಹಿಬ್ ಮತ್ತು ಹಿಂದೂ ಧಾರ್ಮಿಕ ಗ್ರಂಥಗಳ ಮೂರು ಪ್ರತಿಗಳನ್ನು ಕಾಬೂಲ್‌ನ ಪುರಾತನ ಅಸಾಮೈ ಮಂದಿರದಿಂದ ತಂದಿದೆ. ಭಾರತ ಸರ್ಕಾರ ಮತ್ತು ದೆಹಲಿಯಲ್ಲಿನ ಅಫ್ಗನ್ ರಾಯಭಾರ ಕಚೇರಿ ಸಹಯೋಗದಲ್ಲಿ ಈ ವಿಶೇಷ ವಿಮಾನವನ್ನು ವ್ಯವಸ್ಥೆ ಮಾಡಲಾಗಿತ್ತು.

ಜಯಲಲಿತಾ ನಿವಾಸ: ಬೀಗದ ಕೈ ಸೊಸೆಗೆ ಹಸ್ತಾಂತರ

ಚೆನ್ನೈ (ಪಿಟಿಐ): ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ದಿವಂಗತ ಜೆ. ಜಯಲಲಿತಾ ಅವರ ಪೋಯೆಸ್ ಗಾರ್ಡನ್‌ನಲ್ಲಿರುವ ನಿವಾಸದ ಬೀಗದ ಕೀಯನ್ನು ಅವರ ಸೋದರ ಸೊಸೆ ಜೆ.ದೀಪಾ ಅವರಿಗೆ ಶುಕ್ರವಾರ ಅಧಿಕೃತವಾಗಿ ಹಸ್ತಾಂತರಿಸಲಾಯಿತು.

ದೀಪಾ ಅವರು ಈ ನಿವಾಸಕ್ಕಾಗಿ ದೀರ್ಘ ಕಾಲದಿಂದ ಕಾನೂನು ಹೋರಾಟ ನಡೆಸಿದ್ದರು. ಚೆನ್ನೈ ಜಿಲ್ಲಾಧಿಕಾರಿ ಜೆ. ವಿಜಯ ರಾಣಿ ಅವರು ಬೀಗದ ಕೀಯನ್ನು ಹಸ್ತಾಂತರಿಸಿದರು.

ಜಯಲಲಿತಾ ಅವರ ಪೋಯೆಸ್ ಗಾರ್ಡನ್‌ನಲ್ಲಿರುವ ‘ವೇದ ನಿಲಯಂ’ ಅನ್ನು ಸ್ಮಾರಕವನ್ನಾಗಿ ಪರಿವರ್ತಿಸಿದ್ದ ಹಿಂದಿನ ಎಐಎಡಿಎಂಕೆ ಸರ್ಕಾರದ ಆದೇಶವನ್ನು ರದ್ದುಗೊಳಿಸಿದ ಮದ್ರಾಸ್ ಹೈಕೋರ್ಟ್, ಆಸ್ತಿಯನ್ನು ಸಂಬಂಧಿಸಿದ ವಾರಸುದಾರರಿಗೆ ನೀಡುವಂತೆ ನವೆಂಬರ್ 24ರಂದು ಸೂಚನೆ ನೀಡಿತ್ತು.

‘ಅತ್ತೆ ನಿಧನರಾದ ಬಳಿಕ ಅವರ ಮನೆಗೆ ಮೊದಲ ಬಾರಿ ಕಾಲಿಡುತ್ತಿದ್ದೇನೆ. ನಾನು ತುಂಬಾ ಭಾವುಕಳಾಗಿದ್ದೇನೆ’ಎಂದು ದೀಪಾ ಅವರು ಪ್ರತಿಕ್ರಿಯಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

Wanted

ಬೇಕಾಗಿದ್ದಾರೆ SSLC/ PUC/ DEGREE/ ITI/ DIPLOMO ಹೊಂದಿರುವವರು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಆಕರ್ಷಕ ಸಂಬಳದೊಂದಿಗೆ ಉಚಿತ ಊಟ / ವಸತಿ ಕಲ್ಪಿಸಲಾಗುವುದು 8618064329, 9448618498

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈಯಕ್ತಿಕ

Announcements

ಕಾಗಿನೆಲೆ ಕನಕಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ನಂ. 70/5, ಸುವರ್ಣ ಟವರ್, ನಾಗರಬಾವಿ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು–560 040.
ಪ್ರಕಟಣೆ
ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಕಾಗಿನೆಲೆ ಕನಕಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.,ಬೆಂಗಳೂರು. ಈ ಸಹಕಾರಿಯ 2020–2021 ನೇ ಸಾಲಿನ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 12–12–2021 ರಂದು ಬೆಳಿಗ್ಗೆ 11.00 ಗಂಟೆಗೆ ನೂತನವಾಗಿ ನಿರ್ಮಿಸುತ್ತಿರುವ ಸಹಕಾರಿಯ ಕಟ್ಟಡದ ಎದುರು, ನಂ.79/4, 2ನೇ ಮುಖ್ಯರಸ್ತೆ, 22ನೇ ಅಡ್ಡರಸ್ತೆ, ಗೋವಿಂದರಾಜನಗರ, ಬೆಂಗಳೂರು – 560040 ಇಲ್ಲಿ ನಡೆಸಲಾಗುವುದು. ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ಸೂಚನಾ ಪತ್ರ ಕಳುಹಿಸಲಾಗಿದೆ. ನೋಟೀಸು ತಲುಪದಿದ್ದಲ್ಲಿ ಇದನ್ನೇ ಮಹಾಸಭೆಯ ನೋಟೀಸು ಎಂದು ಭಾವಿಸಿ, ಸಕ್ರಿಯವಾಗಿ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ.

ವ್ಯಾಪಾರ

Business to Business

Business

ಫ್ರಾಂಚೈಸಿಗಾಗಿ ಸಂಪರ್ಕಿಸಿ B to B ಯಲ್ಲಿ ONLINE ಸೇವೆಗಳನ್ನು ಗ್ರಾಮಗಳಿಗೆ ಪರಿಚಯಿಸಲು ಜಿಲ್ಲಾತಾಲ್ಲೂಕುವಾರು ಫ್ರಾಂಚೈಸಿಗಾಗಿ ಕೂಡಲೇ ಸಂಪರ್ಕಿಸಿ ಆಶೀರ್ವಾದ್ ಸಲ್ಯೂಷನ್ಸ್ 8217593354

ಭವಿಷ್ಯ

Astrology

★||ಕೆಲಸ ಆದ ನಂತರ ಕಾಣಿಕೆ||* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7ಗಂಟೆಗಳಲ್ಲಿ ಪರಿಹಾರ. 9482529984

★||ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ||★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30.ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

ಗುರು ಕಬೀರ್ ಭಾರತಿ. ಫೋನ್ ಮುಖಾಂತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಪ್ರೇಮ, ವ್ಯವಹಾರ, ಶತ್ರು ನಿವಾರಣೆ, ಗಂಡ ಹೆಂಡತಿ ಕಲಹ, ಮದುವೆ, ಕೋರ್ಟ್ ಕೇಸ್, ಕರಿಯರ್, ರಾಜಕೀಯ ಸಂಪರ್ಕಿಸಿ : 9311241624 .

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs. 1999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007/ 8892501007

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ. 9886755306

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಕಜಕಸ್ತಾನದ ತಾಷ್ಕೆಂಟ್‌ನಲ್ಲಿ ಕಾಮನ್ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್

ಜೆರೆಮಿಗೆ ಚಿನ್ನ; ಗುರುರಾಜ್‌ಗೆ ಬೆಳ್ಳಿ

ತಾಷ್ಕೆಂಟ್, ಕಜಕಸ್ತಾನ: ಭಾರತದ ಜೆರೆಮಿ ಲಾಲ್‌ರಿನ್ನಾಂಗ ಇಲ್ಲಿ ನಡೆಯುತ್ತಿರುವ ಕಾಮನ್ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 67 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಕರ್ನಾಟಕದ ಗುರುರಾಜ್ ಪೂಜಾರಿ 61 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ಜೆರೆಮಿ ಒಟ್ಟು 305 ಕೆಜಿ (141 ಕೆಜಿ ಮತ್ತು 164 ಕೆಜಿ) ಭಾರ ಎತ್ತಿದರು. 19 ವರ್ಷದ ಜೆರೆಮಿ ಸ್ನ್ಯಾಚ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದರು. ಆದರೆ ಅವರಿಗೆ ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆಯನ್ನು ಮೀರಲು ಆಗಲಿಲ್ಲ. 2019ರಲ್ಲಿ ಅವರು 306 ಕೆಜಿ (140 ಕೆಜಿ + 166 ಕೆಜಿ) ಸಾಧನೆ ಮಾಡಿದ್ದರು. 2018ರ ಯೂತ್ ಒಲಿಂಪಿಕ್ಸ್‌ನಲ್ಲೂ ಅವರು ಚಿನ್ನ ಗೆದ್ದಿದ್ದರು. ಏಪ್ರಿಲ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೊಣಕಾಲು ನೋವಿನಿಂದ ಬಳಲಿದ್ದರು.

ಕುಂದಾಪುರದ ಗುರುರಾಜ ಪೂಜಾರಿ ಅವರು ಗುರುವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಒಟ್ಟು 265 ಕೆಜಿ (117 ಕೆಜಿ + 148 ಕೆಜಿ) ಭಾರ ಎತ್ತಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. 61ಕೆಜಿ ವಿಭಾಗದಲ್ಲಿ ಇದೇ ಮೊದಲ ಬಾರಿ ಅವರು ಕಣಕ್ಕೆ ಇಳಿದಿದ್ದಾರೆ.

ಮಹಿಳಾ ವಿಭಾಗದ 55 ಕೆಜಿ ಎಸ್.ವಿದ್ಯಾರಾಣಿ 198 ಕೆಜಿ (84ಕೆಜಿ + 114ಕೆಜಿ) ಭಾರ ಎತ್ತುವ ಮೂಲಕ ಬೆಳ್ಳಿ ಪದಕ ಗಳಿಸಿದರು. ನೈಜೀರಿಯಾದ ಅದಿಜತ್ ಒಲರಿನೊಯೆ 203 ಕೆಜಿ ಸಾಧನೆಯೊಂದಿಗೆ ಚಿನ್ನ ಗೆದ್ದುಕೊಂಡರು. ಇಲ್ಲೇ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು ನಾಲ್ಕನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಜೆರೆಮಿ ಲಾಲ್‌ರಿನ್ನಾಂಗ –ರಾಯಿಟರ್ಸ್ ಚಿತ್ರ

ಗುರುರಾಜ ಪೂಜಾರಿ

ಒಲಿಂಪಿಕ್ಸ್: ತಾತ್ಕಾಲಿಕ ಪಟ್ಟಿಯಿಂದ ಕ್ರಿಕೆಟ್ ಹೊರಕ್ಕೆ

ಜಿನೇವಾ (ಪಿಟಿಐ): 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದ 28 ಕ್ರೀಡೆಗಳ ತಾತ್ಕಾಲಿಕ ಪಟ್ಟಿಯಿಂದ ಕ್ರಿಕೆಟ್ ಮತ್ತು ಇತರ ಮೂರು ಕ್ರೀಡೆಗಳನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಹೊರಗಿಟ್ಟಿದೆ.

1900ರ ಪ್ಯಾರಿಸ್ ಕೂಟದಲ್ಲಿ ಕ್ರಿಕೆಟ್ ಆಡಿಸಲಾಗಿತ್ತು. ಸದ್ಯ ವೇಟ್‌ಲಿಫ್ಟಿಂಗ್ ಮತ್ತು ಆಧುನಿಕ ಪೆಂಟಾಥ್ಲಾನ್ ಕೂಡ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲ.

ಭ್ರಷ್ಟಾಚಾರ ಮತ್ತು ಡೋಪಿಂಗ್ ಸಮಸ್ಯೆಗಳಿಗೆ ಸಿಲುಕಿರುವ ಬಾಕ್ಸಿಂಗ್ ಮತ್ತು ವೇಟ್‌ಲಿಫ್ಟಿಂಗ್ ಫೆಡರೇಷನ್‌ಗಳಿಗೆ ತಮ್ಮ ಸಮಸ್ಯೆ ಪರಿಹರಿಸಿಕೊಳ್ಳಲು 18 ತಿಂಗಳ ಕಾಲಾವಧಿಯನ್ನು ಐಒಸಿ ನೀಡಿದೆ. ಅಥ್ಲೆಟಿಕ್ಸ್, ಆರ್ಚರಿ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಟೆನಿಸ್ ಮತ್ತು ಕುಸ್ತಿ, ಲಾಸ್ ಏಂಜಲೀಸ್ ಒಲಿಂಪಿಕ್ ಕೂಟಕ್ಕೆ ತಾತ್ಕಾಲಿಕವಾಗಿ ಸೇರಿಸಲಾದ ಕೆಲವು ಕ್ರೀಡೆಗಳಾಗಿವೆ.

ಬಿಎಫ್‌ಸಿ ತಂಡಕ್ಕೆ ಲಯಕ್ಕೆ ಮರಳುವ ತವಕ

ಐಎಸ್‌ಎಲ್ ಫುಟ್‌ಬಾಲ್: ಎಫ್‌ಸಿ ಗೋವಾ ಎದುರಾಳಿ

ಬ್ಯಾಂಬೊಲಿಮ್, ಗೋವಾ (ಪಿಟಿಐ): ನೀರಸ ಆಟವಾಡಿ ನಿರಾಶೆಗೆ ಒಳಗಾಗಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮತ್ತೊಂದು ಸವಾಲಿಗೆ ಸಜ್ಜಾಗಿದೆ. ಶನಿವಾರ ಇಲ್ಲಿನ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬಿಎಫ್‌ಸಿ ಆತಿಥೇಯ ಎಫ್‌ಸಿ ಗೋವಾ ಎದುರು ಸೆಣಸಲಿದೆ.

ಲೀಗ್‌ನ ಬಲಿಷ್ಠ ತಂಡಗಳೆಂದೇ ಹೇಳಲಾಗುವ ಬಿಎಫ್‌ಸಿ ಮತ್ತು ಗೋವಾ ಈ ಬಾರಿ ನಿರೀಕ್ಷೆ ತಕ್ಕಂತೆ ಮಿಂಚಲಿಲ್ಲ. ಹೀಗಾಗಿ ಪಾಯಿಂಟ್ ಪಟ್ಟಿಯ ತಳಭಾಗದಲ್ಲಿವೆ. ಆದ್ದರಿಂದ ಮರುಚೇತನ ಗಳಿಸಲು ಪ್ರಯತ್ನಿಸಲಿವೆ.

ಸತತ ಮೂರು ಪಂದ್ಯಗಳಲ್ಲಿ ಸೋತಿದ್ದ ಗೋವಾ ಹಿಂದಿನ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧ 4–3ರಿಂದ ಜಯ ಗಳಿಸಿ ಲಯಕ್ಕೆ ಮರಳಿತ್ತು. ಬೆಂಗಳೂರು ಎಫ್‌ಸಿ ಹಿಂದಿನ ಎರಡು ಪಂದ್ಯಗಳನ್ನು ಸೋತು ನಿರಾಶೆಯಲ್ಲಿದೆ. ಸುನಿಲ್ ಚೆಟ್ರಿ ಈ ವರೆಗೆ 99 ಪಂದ್ಯಗಳನ್ನು ಆಡಿದ್ದು ಶನಿವಾರದ ಪಂದ್ಯದಲ್ಲಿ ಕಣಕ್ಕೆ ಇಳಿದರೆ ಐಎಸ್‌ಎಲ್‌ನಲ್ಲಿ 100 ಪಂದ್ಯಗಳನ್ನು ಆಡಿದ ಮೊದಲ ಆಟಗಾರ ಎನಿಸಿಕೊಳ್ಳಲಿದ್ದಾರೆ.

ಎಟಿಕೆಎಂಬಿಗೆ 'ಹ್ಯಾಟ್ರಿಕ್' ಸೋಲಿನ ಆತಂಕ: ಬಲಿಷ್ಠ ಎಟಿಕೆ ಮೋಹನ್ ಬಾಗನ್ ತಂಡವೂ ಈ ಬಾರಿ ನಿರೀಕ್ಷಿತ ಸಾಮರ್ಥ್ಯ ಪ್ರದರ್ಶಿಸಲಿಲ್ಲ. ಸತತ ಎರಡು ಪಂದ್ಯಗಳಲ್ಲಿ ನಿರಾಸೆ ಕಂಡಿರುವ ತಂಡ ಈಗ ಹ್ಯಾಟ್ರಿಕ್ ಸೋಲಿನ ಆತಂಕದಲ್ಲಿದ್ದು ಮೊದಲ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿಯನ್ನು ಎದುರಿಸಲಿದೆ.

ಕೇರಳ ಬ್ಲಾಸ್ಟರ್ಸ್ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ವಿರುದ್ಧ ಗೆದ್ದು ಶುಭಾರಂಭ ಮಾಡಿದ್ದ ಎಟಿಕೆಎಂಬಿ ನಂತರ ಮುಂಬೈ ಸಿಟಿ ಎಫ್‌ಸಿ ಮತ್ತು ಜೆಮ್ಶೆಡ್‌ಪುರ ಎಫ್‌ಸಿಗೆ ಮಣಿದಿತ್ತು. ರಾಷ್ಟ್ರೀಯ ತಂಡದಲ್ಲಿ ಆಡಿದ ಅನುಭವ ಇರುವ ಪ್ರೀತಮ್ ಕೊತಾಲ್ ಮತ್ತು ಸುಭಾಷಿಷ್ ಬೋಸ್ ಅವರು ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ತಂಡದ ಪ್ರಮುಖ ಆಟಗಾರರಾದ ತಿರಿ ಮತ್ತು ಸಂದೇಶ್ ಜಿಂಗಾನ್ ಅವರ ಅನುಪಸ್ಥಿತಿಯ ಈ ಬಾರಿ ಎದ್ದು ಕಾಣುತ್ತಿದೆ. ತಿರಿ ಗಾಯಗೊಂಡಿದ್ದು ಸಂದೇಶ್ ಅವರು ಕ್ರೊವೇಷ್ಯಾದ ಕ್ಲಬ್ ಸಿಬೆನಿಕ್‌ನಲ್ಲಿ ಆಡಲು ತೆರಳಿದ್ದಾರೆ.

ಚೆನ್ನೈಯಿನ್ ಎಫ್‌ಸಿಯ ಡಿಫೆಂಡರ್‌ಗಳು ಈ ಬಾರಿ ಅತ್ಯುತ್ತಮ ಸಾಮರ್ಥ್ಯ ಪ್ರದರ್ಶಿಸಿದ್ದು ಕಡಿಮೆ ಗೋಲು ಬಿಟ್ಟುಕೊಟ್ಟ ತಂಡಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಎಟಿಕೆಯ ಆಕ್ರಮಣವನ್ನು ತಂಡ ಹೇಗೆ ತಡೆಯಲಿದೆ ಎಂಬುದು ಕುತೂಹಲದ ವಿಷಯ.

ಒಡಿಶಾಗೆ ರೋಚಕ ಜಯ: ಜಿದ್ದಾಜಿದ್ದಿಯ ಪೈಪೋಟಿಯಲ್ಲಿ ಒಡಿಶಾ ಎಫ್‌ಸಿ ತಂಡ ರೋಚಕ ಜಯ ಸಾಧಿಸಿತು. ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿಯನ್ನು ಒಡಿಶಾ 1–0ಯಿಂದ ಮಣಿಸಿತು. 81ನೇ ನಿಮಿಷದಲ್ಲಿ ತೊಯ್ಬಾ ಸಿಂಗ್ ನೆರವಿನೊಂದಿಗೆ ಜೊನಾಥನ್ ಕ್ರಿಸ್ಟಿಯನ್ ಗಳಿಸಿದ ಏಕೈಕ ಗೋಲು ತಂಡದ ಕೈ ಹಿಡಿಯಿತು.

ಬಿಎಫ್‌ಸಿ ಆಟಗಾರರು ವಾರ್ಮ್ ಅಪ್ ಮಾಡಿಕೊಂಡರು –ಟ್ವಿಟರ್ ಚಿತ್ರ

ಬಿಎಫ್‌ಸಿಯ ಹಾದಿ

ಪಂದ್ಯ	5
ಜಯ	1
ಡ್ರಾ	1
ಸೋಲು	3
ಗೋಲು	7*
ಕೊಟ್ಟ ಗೋಲು	10

(*ಉಡುಗೊರೆ ಗೋಲು ಸೇರಿ)

ಬಿಎಫ್‌ಸಿ ಪರ ಗೋಲು ಗಳಿಸಿದವರು

ಆಟಗಾರ	ಪಂದ್ಯ	ಗೋಲು
ಕ್ಲೀಟನ್ ಸಿಲ್ವಾ	5	2
ಪ್ರಿನ್ಸ್ ವಿನಿ	4	1
ಜಯೇಶ್ ರಾಣೆ	4	1
ಅಲನ್ ಕೋಸ್ಟ	5	1
ಆಶಿಕ್ ಕೆ	5	1

ಇಂದಿನ ಪಂದ್ಯಗಳು

ಎಟಿಕೆ ಮೋಹನ್ ಬಾಗನ್ – ಚೆನ್ನೈಯಿನ್ ಎಫ್‌ಸಿ	
ಆರಂಭ	ರಾತ್ರಿ 7.30
ಬೆಂಗಳೂರು ಎಫ್‌ಸಿ–ಎಫ್‌ಸಿ ಗೋವಾ	
ಆರಂಭ	ರಾತ್ರಿ 9.30
ನೇರ ಪ್ರಸಾರ	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ

ಕರ್ನಾಟಕಕ್ಕೆ ಮುಂಬೈ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೂರನೇ ಪಂದ್ಯದಲ್ಲಿ ಶನಿವಾರ ಮುಂಬೈ ವಿರುದ್ಧ ಸೆಣಸಲಿದೆ. ತಿರುವನಂತಪುರದ ಮಂಗಳಾಪುರಂ ಕ್ರೀಡಾಂಗಣದಲ್ಲಿ ನಡೆಯಲಿರುವ 'ಬಿ' ಗುಂಪಿನ ಪಂದ್ಯದಲ್ಲಿ ಪ್ರಬಲ ಪೈಪೋಟಿ ನಡೆಯುವ ಸಾಧ್ಯತೆ ಇದೆ.

ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ಮೊದಲ ಪಂದ್ಯದಲ್ಲಿ ಪುದುಚೇರಿ ವಿರುದ್ಧ 236 ರನ್‌ಗಳ ಜಯ ಗಳಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯದಿಂದಾಗಿ ತಮಿಳುನಾಡಿಗೆ ಮಣಿದಿತ್ತು. ಮುಂಬೈ ತಂಡವು ಮೊದಲ ಪಂದ್ಯದಲ್ಲಿ ತಮಿಳುನಾಡು ವಿರುದ್ಧ ಸೋತಿತ್ತು, ನಂತರ ಬರೋಡಾ ಎದುರು ಗೆಲುವು ಸಾಧಿಸಿತ್ತು.

ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರಂಥ ಅನುಭವಿಗಳೊಂದಿಗೆ ಯುವ ಆಟಗಾರರ ಬಲವೂ ಮುಂಬೈ ತಂಡಕ್ಕೆ ಇದೆ. ಶಂಸ್ ಮುಲಾನಿ ಕಳೆದ ಪಂದ್ಯದಲ್ಲಿ ಭರ್ಜರಿ ಆಟವಾಡಿದ್ದರು. ಕರ್ನಾಟಕ ತಂಡದಲ್ಲೂ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ ಆಟಗಾರರು ಇದ್ದಾರೆ. ಅವರ ಅನುಭವವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ತಂಡ ಯೋಜನೆ ರೂಪಿಸಿಕೊಳ್ಳಬೇಕಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಮನೀಷ್ ಪಾಂಡೆ –ಪ್ರಜಾವಾಣಿ ಚಿತ್ರ

ವಿಶ್ವ ಚೆಸ್: ಕಾರ್ಲ್‌ಸನ್ ಚಾಂಪಿಯನ್

ದುಬೈ (ಎಎಫ್‌ಪಿ): ನಾರ್ವೆಯ ಗ್ರ್ಯಾಂಡ್ ಮಾಸ್ಟರ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಾರೆ.

ಶುಕ್ರವಾರ ಕಾರ್ಲ್‌ಸನ್ ರಷ್ಯಾದ ಇಯಾನ್ ಇಯಾನ್ ನಿಪೋಮ್‌ನಿಶಿ ಸವಾಲು ಮೀರಿದರು. 14 ಗೇಮ್‌ಗಳ ಪಂದ್ಯದ 11ನೇ ಗೇಮ್‌ನಲ್ಲಿ ಕಾರ್ಲ್‌ಸನ್ ಜಯ ಸಾಧಿಸಿದರು. ಇದು ಅವರಿಗೆ 4ನೇ ಜಯವಾಗಿತ್ತು. ಈ ಗೇಮ್‌ನಲ್ಲಿ ಅವರು ಕಪ್ಪು ಕಾಯಿಗಳೊಂದಿಗೆ ಆಡಿದ್ದರು.

ಪಂದ್ಯದಲ್ಲಿ ಕಾರ್ಲ್‌ಸನ್ 7.5 ಪಾಯಿಂಟ್ಸ್ ಗಳಿಸಿದರೆ ನಿಪೋಮ್‌ನಿಶಿ ಅವರಿಗೆ 3.5 ಪಾಯಿಂಟ್ಸ್ ಕಲೆಹಾಕಲಷ್ಟೇ ಸಾಧ್ಯವಾಯಿತು. 31 ವರ್ಷದ ನಾರ್ವೆ ಆಟಗಾರನಿಗೆ ಇದು ಸತತ ಐದನೇ ಪ್ರಶಸ್ತಿ.

ಮ್ಯಾಗ್ನಸ್ ಕಾರ್ಲ್‌ಸನ್– ಎಪಿ ಚಿತ್ರ

ಕ್ರಿಕೆಟ್: ಅನ್ವೇಶ್ವರ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಯುವ ಬ್ಯಾಟರ್, ದೆಹಲಿಯ ಯಶ್ ಧೂಲ್ ಅವರನ್ನು 19 ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡದ ನಾಯಕನನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕದ ಅನ್ವೇಶ್ವರ್ ಗೌತಮ್ ಕೂಡ ಸ್ಥಾನ ಗಳಿಸಿದ್ದಾರೆ.

ಇದೇ 23ರಿಂದ ಯುಎಇಯಲ್ಲಿ ನಡೆಯಲಿರುವ ಟೂರ್ನಿಗೆ 20 ಮಂದಿಯ ಭಾರತ ತಂಡವನ್ನು ಜೂನಿಯರ್ ಆಯ್ಕೆ ಸಮಿತಿ ಆರಿಸಿದೆ ಎಂದು ಬಿಸಿಸಿಐ ಶುಕ್ರವಾರ ಪ್ರಕಟಿಸಿದೆ.

ತಂಡ: ಹಾರೂನ್ ಸಿಂಗ್ ಪನ್ನು, ಅಂಕೃಷ್ ರಘುವಂಶಿ, ಅಂಶ್ ಜಿ, ಎಸ್.ಕೆ. ರಶೀದ್, ಯಶ್ ಧೂಲ್ (ನಾಯಕ), ಅನ್ವೇಶ್ವರ್ ಗೌತಮ್, ಸಿದ್ಧಾರ್ಥ್ ಯಾದವ್, ಕೌಶಲ್ ತಾಂಬೆ, ನಿಶಾಂತ್ ಸಿಂಧು, ದಿನೇಶ್ ಬನ (ವಿಕೆಟ್ ಕೀಪರ್), ಆರಾಧ್ಯ ಯಾದವ್ (ವಿಕೆಟ್ ಕೀಪರ್), ರಾಜಾಂಗದ್ ಬವ, ರಾಜ್‌ವರ್ಧನ್ ಹಂಗರಗೇಕರ್, ಗರ್ವ್ ಸಾಂಗ್ವಾನ್, ರವಿ ಕುಮಾರ್, ರಿಶಿತ್ ರೆಡ್ಡಿ, ಮಾನವ್ ಪ್ರಕಾಶ್, ಅಮೃತ್ ರಾಜ್ ಉಪಾಧ್ಯಾಯ, ವಿಕ್ಕಿ ಓಸ್ತವಾಲ್, ವಾಸು ವತ್ಸ್ (ಫಿಟ್‌ನೆಸ್ ಪರೀಕ್ಷೆಯ ನಂತರ ನಿರ್ಧಾರ). ಸಿದ್ಧತಾ ಶಿಬಿರಕ್ಕೆ ಕಾಯ್ದಿರಿಸಿದ ಆಟಗಾರರು: ಆಯುಷ್ ಸಿಂಗ್ ಠಾಕೂರ್, ಉದಯ್ ಸಹರನ್, ಶಾಶ್ವತ್ ಡಂಗ್ವಾಲ್, ಧನುಷ್ ಗೌಡ, ಪಿ.ಎಂ.ಸಿಂಗ್ ರಾಥೋಡ್.

ಬೆಂಗಳೂರು ಎಫ್‌ಸಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ರಾಜು ಗಳಿಸಿದ ಎರಡು ಗೋಲುಗಳ ನೆರವಿನಿಂದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 7–1 ಗೋಲುಗಳಿಂದ ಎಡಿಇ ಎಫ್‌ಸಿ ಎದುರು ಗೆದ್ದಿತು. ರಾಹುಲ್ ಎರಡನೇ ಮತ್ತು 36ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಲಾಲ್ ರಾಮ್ತುಲಂಗಾ (10ನೇ ನಿಮಿಷ), ಎಡ್ವಿನ್ ರೊಸಾರಿಯೊ (35ನೇ ನಿ.), ಲಾಲ್ ತಂಗ್‌ಲಿನಾ (51ನೇ ನಿ.) ಮತ್ತು ವೈಪೊಥೊಯಿ (90ನೇ ನಿ.) ವಿಜೇತ ತಂಡದ ಪರ ಗೋಲು ದಾಖಲಿಸಿದರು. ಒಂದು ಗೋಲು 'ಉಡುಗೊರೆ' ಮೂಲಕ ಎಡಿಇ ತಂಡದ ಮಾಣಿಕ್ ಹಲ್ದಾರ್ ಮೂಲಕ ಬಂದಿತು.

ಎಡಿಇ ತಂಡದ ಸಚಿನ್ ಅವರು 65ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು. ಮತ್ತೊಂದು ಪಂದ್ಯದಲ್ಲಿ ಜವಾಹರ್ ಯೂನಿಯನ್ ಎಫ್‌ಸಿ 4–0ರಿಂದ ಡೆಕ್ಕನ್ ಎಫ್‌ಸಿ ಎದುರು ಗೆದ್ದರೆ, ಎಫ್‌ಸಿ ಬೆಂಗಳೂರು ಯುನೈಟೆಡ್ 1–0ರಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ವಿರುದ್ಧ ಜಯಿಸಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,516
ಇಂದಿನ ಅಂತ್ಯ	17,511
▼	5
ದಿನದ ಗರಿಷ್ಠ	17,534

ವಿನಿಮಯ ದರ

$ ಡಾಲರ್	75.78
£ ಪೌಂಡ್	100.18
€ ಯುರೊ	85.63
¥ ಯೆನ್ (100ಕ್ಕೆ)	66.67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1300 (1310)
ಸೋಯಾ (ರಿಫೈಂಡ್)	₹1215(1220)
ಸೂರ್ಯಕಾಂತಿ (ರಿಫೈಂಡ್)	₹1270 (1270)
ಪಾಮೋಲಿನ್	₹1180 (1180)

ಮುಂಬೈ ಧಾರಣೆ

ಶೇಂಗಾ

10-12-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1310 (1320)
ಒಂದು ವಾರದ ಡೆಲಿವರಿ	1305 (1315)
ಸೋಯಾ ಕಚ್ಚಾ	1160 (1170)
ಪಾಮ್ ವಾರದ ಡೆಲಿವರಿ	1178 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,700 (47,700)
ಬೆಳ್ಳಿ ಕೆ.ಜಿ
60,105 (60,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ರಾಯಲ್ ಗೋಲ್ಡ್ ಮೆಡಲ್' ಪುರಸ್ಕಾರಕ್ಕೆ ವಿನ್ಯಾಸಕ ಬಾಲಕೃಷ್ಣ ದೋಶಿ ಆಯ್ಕೆ

ಲಂಡನ್ (ಪಿಟಿಐ): ವಾಸ್ತು ವಿನ್ಯಾಸಕ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ದೇಶದ ಪ್ರಸಿದ್ಧ ವಾಸ್ತು ವಿನ್ಯಾಸಕ ಬಾಲಕೃಷ್ಣ ದೋಶಿ ಅವರು ಬ್ರಿಟನ್‌ನ ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಟಿಷ್ (ಆರ್‌ಐಬಿಎ) ನೀಡುವ ಪ್ರತಿಷ್ಠಿತ 'ರಾಯಲ್ ಗೋಲ್ಡ್ ಮೆಡಲ್-2022' ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ವಾಸ್ತುಶಿಲ್ಪ ಕ್ಷೇತ್ರದಲ್ಲಿ ನೀಡಲಾಗುವ ವಿಶ್ವದ ಅತ್ಯುನ್ನತ ಗೌರವ ಇದಾಗಿದೆ.

94 ವರ್ಷದ ಬಾಲಕೃಷ್ಣ ದೋಶಿ ಅವರು 70 ವರ್ಷಗಳ ವೃತ್ತಿಜೀವನದಲ್ಲಿ 100ಕ್ಕೂ ಹೆಚ್ಚು ಯೋಜನೆಗಳಿಗೆ ವಾಸ್ತು ರಚನೆ ಮಾಡಿದ್ದಾರೆ. ವೃತ್ತಿಪರ ಕೆಲಸದ ಜತೆಗೆ ಅವರು ಭಾರತ ಸೇರಿದಂತೆ ನೆರೆಯ ದೇಶಗಳಲ್ಲಿ ಬೋಧನಾ ಕಾರ್ಯದಲ್ಲೂ ತೊಡಗಿದ್ದಾರೆ. ಈ ಮೂಲಕ ಅವರು ವಾಸ್ತು ವಿನ್ಯಾಸ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದ್ದಾರೆ ಎಂದು ಆರ್‌ಐಬಿಎ ಪ್ರಕಟಣೆಯಲ್ಲಿ ತಿಳಿಸಿದೆ.

'ರಾಯಲ್ ಗೋಲ್ಡ್ ಮೆಡಲ್' ಅನ್ನು ವಾಸ್ತು ವಿನ್ಯಾಸ ಕ್ಷೇತ್ರದ ಪ್ರಗತಿ ಮತ್ತು ಅದರ ಮೇಲೆ ಮಹತ್ವದ ಪ್ರಭಾವ ಬೀರಿದ ವ್ಯಕ್ತಿ ಅಥವಾ ಜನರ ಗುಂಪಿಗೆ ನೀಡಲಾಗುತ್ತದೆ. ಈ ಕ್ಷೇತ್ರದಲ್ಲಿ ದೋಶಿ ಅವರ ಜೀವಮಾನ ಶ್ರೇಷ್ಠ ಸಾಧನೆಯನ್ನು ಗುರುತಿಸಿ ರಾಣಿ ಎಲಿಜಬೆತ್–2 ಅವರು ಅನುಮೋದನೆ ನೀಡಿದ್ದಾರೆ.



ಪಾದರಕ್ಷೆ: ಭಾರತೀಯರ ಪಾದಗಳಿಗೆ ಸರಿಹೊಂದಿಸಲು ಸಮೀಕ್ಷೆ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಪಾದರಕ್ಷೆಗಳ ಅಳತೆ ಯಾವ ರೀತಿಯಲ್ಲಿ ಇರಬೇಕು ಎಂಬ ವಿಚಾರದಲ್ಲಿ ಬ್ರಿಟಿಷರು ಜಾರಿಗೆ ತಂದಿದ್ದ ವ್ಯವಸ್ಥೆಯನ್ನು ಅನುಸರಿಸುತ್ತಿರುವ ಭಾರತವು, ಈಗ ತನ್ನದೇ ಆದ ಪಾದರಕ್ಷೆ ಅಳತೆ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಮುಂದಾಗಿದೆ.

ಬ್ರಿಟಿಷರು ಜಾರಿಗೆ ತಂದ ವ್ಯವಸ್ಥೆಯ ಪ್ರಕಾರ ಸಿದ್ಧವಾಗುವ ಬಹುತೇಕ ಪಾದರಕ್ಷೆಗಳ ಗಾತ್ರವು ಭಾರತೀಯರ ಪಾದಗಳಿಗೆ ಸರಿಹೊಂದುವಂತೆ ಇರುವುದಿಲ್ಲ. ಯುರೋಪ್ ಮತ್ತು ಅಮೆರಿಕನ್ನರ ಪಾದಗಳಿಗೂ ಭಾರತೀಯರ ಪಾದಗಳಿಗೂ ವ್ಯತ್ಯಾಸ ಇರುವುದೇ ಇದಕ್ಕೆ ಪ್ರಮುಖ ಕಾರಣ. ಇದನ್ನು ಮನಗಂಡಿರುವ ಕೇಂದ್ರ ಸರ್ಕಾರವು ಈಗ ಭಾರತದಲ್ಲಿನ ಪಾದರಕ್ಷೆಗಳ ಗಾತ್ರದಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ಭಾರತದ್ದೇ ಆದ ಅಳತೆ ವ್ಯವಸ್ಥೆ ರೂಪಿಸಲಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ₹ 10.80 ಕೋಟಿ ವೆಚ್ಚದಲ್ಲಿ, ಆತ್ಮನಿರ್ಭರ ಭಾರತ ಯೋಜನೆಯ ಅಡಿಯಲ್ಲಿ ಭಾರತೀಯರ ನಡಿಗೆಯ ಕ್ರಮ, ಪಾದಗಳ ಅಳತೆ ಸೇರಿದಂತೆ ಹಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪಾದರಕ್ಷೆಗಳ ಗಾತ್ರವನ್ನು ಭಾರತೀಯರ ಅಗತ್ಯಗಳಿಗೆ ಸರಿಹೊಂದುವಂತೆ ಮಾಡುವ ಕೆಲಸವನ್ನು ಕೈಗೆತ್ತಿಕೊಳ್ಳಲಿದೆ. ಚೆನ್ನೈನಲ್ಲಿ ಇರುವ ಕೇಂದ್ರ ಚರ್ಮೋದ್ಯಮ ಸಂಶೋಧನಾ ಸಂಸ್ಥೆಯ (ಸಿಎಲ್‌ಆರ್‌ಐ) ಜೊತೆಗೂಡಿ, ಭಾರತೀಯರ ಪಾದಗಳ ಅಳತೆಗೆ ಸರಿಹೊಂದುವ ರೀತಿಯಲ್ಲಿ ಪಾದರಕ್ಷೆಗಳ ಗಾತ್ರ ನಿಗದಿ ಮಾಡಲಾಗುತ್ತದೆ.

'ಐರೋಪ್ಯ ಮತ್ತು ಫ್ರೆಂಚ್ ಮಾನದಂಡಗಳನ್ನು ಭಾರತದಲ್ಲಿ ಈಗ ಅನುಸರಿಸಲಾಗುತ್ತಿದೆ. ಭಾರತೀಯರ ಪಾದಗಳ ಅಳತೆಗೆ ಇವು ಸರಿಹೊಂದುವಂತೆ ಆಗಬೇಕು ಎಂದಾದರೆ, ಪಾದರಕ್ಷೆಗಳನ್ನು ಇನ್ನಷ್ಟು ಆರಾಮವಾಗಿ ಹಾಕಿಕೊಳ್ಳುವಂತೆ ಆಗಬೇಕಾದರೆ ಈಗ ಅನುಸರಿಸುತ್ತಿರುವ ವ್ಯವಸ್ಥೆಯಲ್ಲಿ ಬದಲಾವಣೆ ಬೇಕಿದೆ' ಎಂದು ವಾಣಿಜ್ಯ ಸಚಿವಾಲಯ ಹೇಳಿದೆ.

ವಿವಿಧ ಪ್ರದೇಶಗಳು, ವಯಸ್ಸು, ಆರೋಗ್ಯ ಸ್ಥಿತಿ ಹಾಗೂ ಇತರ ಕೆಲವು ಅಂಶಗಳನ್ನು ಪರಿಗಣಿಸಿ ಏಕರೂಪತೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂದೂ ಅದು ಹೇಳಿದೆ. ನೂರು ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಮಾದರಿಗಳನ್ನು ಸಮೀಕ್ಷೆಯ ವೇಳೆ ಪರಿಗಣಿಸಲಾಗುತ್ತದೆ. ಸಮೀಕ್ಷೆಗಾಗಿ ಶಾಲೆಗಳು, ಕಚೇರಿಗಳು, ವಾಣಿಜ್ಯ ಕೇಂದ್ರಗಳು, ಮನೆಗಳಿಗೆ ಭೇಟಿ ನೀಡುವ ಉದ್ದೇಶವನ್ನು ಸಚಿವಾಲಯ ಹೊಂದಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	525
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಭದ್ರಾವತಿ	
ರಾಶಿ	46100-47899
ಚಿತ್ರದುರ್ಗ	
ಆಪಿ	46600-47000
ಬೆಟ್ಟೆ	39939-40369
ಕೆಂಪುಗೋಟು	31329-31799
ರಾಶಿ	46119-46559
ಹೊನ್ನಾಳಿ	
ರಾಶಿ	46999-46999
ಹೊಸನಗರ	
ಚಾಲಿ	47539-47539
ಕೆಂಪುಗೋಟು	34609-39299
ರಾಶಿ	45109-48699
ಕಾರ್ಕಳ	
ಹೊಸತು	38000-43500
ಹಳತು	46000-52500
ಕುಮಟಾ	
ಚಿಪ್ಪು	25089-42099
ಕೋಕ	21019-35009
ಫ್ಯಾಕ್ಟರಿ	13019-18309
ಹಳೆಚಾಲಿ	48019-50730
ಹೊಸಚಾಲಿ	38509-42599
ಮಡಿಕೇರಿ	
ಹಸಿ	47811-47811
ಮಂಗಳೂರು	
ಕೋಕ	25000-44270
ಪುತ್ತೂರು	
ಕೋಕ	11000-26000
ಹೊಸತು	27500-43500
ಶಿವಮೊಗ್ಗ	
ಬೆಟ್ಟೆ	47709-52630
ಗೊರಬಲು	17210-38699
ರಾಶಿ	44369-47799
ಸರಕು	50000-68899
ಸಿದ್ದಾಪುರ	
ಬಿಳಿಗೋಟು	33899-43099
ಚಾಲಿ	46899-51099
ಕೋಕ	29099-37299
ಹೊಸಚಾಲಿ	34199-41208
ಕೆಂಪುಗೋಟು	27089-34099
ರಾಶಿ	44109-48599
ತಟ್ಟಿಬೆಟ್ಟೆ	33699-47419
ಶಿರಸಿ	
ಬೆಟ್ಟೆ	24099-47699
ಬಿಳಿಗೋಟು	22899-45003
ಚಾಲಿ	46111-51299
ರಾಶಿ	42299-50299
ತುಮಕೂರು	
ರಾಶಿ	45500-46600
ಯಲ್ಲಾಪುರ	
ಬಿಳಿಗೋಟು	36401-43124
ಚಾಲಿ	43559-51399
ಕೋಕ	22899-33299
ಕೆಂಪುಗೋಟು	28199-35309
ರಾಶಿ	46199-53691
ತಟ್ಟಿಬೆಟ್ಟೆ	37950-45869
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	300-589
ದ್ವಿತಳಿ (ಬಿ.ವಿ)	175-786

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,300	15,350	15,300	240.20ಸೆಂಟ್ಸ್
ಎಸಿ	6,750	6,500	6,400	
ಆರ್‌ಪಿ	6,300	6,400	-	ಲಂಡನ್
ಆರ್‌ಸಿ	3,820	3,750	-	2401 ಡಾಲರ್ಸ್

₹ 650 ಕೋಟಿ ಮೌಲ್ಯದ ವಹಿವಾಟು ಪತ್ತೆ: ಸಿಬಿಡಿಟಿ

ನವದೆಹಲಿ (ಪಿಟಿಐ): ರಿಯಲ್ ಎಸ್ಟೇಟ್ ಮತ್ತು ಹಣಕಾಸು ವ್ಯವಹಾರದಲ್ಲಿ ತೊಡಗಿರುವ ಸೂರತ್ ಮೂಲದ ಕಂಪನಿಯ ಮೇಲೆ ಇತ್ತೀಚೆಗೆ ನಡೆಸಿದ ದಾಳಿಯ ಸಂದರ್ಭದಲ್ಲಿ ಆದಾಯ ತೆರಿಗೆ (ಐಟಿ) ಇಲಾಖೆಯು ₹ 650 ಕೋಟಿಗೂ ಹೆಚ್ಚು ಅನುಮಾನಾಸ್ಪದ ವಹಿವಾಟುಗಳನ್ನು ಪತ್ತೆಹಚ್ಚಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಶುಕ್ರವಾರ ತಿಳಿಸಿದೆ.

ಡಿಸೆಂಬರ್ 3 ರಂದು ಸೂರತ್ ಹಾಗೂ ಮುಂಬೈನಲ್ಲಿ ಕಂಪನಿ ಒಡೆತನದಲ್ಲಿರುವ ಸುಮಾರು 40 ಸ್ಥಳಗಳಲ್ಲಿ ಐಟಿ ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದ್ದರು. ಈ ಸಂದರ್ಭದಲ್ಲಿ ಅನುಮಾನ ಹುಟ್ಟಿಸಿರುವ ಖಾತೆ ಪುಸ್ತಕಗಳನ್ನು ವಶಕ್ಕೆ ಪಡೆಯಲಾಗಿದೆ. ಕೆಲವು ವಹಿವಾಟುಗಳಿಗೆ 'ಕೋಡ್' ಬಳಸಿ ಅವುಗಳನ್ನು ನಿರ್ವಹಿಸಿರುವುದು ಕಂಡುಬಂದಿದೆ ಎಂದು ಸಿಬಿಡಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

'ಈ ಸಾಕ್ಷಿಗಳ ಪ್ರಾಥಮಿಕ ವಿಶ್ಲೇಷಣೆಯು ಫ್ಲಾಟ್‌ಗಳು/ಭೂಮಿಯ ಮಾರಾಟದ ಮೇಲೆ ₹300 ಕೋಟಿಗಿಂತ ಹೆಚ್ಚು ಲೆಕ್ಕಕ್ಕೆ ಬಾರದ ನಗದು ಸ್ವೀಕರಿಸಲಾಗಿದೆ ಎಂಬುದನ್ನ ಸೂಚಿಸುತ್ತದೆ. ಇದು ಖಾತೆ ಪುಸ್ತಕದಲ್ಲಿ ದಾಖಲಾಗಿಲ್ಲ' ಎಂದು ಹೇಳಿದೆ.

ಹುಂಡೈ: 'ಸ್ಮಾರ್ಟ್ ಕೇರ್ ಕ್ಲಿನಿಕ್'

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು 'ಹುಂಡೈ ಸ್ಮಾರ್ಟ್ ಕೇರ್ ಕ್ಲಿನಿಕ್' ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿದೆ. ಹತ್ತು ದಿನಗಳ ಈ ಕಾರ್ಯಕ್ರಮದಲ್ಲಿ ಕಂಪನಿಯು ತನ್ನ ಗ್ರಾಹಕರಿಗೆ ನಿರ್ವಹಣಾ ಸೇವೆ, ಕಾರಿಗೆ ರಸ್ತೆಬದಿಗಳಲ್ಲಿ ಕೆಲವು ಅಗತ್ಯ ಸೇವೆಗಳನ್ನು ಒದಗಿಸುವುದು ಹಾಗೂ ವರ್ಷಾಂತ್ಯದ ಕೊಡುಗೆಗಳನ್ನು ನೀಡಲಿದೆ.

ಕಾರು ಇನ್ನಷ್ಟು ದಕ್ಷವಾಗಿ ಇರಬೇಕು ಎಂದಾದರೆ ಅದನ್ನು ಕಾಲ ಕಾಲಕ್ಕೆ ಸೂಕ್ತವಾಗಿ ನಿರ್ವಹಣೆ ಮಾಡುತ್ತಿರಬೇಕು ಎಂಬುದನ್ನು ಗ್ರಾಹಕರಿಗೆ ನೆನಪು ಮಾಡಿಕೊಡುವ ಉದ್ದೇಶದಿಂದ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದು ಕಂಪನಿ ಹೇಳಿದೆ.

ಈ ಕಾರ್ಯಕ್ರಮದ ಅಡಿಯಲ್ಲಿ ಕಾರಿನ ಕೆಲವು ಬಿಡಿಭಾಗಗಳ ಮೇಲೆ ಶೇಕಡ 10ರಷ್ಟು ರಿಯಾಯಿತಿ, ಕೆಲವು ಶುಲ್ಕಗಳಲ್ಲಿ ಶೇಕಡ 20ರಷ್ಟು ರಿಯಾಯಿತಿ ಸೇರಿದಂತೆ ಹಲವು ಕೊಡುಗೆಗಳು ಲಭ್ಯವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಏಳು ವರ್ಷಗಳ ಕನಿಷ್ಠ ಮಟ್ಟಕ್ಕೆ ಪ್ರಯಾಣಿಕ ವಾಹನ ಮಾರಾಟ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟ ಪ್ರಮಾಣವು ದೇಶದಲ್ಲಿ ನವೆಂಬರ್ ತಿಂಗಳಿನಲ್ಲಿ ಶೇಕಡ 19ರಷ್ಟು ಇಳಿಕೆ ಆಗಿದೆ. ಸೆಮಿಕಂಡಕ್ಟರ್ ಕೊರತೆಯು ವಾಹನ ಉತ್ಪಾದನೆ ಮೇಲೆ ಪರಿಣಾಮ ಉಂಟುಮಾಡಿದೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಒಕ್ಕೂಟ (ಎಸ್‌ಐಎಎಂ) ಹೇಳಿದೆ.

ನವೆಂಬರ್ ತಿಂಗಳಿನಲ್ಲಿ ತಯಾರಿಕಾ ಘಟಕಗಳಿಂದ ಡೀಲರ್‌ಗಳಿಗೆ ರವಾನೆ ಆದ ಪ್ರಯಾಣಿಕ ವಾಹನಗಳ ಒಟ್ಟು ಸಂಖ್ಯೆ 2.15 ಲಕ್ಷ. ಇದು ಹಿಂದಿನ ವರ್ಷದ ನವೆಂಬರ್‌ನಲ್ಲಿ 2.64 ಲಕ್ಷ ಆಗಿತ್ತು. ಅದೇ ರೀತಿ, ದ್ವಿಚಕ್ರ ವಾಹನಗಳ ಮಾರಾಟವು ನವೆಂಬರ್‌ನಲ್ಲಿ ಶೇ 34ರಷ್ಟು ಕುಸಿತ ದಾಖಲಿಸಿದೆ.

ಮುಖ್ಯಾಂಶಗಳು

- ತ್ರಿಚಕ್ರ ವಾಹನ ಮಾರಾಟ 19 ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ
- ದ್ವಿಚಕ್ರ ವಾಹನಗಳ ಮಾರಾಟದಲ್ಲಿಯೂ ಕುಸಿತ

ಹಿಂದಿನ ವರ್ಷದ ನವೆಂಬರ್‌ನಲ್ಲಿ ಒಟ್ಟು 16 ಲಕ್ಷ ದ್ವಿಚಕ್ರ ವಾಹನಗಳ ಮಾರಾಟ ಆಗಿತ್ತು. ಆದರೆ ಈ ವರ್ಷದ ನವೆಂಬರ್‌ನಲ್ಲಿ ಒಟ್ಟು 10.50 ಲಕ್ಷ ದ್ವಿಚಕ್ರ ವಾಹನಗಳು ಮಾತ್ರ ಮಾರಾಟ ಆಗಿವೆ. ತ್ರಿಚಕ್ರ ವಾಹನಗಳ ಮಾರಾಟವು ಹಿಂದಿನ ವರ್ಷದ ನವೆಂಬರ್‌ಗೆ ಹೋಲಿಸಿದರೆ ಈ ವರ್ಷದ ನವೆಂಬರ್‌ನಲ್ಲಿ ಶೇ 7ರಷ್ಟು ಇಳಿಕೆಯಾಗಿದೆ.

'ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಸೆಮಿಕಂಡಕ್ಟರ್ ಕೊರತೆಯು ಉದ್ಯಮಕ್ಕೆ ಸವಾಲಾಗಿದೆ. ಹಬ್ಬಗಳ ಋತುವಿನಲ್ಲಿ ಒಳ್ಳೆಯ ವಹಿವಾಟು ನಡೆಸುವ ನಿರೀಕ್ಷೆಯನ್ನು ಆಟೊಮೊಬೈಲ್ ಉದ್ಯಮ ಹೊಂದಿತ್ತು. ಆದರೆ, ಈ ವರ್ಷದ ನವೆಂಬರ್ ತಿಂಗಳ ಪ್ರಯಾಣಿಕ ವಾಹನಗಳ ಮಾರಾಟ ಪ್ರಮಾಣವು ಏಳು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ದ್ವಿಚಕ್ರ ವಾಹನಗಳ ಮಾರಾಟ ಪ್ರಮಾಣವು 11 ವರ್ಷಗಳ ಕನಿಷ್ಠ ಮಟ್ಟವನ್ನು ತಲುಪಿದೆ. ತ್ರಿಚಕ್ರ ವಾಹನಗಳ ಮಾರಾಟವು 19 ವರ್ಷಗಳ ಕನಿಷ್ಠ ಮಟ್ಟದಲ್ಲಿ ಇದೆ' ಎಂದು ಎಸ್‌ಐಎಎಂ ಮಹಾನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ.

ಕೈಗಾರಿಕಾ ಉತ್ಪಾದನೆಯಲ್ಲಿ ಶೇ 3.2ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇಕಡ 3.2ರಷ್ಟು ದಾಖಲಾಗಿದೆ. ಗಣಿ, ಇಂಧನ ಮತ್ತು ತಯಾರಿಕಾ ವಲಯಗಳಲ್ಲಿ ಉತ್ತಮ ಬೆಳವಣಿಗೆ ಕಂಡುಬಂದಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದಲ್ಲಿ (ಐಐಪಿ) ಶೇಕಡ 77.63ರಷ್ಟು ಪಾಲು ಹೊಂದಿರುವ ತಯಾರಿಕಾ ವಲಯವು ಅಕ್ಟೋಬರ್‌ನಲ್ಲಿ ಶೇ 2ರಷ್ಟು ಬೆಳವಣಿಗೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಅಕ್ಟೋಬರ್‌ನಲ್ಲಿ ಗಣಿಗಾರಿಕೆ ವಲಯದ ಉತ್ಪಾದನೆಯು ಶೇ 11.4ರಷ್ಟು ಹೆಚ್ಚಳ ಕಂಡಿದೆ. ಇಂಧನ ಉತ್ಪಾದನೆಯು ಶೇ 3.1ರಷ್ಟು ಬೆಳವಣಿಗೆ ದಾಖಲಿಸಿದೆ.

ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಮೇ ತಿಂಗಳಿನಿಂದ ಆಗಸ್ಟ್‌ವರೆಗೆ ಎರಡಂಕಿಯ ಮಟ್ಟದಲ್ಲಿ ಇತ್ತು. ಅದು ಸೆಪ್ಟೆಂಬರ್‌ನಲ್ಲಿ ಶೇ 3.3ಕ್ಕೆ ಇಳಿಕೆ ಆಯಿತು. ಅಕ್ಟೋಬರ್‌ನಲ್ಲಿ ಶೇ 3.2ಕ್ಕೆ ತಗ್ಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಮುಖಾಮುಖಿ
ಸಾಹಿತಿ, ಹಾಸ್ಯ ಭಾಷಣಕಾರ, ನಗೆಹಬ್ಬಗಳ 'ಸ್ಟಾರ್'
ಪ್ರೊಫೆಸರ್ ಕೃಷ್ಣೇಗೌಡ ಅವರ ಜೊತೆಗೆ
ಮಧ್ಯಾಹ್ನ 2 ರಿಂದ 3



ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ ಸಂಜೆ 4 ಹರಟೆಕಟ್ಟೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮೆಕ್ಸಿಕೊ ಅಪಘಾತ: 53 ಮಂದಿ ಸಾವು

ಟಕ್ಸ್‌ಟ್ಲಾ ಗುಟಿರೆಜ್ (ಮೆಕ್ಸಿಕೊ) (ಎಪಿ): ದಕ್ಷಿಣ ಮೆಕ್ಸಿಕೊದಲ್ಲಿ ಗುರುವಾರ ಹೆದ್ದಾರಿಯೊಂದರ ಪಾದಚಾರಿ ಸೇತುವೆಯೊಂದಕ್ಕೆ ಟ್ರಕ್ ಅಪ್ಪಳಿಸಿ, ಉರುಳಿದ ಪರಿಣಾಮ 53 ವಲಸಿಗರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದುರಂತದಲ್ಲಿ 58 ಜನರು ಗಾಯಗೊಂಡಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

ಪೊಲೀಸ್ ಹಾಕಿ: ಕರ್ನಾಟಕಕ್ಕೆ ಸೋಲು; ಮಹಿಳಾ ವಿಭಾಗದಲ್ಲಿ ಸಿಆರ್‌ಪಿಎಫ್, ಎಸ್‌ಎಸ್‌ಬಿ ಫೈನಲ್‌ಗೆ

ಪ್ರಶಸ್ತಿಗೆ ಐಟಿಬಿಪಿ–ಪಂಜಾಬ್ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್ ಪೊಲೀಸ್ ಮತ್ತು ಇಂಡೊ ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ತಂಡಗಳು ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನ ಪ್ರಶಸ್ತಿಗಾಗಿ ಸೆಣಸಲಿವೆ. ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಪಂಜಾಬ್ ಪೊಲೀಸ್ 5–1ರಿಂದ ತಮಿಳುನಾಡು ಪೊಲೀಸ್ ತಂಡವನ್ನು ಮಣಿಸಿತು.

ಐಟಿಬಿಪಿ ಎದುರಿನ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ತಂಡ ಶೂಟೌಟ್‌ನಲ್ಲಿ 2–0ಯಿಂದ ಸೋತಿತು. ತಂಡದ ಕಂಚಿನ ಪದಕದ ಕನಸು ಜೀವಂತವಾಗಿದೆ. ಭರವಸೆಯಿಂದ ಕಣಕ್ಕೆ ಇಳಿದಿದ್ದ ಆತಿಥೇಯ ತಂಡ ಅತ್ಯಮೋಘ ಆಟವಾಡಿ ಬಲಿಷ್ಠ ಐಟಿಬಿಪಿಗೆ ಪ್ರಬಲ ಪೈಪೋಟಿ ನೀಡುವಲ್ಲಿ ಯಶಸ್ವಿಯಾಯಿತು. ನಿಗದಿತ ಅವಧಿಯಲ್ಲಿ ಪಂದ್ಯ 1–1ರಲ್ಲಿ ಸಮವಾಯಿತು. ಹೀಗಾಗಿ ಶೂಟೌಟ್ ಮೊರೆ ಹೋಗಬೇಕಾಯಿತು.

ಪಂದ್ಯದ ಎರಡನೇ ಕ್ವಾರ್ಟರ್‌ನಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ರವಿ ಗ್ರೆಸ್ (21ನೇ ನಿಮಿಷ) ಐಟಿಬಿಪಿಗೆ ಮುನ್ನಡೆ ಗಳಿಸಿಕೊಟ್ಟರು. ಪಟ್ಟುಹಿಡಿದು ಕಾದಾಡಿದ ಕರ್ನಾಟಕ ಪೊಲೀಸ್ 57ನೇ ನಿಮಿಷದಲ್ಲಿ ಗೋಲು ಗಳಿಸಿ ಸಮಬಲ ಸಾಧಿಸಿತು. ವೆಂಕಟೇಶ್ ಕ್ಯಾರಕಟ್ಟಿ ಚೆಂಡನ್ನು ಗುರಿಮುಟ್ಟಿಸಿದರು.

ಪಂಜಾಬ್ ತಂಡದ ಎದುರು ತಮಿಳುನಾಡು ತಂಡದ ಕಸನು ಕಮರಿ ಹೋಯಿತು. ಮೊದಲ ಕ್ವಾರ್ಟರ್‌ನಲ್ಲಿ ಉಭಯ ತಂಡಗಳಿಗೂ ಗೋಲು ಗಳಿಸಲು ಆಗಲಿಲ್ಲ. ಎರಡನೇ ಕ್ವಾರ್ಟರ್‌ನಲ್ಲಿ ಪಂಜಾಬ್ ಪೊಲೀಸ್ ಎರಡು ಗೋಲು ಗಳಿಸಿತು. 25 ಮತ್ತು 27ನೇ ನಿಮಿಷದಲ್ಲಿ ರಮಣ್‌ದೀಪ್ ಸಿಂಗ್ ಚೆಂಡನ್ನು ಗುರಿಸೇರಿಸಿದರು.

30ನೇ ನಿಮಿಷದಲ್ಲಿ ವರಿಂದರ್ ಸಿಂಗ್ ಮತ್ತು 31ನೇ ನಿಮಿಷದಲ್ಲಿ ದೂಪಿಂದರ್ ದೀಪ್ ಸಿಂಗ್ ಗಳಿಸಿದ ಗೋಲುಗಳೊಂದಿಗೆ ತಂಡದ ಮುನ್ನಡೆ ಇನ್ನಷ್ಟು ಹೆಚ್ಚಿತು. ತಮಿಳುನಾಡು ತಂಡಕ್ಕಾಗಿ ಎಂ.ಬಾಲಮುರುಗನ್ (33ನೇ ನಿ) ಏಕೈಕ ಗೋಲು ಗಳಿಸಿದರು.

ಸಿಆರ್‌ಪಿಎಫ್–ಎಸ್‌ಎಸ್‌ಬಿ ಮುಖಾಮುಖಿ: ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ದೆಹಲಿಯ ಸಿಆರ್‌ಪಿಎಫ್ ಮತ್ತು 'ಸಶಸ್ತ್ರ ಸೀಮಾ ಬಲ್' (ಎಸ್‌ಎಸ್‌ಬಿ) ತಂಡಗಳು ಸೆಣಸಲಿವೆ. ಸೆಮಿಫೈನಲ್‌ನಲ್ಲಿ ಸಿಆರ್‌ಪಿಎಫ್ 13–0ಯಿಂದ ಮಹಾರಾಷ್ಟ್ರ ರಾಜ್ಯ ಪೊಲೀಸ್ ವಿರುದ್ಧ ಜಯ ಗಳಿಸಿತು. ಎಸ್‌ಎಸ್‌ಬಿ 6–0ಯಿಂದ ಒಡಿಶಾ ಎಫ್‌ಸಿಯನ್ನು ಸೋಲಿಸಿತು.

ಕೆಎಸ್‌ಪಿ ತಂಡದ ಎನ್‌.ಬಿ.ಪ್ರದೀಪ್ ಅವರಿಂದ ಚೆಂಡು ಕಸಿದುಕೊಳ್ಳಲು ಐಟಿಬಿಪಿಯ ರೋಹಿತ್ ಸಿಂಗ್ ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ಕರ್ನಾಟಕ ಪೊಲೀಸ್ ಮತ್ತು ಐಟಿಬಿಪಿ ನಡುವಿನ ಪಂದ್ಯದ ಮಧ್ಯೆ ಗಲಾಟೆಯಾದಾಗ ಪೊಲೀಸರು ತಡೆದರು –ಪ್ರಜಾವಾಣಿ ಚಿತ್ರ

ಇಂದಿನ ಪಂದ್ಯಗಳು

ಕಂಚಿನ ಪದಕದ ಹಣಾಹಣಿ

ಕರ್ನಾಟಕ–ತಮಿಳುನಾಡು
ಆರಂಭ-ಬೆಳಿಗ್ಗೆ **11.00**

ಫೈನಲ್
ಪಂಜಾಬ್–ಐಟಿಬಿಪಿ
ಆರಂಭ-ಮಧ್ಯಾಹ್ನ **3.15**

ಮಹಿಳಾ ವಿಭಾಗ-ಕಂಚಿನ ಪದಕದ ಪಂದ್ಯ
ಒಡಿಶಾ–ಮಹಾರಾಷ್ಟ್ರ
ಆರಂಭ-ಬೆಳಿಗ್ಗೆ **7.00**

ಫೈನಲ್
ಸಿಆರ್‌ಪಿಎಫ್–ಎಸ್‌ಎಸ್‌ಬಿ
ಬೆಳಿಗ್ಗೆ -**9.00**

ಬೆಂಗಳೂರು ರೇಸ್

ಬೆಲ್ಲಾಟರ್ ಗೆಲ್ಲುವ ನಿರೀಕ್ಷೆ

ಕಂಠೀರವ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬೆಲ್ಲಾಟರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸಿಂಕೊ ಡೆ ಮಯೊ 2, ಅರೇಬಿಯನ್ ಮಿಸ್ಟ್ 5, ಮೈ ವಿಷನ್ 4
2ನೇ ರೇಸ್: ರೀಕಾಲ್ ಆಫ್ ಯೂ 1, ಓಷನ್ ಡ್ಯೂನ್ಸ್ 2, ರೇವನ್ ರಾಕ್ 9
3ನೇ ರೇಸ್: ಡೆವಿಲ್ಸ್ ಮ್ಯಾಜಿಕ್ 2, ಅಲೆಕ್ಸಿಸ್ ಜೋಬ್ರಾ 1, ಲ್ಯಾಂಟಾನ 5
4ನೇ ರೇಸ್: ನೈಟ್ ಇನ್ ಹೂವ್ಸ್ 2, ಬಾಲ್ಟಿಮೋರ್ 1, ಫ್ಲೆಮಿಂಗೊ ರೋಡ್ 4
5ನೇ ರೇಸ್: ಬೆಲ್ಲಾಟರ್ 4, ಪ್ರೈಸ್‌ಲೆಸ್ ಗೋಲ್ಡ್ 5, ಕರ್ನಲ್ ಹಾರ್ಟ್ 2
6ನೇ ರೇಸ್: ರೀಗಲ್ ಮ್ಯೂಸಿಕ್ 2, ಪರ್ಫೆಕ್ಟ್ ರೆಂಡಿಷನ್ 9, ಗ್ರಿಫಿನ್ 6
7ನೇ ರೇಸ್: ಕರಕಸ್ 3, ಕಾಪರ್ ಸನ್‌ರೈಸ್ 4, ಮೊಹಿಕಾನ್ 1

ಉತ್ತಮ ಬೆಟ್: ನೈಟ್ ಇನ್ ಹೂವ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ರಾಷ್ಟ್ರೀಯ ಶೂಟಿಂಗ್: ಚಿನ್ನ ಗೆದ್ದ ದಿವ್ಯಾಂಶ್

ದಿವ್ಯಾಂಶ್ ಸಿಂಗ್ ಪನ್ವರ್ ಟ್ವಿಟರ್ ಚಿತ್ರ

ಭೋಪಾಲ್ (ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಈ ಹಿಂದೆ ಅಗ್ರಸ್ಥಾನದಲ್ಲಿದ್ದ ದಿವ್ಯಾಂಶ್ ಸಿಂಗ್ ಪನ್ವರ್ ಅವರು ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಇಲ್ಲಿಯ ಎಂ.ಪಿ. ಶೂಟಿಂಗ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 10 ಮೀ. ವಿಭಾಗದ ಫೈನಲ್‌ನಲ್ಲಿ ರಾಜಸ್ತಾನದ ಪನ್ವರ್ ಅವರು 250 ಸ್ಕೋರ್ ದಾಖಲಿಸಿದರು. ಮಹಾರಾಷ್ಟ್ರದ ರುದ್ರಾಕ್ಷ್ ಬಾಳಾಸಾಹೇಬ್ ಪಾಟೀಲ್ (249.3) ಬೆಳ್ಳಿ ಮತ್ತು ಅಸ್ಸಾಂನ ಹೃದಯ್ ಹಜಾರಿಕಾ (228.2) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಪುರುಷರ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಈ ಬಾರಿ 768 ಕ್ರೀಡಾಪಟುಗಳು ಭಾಗವಹಿಸಿದ್ದು, 800ಕ್ಕೂ ಹೆಚ್ಚು ಮಂದಿ ಸ್ಪರ್ಧಿಸಲು ನೋಂದಾಯಿಸಿಕೊಂಡಿದ್ದರು.

ಇದೇ ಸ್ಪರ್ಧೆಯ ಜೂನಿಯರ್ ವಿಭಾಗದಲ್ಲೂ ದಿವ್ಯಾಂಶ್‌ಗೆ (252.2 ಸ್ಕೋರ್) ಚಿನ್ನ ಒಲಿಯಿತು. ರುದ್ರಾಕ್ಷ್ (251.2) ಬೆಳ್ಳಿ ಮತ್ತು ದೆಹಲಿಯ ಪಾರ್ಥ್ ಮಖೀಜಾ (229.9) ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಲಾನ್, ರೂಟ್ ಜೊತೆಯಾಟದ ರಂಗು

ಆ್ಯಷಸ್ ಟೆಸ್ಟ್: ಟ್ರಾವಿಸ್ ಹೆಡ್ ಅಮೋಘ ಆಟ; ಆಸ್ಟ್ರೇಲಿಯಾ ಉತ್ತಮ ಮೊತ್ತ

ಬ್ರಿಸ್ಬೇನ್: ಮೂರನೇ ಕ್ರಮಾಂಕದ ಡೇವಿಡ್ ಮಲಾನ್ ಮತ್ತು ನಾಯಕ ಜೋ ರೂಟ್ ಮೂರನೇ ವಿಕೆಟ್‌ಗೆ ಶತಕದ ಜೊತೆಯಾಟವಾಡಿ ಕುಸಿಯುತ್ತಿದ್ದ ಇಂಗ್ಲೆಂಡ್ ತಂಡಕ್ಕೆ ಆಸರೆಯಾದರು.

ಗಾಬಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆ್ಯಷಸ್ ಕ್ರಿಕೆಟ್ ಸರಣಿಯ ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನ ರೂಟ್ ಮತ್ತು ಮಲಾನ್ ಅವರ ಸೊಗಸಾದ, ದಿಟ್ಟ ಜೊತೆಯಾಟದಿಂದಾಗಿ ಇಂಗ್ಲೆಂಡ್ ತಂಡ ಎರಡನೇ ಇನಿಂಗ್ಸ್‌ನಲ್ಲಿ ಎರಡು ವಿಕೆಟ್‌ಗಳಿಗೆ 220 ರನ್ ಗಳಿಸಿದೆ. ಆಸ್ಟ್ರೇಲಿಯಾದ ಮೊದಲ ಇನಿಂಗ್ಸ್ ಮೊತ್ತಕ್ಕಿಂತ ಇಂಗ್ಲೆಂಡ್ ಈಗ 58 ರನ್‌ಗಳಿಂದ ಹಿಂದೆ ಉಳಿದಿದ್ದು ಪಂದ್ಯವನ್ನು ಡ್ರಾ ಮಾಡಿಕೊಳ್ಳುವ ನಿರೀಕ್ಷೆ ಮೂಡಿದೆ.

ಮೊದಲ ಇನಿಂಗ್ಸ್‌ನಲ್ಲಿ ಎದುರಾಳಿಗಳನ್ನು 147 ರನ್‌ಗಳಿಗೆ ನಿಯಂತ್ರಿಸಿದ ಆಸ್ಟ್ರೇಲಿಯಾ ಟ್ರಾವಿಸ್ ಹೆಡ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 425 ರನ್ ಗಳಿಸಿ 278 ರನ್‌ಗಳ ಮುನ್ನಡೆ ಸಾಧಿಸಿತು. ಎರಡನೇ ಇನಿಂಗ್ಸ್‌ನಲ್ಲೂ ಇಂಗ್ಲೆಂಡ್ ಆರಂಭದಲ್ಲಿ ಬೇಗನೇ ವಿಕೆಟ್‌ಗಳನ್ನು ಕಳೆದುಕೊಂಡಿತು.

ತಂಡದ ಮೊತ್ತ 23 ರನ್ ಆಗಿದ್ದಾಗ ರೋರಿ ಬರ್ನ್ಸ್ ಔಟಾದರೆ 61 ರನ್‌ಗಳಾಗುವಷ್ಟರಲ್ಲಿ ಹಸೀಬ್ ಹಮೀದ್ ಕೂಡ ಮರಳಿದರು.

ಈ ಸಂದರ್ಭದಲ್ಲಿ ಜೊತೆಗೂಡಿದ ಮಲಾನ್ ಮತ್ತು ರೂಟ್ 159 ರನ್ ಸೇರಿಸಿದರು. ಚಹಾ ವಿರಾಮಕ್ಕೂ ಮೊದಲು ಜೊತೆಗೂಡಿದ ಇವರಿಬ್ಬರು ದಿನದಾಟದ ಮುಕ್ತಾಯದ ವರೆಗೂ ಇನಿಂಗ್ಸ್ ಮುಂದುವರಿಸಿದರು.

ಹಸೀಬ್ ಹಮೀದ್ ಜೊತೆ 38 ರನ್‌ಗಳನ್ನು ಸೇರಿಸಿದ್ದ ಮಲಾನ್ ನಾಯಕ ಕ್ರೀಸ್‌ಗೆ ಬಂದ ನಂತರ ಇನ್ನಷ್ಟು ಭರವಸೆಯಿಂದ ಬ್ಯಾಟ್ ಬೀಸಿದರು. ಜೋ ರೂಟ್ ಮೋಹಕ ಹೊಡೆತಗಳ ಮೂಲಕ ರಂಜಿಸಿದರು. ಡ್ರೈವ್ ಮತ್ತು ಕಟ್‌ಗಳ ಮೂಲಕ ಮನಸೆಳೆದ ಅವರು ನೇಥನ್ ಲಯನ್ ಎಸೆತವನ್ನು ರಿವರ್ಸ್ ಸ್ವೀಪ್ ಮಾಡಿ ಬೌಂಡರಿಗೆ ಅಟ್ಟುವ ಮೂಲಕ ಬ್ಯಾಟಿಂಗ್ ವೈವಿಧ್ಯವನ್ನು ಮೆರೆದರು. ಆಸ್ಟ್ರೇಲಿಯಾದಲ್ಲಿ ಗರಿಷ್ಠ ರನ್ ಸಾಧನೆಯನ್ನು ಮೈಲುಗಲ್ಲು ಸ್ಥಾಪಿಸಲು ಅವರಿಗೆ ಇನ್ನು ಒಂದು ರನ್ ಬೇಕು.

ಮೂರನೇ ದಿನವೂ ಮಿಂಚಿದ ಟ್ರಾವಿಸ್ ಹೆಡ್; ಎರಡನೇ ದಿನ ಶತಕ ಗಳಿಸಿ ಅಜೇಯರಾಗಿದ್ದ ಐದನೇ ಕ್ರಮಾಂಕದ ಟ್ರಾವಿಸ್ ಹೆಡ್ ಶುಕ್ರವಾರವೂ ಮಿಂಚಿದರು. ವೈಯಕ್ತಿಕ ಮೊತ್ತವನ್ನು 152ಕ್ಕೇರಿಸಿದ ಅವರು ತಂಡ 400 ರನ್‌ಗಳ ಗಡಿ ದಾಟಲು ನೆರವಾದರು. ಭೋಜನ ವಿರಾಮಕ್ಕೆ ಸ್ವಲ್ಪ ಮೊದಲು ಔಟಾದರು.

ಜೋ ರೂಟ್ –ಎಎಫ್‌ಪಿ ಚಿತ್ರ

ಹೆಚ್ಚು ರನ್: ಜೋ ರೂಟ್ ದಾಖಲೆ

ಬ್ರಿಸ್ಬೇನ್ (ಎಪಿ): ಒಂದೇ ಋತುವಿನಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಕಲೆ ಹಾಕಿದ ಆಟಗಾರ ಎಂಬ ಶ್ರೇಯಸ್ಸು ಜೋ ರೂಟ್ ಅವರದಾಯಿತು. ಮೂರನೇ ದಿನವಾದ ಶುಕ್ರವಾರ ಅಮೋಘ ಬ್ಯಾಟಿಂಗ್ ಮಾಡಿದ ಅವರು ಈ ವರ್ಷ 1,541 ರನ್ ಸಾಧನೆ ಮಾಡಿದರು.

2002ರಲ್ಲಿ ಮೈಕೆಲ್ ವಾನ್ ಗಳಿಸಿದ 1,481 ರನ್ ಈ ವರೆಗೆ ಇಂಗ್ಲೆಂಡ್‌ನ ದಾಖಲೆಯಾಗಿತ್ತು. ಟೆಸ್ಟ್ ಕ್ರಿಕೆಟ್‌ನ ಋತುವೊಂದರಲ್ಲಿ ಗರಿಷ್ಠ ರನ್ ಕಲೆ ಹಾಕಿದ ವಿಶ್ವ ದಾಖಲೆ ಪಾಕಿಸ್ತಾನದ ಮೊಹಮ್ಮದ್ ಯೂಸುಫ್ ಅವರ ಹೆಸರಿನಲ್ಲಿದೆ. ಅವರು 2006ರಲ್ಲಿ 11 ಪಂದ್ಯಗಳಿಂದ 1,788 ರನ್ ಗಳಿಸಿದ್ದರು.

ಋತುವೊಂದರಲ್ಲಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ರನ್	ಪಂದ್ಯ	ಗರಿಷ್ಠ	ವರ್ಷ
ಮೊಹಮ್ಮದ್ ಯೂಸುಫ್	ಪಾಕಿಸ್ತಾನ	1788	11	202	2006
ವಿವಿಯನ್ ರಿಚರ್ಡ್ಸ್	ವೆಸ್ಟ್ ಇಂಡೀಸ್	1710	11	291	1976
ಗ್ರೇಮ್ ಸ್ಮಿತ್	ದಕ್ಷಿಣ ಆಫ್ರಿಕಾ	1656	15	232	2008
ಮೈಕೆಲ್ ಕ್ಲಾರ್ಕ್	ಆಸ್ಟ್ರೇಲಿಯಾ	1595	11	329*	2012
ಸಚಿನ್ ತೆಂಡೂಲ್ಕರ್	ಭಾರತ	1562	14	214	2010
ಸುನಿಲ್ ಗಾವಸ್ಕರ್	ಭಾರತ	1555	18	221	1979

ಋತುವೊಂದರಲ್ಲಿ ಹೆಚ್ಚು ರನ್ (ಇಂಗ್ಲೆಂಡ್)

ಆಟಗಾರ	ರನ್	ಪಂದ್ಯ	ಗರಿಷ್ಠ	ವರ್ಷ
ಜೋ ರೂಟ್	1541	13*	228	2021
ಮೈಕೆಲ್ ವಾನ್	1481	14	197	2002
ಜೋ ರೂಟ್	1477	17	254	2016
ಜಾನಿ ಬೇಸ್ಟೊ	1470	17	167*	2016
ಜೋ ರೂಟ್	1385	14	182*	2015

ಸ್ಕೋರ್ ಕಾರ್ಡ್

ಇಂಗ್ಲೆಂಡ್ ಮೊದಲ ಇನಿಂಗ್ಸ್ 147 (50.1 ಓವರ್)
ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 425 (104.3 ಓವರ್)
(ಗುರುವಾರ 84 ಓವರ್‌ಗಳಲ್ಲಿ 7ಕ್ಕೆ343)

ಹೆಡ್ ಬಿ ವುಡ್ 152 (148 ಎ, 4X14, 6X4), ಸ್ಟಾರ್ಕ್ ಸಿ ಬರ್ನ್ಸ್ ಬಿ ವೋಕ್ಸ್ 35 (64ಎ, 4X5), ನೇಥನ್ ಲಯನ್ ಸಿ ರಾಬಿನ್ಸನ್ ಬಿ ವುಡ್ 15 (24 ಎ, 6X2), ಜೋಶ್ ಹ್ಯಾಜಲ್‌ವುಡ್ ಔಟಾಗದೆ 0 (6 ಎ)
ಇತರೆ (ಬೈ 4, ಲೆಗ್‌ಬೈ 6, ವೈಡ್ 2, ನೋಬಾಲ್ 4) 16
ವಿಕೆಟ್ ಪತನ: 8-391 (ಮಿಚೆಲ್ ಸ್ಟಾರ್ಕ್, 95.6), 9-420 (ನೇಥನ್ ಲಯನ್, 102.3), 10-425 (ಟ್ರಾವಿಸ್ ಹೆಡ್, 104.3)
ಬೌಲಿಂಗ್: ಕ್ರಿಸ್ ವೋಕ್ಸ್ 25–8–76–2, ಒಲಿ ರಾಬಿನ್ಸನ್ 23–8–58–3, ಮಾರ್ಕ್ ವುಡ್ 25.3–4–85–3, ಬೆನ್ ಸ್ಟೋಕ್ಸ್ 12–0–65–0, ಜ್ಯಾಕ್ ಲೀಚ್ 13–0–102–1, ಜೋ ರೂಟ್ 6–0–29–1

ಇಂಗ್ಲೆಂಡ್ ಎರಡನೇ ಇನಿಂಗ್ಸ್ 2ಕ್ಕೆ 220 (70 ಓವರ್)

ಹಸೀಬ್ ಸಿ ಕ್ಯಾರಿ ಬಿ ಸ್ಟಾರ್ಕ್ 27 (58 ಎ, 4X4), ಬರ್ನ್ಸ್ ಸಿ ಕ್ಯಾರಿ ಬಿ ಕಮಿನ್ಸ್ 13 (27 ಎ, 4X2), ಮಲಾನ್ ಬ್ಯಾಟಿಂಗ್ 80 (177 ಎ, 4X10), ರೂಟ್ ಬ್ಯಾಟಿಂಗ್ 86 (158 ಎ, 4X10)
ಇತರೆ (ಬೈ 4, ಲೆಗ್ ಬೈ 5, ವೈಡ್ 5) 14
ವಿಕೆಟ್ ಪತನ: 1-23 (ರೋರಿ ಬರ್ನ್ಸ್, 8.6), 2-61 (ಹಸೀಬ್ ಹಮೀದ್, 20.6)
ಬೌಲಿಂಗ್: . ಮಿಚೆಲ್ ಸ್ಟಾರ್ಕ್ 14–2–60–1, ಜೋಶ್ ಹ್ಯಾಜಲ್‌ವುಡ್ 8–4–13–0, ಪ್ಯಾಟ್ ಕಮಿನ್ಸ್ 14–4–43–1, ನೇಥನ್ ಲಯನ್ 24–4–69–0, ಕ್ಯಾಮರಾನ್ ಗ್ರೀನ್ 7–2–12–0, ಮಾರ್ನಸ್ ಲಾಬುಶೇನ್ 3–0–14–0

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಾಬೂನಿನಿಂದ ಆಗಾಗ ಕೈ ತೊಳೆಯುತ್ತಿರಿ

ನೆಟ್‌ಬಾಲ್: 18ರಂದು ಟ್ರಯಲ್ಸ್

ಬೆಂಗಳೂರು: ದಕ್ಷಿಣ ವಲಯ ಹಾಗೂ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಿಗಾಗಿ ಭಾರತ ನೆಟ್‌ಬಾಲ್ ತಂಡಗಳ ಆಯ್ಕೆ ಇದೇ 18ರಂದು ನಡೆಯಲಿದೆ.

ಪುದುಚೇರಿಯಲ್ಲಿ ಡಿಸೆಂಬರ್ 25 ಹಾಗೂ 26ರಂದು ದಕ್ಷಿಣ ವಲಯ ಮತ್ತು 2022ರ ಜನವರಿ 4ರಿಂದ 7ರವರೆಗೆ ನಾಗಪುರದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಿಗದಿಯಾಗಿವೆ.

ರಾಜ್ಯದ ಪುರುಷ ಮತ್ತು ಮಹಿಳಾ ತಂಡ ಆಯ್ಕೆಯಾಗಿ ಟ್ರಯಲ್ಸ್ ನಾಗಸಂದ್ರದ ಸಿಡೇದಹಳ್ಳಿಯಯಲ್ಲಿ ನಡೆಯಲಿದೆ. ಮಾಹಿತಿಗೆ ಗಿರೀಶ್ (ಮೊ. ಸಂ. 9741075490) ಮತ್ತು ವಿಶ್ವನಾಥ (9448595611) ಅವರನ್ನು ಸಂಪರ್ಕಿಸಬೇಕು.

ಬೀಜಿಂಗ್‌ನಲ್ಲಿ ಪ್ರದರ್ಶನಕ್ಕೆ ಇಡಲಾಗಿರುವ ಒಲಿಂಪಿಕ್ಸ್ ಜ್ಯೋತಿ ಮತ್ತು ರಿಂಗ್ಸ್– ರಾಯಿಟರ್ಸ್ ಚಿತ್ರ

ಚಳಿಗಾಲದ ಒಲಿಂಪಿಕ್ಸ್: ಕ್ರೀಡಾಪಟುಗಳಿಗೆ ವಿಶೇಷ ವಿಮಾನ

ಬೀಜಿಂಗ್ (ಎಪಿ): ಕೋವಿಡ್ ಬಿಕ್ಕಟ್ಟು ಹಾಗೂ ಕೆಲವು ದೇಶಗಳಿಂದ ಬಹಿಷ್ಕಾರ ಎದುರಿಸುತ್ತಿರುವ ಬೀಜಿಂಗ್ ಚಳಿಗಾಲದ ಒಲಿಂಪಿಕ್ಸ್ ಆಯೋಜಕರಿಗೆ ಈಗ ಎಲ್ಲ ಅಥ್ಲೀಟ್‌ಗಳನ್ನು ಕರೆತರುವ ಸವಾಲು ಎದುರಾಗಿದೆ.

ಕೂಟದಲ್ಲಿ ಭಾಗವಹಿಸುವ ಎಲ್ಲ ಅಥ್ಲೀಟ್‌ಗಳು ಹಾಗೂ ಅಧಿಕಾರಿಗಳನ್ನು ಕರೆತರಲು ವಿಮಾನಗಳ ವ್ಯವಸ್ಥೆ ಮಾಡಬೇಕಿದೆ. ಕೋವಿಡ್-19 ಕಾರಣದಿಂದಾಗಿ ನಿಯಮಿತ ಪ್ರಯಾಣಿಕ ವಿಮಾನಗಳ ಕಡಿತದಿಂದಾಗಿ ಭಾಗವಹಿಸುವವರ ಸುಗಮ ಆಗಮನವನ್ನು ಖಚಿತಪಡಿಸಿಕೊಳ್ಳುವುದು 'ಎಲ್ಲರ ಕಾಳಜಿಯಾಗಿದೆ' ಎಂದು ಒಲಿಂಪಿಕ್ಸ್ ಆಯೋಜನಾ ಸಮಿತಿಯ ಜಾಂಗ್ ಲಿಯಾಂಗ್ ಶುಕ್ರವಾರ ಹೇಳಿದ್ದಾರೆ.

'ವಿಶೇಷ ಮತ್ತು ತಾತ್ಕಾಲಿಕ ವಿಮಾನಗಳು, ಕ್ರೀಡಾಪಟುಗಳನ್ನು ಕರೆತರಲಿವೆ. ಕೆಲವು ವಾಣಿಜ್ಯಿಕ ವಿಮಾನಗಳನ್ನೂ ಬಳಸಿಕೊಳ್ಳಲಾಗುವುದು' ಎಂದು ಮಾಧ್ಯಮಗಳಿಗೆ ಜಾಂಗ್ ಹೇಳಿದ್ದಾರೆ. 'ದೇಶೀಯ ಮತ್ತು ವಿದೇಶದ 17 ಸಂಸ್ಥೆಗಳು ತಾತ್ಕಾಲಿಕ ವಿಮಾನಗಳನ್ನು ಒದಗಿಸಲು ಸಹಿ ಹಾಕಿವೆ' ಎಂದಿದ್ದಾರೆ. ಚೀನಾದಲ್ಲಿ ಉಯಿಘರ್ ಅಲ್ಪ ಸಂಖ್ಯಾತ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಮಾನವ ಹಕ್ಕು ಸಂಘಟನೆಗಳು ಚಳಿಗಾಲದ ಒಲಿಂಪಿಕ್ಸ್‌ಗೆ ಪೂರ್ಣ ಪ್ರಮಾಣದಲ್ಲಿ ಬಹಿಷ್ಕಾರ ಹಾಕುವಂತೆ ಕರೆ ನೀಡಿವೆ. ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ಹಾಗೂ ಕೆನಡಾ ಈಗಾಗಲೇ ಕೂಟಕ್ಕೆ ರಾಜತಾಂತ್ರಿಕ ಬಹಿಷ್ಕಾರ ಹಾಕಿವೆ.